ಕರ್ನಾಟಕ ಸರ್ಕಾರ

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

**1964ರ ಕರ್ನಾಟಕ ಅಧಿನಿಯಮ ಸಂಖ್ಯೆ 23**

# ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964
# ಮತ್ತು
# ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971

**(ಏಪ್ರಿಲ್, 1985ರ ವರೆಗೆ ತಿದ್ದುಪಡಿಯಾದಂತೆ)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

## ಅಧಿಸೂಚನೆ

**ಕ್ರಮಾಂಕ : ಲಾ 10 ಎಲ್ಎಂಪಿ 97, ಬೆಂಗಳೂರು, ದಿನಾಂಕ 20ನೇ ಸೆಪ್ಟೆಂಬರ್, 1997**

ಕರ್ನಾಟಕ ರಾಜಭಾಷಾ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ಶ್ರೀ ಖುರ್ಷಿದ್ ಆಲಂ ಖಾನ್ ಎಂಬ ನಾನು, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಮತ್ತು ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971 ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಖುರ್ಷಿದ್ ಆಲಂ ಖಾನ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಎಸ್. ಸದಾಶಿವಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ,
(ಆಡಳಿತ–2)

# ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ 1964

## ಪ್ರಕರಣಗಳ ಅನುಕ್ರಮಾಣಿಕೆ


1 ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2 ಪರಿಭಾಷೆಗಳು

3 ಲೈಸೆನ್ಸ್ ಕೊಡುವ ಪ್ರಾಧಿಕಾರಿ

4 ಚಲನಚಿತ್ರ ಪ್ರದರ್ಶನಗಳಿಗೆ ಲೈಸೆನ್ಸ್ ಪಡೆಯತಕ್ಕದ್ದು

5 ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್

6 ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಪರ್ಯಾಲೋಚಿಸಬೇಕಾದ ವಿಷಯಗಳು

7 ಯಾವುದೇ ಪ್ರದೇಶದಲ್ಲಿ ಲೈಸೆನ್ಸ್ ಕೊಡಬಹುದಾದ ಸ್ಥಳಗಳ ಸಂಖ್ಯೆಯನ್ನು ಪರಿಮಿತಿಗೊಳಿಸಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಧಿಕಾರ

8 ಲೈಸೆನ್ಸ್ ಕೊಡವ ಪ್ರಾಧಿಕಾರಿಯ ಅಧಿಕಾರಗಳ ಮೇಲೆ ಪರಿಬಂಧ

9 ಲೈಸೆನ್ಸ್ ಅದನ್ನು ಪಡೆದುಕೊಂಡವನಿಗೆ ವೈಯಕ್ತಿಕವಾಗಿರುವುದು ಮತ್ತು ಅದನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿ ಪಡೆಯದೆ ವರ್ಗಾವಣೀಯವಾಗಿರುವುದಿಲ್ಲ

10 5 ಮತ್ತು 9ನೇಯ ಪ್ರಕರಣಗಳ ಮೇರೆಗಿನ ತೀರ್ಮಾನಗಳ ವಿರುದ್ಧ ಅಪೀಲು

11 ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಕಟ್ಟಡಗಳ ನಿರ್ಮಾಣ ಅಥವಾ ಪುನರ್‌ನಿರ್ಮಾಣ ಅಥವಾ ಅದಕ್ಕಾಗಿ ಸ್ಥಳಗಳ ಉಪಯೋಗವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯನ್ನು ಪಡೆದ ತರುವಾಯ ಮಾತ್ರವೇ ಮಾಡಬೇಕು

12 ನಿರ್ದೇಶನಗಳನ್ನು ಕೊಡಲು ರಾಜ್ಯ ಸರ್ಕಾರದ ಅಧಿಕಾರ

13 ನಿರ್ದೇಶನಗಳನ್ನು ಕೊಡಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಧಿಕಾರ

14 ಲೈಸೆನ್ಸ್‌ಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಸಾಮಾನ್ಯ ರೂಪದ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಕೊಡಲು ರಾಜ್ಯ ಸರ್ಕಾರದ ಅಧಿಕಾರ

15 ಕೆಲವೊಂದು ಸಂದರ್ಭಗಳಲ್ಲಿ ಫಿಲ್ಮ್‌ಗಳ ಪ್ರದರ್ಶನವನ್ನು ಅಮಾನತ್ತುಗೊಳಿಸಲು ರಾಜ್ಯ ಸರ್ಕಾರ ಅಥವಾ ಲೈಸೆನ್ಸ್ ಪ್ರಾಧಿಕಾರಿಯ ಅಧಿಕಾರ

16 ದಂಡಗಳು

17 ಲೈಸೆನ್ಸ್‌ನ್ನು ರದ್ದುಗೊಳಿಸಲು ಅಥವಾ ಅಮಾನತುಗೊಳಿಸಲು ಅಧಿಕಾರ

18 ರಾಜ್ಯ ಸರ್ಕಾರದ ಪುನರೀಕ್ಷಣಾ ಅಧಿಕಾರಗಳು

19 ನಿಯಮಗಳ ರಚನಾಧಿಕಾರ

20 ವಿನಾಯಿತಿ ಕೊಡಲು ಅಧಿಕಾರ

21 ಕಂಪನಿಗಳಿಂದ ಅಪರಾಧಗಳು

22 ರಾಜ್ಯ ವಿಧಾನಮಂಡಲದ ಮುಂದೆ ಇಡಬೇಕಾದ ನಿಯಮಗಳು ಮತ್ತು ಆದೇಶಗಳು

23 ನಿರಸನ ಮತ್ತು ಉಳಿಸುವಿಕೆಗಳು

## ಕರ್ನಾಟಕ ಅಧಿನಿಯಮ 1964ರ ಸಂಖ್ಯೆ 23

(1964ರ ಮೇ 28ನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

## ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964

(1964ರ ಏಪ್ರಿಲ್ ಹತ್ತನೇಯ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

(1976ರ ಅಧಿನಿಯಮ ಸಂಖ್ಯೆ 36ರ ಮೂಲಕ ತಿದ್ದುಪಡಿ ಮಾಡಲಾಗಿದೆ)

ಕರ್ನಾಟಕ ರಾಜ್ಯದಲ್ಲಿ ಚಲನಚಿತ್ರ ಗ್ರಾಹಕ ಯಂತ್ರಗಳ ಮೂಲಕ ಪ್ರದರ್ಶಿಸುವುದನ್ನು ಮತ್ತು ಚಲನಚಿತ್ರ ಫಿಲ್ಮುಗಳನ್ನು ಪ್ರದರ್ಶಿಸುವ ಸ್ಥಳಗಳಿಗೆ ಲೈಸೆನ್ಸ್ ಕೊಡುವುದನ್ನು ವಿನಿಯಮಿಸುವ ಬಗ್ಗೆ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಚಲನಚಿತ್ರ ಗ್ರಾಹಕ ಯಂತ್ರಗಳ ಮೂಲಕ ಪ್ರದರ್ಶಿಸುವುದನ್ನು ಮತ್ತು ಚಲನಚಿತ್ರ ಫಿಲ್ಮುಗಳನ್ನು ಪ್ರದರ್ಶಿಸುವ ಸ್ಥಳಗಳಿಗೆ ಲೈಸೆನ್ಸ್ ಕೊಡುವುದನ್ನು ವಿನಿಯಮಿಸುವ ಬಗ್ಗೆ ಮತ್ತು ಇಲ್ಲಿ ಇನ್ನು ಮುಂದೆ ಕಂಡು ಬರುವ ಇತರ ವಿಷಯಗಳ ಬಗ್ಗೆ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ಚಲನಚಿತ್ರ ಗ್ರಾಹಕಯಂತ್ರ"ವು ಚಲಿಸುವ ಚಿತ್ರಗಳನ್ನು ಅಥವಾ ಚಿತ್ರಗಳ ಸರಣಿಗಳನ್ನು ತೋರಿಸುವುದಕ್ಕಾಗಿನ ಯಾವುದೇ ಸಲಕರಣೆಯನ್ನು ಒಳಗೊಳ್ಳುತ್ತದೆ;

(2) "ಲೈಸೆನ್ಸ್ ಕೊಡುವ ಪ್ರಾಧಿಕಾರಿ" ಎಂದರೆ ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಕೊಡಲು 3ನೇಯ ಪ್ರಕರಣದ ಮೇರೆಗೆ ಶಕ್ತಗೊಳಿಸಲಾದ ಪ್ರಾಧಿಕಾರಿ;

(3) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(4) "ಸ್ಥಳ"ವು ಮನೆ, ಕಟ್ಟಡ, ಡೇರೆ, ಆವರಣಗಳು ಮತ್ತು ಜಲ, ಭೂಮಿ ಅಥವಾ ವಾಯು ಮೂಲಕದ್ದಾಗಿರುವ ಯಾವುದೇ ವಿವರಣೆಯ ಸಾರಿಗೆ ವಾಹನ ಒಳಗೊಳ್ಳುತ್ತದೆ;

(5) "ನಿಯಮಿಸಿದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಿದರು.

**3. ಲೈಸೆನ್ಸ್ ಕೊಡುವ ಪ್ರಾಧಿಕಾರಿ.–** ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟನು ಈ ಅಧಿನಿಯಮದ ಮೇರೆಗೆ ಲೈಸೆನ್ಸ್‌ಗಳನ್ನು ಕೊಡುವ ಅಧಿಕಾರ ಹೊಂದಿರುವ ಪ್ರಾಧಿಕಾರಿಯಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದಲ್ಲಿ 'ಜಿಲ್ಲಾ ಮ್ಯಾಜಿಸ್ಟ್ರೇಟ್' ಎಂದರೆ, ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನು ಚಲಾಯಿಸುವ ಡೆಪ್ಯುಟಿ ಕಮೀಷನರ್.

**4. ಚಲನಚಿತ್ರ ಪ್ರದರ್ಶನಗಳಿಗೆ ಲೈಸೆನ್ಸ್ ಪಡೆಯತಕ್ಕದ್ದು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದಿರುವ ಸ್ಥಳವನ್ನು ಹೊರತುಪಡಿಸಿ ಬೇರೆಲ್ಲಿಯಾದರೂ ಅಥವಾ ಅಂಥ ಲೈಸನ್ಸಿನ ಮೂಲಕ ವಿಧಿಸಿದ ಯಾವುದೇ ಷರತ್ತುಗಳು ಮತ್ತು ಪರಿಬಂಧಗಳಿಗೆ ಅನ್ಯಸಾರವಾಗಿ ಅಲ್ಲದೆ ಅನ್ಯಥಾ ಚಲನಚಿತ್ರ ಗ್ರಾಹಕ ಯಂತ್ರದ ಸಾಧನದ ಮೂಲಕ ಪ್ರದರ್ಶನವನ್ನು ಕೊಡತಕ್ಕದ್ದಲ್ಲ.

**5. ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್.–** (1) ಸ್ಥಳದಲ್ಲಿ ಚಲನಚಿತ್ರ ಗ್ರಾಹಕ ಯಂತ್ರದ ಸಾಧನದ ಮೂಲಕ ಪ್ರದರ್ಶನವನ್ನು ಕೊಡಲು ಉದ್ದೇಶಿಸುವ ಯಾರೇ ವ್ಯಕ್ತಿಯು, ಅದಕ್ಕಾಗಿ ನಿಯಮಿಸಬಹುದಾದಂಥ ವಿವರಗಳೊಂದಿಗೆ ಆ ಬಗ್ಗೆ ಲೈಸೆನ್ಸಿಗಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(2) ಆ ತರುವಾಯ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ನಿಯಮಿಸಬಹುದಾದಂಥ ಪ್ರಾಧಿಕಾರಿ ಅಥವಾ ಅಧಿಕಾರಿಯೊಡನೆ ಸಮಾಲೋಚಿಸಿದ ತರುವಾಯ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು, ಅದು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಪರಿಬಂಧಗಳಿಗೆ ಒಳಪಟ್ಟು ಅಂಥ ವ್ಯಕ್ತಿಗೆ ಲೈಸನ್ಸ್‌ನ್ನು ಕೊಡಬಹುದು.

(3) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸ್ ಕೊಡಲು ನಿರಾಕರಿಸಿದಲ್ಲಿ, ಅಂಥ ನಿರಾಕರಣೆಗಾಗಿನ ಕಾರಣಗಳನ್ನು ಕೊಟ್ಟು ಅರ್ಜಿದಾರನಿಗೆ ತಿಳಿಸಿ, ಆದೇಶದ ಮೂಲಕ ಹಾಗೆ ಮಾಡತಕ್ಕದ್ದು.

**6. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಪರ್ಯಾಲೋಚಿಸಬೇಕಾದ ವಿಷಯಗಳು.–** ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸ್ ಕೊಡಬೇಕೇ ಅಥವಾ ನಿರಾಕರಿಸಬೇಕೆ, ಎಂಬುದನ್ನು ತೀರ್ಮಾನಿಸುವಲ್ಲಿ, ಈ ಕೆಳಕಂಡ ವಿಷಯಗಳಿಗೆ ಗಮನ ಕೊಡತಕ್ಕದ್ದು, ಎಂದರೆ:–

(ಕ) ಸಾಮಾನ್ಯವಾಗಿ ಸಾರ್ವಜನಿಕ ಹಿತಾಸಕ್ತಿ;

(ಖ) ಚಲನಚಿತ್ರ ಪ್ರದರ್ಶನಗಳನ್ನು ಕೊಡಲು ಉದ್ದೇಶಿಸಿದ ಸ್ಥಳದ ಸೂಕ್ತತೆ;

(ಗ) ಆ ಪ್ರದೇಶದಲ್ಲಿ ಚಲನಚಿತ್ರ ಫಿಲ್ಮುಗಳನ್ನು ಪ್ರದರ್ಶಿಸಲು ಆಸ್ತಿತ್ವದಲ್ಲಿರುವ ಸ್ಥಳದ ಸಾಕಷ್ಟಿರುವಿಕೆ; ಮತ್ತು

(ಘ) ಚಲನಚಿತ್ರ ಪ್ರದರ್ಶನಕ್ಕೆ ಹೊಸ ಸ್ಥಳವನ್ನು ತೆಗೆಯುವ ಮೂಲಕ ಯಾವುದೇ ವಿಶಿಷ್ಟ ಪ್ರದೇಶಕ್ಕೆ ಅಥವಾ ಪ್ರದೇಶಗಳಿಗೆ ಒದಗತಕ್ಕ ಪ್ರಯೋಜನ ಮತ್ತು ಉದ್ದೇಶಿತ ಪ್ರದೇಶದಲ್ಲಿ ಅಥವಾ ಅದರ ಹತ್ತಿರದಲ್ಲಿ ಚಲನಚಿತ್ರ ಪ್ರದರ್ಶನವನ್ನು ಈಗಾಗಲೇ ಕೊಡುತ್ತಿರುವ ವ್ಯಕ್ತಿಗಳು ಅಥವಾ ಲೈಸೆನ್ಸ್‌ನ್ನು ಕೊಡಬೇಕೆಂದು ಉದ್ದೇಶಿಸಿದ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಯಾರೇ ಸ್ಥಳೀಯ ಪ್ರಾಧಿಕಾರಿ ಅಥವಾ ಪೊಲೀಸು ಪ್ರಾಧಿಕಾರಿ ಅಥವಾ ಚಲನಚಿತ್ರ ಪ್ರದರ್ಶನಗಳನ್ನು ಕೊಡುವುದರಲ್ಲಿ ಆಸಕ್ತಿಯನ್ನು ಹೊಂದಿರುವ ಯಾವುದೇ ಸಂಘವು ಮಾಡಿಕೊಂಡ ಯಾವುದೇ ಮನವಿಗಳನ್ನು ಸಹ ಅದು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು.

**7. ಯಾವುದೇ ಪ್ರದೇಶದಲ್ಲಿ ಲೈಸೆನ್ಸ್ ಕೊಡಬಹುದಾದ ಸ್ಥಳಗಳ ಸಂಖ್ಯೆಯನ್ನು ಪರಿಮಿತಿಗೊಳಿಸಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಧಿಕಾರ.–** 6ನೇ ಪ್ರಕರಣದಲ್ಲಿ ನಿರೂಪಿಸಿದ ವಿಷಯಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಈ ಅಧಿನಿಯಮದ ಮೇರೆಗೆ ಯಾವುದೇ ಪ್ರದೇಶದಲ್ಲಿ ಲೈಸೆನ್ಸ್ ಕೊಡಬಹುದಾದಂಥ ಸ್ಥಳಗಳ ಸಂಖ್ಯೆಯನ್ನು ಆದೇಶದ ಮೂಲಕ ಪರಿಮಿತಿಗೊಳಿಸಬಹುದು.

**8. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಧಿಕಾರಗಳ ಮೇಲೆ ಪರಿಬಂಧ.–** ಲೈಸೆನ್ಸ್ ಕೊಡುವ ಪ್ರಾಧಿಕಾರಿಯು,–

(ಈ) ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳನ್ನು ಗಣನಾರ್ಹವಾಗಿ ಪಾಲಿಸಲಾಗಿದೆಯೆಂದು;

(ಖ) ಯಾವುದಕ್ಕೆ ಸಂಬಂಧಪಟ್ಟಂತೆ ಲೈಸೆನ್ಸ್ ಕೊಡಬೇಕಾಗಿದೆಯೋ ಆ ಸ್ಥಳದಲ್ಲಿ ಅಲ್ಲಿ ನಡೆಯುವ ಪ್ರದರ್ಶನಗಳಿಗೆ ಹಾಜರಾಗುವ ವ್ಯಕ್ತಿಗಳ ಸುರಕ್ಷೆ, ಅನುಕೂಲ ಮತ್ತು ಸೌಕರ್ಯಗಳಿಗಾಗಿ ಏರ್ಪಾಟು ಮಾಡಲು ಸಾಕಷ್ಟು ಮುನ್ನೆಚ್ಚರಿಕೆಯಗಳನ್ನು ತೆಗೆದುಕೊಳ್ಳಲಾಗಿದೆಯೆಂದು; ಮತ್ತು

(ಗ) ಆ ಪ್ರದೇಶಕ್ಕಾಗಿ ಸ್ಥಳಗಳ ಸಂಖ್ಯೆಯ ಸಂಬಂಧದಲ್ಲಿ 7ನೇ ಪ್ರಕರಣದ ಮೇರೆಗೆ ನಿರ್ಧರಿಸಲಾದ ಪರಿಮಿತಿಯನ್ನು ಮೀರಲಾಗಿಲ್ಲವೆಂದು ಮನದಟ್ಟು ಮಾಡಿಕೊಂಡ ಹೊರತು ಲೈಸೆನ್ಸ್‌ನ್ನು ಕೊಡತಕ್ಕದ್ದಲ್ಲ.

**9. ಲೈಸೆನ್ಸ್ ಅದನ್ನು ಪಡೆದುಕೊಂಡವನಿಗೆ ವೈಯಕ್ತಿಕವಾಗಿರುವುದು ಮತ್ತು ಅದನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿ ಪಡೆಯದೆ ವರ್ಗಾವಣೀಯಾಗಿರುವುದಿಲ್ಲ.–** ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ಲೈಸೆನ್ಸ್ ಯಾವ ವ್ಯಕ್ತಿಗೆ ಅದನ್ನು ಕೊಡಲಾಗಿದೆಯೋ ಆ ವ್ಯಕ್ತಿಗೆ ವೈಯಕ್ತಿಕವಾಗಿರತಕ್ಕದ್ದು ಮತ್ತು ನಿರುಪಾಧಿಕವಾಗಿಯಾಗಲಿ ಅಥವಾ ಭದ್ರತೆಯ ಮೂಲಕವಾಗಲಿ ಅಥವಾ ಅನ್ಯಥಾ ಆಗಲಿ ಅದರ ಯಾವುದೇ ವರ್ಗಾವಣೆ ಅಥವಾ ಹಸ್ತಾಂತರಣವು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಬರಹದಲ್ಲಿನ ಅನುಮೋದನೆಯಿಂದ ಮಾಡಿದ ಹೊರತು ಸಿಂಧುವಾಗಿರತಕ್ಕದ್ದಲ್ಲ.

**10. 5 ಮತ್ತು 9ನೇಯ ಪ್ರಕರಣಗಳ ಮೇರೆಗಿನ ತೀರ್ಮಾನಗಳ ವಿರುದ್ಧ ಅಪೀಲು.–** 5 ಅಥವಾ 9ನೇಯ ಪ್ರಕರಣದ ಮೇರೆಗಿನ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅವನಿಗೆ ಈ ತೀರ್ಮಾನವನ್ನು ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ನಿಯಮಿಸಿದ ಪ್ರಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಯವನೇ ಪ್ರಾಧಿಕಾರಿಯನ್ನು ನಿಯಮಿಸಿಲ್ಲದಿರುವಲ್ಲಿ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು. ಅಪೀಲಿನಲ್ಲಿ ಅಪೀಲು ಪ್ರಾಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

**11. ಚಲನಚಿತ್ರ ಫಿಲ್ಮುಗಳ ಪ್ರದರ್ಶನಕ್ಕಾಗಿ ಕಟ್ಟಡಗಳ ನಿರ್ಮಾಣ ಅಥವಾ ಪುನರ್ ನಿರ್ಮಾಣ ಅಥವಾ ಅದಕ್ಕಾಗಿ ಸ್ಥಳಗಳ ಉಪಯೋಗವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯನ್ನು ಪಡೆದ ತರುವಾಯ ಮಾತ್ರವೇ ಮಾಡಬೇಕು.–** (1)(ಕ) ಚಲನಚಿತ್ರ ಫಿಲ್ಮುಗಳ ಪ್ರದರ್ಶನಕ್ಕಾಗಿ ಯಾವುದೇ ಸ್ಥಳವನ್ನು ಉಪಯೋಗಿಸಲು; ಅಥವಾ

(ಖ) ಚಲನಚಿತ್ರ ಫಿಲ್ಮುಗಳನ್ನು ಪ್ರದರ್ಶಿಸುವುದಕ್ಕಾಗಿ ಅದರ ಮೇಲೆ ಕಟ್ಟಡವನ್ನು ನಿರ್ಮಿಸುವುದಕ್ಕಾಗಿ ಯಾವುದೇ ನಿವೇಶನವನ್ನು ಉಪಯೋಗಿಸಲು ; ಅಥವಾ

(ಗ) ಅಂಥ ಪ್ರದರ್ಶನಕ್ಕಾಗಿ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು; ಅಥವಾ

(ಘ) ಚಲನಚಿತ್ರ ಪ್ರದರ್ಶನಗಳನ್ನು ಕೊಡಲು ಉದ್ದೇಶಿಸಲಾದಂಥ ಯಾವುದೇ ಸ್ಥಳದಲ್ಲಿ ಯಾವುದೇ ಯಂತ್ರೋಪಕರಣಗಳನ್ನು ಸ್ಥಾಪಿಸಲು ;

–ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ವಿವರಗಳೊಂದಿಗೆ ಅದಕ್ಕಾಗಿ ಅನುಮತಿಗಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(2) ಕಟ್ಟಡಗಳನ್ನು ನಿರ್ಮಿಸುವುದು ಅಥವಾ ಕಟ್ಟುವುದನ್ನು ವಿನಿಯಮಿಸುವ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಿತಿಗಳಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಅಂಥ ಅಧಿನಿಯಮಗಳ ಅಥವಾ ಕಾನೂನಿನ ಮೇರೆಗೆ ರಚಿಸಿದ ನಿಯಮಗಳು ಅಥವಾ

ಉಪವಿಧಿಗಳಲ್ಲಿ ಒಳಗೊಂಡಿರುವ ಯಾವುದೇ ಉಪಬಂಧವು, ಅಂಥ ಉಪಬಂಧವು (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಸದರಿ ಉಪ–ಪ್ರಕರಣದ ಮೇರೆಗಿನ ಅರ್ಜಿಗೆ ಅನ್ವಯವಾಗತಕ್ಕದ್ದಲ್ಲ,

(3) ಆ ತರುವಾಯ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ನಿಯಮಿಸಬಹುದಾದಂಥ ಪ್ರಾಧಿಕಾರಿ ಅಥವಾ ಅಧಿಕಾರಿಯೊಡನೆ ಸಮಾಲೋಚಿಸಿ, ಅನುಮತಿಯನ್ನು ಕೊಡತಕ್ಕದ್ದು ಅಥವಾ ನಿರಾಕರಿಸತಕ್ಕದ್ದು ಮತ್ತು ಲೈಸೆನ್ಸ್‌ಗಳಿಗೆ ಸಂಬಂಧಪಟ್ಟ 6ನೇ ಪ್ರಕರಣ, 8ನೇ ಪ್ರಕರಣ ಮತ್ತು 10ನೇ ಪ್ರಕರಣಗಳ ಉಪಬಂಧಗಳು, ಆದಷ್ಟು ಮಟ್ಟಿಗೆ ಈ ಪ್ರಕರಣದ ಮೇರೆಗಿನ ಅನುಮತಿಗೆ ಅನ್ವಯವಾಗತಕ್ಕದ್ದು.

**12. ನಿರ್ದೇಶನಗಳನ್ನು ಕೊಡಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಕಾಲಕಾಲಕ್ಕೆ ಯಾರೇ ಲೈಸೆನ್ಸ್‌ದಾರನಿಗೆ ಅಥವಾ ಸಾಮಾನ್ಯವಾಗಿ ಲೈಸೆನ್ಸುದಾರರಿಗೆ ರಾಜ್ಯ ಸರ್ಕಾರವು ಆ ಬಗ್ಗೆ ಕಾಲಕಾಲಕ್ಕೆ ಅನುಮೋದಿಸಿರಬಹುದಾದಂಥ,–

(ಕ) ವೈಜ್ಞಾನಿಕ ಅಥವಾ ಶೈಕ್ಷಣಿಕ ಮೌಲ್ಯವುಳ್ಳ ಅಂಥ ಫಿಲ್ಮು ಅಥವಾ ವರ್ಗದ ಫಿಲ್ಮುಗಳನ್ನು ;

(ಖ) ವಾರ್ತೆ ಮತ್ತು ಪ್ರಚಲಿತ ಘಟನೆಗಳನ್ನು ಕುರಿತಂಥ ಫಿಲ್ಮುಗಳನ್ನು ;

(ಗ) ಸಾರ್ವಜನಿಕರಿಗೆ ವಿಶೇಷ ಮೌಲ್ಯವುಳ್ಳಂಥ ಸಾಕ್ಷ್ಯ ಫಿಲ್ಮುಗಳು, ದೇಶಿ ಫಿಲ್ಮುಗಳು ಅಥವಾ ಅಂಥ ಇತರ ಫಿಲ್ಮುಗಳನ್ನು ಪ್ರದರ್ಶಿಸಲು ಲೈಸೆನ್ಸ್‌ದಾರ ಅಥವಾ ಲೈಸೆನ್ಸ್‌ದಾರರನ್ನು ಅಗತ್ಯಪಡಿಸಿ ನಿರ್ದೇಶನಗಳನ್ನು ಕೊಡಬಹುದು.

(2) (1)ನೇಯ ಉಪಪ್ರಕರಣದ ಮೇರೆಗೆ ಯಾವುವೇ ನಿವೇಶನಗಳನ್ನು ಕೊಡಲಾಗಿರುವಲ್ಲಿ, ಅಂಥ ನಿರ್ದೇಶನಗಳನ್ನು ಯಾವ ಷರತ್ತುಗಳು ಮತ್ತು ಪರಿಬಂಧಗಳಿಗೊಳಪಟ್ಟು ಲೈಸೆನ್ಸ್ ಕೊಡಲಾಗಿದೆಯೋ ಅಂಥ ಹೆಚ್ಚುವರಿ ಷರತ್ತುಗಳು ಮತ್ತು ಪರಿಬಂಧಗಳೆಂದು ಭಾವಿಸತಕ್ಕದ್ದು.

ಪರಂತು, ಈ ಪ್ರಕರಣದ ಮೇರೆಗೆ ಕೊಟ್ಟ ಯಾವುವೇ ನಿರ್ದೇಶನವು, ಯಾವುದೇ ಒಂದು ಪ್ರದರ್ಶನದಲ್ಲಿ ಎರಡು ಸಾವಿರ ಅಡಿಗೆ ಮೀರುವ ಅಥವಾ ಯಾವುದೇ ಒಂದು ಪ್ರದರ್ಶನಕ್ಕೆ ತೆಗೆದುಕೊಂಡ ಒಟ್ಟು ಕಾಲದ ಐದನೇ ಒಂದಂಶಕ್ಕಿಂತ ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವ ಯಾವುದೇ ಅಂಥ ಫಿಲ್ಮನ್ನು ಅಥವಾ ಫಿಲ್ಮುಗಳನ್ನು ಪ್ರದರ್ಶಿಸಲು ಲೈಸೆನ್ಸ್‌ದಾರರನ್ನು ಅಗತ್ಯಪಡಿಸತಕ್ಕದ್ದಲ್ಲ.

**13. ನಿರ್ದೇಶನಗಳನ್ನು ಕೊಡಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಧಿಕಾರ.–** ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಕಾಲಕಾಲಕ್ಕೆ ಯಾರೇ ಲೈಸೆನ್ಸುದಾರ ಅಥವಾ ಲೈಸೆನ್ಸುದಾರರಿಗೆ ಸಾಮಾನ್ಯವಾಗಿ, ಲೈಸೆನ್ಸುದಾರ ಅಥವಾ ಲೈಸೆನ್ಸುದಾರರ ಬಗ್ಗೆ ಪ್ರತಿಯೊಂದು ಪ್ರದರ್ಶನದಲ್ಲಿ ಆ ಪ್ರಾಧಿಕಾರಿಯು ಸರಬರಾಜು ಮಾಡಬಹುದಾದಂಥ ಸಾರ್ವಜನಿಕ ಆಸಕ್ತಿಯ ಸ್ಲೈಡುಗಳನ್ನು ಪ್ರದರ್ಶಿಸಲು ಅಗತ್ಯಪಡಿಸಿ ನಿರ್ದೇಶನಗಳನ್ನು ಕೊಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನವು ಯಾವುದೇ ಒಂದು ಪ್ರದರ್ಶನದಲ್ಲಿ ಅಂಥ ಮೂರು ಸ್ಲೈಡುಗಳಿಗಿಂತ ಹೆಚ್ಚು ಅಥವಾ ನಾಲ್ಕು ನಿಮಿಷಗಳಿಗಿಂತ ಹೆಚ್ಚಾಗಿ ಪ್ರದರ್ಶಿಸಲು ಲೈಸೆನ್ಸುದಾರನನ್ನು ಅಗತ್ಯಪಡಿಸತಕ್ಕದ್ದಲ್ಲ.

**14. ಲೈಸೆನ್ಸ್‌ಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕುರಿತು ಸಾಮಾನ್ಯ ಸ್ವರೂಪದ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಕೊಡಲು ರಾಜ್ಯ ಸರ್ಕಾರದ ಅಧಿಕಾರ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು, ಚಲನಚಿತ್ರ ಫಿಲ್ಮುಗಳ ಪ್ರದರ್ಶನದ ಮೇರೆಗಿನ ಲೈಸೆನ್ಸ್‌ಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಸಾಮಾನ್ಯ ಸ್ವರೂಪದ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಲೈಸೆನ್ಸ್

ಕೊಡುವ ಪ್ರಾಧಿಕಾರಿಗಳಿಗೆ ಕೊಡಬಹುದು ಮತ್ತು ಪ್ರತಿಯೊಬ್ಬ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಂಥ ಆದೇಶಗಳನ್ನು ಮತ್ತು ನಿರ್ದೇಶನಗಳನ್ನು ಜಾರಿಗೊಳಿಸತಕ್ಕದ್ದು.

**15. ಕೆಲವೊಂದು ಸಂದರ್ಭಗಳಲ್ಲಿ ಫಿಲ್ಮುಗಳ ಪ್ರದರ್ಶನವನ್ನು ಅಮಾನತ್ತುಗೊಳಿಸಲು ರಾಜ್ಯ ಸರ್ಕಾರ ಅಥವಾ ಲೈಸೆನ್ಸ್ ಪ್ರಾಧಿಕಾರಿಯ ಅಧಿಕಾರ.–** (1) ರಾಜ್ಯ ಸರ್ಕಾರವು, ಇಡೀ ರಾಜ್ಯ ಅಥವಾ ಯಾವುದೇ ಭಾಗಕ್ಕೆ ಸಂಬಂಧಪಟ್ಟಂತೆ ಮತ್ತು ಅದರ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶಕ್ಕೆ ಸಂಬಂಧಿಸಿದಂತೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸಾರ್ವಜನಿಕವಾಗಿ ಪ್ರದರ್ಶಿತವಾಗುತ್ತಿರುವ ಅಥವಾ ಪ್ರದರ್ಶಿಸಲಾಗುವ ಯಾವುದೇ ಫಿಲ್ಮು ಶಾಂತಿ ಭಂಗವನ್ನುಂಟು ಮಾಡುವ ಸಂಭವವಿದೆಯೆಂದು ಅಭಿಪ್ರಾಯಪಟ್ಟರೆ ಅದು ಆದೇಶದ ಮೂಲಕ ಅಂಥ ಫಿಲ್ಮಿನ ಪ್ರದರ್ಶನವನ್ನು ಅಮಾನತ್ತುಗೊಳಿಸಬಹುದು ಮತ್ತು ಅಂಥ ಅಮಾನತ್ತುಗೊಳಿಸಿರುವ ಅವಧಿಯಲ್ಲಿ ಯಾರೇ ವ್ಯಕ್ತಿಯು ಅಂಥ ಫಿಲ್ಮನ್ನು ಸಂದರ್ಭಾನುಸಾರ, ರಾಜ್ಯದಲ್ಲಿನ ಯಾವುದೇ ಸ್ಥಳ ಅಥವಾ ಅದರ ಯಾವುದೇ ಭಾಗ ಅಥವಾ ಪ್ರದೇಶದಲ್ಲಿ ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ;

(2) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಸಂಬಂಧಪಟ್ಟ ವ್ಯಕ್ತಿಗೆ, ಅವನಿಗೆ ಸಂಬಂಧಿಸಿದಂತೆ ಹೊರಡಿಸಲು ಉದ್ದೇಶಿಸಿದ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಆತನಿಗೆ ಯುಕ್ತ ಅವಕಾಶವನ್ನು ಕೊಡುವವರೆಗೆ, ತುರ್ತು ಪರಿಸ್ಥಿತಿಯ ಅಥವಾ ಬರಹದಲ್ಲಿ ದಾಖಲು ಮಾಡುವ ಇತರ ಯಾವುದೇ ಕಾರಣಕ್ಕಾಗಿ ರಾಜ್ಯ ಸರ್ಕಾರ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿ ಆ ವ್ಯಕ್ತಿಗೆ ಕಾರಣವನ್ನು ತೋರಿಸಲು ಅವಕಾಶ ಕೊಡುವುದು ಯುಕ್ತ ಕಾರ್ಯಸಾಧ್ಯವಲ್ಲವೆಂದು ಮನದಟ್ಟು ಮಾಡಿಕೊಂಡ ಹೊರತು, ಹೊರಡಿಸತಕ್ಕದ್ದಲ್ಲ:

ಪರಂತು, ಆದೇಶವನ್ನು ಹೊರಡಿಸುವುದಕ್ಕಾಗಿ ರಾಜ್ಯ ಸರ್ಕಾರ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ದಾಖಲು ಮಾಡಿದ ಕಾರಣಗಳ ಒಂದು ಪ್ರತಿಯನ್ನು ಸಂಬಂಧಪಟ್ಟ ವ್ಯಕ್ತಿಗೆ ಅವನಿಗೆ ಕಾರಣಗಳನ್ನು ತಿಳಿಸಲು ಯುಕ್ತವಾಗಿ ಕಾರ್ಯಸಾಧ್ಯವಾದ ಕೂಡಲೇ, ಆತನಿಗೆ ಕಳುಹಿಸತಕ್ಕದ್ದು.

(3) ಯಾರೇ ವ್ಯಕ್ತಿಗೆ (2)ನೇ ಉಪ–ಪ್ರಕರಣದ ಮೇರೆಗೆ ಕಾರಣವನ್ನು ತೋರಿಸಲು ಅವಕಾಶವನ್ನು ಕೊಡುವುದು ಯುಕ್ತವಾಗಿ ಕಾರ್ಯಸಾಧ್ಯವೇ ಹೇಗೆ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಮೇಲೆ ರಾಜ್ಯ ಸರ್ಕಾರ ಅಥವಾ ಸಂದರ್ಭಾನುಸಾರ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಹೊರಡಿಸಿರುವಲ್ಲಿ, ಅದರ ಒಂದು ಪ್ರತಿಯನ್ನು ಅದಕ್ಕಾಗಿನ ಕಾರಣಗಳ ವಿವರ ಪತ್ರದೊಂದಿಗೆ ರಾಜ್ಯ ಸರ್ಕಾರಕ್ಕೆ ತತ್‌ಕ್ಷಣ ಅವನು ಕಳುಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ಪ್ರಕರಣದ ಎಲ್ಲಾ ಸಂಗತಿಗಳನ್ನು ಪರ್ಯಾಲೋಚಿಸಿದ ಮೇಲೆ, ಆ ಆದೇಶವನ್ನು ಸ್ಥಿರೀಕರಿಸಬಹುದು, ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(5) (1)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವು, ಅದನ್ನು ಹೊರಡಿಸಿದ ದಿನಾಂಕದಿಂದ ಎರಡು ವಾರಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು. ಆದರೆ, ರಾಜ್ಯ ಸರ್ಕಾರವು ಆದೇಶವು ಜಾರಿಯಲ್ಲಿರುವುದು ಮುಂದುವರಿಯಬೇಕೆಂದು ಅಭಿಪ್ರಾಯಪಟ್ಟರೆ, ಅಮಾನತ್ತಿನ ಅವಧಿಯನ್ನು ಅದು ಸೂಕ್ತವೆಂದು ಯೋಚಿಸುವಂಥ ಒಟ್ಟಾರೆ ಎರಡು ತಿಂಗಳುಗಳನ್ನು ಮೀರದಂಥ ಇನ್ನೂ ಹೆಚ್ಚಿನ ಅವಧಿ ಅಥವಾ ಅವಧಿಗಳಿಗೆ ವಿಸ್ತರಿಸತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ರಾಜ್ಯ ಸರ್ಕಾರ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಯಾವುದೇ ಕಾಲದಲ್ಲಿ ಅವನ ಆದೇಶವನ್ನು ಪುನರ್‌ವಿಲೋಕಿಸಬಹುದು.

**16. ದಂಡಗಳು.–** (1) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಯಾವ ಷರತ್ತುಗಳು ಮತ್ತು ಪರಿಬಂಧಗಳ ಮೇಲೆ ಅಥವಾ ಅವುಗಳಿಗೆ ಒಳಪಟ್ಟು ಈ ಅಧಿನಿಯಮದ ಮೇರೆಗೆ ಯಾವುದೇ ಲೈಸೆನ್ಸ್ ಅಥವಾ ಅನುಮತಿಯನ್ನು ಕೊಡಲಾಗಿದೆಯೋ ಆ ಯಾವುವೇ ಷರತ್ತುಗಳು ಮತ್ತು ಪರಿಬಂಧಗಳನ್ನು ಅಥವಾ 20ನೆಯ ಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳು ಅಥವಾ ಪರಿಬಂಧಗಳನ್ನು ಉಲ್ಲಂಘಿಸಿ ಚಲನಚಿತ್ರ ಗ್ರಾಹಕ ಯಂತ್ರದ ಒಡೆಯ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು ಅದನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅವಕಾಶ ಮಾಡಿಕೊಟ್ಟರೆ ಅಥವಾ ಯಾವುದೇ ಸ್ಥಳದ ಒಡೆಯ ಅಥವಾ ಅಧಿಭೋಗದಾರನು ಆ ಸ್ಥಳವನ್ನು ಉಪಯೋಗಿಸಲು ಅನುಮತಿಸಿದರೆ ಅದನ್ನು ಉಪಯೋಗಿಸಲು ಎಡೆ ಮಾಡಿ ಕೊಟ್ಟರೆ ಅಥವಾ ಯಾರೇ ವ್ಯಕ್ತಿಯು 11ನೇಯ ಪ್ರಕರಣದ ಉಪಬಂಧಗಳು ಅಥವಾ ಈ ಅಧಿನಿಯಮದ ಇತರ ಯಾವುದೇ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮವನ್ನು ಉಲ್ಲಂಘಿಸಿದರೆ, ಅವನು ಅಪರಾಧವು ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಮುಂದುವರಿಯುತ್ತಿರುವ ಅಪರಾಧದ ಸಂದರ್ಭದಲ್ಲಿ ಆ ಅಪರಾಧವು ಮುಂದುವರೆಯುವಂಥ ಅವಧಿಯ ಪ್ರತಿ ದಿವಸಕ್ಕಾಗಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) (1)ನೇಯ ಉಪ–ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್‌ನ್ನು ಪ್ರಾರಂಭಿಸಲಾದ ತರುವಾಯ, ಲೈಸನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸ್‌ಧಾರಕನು ಪುನಃ ಅಪರಾಧ ಮಾಡುತ್ತಿದ್ದಾನೆ ಎಂದು ಅಥವಾ ಅದನ್ನು ಮಾಡುವುದನ್ನು ಮುಂದುವರಿಸುತ್ತಿದ್ದಾನೆಂದು ನಂಬಲು ಕಾರಣವಿರುವಲ್ಲಿ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನೋಟೀಸಿನ ಮೂಲಕ ಅಪರಾಧವನ್ನು ಮುಂದುವರಿಸಕೂಡದೆಂದು ಲೈಸೆನ್ಸ್‌ಧಾರಕನಿಗೆ ಎಚ್ಚರಿಕೆಯನ್ನು ಕೊಡಬಹುದು. ಲೈಸೆನ್ಸ್‌ಧಾರಕನು ಆ ಅಪರಾಧ ಮಾಡುವುದನ್ನು ಪಟ್ಟು ಹಿಡಿದರೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆ ಪ್ರಾಸಿಕ್ಯೂಷನ್ನಿನ ಫಲಿತಾಂಶ ಗೊತ್ತಾಗುವವರೆಗೆ ಆ ಲೈಸೆನ್ಸ್‌ನ್ನು ಅಮಾನತ್ತುಗೊಳಿಸಬಹುದು.

**17. ಲೈಸೆನ್ಸ್‌ನ್ನು ರದ್ದುಗೊಳಿಸಲು ಅಥವಾ ಅಮಾನತ್ತುಗೊಳಿಸಲು ಅಧಿಕಾರ.–** (1) ಲೈಸೆನ್ಸ್‌ಧಾರಕನು ಈ ಅಧಿನಿಯಮದ 15ನೇಯ ಪ್ರಕರಣದ ಮೇರೆಗೆ ಅಥವಾ ಚಲನಚಿತ್ರ ಅಧಿನಿಯಮ, 1952 (1952ರ ಕೇಂದ್ರ ಅಧಿನಿಯಮ 37)ದ 7ನೇಯ ಪ್ರಕರಣದ ಮೇರೆಗೆ ಅಥವಾ 12ನೇಯ ಪ್ರಕರಣದ ಮೇರೆಗಿನ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತವಾಗಿರುವಲ್ಲಿ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ ಸಂಖ್ಯೆ 3)ರ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಂಡಿರುವಲ್ಲಿ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಬರಹದಲ್ಲಿನ ಆದೇಶದ ಮೂಲಕ ಲೈಸೆನ್ಸ್‌ನ್ನು ರದ್ದುಗೊಳಿಸಬಹುದು ಅಥವಾ ಅವನು ಸೂಕ್ತವೆಂದು ಯೋಚಿಸಬಹುದಾದಂಥ ಅವಧಿಗಾಗಿ ಅದನ್ನು ಅಮಾನತ್ತುಗೊಳಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅವನಿಗೆ ಆದೇಶವನ್ನು ತಿಳಿಸಲಾದಂಥ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಬಹುದಾದಂಥ ಪ್ರಾಧಿಕಾರಿಗೆ ಮತ್ತು ಅಂತಹ ಯಾರೇ ಪ್ರಾಧಿಕಾರಿಯನ್ನು ನಿಯಮಿಸದೇ ಇರುವಲ್ಲಿ ರಾಜ್ಯ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

**18. ರಾಜ್ಯ ಸರ್ಕಾರದ ಪುನರೀಕ್ಷಣಾ ಅಧಿಕಾರಗಳು.–** ರಾಜ್ಯ ಸರ್ಕಾರವು, ಯಾವುದರ ವಿರುದ್ಧ 10ನೇ ಅಥವಾ 17ನೇ ಪ್ರಕರಣದ ಮೇರೆಗೆ ಅಪೀಲನ್ನು ಹೂಡಲಾಗದೋ ಆ ಯಾವುದೇ ಮೂಲ ಆದೇಶಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ಅಂಥ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅವನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಅಂಥ ಆದೇಶದಿಂದ ಬಾಧಿತನಾಗಬಹುದಾದ ಪಕ್ಷಕಾರನಿಗೆ ಅಂಥ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಅವಕಾಶವನ್ನು ಕೊಡದೆ ಮಾಡತಕ್ಕದ್ದಲ್ಲ.

**19. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಥವಾ ನಿಯಮಗಳು,–

(ಕ) ಲೈಸೆನ್ಸ್‌ಗಾಗಿನ ಅರ್ಜಿಯಲ್ಲಿ ಕೊಡಬೇಕಾದ ವಿವರಗಳು ಮತ್ತು ಯಾವ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಕೊಡಬಹುದೋ ಆ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳು ಮತ್ತು ಅಂತಹ ಲೈಸೆನ್ಸಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು;

(ಖ) 7ನೇಯ ಪ್ರಕರಣದ ಮೇರೆಗಿನ ಸಂಖ್ಯೆಯನ್ನು ಯಾವ ಆಧಾರದ ಮೇಲೆ ನಿರ್ಧರಿಸಬೇಕೋ ಆ ಷರತ್ತುಗಳು;

(ಗ) ಸಂಚಾರಿ ಸಿನಿಮಾಗಳಿಗಾಗಿ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಯಾವ ಅವಧಿಯವರೆಗೆ ಲೈಸೆನ್ಸುಗಳನ್ನು ಕೊಡಬಹುದೋ ಆ ಅವಧಿಯ ಪರಿಮಿತಿ ಮತ್ತು ಖಾಯಂ ಸಿನಿಮಾದಿಂದ ಯಾವ ಅಂತರದಿಂದಾಚೆ ಸಂಚಾರಿ ಸಿನಿಮಾಗಳಿಗಾಗಿ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಲೈಸೆನ್ಸ್‌ನ್ನು ಕೊಡಬಹುದೋ ಆ ಅಂತರವನ್ನು ನಿಯಮಿಸಬಹುದು;

(ಘ) ಸಾರ್ವಜನಿಕ ಸುರಕ್ಷತೆಯನ್ನು ಸುರಕ್ಷಿತಗೊಳಿಸುವುದಕ್ಕಾಗಿ ಚಲನಚಿತ್ರ ಪ್ರದರ್ಶನಗಳನ್ನು ನಿಯಂತ್ರಿಸುವುದು;

(ಙ) ಈ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದಿರುವ ಸ್ಥಳಗಳಲ್ಲಿ ಪ್ರವೇಶ ಅಥವಾ ಹೊರಹೋಗುವ ಸಾಧನಗಳನ್ನು ನಿಯಂತ್ರಿಸುವುದು ಮತ್ತು ಅದರಲ್ಲಿ ಗಲಭೆಯನ್ನು ತಡೆಗಟ್ಟುವುದಕ್ಕಾಗಿ ವ್ಯವಸ್ಥೆ ಮಾಡುವುದು ;

(ಚ) ಯಾವ ಷರತ್ತುಗಳಿಗೊಳಪಟ್ಟು 10ನೇಯ ಪ್ರಕರಣ ಮತ್ತು 17ನೇಯ ಪ್ರಕರಣ (2)ನೇಯ ಉಪ–ಪ್ರಕರಣದ ಮೇರೆಗೆ ಅಪೀಲು ಮಾಡಿಕೊಳ್ಳಬಹುದೋ ಆ ಷರತ್ತುಗಳು ಮತ್ತು ಅಂಥ ಅಪೀಲುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುಬೇಕಾದ ಫೀಜು;

(ಛ) (i) 11ನೇಯ ಪ್ರಕರಣದ ಮೇರೆಗೆ ಅನುಮತಿಗಾಗಿನ ಅರ್ಜಿಗಳಿಗೆ ಸಂಬಂಧಿಸಿದಂತೆ ವ್ಯಕ್ತಿಗಳು ಅನುಸರಿಸಬೇಕಾದ ಪ್ರಕ್ರಿಯೆ;

(ii) ಅಂತಹ ಅರ್ಜಿಯ ಜೊತೆಗೆ ಒಪ್ಪಿಸಬೇಕಾದ ದಸ್ತಾವೇಜುಗಳು ಮತ್ತು ನಕ್ಷೆಗಳು ಮತ್ತು ಅಂಥ ಅರ್ಜಿಗೆ ಸಂದಾಯ ಮಾಡಬೇಕಾದ ಫೀಜುಗಳು;

(iii) ಕಟ್ಟಡ ನಿರ್ಮಾಣಕ್ಕಾಗಿ ನಿವೇಶನವನ್ನು ಅಥವಾ ಆ ಕಟ್ಟಡದ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕಾಗಿ ನಕ್ಷೆಗಳನ್ನು ಅಥವಾ ಯಂತ್ರ ಸಾಮಾಗ್ರಿಯ ಸ್ಥಾಪನೆಯನ್ನು ಅನುಮೋದಿಸುವುದಕ್ಕಿಂತ ಮುಂಚೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಪರ್ಯಾಲೋಚಿಸಬೇಕಾದ ವಿಷಯಗಳು;

(iv) (iii)ನೇಯ ಉಪಖಂಡದಲ್ಲಿ ಉಲ್ಲೇಖಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಯಾವ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳಿಗೊಳಪಟ್ಟು ಲೈಸೆನ್ ಕೊಡುವ ಪ್ರಾಧಿಕಾರಿಯು ಅನುಮೋದನೆಯನ್ನು ಕೊಡಬಹುದೋ ಆ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳು;

(v) ಅಂಥ ಅನುಮೋದನೆಯನ್ನು ಯಾವ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು ಕೊಡಲಾಗಿದ್ದಿತೋ ಆ ನಿಬಂಧನೆಗಳು, ಷರತ್ತುಗಳು ಮತ್ತು ಪರಿಬಂಧಗಳ ಉಲ್ಲಂಘನೆಯ ಸಂದರ್ಭಗಳಲ್ಲಿ ಕೈಕೊಳ್ಳಬೇಕಾದ ಕ್ರಮ;

(vi) 11ನೇಯ ಪ್ರಕರಣದ ಮೇರೆಗೆ ಅನುಮತಿಯನ್ನು ಕೊಡುವುದಕ್ಕೆ ಅಥವಾ ನಿರಾಕರಿಸುವುದಕ್ಕೆ ಮುಂಚೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅದಕ್ಕೆ ಪ್ರಾಸಂಗಿಕವಾದ ಇತರ ಯಾವುದೇ ಇತರ ವಿಷಯಗಳು;

(ಜ) 12ನೇಯ ಪ್ರಕರಣದ ಉದ್ದೇಶಕ್ಕಾಗಿ ಚಲನಚಿತ್ರವನ್ನು ಅನುಮೋದಿಸುವುದಕ್ಕಾಗಿ ಪ್ರಕ್ರಿಯೆ;

(ಝ) ಈ ಅಧಿನಿಯಮದ ಮೇರೆಗೆ ಲೈಸೆನ್ಸನ್ನು ಪಡೆದಿರುವ ಸ್ಥಳಕ್ಕೆ, ಅದನ್ನು ಯಾವುದೇ ಹೆಸರಿನಿಂದ ಕರೆಯಲಿ ಪ್ರವೇಶಕ್ಕಾಗಿನ ಯಾವುದೇ ಟಿಕೆಟ್ ಅಥವಾ ಪಾಸಿನ ಮಾರಾಟವನ್ನು ನಿಯಂತ್ರಿಸುವುದು ಅಥವಾ ನಿಷೇಧಿಸುವುದು.

(3) 22ನೇಯ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಡಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು, ಈ ಅಧಿನಿಯಮದಲ್ಲಿ ಅಧಿನಿಯಮಿತಿಗೊಳಿಸಿದಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕದ್ದು.

**20. ವಿನಾಯಿತಿ ಕೊಡಲು ಅಧಿಕಾರ.–** ರಾಜ್ಯ ಸರ್ಕಾರವು, ಹಾಗೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯ ಅಥವಾ ವಿಹಿತವೆಂದಾದರೆ, ಬರಹದಲ್ಲಿನ ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು ಯಾವುದೇ ಚಲನಚಿತ್ರ ಪ್ರದರ್ಶನ ಅಥವಾ ವರ್ಗದ ಚಲನಚಿತ್ರ ಪ್ರದರ್ಶನ ಅಥವಾ ಚಲನಚಿತ್ರ ಪ್ರದರ್ಶನವನ್ನು ಕೊಡುತ್ತಿರುವ ಸ್ಥಳವನ್ನು ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳಿಂದ ವಿನಾಯಿತಿಗೊಳಿಸಬಹುದು.

**21. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪೆನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪೆನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ–ಪ್ರಕರಣದಲ್ಲಿ ಇರುವುದು ಯಾವುದೂ, ಯಾರೇ ಅಂಥ ವ್ಯಕ್ತಿಯು ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದನೆಂದು ರುಜುವಾತುಪಡಿಸಿದರೆ, ಅವನನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪೆನಿಯ ಯಾವುದೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ

ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಕ) **"ಕಂಪೆನಿ"** ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಇದೇ ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘಗಳನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಿಸಿದ **'ನಿರ್ದೇಶಕ'** ಫರ್ಮಿನಲ್ಲಿ ಪಾಲುದಾರ.

**23. ರಾಜ್ಯ ವಿಧಾನಮಂಡಲದ ಮುಂದೆ ಇಡಬೇಕಾದ ನಿಯಮಗಳು ಮತ್ತು ಆದೇಶಗಳು.**– ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮ ಮತ್ತು 20ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳಿಗೆ ನಿಕಟೋತ್ತರವಾದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಈ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯುಂಟು ಮಾಡತಕ್ಕದ್ದಲ್ಲ.

**23. ನಿರಸನ ಮತ್ತು ಉಳಿಸುವಿಕೆಗಳು.**– (1) ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮೈಸೂರು ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1955.

(2) ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಮದ್ರಾಸ್ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1955.

(3) ಬೆಳಗಾವಿ ಪ್ರದೇಶದಲ್ಲಿ ಜಾರಿಯಲ್ಲಿರುವ ಮುಂಬೈ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1953.

(4) ಕಲ್ಬುರ್ಗಿ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ ಹೈದರಾಬಾದು ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, 1952.

(5) ಕೊಡಗು ಜಿಲ್ಲೆಯಲ್ಲಿ ಜಾರಿಯಿರುವಂತೆ ಚಲನಚಿತ್ರ ಅಧಿನಿಯಮ, 1952ರ 111ನೇಯ ಭಾಗ (ಕೇಂದ್ರ ಅಧಿನಿಯಮ, 1952ರ 37)

–ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899) ಕರ್ನಾಟಕ ಅಧಿನಿಯಮ ಸಂಖ್ಯೆ 3) 6ನೇಯ ಪ್ರಕರಣವು ಇಂಥ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಗಳನ್ನು ಈ ಅಧಿನಿಯಮದ ಮೇರೆಗೆ ನಿರಸನಗೊಳಿಸಿ ಪುನರ್ ಅಧಿನಿಯಮಿತಿಗೊಳಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಅನುಸೂಚಿ**

**(11ನೇ ಪ್ರಕರಣವನ್ನು ನೋಡಿ)**

1. ಬೆಂಗಳೂರು ನಗರ ಪೌರ ನಿಗಮ ಅಧಿನಿಯಮ, 1959;
2. ಮೈಸೂರು ಪೌರಸಭೆಗಳ ಅಧಿನಿಯಮ, 1933;
3. ಮೈಸೂರು ಪಟ್ಟಣ ಪೌರಸಭೆಗಳ ಅಧಿನಿಯಮ, 1951;
4. ಕರ್ನಾಟಕ ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ, 1959;
5. ಮೈಸೂರು ಸಾರ್ವಜನಿಕರು ಸೇರುವ ಸ್ಥಳಗಳ ಅಧಿನಿಯಮ, 1952;
6. ಮೈಸೂರು ಗಣಿಗಳ ಅಧಿನಿಯಮ, 1906;
7. ಮದ್ರಾಸು ಸಾರ್ವಜನಿಕರು ಸೇರುವ ಸ್ಥಳಗಳ ಅಧಿನಿಯಮ, 1888;
8. ಮದ್ರಾಸ್ ಜಿಲ್ಲಾ ಪೌರಸಭೆಗಳ ಅಧಿನಿಯಮ, 1920;
9. ಮುಂಬೈ ಪ್ರಾಂತೀಯ ಪೌರ ನಿಗಮಗಳ ಅಧಿನಿಯಮ, 1949;
10. ಮುಂಬೈ ಮುನಿಸಿಪಲ್ ಬ್ಯೂರೋ ಅಧಿನಿಯಮ, 1925;
11. ಮುಂಬೈ ಜಿಲ್ಲಾ ಪೌರಸಭೆ ಅಧಿನಿಯಮ, 1901;
12. ಕೊಡಗು ಪೌರ ಸಭಾ ರೆಗ್ಯುಲೇಷನ್ ಅಧಿನಿಯಮ, 1904;
13. ಹೈದರಾಬಾದು ಜಿಲ್ಲಾ ಪೌರಸಭೆಗಳ ಅಧಿನಿಯಮ, 1956;
14. ಬೆಂಗಳೂರು ನಗರಾಭಿವೃದ್ಧಿ ಅಧಿನಿಯಮ, 1945;
15. ಮೈಸೂರು ನಗರಾಭಿವೃದ್ಧಿ ಅಧಿನಿಯಮ, 1903;

**ಗೃಹ ಸಚಿವಾಲಯ**

**ಅಧಿಸೂಚನೆ – II**

**ಬೆಂಗಳೂರು, ದಿನಾಂಕ 6ನೇ ಮಾರ್ಚ್ 1971**

ಎಸ್. ಓ. 479.– ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ 1964 (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 23)ದ 1ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 1971 ಮಾರ್ಚ್ 15ನೇ ದಿವಸವನ್ನು, ಸದರಿ ಅಧಿನಿಯಮವು ಜಾರಿಗೆ ಬರತಕ್ಕಂಥ ದಿನಾಂಕವೆಂದು ಗೊತ್ತುಪಡಿಸಿದೆ.

(ಸಂಖ್ಯೆ ಹೆಚ್.ಡಿ. 50 ಸಿ.ಎನ್.ಎ. 62)

## ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971

## ಭಾಗ – I

## ಸಾಮಾನ್ಯ

## ಅಧ್ಯಾಯ – I

## ಪ್ರಾರಂಭಿಕ

1. ಹೆಸರು
2. ಹಲವು ನಿಯಮಗಳು ಅನ್ವಯವಾಗತಕ್ಕದ್ದಲ್ಲ
3. ಪರಿಭಾಷೆಗಳು

## ಅಧ್ಯಾಯ – II

## ಸಾಮಾನ್ಯ ಉಪಬಂಧ

4. ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಪಾಲನೆ
5. ಕೆಲವು ಅಧಿಕಾರಿಗಳ ಪರಿಶೀಲನಾಧಿಕಾರ
6. ನಿವೇಶನ, ಕಟ್ಟಡ ಅಥವಾ ಸಾಧನ ಸಾಮಗ್ರಿಯ ಬಗ್ಗೆ ಒಡೆತನ ಅಥವಾ ಸ್ವಾಧೀನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.
7. ಲೈಸೆನ್ಸ್‌ಗಳು ಮತ್ತು ನಕ್ಷೆಗಳ ಪ್ರದರ್ಶನ

## ಅಧ್ಯಾಯ – III

## ಚಲನಚಿತ್ರ ಅನುಮೋದನೆಗಾಗಿ ಪ್ರಕ್ರಿಯೆ

8. ಚಲನಚಿತ್ರ ಸಲಹಾ ಮಂಡಳಿಯ ರಚನೆ
9. ಸದಸ್ಯರ ಪದಾವಧಿ
10. ಸದಸ್ಯರುಗಳನ್ನು ತೆಗೆದು ಹಾಕುವುದು
11. ಸದಸ್ಯರು ಗೌರವ ನಾತೆಯಲ್ಲಿ ಕೆಲಸ ಮಾಡತಕ್ಕದ್ದು
12. ಮಂಡಲಿಯ ಕೇಂದ್ರ ಕಾರ್ಯಸ್ಥಾನ
13. ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿ

14. ಕೋರಂ

15. ಮಂಡಲಿಯ ಸಭೆಗಳು

16. ಪ್ರಕ್ರಿಯೆ

17. ಕೇಂದ್ರ ಸರ್ಕಾರವು ಪ್ರಮಾಣೀಕರಿಸಿದ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಘೋಷಣೆ

18. ಮಂಡಲಿಗೆ ಅರ್ಜಿ

19. ಮಂಡಲಿಯು ಕೈಗೊಳ್ಳಬೇಕಾದ ಕ್ರಮ

20. ರಾಜ್ಯ ಸರ್ಕಾರದಿಂದ ಚಲನಚಿತ್ರದ ಅನುಮೋದನೆ

21. ಚಲನಚಿತ್ರ ಪರೀಕ್ಷೆಗಾಗಿ ಸಂದಾಯ ಮಾಡಬೇಕಾದ ಫೀಜು

22. ಚಲನಚಿತ್ರದ ದ್ವಿಪ್ರತಿಗಳ ಪರೀಕ್ಷೆಯು ಅನಾವಶ್ಯಕ

23. ಮಾರ್ಪಾಟು ಮಾಡಿದ ಚಲನಚಿತ್ರದ ಪರೀಕ್ಷೆ

24. ಪರೀಕ್ಷಿಸಿದ ಚಲನಚಿತ್ರಗಳ ರಿಜಿಸ್ಟರು

**ಭಾಗ – II**

**ಅಧ್ಯಾಯ – IV**

**ಖಾಯಂ ಸಿನಿಮಾಗಳು–ಖಾಯಂ ಸಿನಿಮಾಗಳ ಸ್ಥಳದ ಅನುಮೋದನೆ**

25. ಖಾಯಂ ಸಿನಿಮಾ ಕಟ್ಟಡದ ನಿರ್ಮಾಣಕ್ಕಾಗಿ ಅರ್ಜಿ

26. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು

27. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ಷರತ್ತುಗಳು

28. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡುವುದು

29. ನಿರಾಕ್ಷೇಪಣಾ ಪ್ರಮಾಣಪತ್ರಕ್ಕಾಗಿ ಫೀಜು

**ಅಧ್ಯಾಯ – V**

**ಕಟ್ಟಡ ನಕ್ಷೆಯ ಅನುಮೋದನೆ**

30. ಅನುಮೋದನೆಗಾಗಿ ಅರ್ಜಿ

31. ನಕ್ಷೆಗಳ ಅನುಮೋದನೆಗಾಗಿನ ಪ್ರಕ್ರಿಯೆ, ಇತ್ಯಾದಿ

32. ನಕ್ಷೆಯ ಅನುಮೋದನೆಯ ಮಂಜೂರಾತಿ ಅಥವಾ ನಿರಾಕರಣೆ

33. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಆದೇಶವನ್ನು ತಿಳಿಸತಕ್ಕದ್ದು

**ಅಧ್ಯಾಯ – VI**

**ಕಟ್ಟಡ ನಿರ್ಮಾಣದ ಅನುಮೋದನೆ ಮತ್ತು ಲೈಸೆನ್ಸ್‌ನ್ನು ಕೊಡುವುದು**

34. ನಿರ್ಮಿಸಿದ ಕಟ್ಟಡದ ಅನುಮೋದನೆ

35. ಲೈಸನ್ಸಿಗಾಗಿ ಅರ್ಜಿ

36. ಲೈಸನ್ಸಿನ ಮಂಜೂರಾತಿ ಅಥವಾ ನಿರಾಕರಣೆ

37. ಲೈಸೆನ್ಸಿನ ಅವಧಿ

38. ಲೈಸೆನ್ಸ್‌ಗಾಗಿ ಫೀಜು

39. ಸ್ಥಳಕ್ಕೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳು

40. ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಅನುಮೋದನೆಗಾಗಿ ಪ್ರಕ್ರಿಯೆ

41. ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಮಂಜೂರಾತಿಗಾಗಿ ಪ್ರಕ್ರಿಯೆ

41ಕ. ಒಂದು ದಿವಸದಲ್ಲಿ ಅನುಮತಿಸಲಾದ ಪ್ರದರ್ಶನಗಳ ಸಂಖ್ಯೆ

**ಭಾಗ – III**

**ಕಟ್ಟಡಗಳಿಗೆ ಸಂಬಂಧಿಸಿದಂತೆ ಉಪಬಂಧ**

**ಅಧ್ಯಾಯ – VII**

**ಕಟ್ಟಡಗಳು ಮತ್ತು ಸ್ಥಾಪನೆಗಳು**

42. ಪರಿಭಾಷೆಗಳು

43. ನಿವೇಶನದ ಬಗ್ಗೆ ಪೂರೈಸಬೇಕಾಗಿರುವ ಷರತ್ತುಗಳು

44. ಸಿನಿಮಾ ಆವರಣವನ್ನು ಆವೃತಗೊಳಿಸತಕ್ಕದ್ದು

45. ಕಟ್ಟಡ ಸಾಮಗ್ರಿಗಳು

46. ಸಭಾಂಗಣ

47. ಅಂತಸ್ತುಗಳು, ಗ್ಯಾಲರಿಗಳು ಮತ್ತು ಬಾಲ್ಕನಿಗಳು

48. ಪ್ರೊಜೆಕ್ಷನ್ ಕೊಠಡಿ

49. ಅಸನ ವ್ಯವಸ್ಥೆಯ ಬಗ್ಗೆ ಷರತ್ತುಗಳು

50. ದಾರಿಗಳು, ನಡವೆಗಳು, ಇತ್ಯಾದಿ

51. ಬಾಗಿಲುಗಳ ಬಗ್ಗೆ ಷರತ್ತುಗಳು

52. ವಾಯು ಸಂಚಾರಕಗಳು

53. ಪಾವಟಿಗೆಗಳು

54. ಶೌಚಗೃಹಗಳು ಮತ್ತು ಮೂತ್ರಿಗಳು ಮತ್ತು ನೀರಿನ ಸೌಲಭ್ಯಗಳು

55. ಟಿಕೆಟ್ ಬೂತುಗಳು

56. ಉಪಗೃಹಗಳು, ಇತ್ಯಾದಿ

## ಅಧ್ಯಾಯ – VIII

## ವಿದ್ಯುತ್ ಸ್ಥಾಪನೆಗಳು

57. ಪರಿಭಾಷೆ
58. ಮುಖ್ಯ ಪರಿಪಥಗಳು
59. ಸರಬರಾಜು ವ್ಯವಸ್ಥೆ
60. ಸ್ವಿಚ್ಚು ಮತ್ತು ಫ್ಯೂಸ್
61. ಸಂಚಯಕಗಳು
62. ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರ ಸಾಮಗ್ರಿ
63. ಮೋಟಾರುಗಳು, ಇತ್ಯಾದಿ
64. ಪ್ರತಿರೋಧ
65. ಚಾಪ ದೀಪಗಳು
66. ಚಲನಚಿತ್ರ ದೀಪಗಳಿಗಾಗಿ ಕೇಬಲ್ಲುಗಳು
67. ಕೇಬಲ್ಲುಗಳಿಗಾಗಿ ವಿದ್ಯುತ್ ನಿರೋಧಕ ಸಾಮಗ್ರಿ
68. ನಿರ್ಗಮನ ಚಿಹ್ನೆ, ದಾರಿಗಳು, ಇತ್ಯಾದಿಗಳಿಗಾಗಿ ಸಹಾಯಕ ಸರಬರಾಜು
69. ವೈರಿಂಗ್
70. ಜೋಡಣೆಗಳು
71. ಉತ್ಪಾದಿಸುವುದು
72. ವೈರಿಂಗ್ ಯೋಜನೆ
73. ದೀಪ ವ್ಯವಸ್ಥೆಯ ಸಂವಾಹಕಗಳು

## ಅಧ್ಯಾಯ – IX

## ಅಗ್ನಿ ನಂದಿಸುವುದು

74. ದೂರವಾಣಿ
75. ಅಗ್ನಿಶಾಮಕ ಸಲಕರಣೆ
76. ಅಗ್ನಿಯ ಬಗ್ಗೆ ಮುನ್ನೆಚ್ಚರಿಕೆ

## ಅಧ್ಯಾಯ – X

## ಆವರಣದ ನಿರ್ವಹಣೆ

77. ಸ್ವಚ್ಛತೆಯ ನಿರ್ವಹಣೆ, ಇತ್ಯಾದಿ
78. ಧೂಮಪಾನ ನಿಷೇಧ

79. ಪೀಕದಾನಿಗಳು

80. ತಿರುಗು ವ್ಯಾಪಾರದ ನಿಷೇಧ

81. ಮಿತಿಮೀರಿದ ಜನಸಂದಣಿ ನಿಷೇಧ

82. ಆಪರೇಟರುಗಳ ಕರ್ತವ್ಯ, ಇತ್ಯಾದಿ

83. ಯಾವುದೇ ಸಿನಿಮಾ ಕಟ್ಟಡವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ

84. ಕಂಡಿ ಯಂತ್ರದ ನಿಷೇಧ

**ಅಧ್ಯಾಯ – XI**

**ಲೈಸೆನ್ಸ್‌ಗಳ ಮರು ಮಂಜೂರಾತಿ**

85. ಮರು ಮಂಜೂರಾತಿಗಾಗಿ ಅರ್ಜಿ

86. ತಾತ್ಕಾಲಿಕ ಪರ್ಮಿಟ್ಟು

87. ಲೈಸೆನ್ಸ್‌ನ ಮರು ಮಂಜೂರಾತಿಗಾಗಿ ಫೀಜು

**ಭಾಗ – IV**

**ಅಧ್ಯಾಯ – XII**

**ಸಂಚಾರಿ ಸಿನಿಮಾಗಳು**

88. ನಿಯಮಗಳ ಅನ್ವಯ

89. ಪರಿಭಾಷೆಗಳು

90. ಸಂಚಾರಿ ಸಿನಿಮಾ ಕಟ್ಟಡದ ನಿರ್ಮಾಣಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ

91. ಕಟ್ಟಡದ ಬಗ್ಗೆ ಷರತ್ತುಗಳು

92. ನೈರ್ಮಲ್ಯ ಅನುಕೂಲತೆಗಳು

93. ಕೆಲವು ಸಂದರ್ಭಗಳಲ್ಲಿ ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕದ್ದಲ್ಲ

94. ದಹ್ಯ ಸಾಮಗ್ರಿಗಳಿಂದ ನಿರ್ಮಿಸಿದ ಕಟ್ಟಡ

95. ಬಾಗಿಲುಗಳು ಮತ್ತು ಕಿಂಡಿಗಳು

96. ಅರ್ಜಿಯ ಮೇಲಿನ ಪ್ರಕ್ರಿಯೆ

97. ಲೈಸೆನ್ಸ್‌ಗಾಗಿ ಅರ್ಜಿ

98. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ

99. ಲೈಸೆನ್ಸ್‌ನ ಅವಧಿ

100. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ಫೀಜು

101. ವಿದ್ಯುಚ್ಛಕ್ತಿ ಸ್ಥಾಪನೆ, ಇತ್ಯಾದಿಗಳ ಪರಿಶೀಲನೆಗಾಗಿ ಫೀಜು

102. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಸಹಾಯಕ ವಿದ್ಯುಚ್ಛಕ್ತಿ ಪರಿಶೀಲಕನಿಂದ ಪರಿಶೀಲನೆಗಾಗಿ ಫೀಜು

103. ಸಭಾಂಗಣದಲ್ಲಿ ಸ್ಥಳಾವಕಾಶ

103ಕ. ಪರ್ಯಾಯ ದೀಪಗಳನ್ನಿಡಲು ವ್ಯವಸ್ಥೆಗಳು

104. ಅಗ್ನಿಶಾಮಕಗಳು

105. ಲೈಸೆನ್ಸ್‌ನ ಮರು ಮಂಜೂರಾತಿ

106. ಲೈಸೆನ್ಸ್ ಅಥವಾ ಲೈಸೆನ್ಸಿನ ಪ್ರತಿಯನ್ನು ಕೊಡುವುದಕ್ಕಾಗಿ ಫೀಜು

106ಕ. ಮರುಪಾವತಿ

107. ಸಂಚಾರಿ ಸಿನಿಮಾದ ಬಗ್ಗೆ ಲೈಸೆನ್ಸ್ ಮಂಜೂರಾತಿ ಮೇಲೆ ಪರಿಬಂಧಗಳು

108. ಆಸನಗಳು

109. ಸೂರುಗಳು, ದ್ವಾರಗಳು, ಇತ್ಯಾದಿ

110. ಪ್ರೊಜೆಕ್ಷನ್ ಕೊಠಡಿ

111. ಫಿಲ್ಮುಗಳಿಗಾಗಿ ಉಗ್ರಾಣ

**ಭಾಗ – IV 'ಕ'**

**ಅಧ್ಯಾಯ – XII 'ಕ'**

**ಡ್ರೈವ್–ಇನ್ ಸಿನಿಮಾಗಳು**

111ಕ. ಪರಿಭಾಷೆಗಳು

111ಖ. ಇತರ ನಿಯಮಗಳ ಅನ್ವಯ

111ಗ. ಡ್ರೈವ್–ಇನ್ ಸಿನಿಮಾದ ರಚನೆಗೆ ಸಂಬಂಧಪಟ್ಟಂಥ ವಿಶೇಷ ಉಪಬಂಧಗಳು

111ಘ. ನಿಯಮಗಳ ಅನ್ವಯದಿಂದ ವಿನಾಯಿತಿ

**ಭಾಗ – IV ಖ**

**ಅಧ್ಯಾಯ – XII ಖ**

**ಅರೆಖಾಯಂ ಸಿನಿಮಾ ಕಟ್ಟಡಗಳು**

111ಙ. ಅರೆ ಖಾಯಂ ಸಿನಿಮಾ ಕಟ್ಟಡ

111ಚ. ನಿಯಮಗಳ ಅನ್ವಯ

111ಛ. ಅರೆ ಖಾಯಂ ಥಿಯೇಟರುಗಳ ಸ್ಥಾಪನೆಗಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಯ ಮೇಲೆ ಪರಿಬಂಧಗಳು

111ಜ. ಕೆಲವು ಅಧಿಕಾರಿಗಳಿಂದ ಪರಿಶೀಲನಾ ಅಧಿಕಾರ

111ಝ. ಅರೆ ಖಾಯಂ ಸಿನಿಮಾ ಕಟ್ಟಡ ನಿರ್ಮಾಣಕ್ಕೆ ಅರ್ಜಿ

111ಞ. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು

111ಟ. ನಿರಾಕ್ಷೇಪಣಾ ಪತ್ರಗಳನ್ನು ಕೊಡುವುದಕ್ಕಾಗಿ ಆ ನಿವೇಶನದ ಬಗ್ಗೆ ಷರತ್ತುಗಳು

111ಠ. ಮಂಜೂರು ಮಾಡಿದ ನಿರಾಕ್ಷೇಪಣಾ ಪತ್ರದ ಪರಿವರ್ತನೆ

111ಡ. ಕಟ್ಟಡದ ನಕ್ಷೆಯ ಅನುಮೋದನೆಗಾಗಿ ಅನುಸರಿಸಬೇಕಾದ ಪ್ರಕ್ರಿಯೆ

111ಢ. ನಿರ್ಮಿಸಿದ ಕಟ್ಟಡದ ಮಾನ್ಯತೆ

111ಣ. ವಿದ್ಯುಚ್ಛಕ್ತಿ ಸ್ಥಾಪನೆಗಳು

111ತ. ಪ್ರದರ್ಶನದ ಲೈಸೆನ್ಸ್

111ಥ. ಲೈಸೆನ್ಸ್‌ನ ಮಂಜೂರಾತಿ ಅಥವಾ ನಿರಾಕರಣೆ

111ದ. ಲೈಸೆನ್ಸಿನ ಅವಧಿ ಮತ್ತು ಮರು ಮಂಜೂರಾತಿ

111ಧ. ಅರೆ ಖಾಯಂ ಸಿನಿಮಾ ಆವರಣಕ್ಕೆ ಬೇಲಿ

111ನ. ಕಟ್ಟಡ ಕಟ್ಟುವ ಸಾಮಗ್ರಿಗಳು

111ಪ. ಪ್ರೊಜೆಕ್ಷನ್ ಕೊಠಡಿ

111ಫ. ವಾಯು ಸಂಚಾರಕಗಳು

111ಬ. ಟಿಕೇಟು ಬೂತು

111ಭ. ಶೌಚಗೃಹಗಳು, ಮೂತ್ರಗಳು ಮತ್ತು ನೀರಿನ ಸೌಲಭ್ಯಗಳು

111ಮ. ಔಟ್‌ಹೌಸ್, ಇತ್ಯಾದಿ

111ಯ. ಅಗ್ನಿಶಾಮಕ ಸಲಕರಣೆಗಳು

111ಯಕ. ಪ್ರದರ್ಶನ ಲೈಸೆನ್ಸಿನ ಮರು ಮಂಜೂರಾತಿಗಾಗಿ ಅರ್ಜಿ

111ಯಖ. ಕಟ್ಟಡದ ವಿದ್ಯುಚ್ಛಕ್ತಿ ಸ್ಥಾಪನೆಗೆ ತರುವಾಯದ ಸೇರ್ಪಡೆಗಳು ಮತ್ತು ಮಾರ್ಪಾಟುಗಳ ಅನುಮೋದನೆಗಾಗಿ ಪ್ರಕ್ರಿಯೆ

**ಭಾಗ – V**

**ಅಧ್ಯಾಯ – XIII**

**ಕೆಲವು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ವಿಶೇಷ ಉಪಬಂಧಗಳು**

112. ಶಾಲೆಗಳಲ್ಲಿ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಉಪಬಂಧಗಳು, ಇತ್ಯಾದಿ

113. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ವಿವೇಚನೆ

**ಭಾಗ – VI**

**ಅಧ್ಯಾಯ – XIV**

**ಸಂಕೀರ್ಣ**

114. ಅಪೀಲು ಪ್ರಾಧಿಕಾರಿ

115. 5ನೇ ಮತ್ತು 9ನೇ ಪ್ರಕರಣಗಳ ಮೇರೆಗಿನ ಅಪೀಲುಗಳಲ್ಲಿ ಪ್ರಕ್ರಿಯೆ

116. ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು

117. ನಿರಸನ ಮತ್ತು ಉಳಿಸುವಿಕೆಗಳು

ಅನುಸೂಚಿ–ಕ

ಅನುಸೂಚಿ–ಖ

ಅನುಸೂಚಿ–ಗ

**ಗೃಹ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 6ನೇ ಮಾರ್ಚ್ 1971**

**ಜಿ.ಎಸ್.ಆರ್. 72.–** 1968ರ ಜೂನ್ 27ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್. 221 (ಎಚ್‌ಡಿ 50 ಸಿಎನ್‌ಎ (62) ದಿನಾಂಕ 17ನೇ ಜೂನ್ 1968ರಲ್ಲಿ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964ರ 19ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1968 – ಇದರ ಕರಡನ್ನು, ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ 1966ರ ಜುಲೈ 31ರಂದು ಅಥವಾ ಅದಕ್ಕೂ ಮುಂಚೆ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರ್ಯಾಲೋಚಿಸಿರುವುದರಿಂದ;

ಈಗ, ಆದ್ದರಿಂದ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 23) 19ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971**

**ಭಾಗ – I ಸಾಮಾನ್ಯ**

**ಅಧ್ಯಾಯ – I**

**ಪ್ರಾರಂಭಿಕ**

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971 ಎಂದು ಕರೆಯತಕ್ಕದ್ದು.

**2. ಹಲವು ನಿಯಮಗಳು ಅನ್ವಯವಾಗತಕ್ಕದ್ದಲ್ಲ.–** 117ನೇ ನಿಯಮದ ಮೂಲಕ ನಿರಸನಗೊಂಡ ಯಾವುದೇ ನಿಯಮದ ಮೇರೆಗೆ ಲೈಸೆನ್ಸ್‌ನ್ನು ಪಡೆಯಲಾಗಿರುವ ಯಾವುದೇ ಸ್ಥಳ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ **VII** ಮತ್ತು **VIII**ನೇ ಅಧ್ಯಾಯದ ಉಪಬಂಧಗಳು, ಅಂಥ ಲೈಸೆನ್ಸಿನ ಮಂಜೂರಾತಿ ಅಥವಾ ಮರು ಮಂಜೂರಾತಿಗೆ ಅನ್ವಯವಾಗತಕ್ಕದ್ದಲ್ಲ;

ಪರಂತು, ಸದರಿ ಉಪಬಂಧಗಳು ಅಂಥ ಸ್ಥಳ ಅಥವಾ ಕಟ್ಟಡವನ್ನು ವ್ಯತ್ಯಾಸ ಅಥವಾ ಜೀರ್ಣೋದ್ಧಾರ ಮಾಡಬೇಕಾಗಿದ್ದರೆ ಅನ್ವಯವಾಗತಕ್ಕದ್ದು.

**3**. **ಪರಿಭಾಷೆಗಳು**.– ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

1. "ಅಧಿನಿಯಮ" ಎಂದರೆ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964;
2. "ಸಭಾಂಗಣ" ಎಂದರೆ ಚಲನಚಿತ್ರ ಪ್ರದರ್ಶನವನ್ನು ನೋಡಲು ಸಾರ್ವಜನಿಕರಿಗಾಗಿ ಒದಗಿಸಿದ ಲೈಸೆನ್ಸ್ ಪಡೆದ ಸ್ಥಳದ ಭಾಗದಲ್ಲಿನ ಸ್ಥಳಾವಕಾಶ;
3. "ನಿರ್ದೇಶಕ" ಎಂದರೆ ಕರ್ನಾಟಕದಲ್ಲಿನ ನಗರ ಯೋಜನೆಯ ನಿರ್ದೇಶಕ;
4. "ವಿದ್ಯುಚ್ಛಕ್ತಿ ಪರಿಶೀಲಕ" ಎಂದರೆ (ಕರ್ನಾಟಕ ಸರ್ಕಾರದ ಮುಖ್ಯ ವಿದ್ಯುಚ್ಛಕ್ತಿ ಪರಿಶೀಲಕ);
5. "ಎಕ್ಸಿಕ್ಯೂಟಿವ್ ಇಂಜಿನಿಯರ್" ಎಂದರೆ ಲೈಸೆನ್ಸ್ ಪಡೆದ ಸ್ಥಳವು ಇರುವಂಥ ಲೋಕೋಪಯೋಗಿ ವಿಭಾಗದ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ;
6. "ಹೆಚ್ಚಿನ ಅತೀವ ವೋಲ್ಟೇಜು" ಎಂದರೆ ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ರ ಮೂಲಕ ಅನುಮತಿಸಲಾದ ಶೇಕಡಾವಾರು ವ್ಯತ್ಯಾಸಕ್ಕೆ ಒಳಪಟ್ಟು ಸಾಮಾನ್ಯ ಸ್ಥಿತಿಯಲ್ಲಿ 33,000 ವೋಲ್ಟುಗಳನ್ನು ಮೀರುವ ವೋಲ್ಟೇಜು;
7. "ಚಲನಚಿತ್ರ ಸಲಹಾ ಮಂಡಲಿ" ಎಂದರೆ 8ನೇ ನಿಯಮದ ಮೇರೆಗೆ ರಚಿಸಿದ ಚಲನಚಿತ್ರ ಸಲಹಾ ಮಂಡಳಿ;
8. "ಅಗ್ನಿಶಾಮಕ ಅಧಿಕಾರಿ" ಎಂದರೆ ಅಗ್ನಿ ಶಾಮಕ ದಳದ ಸೇವೆ ಇರುವ ಸ್ಥಳಗಳಲ್ಲಿ ಲೈಸೆನ್ಸ್ ಪಡೆದ ಸ್ಥಳವು ಇರುವಂಥ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕರ್ನಾಟಕ ರಾಜ್ಯ ಆಗ್ನಿಶಾಮಕ ದಳದ ಅಧಿಕಾರಿ;
9. "ಅಗ್ನಿ ನಿರೋಧಕ ಸಾಮಗ್ರಿ" ಎಂದರೆ ಕ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಗ್ರಿ;
10. "ಅಗ್ನಿ ಪ್ರತಿರೋಧ ಸಾಮಗ್ರಿ" ಎಂದರೆ ಖ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾಮಗ್ರಿ;
11. "ನಮೂನೆ" ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ;
12. "ಆರೋಗ್ಯಾಧಿಕಾರಿ" ಎಂದರೆ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ಇಲಾಖೆಯ ಅಧಿಕಾರಿ; ಮತ್ತು ನಿಗಮ, ಪೌರಸಭೆ ಅಥವಾ ದಂಡು ಪ್ರದೇಶ ಮಂಡಲಿಯ ಸಂದರ್ಭದಲ್ಲಿ ಅಂಥ ನಿಗಮ, ಪೌರಸಭೆ ಅಥವಾ ದಂಡು ಪ್ರದೇಶ ಮಂಡಲಿಗೆ ಸೇರಿದ ಆರೋಗ್ಯಾಧಿಕಾರಿ;
13. "ಅತೀವ ವೋಲ್ಟೇಜು" ಎಂದರೆ ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ರ ಮೂಲಕ ಅನುಮತಿಸಲಾದ ಶೇಕಡಾವಾರು ವ್ಯತ್ಯಾಸಕ್ಕೆ ಒಳಪಟ್ಟು ಸಾಮಾನ್ಯ ಸ್ಥಿತಿಗಳಲ್ಲಿ 33,000 ವೋಲ್ಟುಗಳನ್ನು ಮೀರದ ವೋಲ್ಟೇಜು;
14. ಸ್ಥಳೀಯ ಪ್ರಾಧಿಕಾರ ಎಂದರೆ,–

   (i) ಯಾವುದೇ ಪೌರಸಭಾ ಪ್ರದೇಶದಲ್ಲಿ ಸಂದರ್ಭಾನುಸಾರ ನಿಗಮ, ಪೌರಸಭಾ ಪರಿಷತ್ತು, ದಂಡು ಪ್ರದೇಶ ಮಂಡಲಿ, ನೈರ್ಮಲ್ಯ ಮಂಡಲಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿ;

   (ii) ಯಾವುದೇ ಗ್ರಾಮದಲ್ಲಿನ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮ, 1959ರ ಮೇರೆಗೆ ರಚಿಸಿದ ಗ್ರಾಮ ಪಂಚಾಯಿತಿ ಅಥವಾ ಪಟ್ಟಣ ಪಂಚಾಯಿತಿ.

15. **"ಕಡಿಮೆ ವೋಲ್ಟೇಜು"** ಎಂದರೆ 1956ರ ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ರ ಮೂಲಕ ಅನುಮತಿಸಲಾದ ಶೇಕಡಾವಾರು ವ್ಯತ್ಯಾಸಕ್ಕೆ ಒಳಪಟ್ಟು, ಸಾಮಾನ್ಯ ಸ್ಥಿತಿಗಳಲ್ಲಿ ಇನ್ನೂರೈವತ್ತು ವೋಲ್ಟುಗಳನ್ನು ಮೀರದ ವೋಲ್ಟೇಜು;

16. **"ಮಧ್ಯಮ ವೋಲ್ಟೇಜು"** ಎಂದರೆ ಭಾರತ ವಿದ್ಯುಚ್ಛಕ್ತಿ ನಿಯಮಗಳು 1956ರ ಮೂಲಕ ಅನುಮತಿಸಲಾದ ಶೇಕಡಾವಾರು ವ್ಯತ್ಯಾಸಗಳಿಗೆ ಒಳಪಟ್ಟು ಸಾಮಾನ್ಯ ಸ್ಥಿತಿಗಳಲ್ಲಿ ಆರುನೂರೈವತ್ತು ವೋಲ್ಟುಗಳನ್ನು ಮೀರದ ವೋಲ್ಟೇಜು;

17. **"ಖಾಯಂ ಕಟ್ಟಡ"** ಎಂದರೆ ಅಗ್ನಿ ನಿರೋಧಕ ಮತ್ತು ಅಗ್ನಿ ಪ್ರತಿರೋಧ ಸಾಮಗ್ರಿಗಳೊಂದಿಗೆ ಖಾಯಂ ಉಪಯೋಗಕ್ಕಾಗಿ ನಿರ್ಮಿಸಿದಂಥ ಕಟ್ಟಡ;

18. **"ಜನಸಂಖ್ಯೆ"** ಎಂದರೆ ಕೊನೆಯ ಹಿಂದಿನ ಸರ್ಕಾರಿ ಜನಗಣತಿಯಲ್ಲಿದ್ದಂತೆ ನಿವಾಸಿಗಳ ಒಟ್ಟು ಸಂಖ್ಯೆ ಮತ್ತು ಶೇಕಡಾ ಐದರ ದರದಲ್ಲಿ ಅದರ ವಾರ್ಷಿಕ ಹೆಚ್ಚಳ;

19. **"ಪ್ರೊಜೆಕ್ಟರ್ ಕೊಠಡಿ"** ಎಂದರೆ ಚಲನಚಿತ್ರ ಗ್ರಾಹಕ ಯಂತ್ರ ಸಲಕರಣೆಯನ್ನು ನಿಲ್ಲಿಸಿರುವಂಥ ಲೈಸೆನ್ಸ್ ಪಡೆದ ಸ್ಥಳದ ಭಾಗ;

20. **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣದ;

21. **"ಅನುಸೂಚಿ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ಅನುಸೂಚಿ;

22. **"ತಾತ್ಕಾಲಿಕ ಕಟ್ಟಡ"** ಎಂದರೆ ಖಾಯಂ ಕಟ್ಟಡವಲ್ಲದಂಥ ಕಟ್ಟಡ.

## ಅಧ್ಯಾಯ – II

## ಸಾಮಾನ್ಯ ಉಪಬಂಧ

**4. ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ ಪಾಲನೆ.–** ಲೈಸೆನ್ಸ್‌ದಾರನು ಲೈಸೆನ್ಸ್ ಪಡೆದ ಸ್ಥಳಕ್ಕೆ ಅನ್ವಯವಾಗಬಹುದಾದಂಥ ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910ರ (ಕೇಂದ್ರ ಅಧಿನಿಯಮ 1910ರ 9) ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಉಪಬಂಧಗಳನ್ನು ಪಾಲಿಸತಕ್ಕದ್ದು ಸದರಿ ಅಧಿನಿಯಮದ 30ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಪೋಲೀಸು ಸೂಪರಿಂಟೆಂಡೆಂಟನಿಗೆ ಕೊಡಬೇಕಾದ ಸಂದರ್ಭದಲ್ಲಿ ಯಾವುದೇ ಲೈಸೆನ್ಸ್‌ನ್ನು ಅಂಥ ನೋಟೀಸನ್ನು ಕೊಡುವವರೆಗೆ ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರವು ಲೈಸೆನ್ಸ್ ಕೊಡುವುದರ ತೀರ್ಮಾನದ ಬಗ್ಗೆ ವಿದ್ಯುಚ್ಛಕ್ತಿ ಪರಿಶೀಲಕನಿಗೆ ತಿಳಿಸುವವರೆಗೆ ಯಾವುದೇ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ.

**5. ಕೆಲವು ಅಧಿಕಾರಿಗಳ ಪರಿಶೀಲನಾಧಿಕಾರ.–** ಠಾಣಾಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ಯಾರೇ ಪೋಲೀಸ್ ಅಧಿಕಾರಿ, ಕರ್ನಾಟಕ ರಾಜ್ಯ ಅಗ್ನಿ ಶಾಮಕ ದಳದ ಉಪ ಅಧಿಕಾರಿಯ ದರ್ಜೆಗೆ ಕಡಿಮೆಯಲ್ಲದ ಯಾರೇ ಅಗ್ನಿಶಾಮಕ ಅಧಿಕಾರಿ, ಆರೋಗ್ಯಾಧಿಕಾರಿ, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಯಾರೇ ಮ್ಯಾಜಿಸ್ಟ್ರೇಟ್, ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಅವನ ಪ್ರತಿನಿಧಿ, ಲೈಸೆನ್ಸ್ ಕೊಡುವ ಪ್ರಾಧಿಕಾರಿ ಅಥವಾ ಅವನ ಪ್ರತಿನಿಧಿ ಅಥವಾ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಸದರಿ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳನ್ನು ಲೈಸೆನ್ಸ್‌ದಾರನು ಪಾಲಿಸುತ್ತಿದ್ದಾನೆಯೇ ಎಂಬುದನ್ನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದ ಅಥವಾ ಲೈಸೆನ್ಸ್ ಪಡೆಯಲು ಉದ್ದೇಶಿದ ಸ್ಥಳವನ್ನು ಯಾವುದೇ ಕಾಲದಲ್ಲಿ ಪ್ರವೇಶಿಸಬಹುದು.

(2) ಲೈಸೆನ್ಸ್‌ದಾನು, (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದ ಯಾರೇ ಅಧಿಕಾರಿಯ ತಗಾದೆಯ ಮೇಲೆ ಲೈಸೆನ್ಸ್ ಮತ್ತು ನಕ್ಷೆ ಮತ್ತು ಅದಕ್ಕೆ ಲಗತ್ತಿಸಿದ ವಿವರಣೆಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸದರಿ ಅಧಿಕಾರಿಗಳು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಮೂಲಕ ಕಾಲಕಾಲಕ್ಕೆ ಅಥವಾ ಸಂದರ್ಭವು ಒದಗಿ ಬಂದಂತೆ ಸಾರ್ವಜನಿಕ ಸುರಕ್ಷತೆ ಅಥವಾ ಅನುಕೂಲದ ಬಗ್ಗೆ ಅಥವಾ ಸುವ್ಯವಸ್ಥೆಯನ್ನು ಪರಿಕ್ಷಿಸುವುದಕ್ಕಾಗಿ ಅಥವಾ ಶಾಂತಿ ಪಾಲನೆಗಾಗಿ ಅವರ ಆದೇಶಗಳನ್ನು ಲೈಸೆನ್ಸ್‌ದಾರನಿಗೆ ತಿಳಿಸತಕ್ಕದ್ದು. ಸಂದರ್ಭಗಳು ಹಾಗೆ ಅಗತ್ಯಪಡಿಸಿದರೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸ್‌ದಾರನಿಗೆ ನೋಟೀಸನ್ನು ಕೊಟ್ಟ ತರುವಾಯ, ಈ ನಿಯಮಗಳಲ್ಲಿ ವಿಧಿಸಿದವುಗಳನ್ನು ಹೊರತುಪಡಿಸಿ ಹೆಚ್ಚುವರಿ ರಕ್ಷಣೆಯನ್ನು ಒದಗಿಸಲು ಅವನಿಗೆ ನಿರ್ದೇಶಿಸಬಹುದು ಮತ್ತು ಲೈಸೆನ್ಸ್‌ದಾರನು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಲೈಸೆನ್ಸ್ ರದ್ದಿಯಾತಿಗೆ ಅಥವಾ ಅಮಾನತ್ತಿಗೆ ಗುರಿಯಾಗತಕ್ಕದ್ದು.

(3) ಸಾಂಕ್ರಾಮಿಕಗಳು ಮಾತ್ರ ಸಾಮಾನ್ಯವಾಗಿ ಸಾರ್ವಜನಿಕರಿಗೆ ಉಂಟಾಗುವ ಆರೋಗ್ಯ ಅಪಾಯದ ಅವಧಿಗಳಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ಸಹಾಯಕ ನಿರ್ದೇಶಕ ಅಥವಾ ಜಿಲ್ಲಾ ಆರೋಗ್ಯಾಧಿಕಾರಿಗಳು ಅಥವಾ ಪೌರಸಭೆಯ ಆರೋಗ್ಯಾಧಿಕಾರಿಗಳು ಯಾರಾದರೂ ಇದ್ದರೆ, ಅವನೊಂದಿಗೆ ಸಮಾಲೋಚಿಸಿ ಅವನು ಹಾಗೆ ಸಲಹೆ ಕೊಟ್ಟರೆ, ವಿಶೇಷ ನೋಟೀಸಿನ ಮೂಲಕ,–

(ಕ) 49ನೇ ನಿಯಮದಲ್ಲಿ ನಿಯಮಿಸಿದ ಸ್ಥಳಾವಕಾಶದ ಆಳತೆಯಲ್ಲಿ ಕಡಿತವನ್ನು;

(ಖ) ಸರಿಪಡಿಸುವಿಕೆ ಮತ್ತು ಹೊಗೆ ಹಾಕುವಿಕೆಯನ್ನು ಒಳಗೊಳ್ಳಬಹುದಾದಂಥ ಆವರಣಗಳ ನಿಯತಕಾಲಿಕ ಸೋಂಕು ನಾಶವನ್ನು ; ಮತ್ತು

(ಗ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ಇನ್ನೂ ಉತ್ತಮ ವಾಯುಸಂಚಾರಕ್ಕಾಗಿ ಅಂಥ ಇತರ ಕ್ರಮಗಳನ್ನು ಅಳವಡಿಸುವುದನ್ನು–

– ನಿರ್ದೇಶಿಸಬಹುದು ಮತ್ತು ಲೈಸೆನ್ಸ್‌ದಾರ ಅಥವಾ ಅವನ ಏಜೆಂಟ್ ತಕ್ಷಣವೇ ಅಂಥ ಯಾವುದೇ ನಿರ್ದೇಶನವನ್ನು ಪಾಲಿಸತಕ್ಕದ್ದು ಮತ್ತು ಹಾಗೆ ಮಾಡಲು ತಪ್ಪಿದ ಸಂದರ್ಭದಲ್ಲಿ, ಅವನಿಗೆ ಮಂಜೂರು ಮಾಡಿದ ಲೈಸೆನ್ಸ್ ಅಮಾನತ್ತು ಅಥವಾ ರದ್ದಿಯಾತಿಗೆ ಗುರಿಯಾಗತಕ್ಕದ್ದು.

**6. ನಿವೇಶನ, ಕಟ್ಟಡ ಅಥವಾ ಸಾಧನ ಸಾಮಗ್ರಿಯ ಬಗ್ಗೆ ಒಡೆತನ ಅಥವಾ ಸ್ವಾಧೀನಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು.**– ಲೈಸೆನ್ಸ್‌ಗಾಗಿನ ಅರ್ಜಿದಾರನು ನಿವೇಶನ, ಕಟ್ಟಡ ಅಥವಾ ಸಾಧನ ಸಾಮಗ್ರಿಯ ಒಡೆಯನಾಗಿದ್ದರೆ, ಅವನು ಲೈಸೆನ್ಸು ಕೊಡುವ ಪ್ರಾಧಿಕಾರಿಯ ಮುಂದೆ ತನ್ನ ಒಡೆತನ ಮತ್ತು ಸ್ವಾಧೀನಕ್ಕೆ ಸಂಬಂಧಪಟ್ಟ ಅವಶ್ಯ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಅವನು ಒಡೆಯನಾಗಿಲ್ಲದಿದ್ದರೆ, ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮನದಟ್ಟಾಗುವಂತೆ ಆ ನಿವೇಶನ, ಕಟ್ಟಡ ಅಥವಾ ಸಾಧನ ಸಾಮಗ್ರಿಯ ಕಾನೂನುಬದ್ಧ ಸ್ವಾಧೀನದ ರುಜುವಾತಾಗಿ ದಸ್ತಾವೇಜೀಯ ಸಾಕ್ಷ್ಯವನ್ನು ಹಾಜರುಪಡಿಸತಕ್ಕದ್ದು.

**7. ಲೈಸೆನ್ಸ್‌ಗಳು ಮತ್ತು ನಕ್ಷೆಗಳ ಪ್ರದರ್ಶನ.**– ಲೈಸೆನ್ಸ್‌ದಾರನು, ಲೈಸೆನ್ಸ್‌ಗಳನ್ನು ಮತ್ತು ಅನುಮೋದಿತ ಕಟ್ಟಡದ ನಕ್ಷೆಗಳನ್ನು ಸಿನಿಮಾದ ಕಛೇರಿಯ ಗೋಡೆಗಳ ಮೇಲೆ ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.

## **ಅಧ್ಯಾಯ** – III

## **ಚಲನಚಿತ್ರ ಅನುಮೋದನೆಗಾಗಿ ಪ್ರಕ್ರಿಯೆ**

**8. ಚಲನಚಿತ್ರ ಸಲಹಾ ಮಂಡಲಿಯ ರಚನೆ.**– (1) ರಾಜ್ಯ ಸರ್ಕಾರವು, 12ನೇ ಪ್ರಕರಣದ ಮೇರೆಗೆ ಚಲನಚಿತ್ರಗಳನ್ನು ಅನುಮೋದಿಸುವ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ಕೊಡುವ ಉದ್ದೇಶಕ್ಕಾಗಿ ಒಂದು ಚಲನಚಿತ್ರ ಸಲಹಾ ಮಂಡಲಿಯನ್ನು ರಚಿಸತಕ್ಕದ್ದು.

(2) ಚಲನಚಿತ್ರ ಸಲಹಾ ಮಂಡಲಿಯು,–

1. ವಿಭಾಗೀಯ ಕಮೀಷನರ್, ಬೆಂಗಳೂರು (ಅಧ್ಯಕ್ಷ)

2. ಜಿಲ್ಲಾ ಮ್ಯಾಜಿಸ್ಟ್ರೇಟ್, ಬೆಂಗಳೂರು

3. ಸಾರ್ವಜನಿಕ ಶಿಕ್ಷಣ ನಿರ್ದೇಶಕ

4. ಕಾಲೇಜು ಶಿಕ್ಷಣ ನಿರ್ದೇಶಕ

5. ವಿಶೇಷ ಕರ್ತವ್ಯಾಧಿಕಾರಿ, ಚಲನಚಿತ್ರ ಘಟಕ

6. ಪೊಲೀಸು ಕಮೀಷನರ್, ಬೆಂಗಳೂರು

7. ಸರ್ಕಾರದಿಂದ ನೇಮಕಗೊಂಡು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಲಿಯ ಪ್ರತಿನಿಧಿಯನ್ನು ಒಳಗೊಂಡಂತೆ ಮೂವರಿಗಿಂತ ಕಡಿಮೆಯಿಲ್ಲದ ಸರ್ಕಾರೀತರ ಸದಸ್ಯರು

–ಇವರನ್ನು ಒಳಗೊಂಡಿರತಕ್ಕದ್ದು.

9. **ಸದಸ್ಯರ ಪದಾವಧಿ.–** ಚಲನಚಿತ್ರ ಸಲಹಾ ಮಂಡಲಿಯ ಸರ್ಕಾರೇತರ ಸದಸ್ಯರ ಪದಾವಧಿ ಒಂದು ವರ್ಷದ ಅವಧಿಗಾಗಿ ಇರತಕ್ಕದ್ದು, ಅವರು ಮರು ನೇಮಕಕ್ಕೆ ಅರ್ಹರಾಗಿರತಕ್ಕದ್ದು.

10. **ಸದಸ್ಯರುಗಳನ್ನು ತೆಗೆದು ಹಾಕುವುದು.–** ರಾಜ್ಯ ಸರ್ಕಾರವು ಅದರ ಅಭಿಪ್ರಾಯದಲ್ಲಿ ಯಾವುದೇ ಸಾಕಷ್ಟು ಕಾರಣಕ್ಕಾಗಿ ಚಲನಚಿತ್ರ ಮಂಡಲಿಯ ಯಾರೇ ಸರ್ಕಾರೇತರ ಸದಸ್ಯನನ್ನು ಅವನ ಅವಧಿ ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ತೆಗೆದು ಹಾಕಬಹುದು.

11. **ಸದಸ್ಯರು ಗೌರವ ನಾತೆಯಲ್ಲಿ ಕೆಲಸ ಮಾಡತಕ್ಕದ್ದು.–** ಚಲನಚಿತ್ರ ಸಲಹಾ ಮಂಡಲಿಯ ಸರ್ಕಾರೇತರ ಸದಸ್ಯರು ಗೌರವ ನಾತೆಯಲ್ಲಿ ಕೆಲಸ ಮಾಡತಕ್ಕದ್ದು.

12. **ಮಂಡಲಿಯ ಕೇಂದ್ರ ಕಾರ್ಯಸ್ಥಾನ.–** ರಾಜ್ಯ ಸರ್ಕಾರವು ಅನ್ಯಥಾ ನಿರ್ದೇಶಿಸಿದ ಹೊರತು, ಚಲನಚಿತ್ರ ಸಲಹಾ ಮಂಡಲಿಯ ಕೇಂದ್ರ ಕಾರ್ಯಸ್ಥಾನವು ಬೆಂಗಳೂರಿನಲ್ಲಿರತಕ್ಕದ್ದು.

13. **ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿ.–** ಅಧ್ಯಕ್ಷನು ಚಲನಚಿತ್ರ ಸಲಹಾ ಮಂಡಲಿಯ ಎಲ್ಲಾ ಸಭೆಗಳಲ್ಲಿ ಅಧ್ಯಕ್ಷತೆ ವಹಿಸತಕ್ಕದ್ದು. ಅವನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರು ತಮ್ಮಲ್ಲಿ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡಿಕೊಳ್ಳಬಹುದು.

14. **ಕೋರಂ.–** ಸಲಹಾ ಮಂಡಲಿಯ ಸಭೆಗಾಗಿ ಕೋರಂ ಮೂರು ಆಗಿರತಕ್ಕದ್ದು.

15. **ಮಂಡಲಿಯ ಸಭೆಗಳು.–** ಚಲನಚಿತ್ರ ಸಲಹಾ ಮಂಡಲಿಯು, 12ನೇ ಪ್ರಕರಣದ ಮೇರೆಗೆ ಪ್ರದರ್ಶನಕ್ಕಾಗಿ ರಾಜ್ಯ ಸರ್ಕಾರವು ಅನುಮೋದಿಸಬೇಕಾದ ಚಲನಚಿತ್ರಗಳನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಅನುಮೋದನೆಗಾಗಿ ಚಲನಚಿತ್ರವನ್ನು ಸ್ವೀಕರಿಸಿದ ತರುವಾಯ ಅದಷ್ಟು ಬೇಗನೆ ಸಭೆ ಸೇರತಕ್ಕದ್ದು.

16. **ಪ್ರಕ್ರಿಯೆ.–** ಸಭೆಯಲ್ಲಿ ಹಾಜರಿರುವ ಸದಸ್ಯರ ಬಹುಮತವು ಚಲನಚಿತ್ರ ಸಲಹಾ ಮಂಡಲಿಯ ಶಿಫಾರಸಾಗಿರತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಧ್ಯಕ್ಷಾಧಿಕಾರಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

17. **ಕೇಂದ್ರ ಸರ್ಕಾರವು ಪ್ರಮಾಣೀಕರಿಸಿದ ಚಲನಚಿತ್ರಗಳಿಗೆ ಸಂಬಂಧಿಸಿದಂತೆ ಘೋಷಣೆ.–** ಕೇಂದ್ರ ಚಲನಚಿತ್ರ ಸಲಹಾ ಮಂಡಲಿಯ ಪೂರ್ವಾನುಮೋದನೆಯೊಂದಿಗೆ ವೈಜ್ಞಾನಿಕ ಚಲನಚಿತ್ರ, ಚಲನಚಿತ್ರಗಳು, ಶೈಕ್ಷಣಿಕ ಉದ್ದೇಶಗಳಿಗಾಗಿನ ಚಲನಚಿತ್ರಗಳು, ವಾರ್ತೆಗಳು ಮತ್ತು ಪ್ರಸ್ತುತ ಘಟನೆಗಳೊಂದಿಗೆ ವ್ಯವಹರಿಸುವ ಚಲನಚಿತ್ರಗಳು ಅಥವಾ ಸಾಕ್ಷ್ಯ ಚಿತ್ರಗಳು ಅಥವಾ 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಾದರಿಯ ಚಲನಚಿತ್ರಗಳೆಂದು ಕೇಂದ್ರ ಸರ್ಕಾರವು ಪ್ರಮಾಣೀಕರಿಸುವ ಮತ್ತು ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ

ಒಡೆತನ ಅಥವಾ ಅವನ ನಿಯಂತ್ರಣದಲ್ಲಿರುವ ನಿಗಮದಿಂದ ಅಥವಾ ರಾಜ್ಯ ಸರ್ಕಾರದ ಕೈಗಾರಿಕಾ ಉದ್ಯಮವು ತಯಾರಿಸಿದ ಮತ್ತು ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಪ್ರಮಾಣೀಕೃತವಾದ ಚಲನಚಿತ್ರಗಳನ್ನು 12ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅನುಮೋದಿಸಬಹುದು ಮತ್ತು 18ರಿಂದ 24ರವರೆಗಿನ ನಿಯಮಗಳ ಉಪಬಂಧಗಳು ಅಂಥ ಚಲನಚಿತ್ರಗಳಿಗೆ ಅನ್ವಯವಾಗತಕ್ಕದ್ದಲ್ಲ.

**18. ಮಂಡಲಿಗೆ ಅರ್ಜಿ.–** 12ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಿಂದ ಯಾವುದೇ ಚಲನಚಿತ್ರಗಳಿಗೆ ಅನುಮೋದನೆಯನ್ನು ಪಡೆಯಲು ಇಚ್ಛಿಸುವ ಯಾರೇ ವ್ಯಕ್ತಿಯು, ಚಲನಚಿತ್ರದ ಹೆಸರು ಮತ್ತು ಪ್ರದರ್ಶಕರು ಅದನ್ನು ಯಾವ ಮೂಲದಿಂದ ಪಡೆಯಬಹುದೋ ಆ ಮೂಲ ಮತ್ತು ಚಲನಚಿತ್ರ ಸಲಹಾ ಮಂಡಲಿಯು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ನಿರೂಪಿಸುವ ಅರ್ಜಿಗಳನ್ನು ಬರಹದಲ್ಲಿ ಚಲನಚಿತ್ರ ಸಲಹಾ ಮಂಡಲಿಯ ಅಧ್ಯಕ್ಷನಿಗೆ ಕಳುಹಿಸತಕ್ಕದ್ದು ಮತ್ತು ಅವನು ಚಲನಚಿತ್ರದ ಪ್ರತಿಯನ್ನು ಸಹ ಹಾಜರುಪಡಿಸತಕ್ಕದ್ದು. ಮಂಡಲಿಯು ಗೊತ್ತುಪಡಿಸಬೇಕಾದ ದಿನಾಂಕದಂದು ಮತ್ತು ಕಾಲದಲ್ಲಿ ಬೆಂಗಳೂರಿನಲ್ಲಿನ ಸಲಹಾ ಮಂಡಲಿಯ ಮುಂದೆ ಚಲನಚಿತ್ರವನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡತಕ್ಕದ್ದು. ಅಂಥ ಪ್ರತಿಯೊಂದು ಅರ್ಜಿಯ ಜೊತೆಯಲ್ಲಿ 21ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಫೀಜು ಇರತಕ್ಕದ್ದು.

**19. ಮಂಡಲಿಯು ಕೈಗೊಳ್ಳಬೇಕಾದ ಕ್ರಮ.–** 18ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅಧ್ಯಕ್ಷನು, 12ನೇ ಪ್ರಕರಣದ ಮೇರೆಗೆ ಆ ಚಲನಚಿತ್ರವನ್ನು ಅನುಮೋದನೆ ಮಾಡಲು ರಾಜ್ಯ ಸರ್ಕಾರಕ್ಕೆ ಅದು ಸಲಹೆ ಮಾಡಬಹುದೇ ಎಂಬುದನ್ನು ನಿರ್ಧರಿಸುವ ದೃಷ್ಟಿಯಿಂದ, ಚಲನಚಿತ್ರ ಸಲಹಾ ಮಂಡಲಿಯ ಮುಂದಿನ ಸಭೆಯಲ್ಲಿ ಅದು ಚಲನಚಿತ್ರವನ್ನು ಪರೀಕ್ಷಿಸಲು ವ್ಯವಸ್ಥೆ ಮಾಡತಕ್ಕದ್ದು. ಅರ್ಜಿದಾರನು ಸಂಬಂಧಪಟ್ಟ ಚಲನಚಿತ್ರದ ಬಗ್ಗೆ ಯಾವುದೇ ಮನವಿಯನ್ನು ಸಲ್ಲಿಸಲು ಇಚ್ಛಿಸಿದರೆ, ಚಲನಚಿತ್ರ ಸಲಹಾ ಮಂಡಲಿಯು ಹಾಗೆ ಮಾಡಲು ಅವನಿಗೆ ಅವಕಾಶವನ್ನು ಕೊಡತಕ್ಕದ್ದು. ಅಂಥ ಮನವಿಯು ಬರಹದಲ್ಲಿರತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಅದರ ಶಿಫಾರಸ್ಸುಗಳನ್ನು ಮಾಡುವಲ್ಲಿ ಚಲನಚಿತ್ರ ಸಲಹಾ ಮಂಡಲಿಯು ಅದನ್ನು ಪರ್ಯಾಲೋಚಿಸತಕ್ಕದ್ದು.

**20. ರಾಜ್ಯ ಸರ್ಕಾರದಿಂದ ಚಲನಚಿತ್ರದ ಅನುಮೋದನೆ.–** ಚಲನಚಿತ್ರ ಸಲಹಾ ಮಂಡಲಿಯು, 19ನೇ ನಿಯಮದ ಮೇರೆಗೆ ಚಲನಚಿತ್ರವನ್ನು ಪರೀಕ್ಷಿಸಿದ ತರುವಾಯ ಐದು ದಿವಸಗಳೊಳಗೆ, 12ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಚಲನಚಿತ್ರವನ್ನು ಅನುಮೋದಿಸಬಹುದೇ ಹೇಗೆ ಎಂಬ ಬಗ್ಗೆ ಅದರ ಶಿಫಾರಸ್ಸನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ಚಲನಚಿತ್ರ ಸಲಹಾ ಮಂಡಲಿಯ ಶಿಫಾರಸ್ಸನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ರಾಜ್ಯ ಸರ್ಕಾರವು ಚಲನಚಿತ್ರವನ್ನು ಅನುಮೋದಿಸಲು ತೀರ್ಮಾನಿಸಿದರೆ, ಅದು ಚಲನಚಿತ್ರದ ಸರಬರಾಜಿಗಾಗಿ ಲೈಸೆನ್ಸ್‌ದಾರನು ಯಾರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದೋ ಆ ವ್ಯಕ್ತಿಗಳು, ಫರ್ಮ್, ಸರ್ಕಾರಿ ಸಂಸ್ಥೆಯ ವಿಳಾಸಗಳೊಂದಿಗೆ ಕರ್ನಾಟಕ ರಾಜಪತ್ರದಲ್ಲಿ ಚಲನಚಿತ್ರದ ಹೆಸರನ್ನು ಅಧಿಸೂಚಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಚಲನಚಿತ್ರ ಅಧಿನಿಯಮ, 1952ರ (ಕೇಂದ್ರ ಅಧಿನಿಯಮ 1952ರ 37) ಮೇರೆಗೆ ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯು ಸಾರ್ವಜನಿಕ ಪ್ರದರ್ಶಕ್ಕಾಗಿ ಯೋಗ್ಯವೆಂದು ಪ್ರಮಾಣೀಕರಿಸಿಲ್ಲದ ಯಾವುದೇ ಚಲನಚಿತ್ರವನ್ನು ಅನುಮೋದಿಸತಕ್ಕದ್ದಲ್ಲ.

**21. ಚಲನಚಿತ್ರ ಪರೀಕ್ಷೆಗಾಗಿ ಸಂದಾಯ ಮಾಡಬೇಕಾದ ಫೀಜು.–** 19ನೇ ನಿಯಮದ ಮೇರೆಗೆ ಚಲನಚಿತ್ರದ ಪರೀಕ್ಷೆಗಾಗಿ ಫೀಜು ಚಲನಚಿತ್ರದ ಪ್ರತಿ ಮುನ್ನೂರು ಮೀಟರುಗಳು ಅಥವಾ ಅದರ ಭಾಗಕ್ಕಾಗಿ ಹತ್ತು ರೂಪಾಯಿಗಳಾಗಿರತಕ್ಕದ್ದು ಮತ್ತು 18ನೇ ನಿಯಮದ ಮೇರೆಗೆ ಅದನ್ನು ಅರ್ಜಿಯೊಂದಿಗೆ ಸಂದಾಯ ಮಾಡತಕ್ಕದ್ದು.

**22. ಚಲನಚಿತ್ರದ ದ್ವಿಪ್ರತಿಗಳ ಪರೀಕ್ಷೆಯು ಅನಾವಶ್ಯಕ.–** ಈ ಹಿಂದೆ ಅನುಮೋದಿತವಾದ ಚಲನಚಿತ್ರಗಳ ದ್ವಿಪ್ರತಿಗಳು ಪರೀಕ್ಷೆ ಮತ್ತು ಎರಡನೆಯ ಚಿತ್ರವು ಮೊದಲನೆಯದರ ಪ್ರತಿಯೆಂಬ ಸಂಗತಿಯನ್ನು ತೋರಿಸಬಹುದಾದರೆ ಅವಶ್ಯವಾಗಿರತಕ್ಕದ್ದಲ್ಲ.

**23. ಮಾರ್ಪಾಟು ಮಾಡಿದ ಚಲನಚಿತ್ರದ ಪರೀಕ್ಷೆ.–** ರಾಜ್ಯ ಸರ್ಕಾರವು ಯಾವುದೇ ಚಲನಚಿತ್ರವನ್ನು ಅನುಮೋದಿಸಿದ ತರುವಾಯ ಅದನ್ನು ಕತ್ತರಿಸುವ, ಸೇರಿಸುವ ಮೂಲಕ ಅಥವಾ ಅನ್ಯಥಾ ಮಾರ್ಪಡಿಸಿದರೆ ಅದನ್ನು ಚಲನಚಿತ್ರ ಸಲಹಾ ಮಂಡಲಿಯು ಮರು ಪರೀಕ್ಷೆ ಮಾಡಿದ ಮತ್ತು ಈ ನಿಯಮಗಳಿಗೆ ಅನುಸಾರವಾಗಿ ರಾಜ್ಯ ಸರ್ಕಾರವು ಅನುಮೋದಿಸಿದ ಹೊರತು ಅದು ಅನುಮೋದಿತ ಚಲನಚಿತ್ರವಾಗಿರುವುದು ನಿಂತು ಹೋಗತಕ್ಕದ್ದು. ಅಂಥ ಮರು ಪರೀಕ್ಷೆಯ ಫೀಜು ಚಲನಚಿತ್ರಗಳ ಪರೀಕ್ಷೆಗಾಗಿ 21ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದಂಥವುದೇ ಆಗಿರತಕ್ಕದ್ದು.

**24. ಪರೀಕ್ಷಿಸಿದ ಚಲನಚಿತ್ರಗಳ ರಿಜಿಸ್ಟರು.–** ಚಲನಚಿತ್ರ ಸಲಹಾ ಮಂಡಲಿಯ ಅಧ್ಯಕ್ಷನು, ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕಂಥ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು, ಎಂದರೆ.–

(ಕ) ಪರೀಕ್ಷಿಸಿದ ಪ್ರತಿಯೊಂದು ಚಲನಚಿತ್ರದ ಹೆಸರು;

(ಖ) ಅನುಮೋದನೆಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಗಳು, ಫರ್ಮು ಅಥವಾ ಸಂಸ್ಥೆಯ ಹೆಸರು;

(ಗ) ಚಲನಚಿತ್ರವನ್ನು ತಯಾರಿಸುವ ಮತ್ತು ಬಿಡುಗಡೆ ಮಾಡುವ ವ್ಯಕ್ತಿ ಅಥವಾ ಕಂಪನಿಯ ಹೆಸರು;

(ಘ) ಚಲನಚಿತ್ರವನ್ನು ಮೂಲತಃ ತಯಾರಿಸಿದಂಥ ದೇಶದ ಹೆಸರು;

(ಙ) ಪರೀಕ್ಷೆಯ ದಿನಾಂಕ;

(ಚ) ಮೀಟರುಗಳಲ್ಲಿ ಚಲನಚಿತ್ರದ ಉದ್ದ, ರೀಲುಗಳ ಸಂಖ್ಯೆ, ಮೀಟರುಗಳಲ್ಲಿ ಪ್ರತಿಯೊಂದು ರೀಲಿನ ಉದ್ದ;

(ಛ) ಅಂಥ ಪರೀಕ್ಷೆಯ ಬಗ್ಗೆ ಮಂಡಲಿಯ ಷರಾ; ಮತ್ತು

(ಜ) ಸರ್ಕಾರದ ಅನುಮೋದನೆಯನ್ನು ತಿಳಿಸುವ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕ.

## ಭಾಗ – II

## ಅಧ್ಯಾಯ – IV

### ಖಾಯಂ ಸಿನಿಮಾಗಳು–ಖಾಯಂ ಸಿನಿಮಾಗಳ ಸ್ಥಳದ ಅನುಮೋದನೆ

**25. ಕಾಯಂ ಸಿನಿಮಾ ಕಟ್ಟಡದ ನಿರ್ಮಾಣಕ್ಕಾಗಿ ಅರ್ಜಿ.–** (1) ಖಾಯಂ ಸಿನಿಮಾ ಕಟ್ಟಡವನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಕಟ್ಟಡವನ್ನು ಸಿನಿಮಾ ಕಟ್ಟಡಕ್ಕೆ ಪರಿವರ್ತಿಸಲು ಉದ್ದೇಶಿಸುವ ವ್ಯಕ್ತಿಯು, ಮೊದಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ನಮೂನೆ–ಕ ದಲ್ಲಿ ಆರು ಪ್ರತಿಗಳಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು. ಅವನು ಸಂದರ್ಭಾನುಸಾರ ಉದ್ದೇಶಿತ ನಿವೇಶನ ಅಥವಾ ಪರಿವರ್ತಿಸಬೇಕಾದ ಕಟ್ಟಡದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಯಿಂದ ಸ್ಪಷ್ಟವಾಗಿ ಅದನ್ನು ನೋಡುವ ಹಾಗೆ ಅಂಥ ಜಾಗದಲ್ಲಿ ಫಲಕದ ಮೇಲೆ, ಈ ಬಗ್ಗೆ ಖ ನಮೂನೆಯಲ್ಲಿ ನೋಟೀಸನ್ನು ಸಹ ಹಾಕತಕ್ಕದ್ದು. ಅಂಥ ನೋಟೀಸು ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷಿನಲ್ಲಿ ಇರತಕ್ಕದ್ದು. ಫಲಕದ ಮೇಲೆ ಆ ನೋಟೀಸನ್ನು ಲೈಸೆನ್ಸ್‌ಗಾಗಿನ ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ತೀರ್ಮಾನಿಸುವವರೆಗೆ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಆ ಫಲಕವು ಗಾತ್ರದಲ್ಲಿ ಕನಿಷ್ಟ ಪಕ್ಷ 1.25 ಮೀ x 1.00 ಮೀ ಅಳತೆಯದ್ದಾಗಿರತಕ್ಕದ್ದು ಮತ್ತು ನೋಟೀಸು ದೊಡ್ಡ ಮತ್ತು ಸ್ಫುಟವಾದ ಅಕ್ಷರಗಳಲ್ಲಿರತಕ್ಕದ್ದು.

(2) ಅರ್ಜಿಯೊಂದಿಗೆ,–

(ಕ) ಉದ್ದೇಶಿತ ನಿವೇಶನದಿಂದ ಇನ್ನೂರು ಮೀಟರುಗಳ ದೂರದವರೆಗೆ ಇರುವಂಥ ಸುತ್ತಮುತ್ತಲ ರಸ್ತೆಗಳು ಮತ್ತು ಕಟ್ಟಡಗಳು. ಸದರಿ ನಿವೇಶನದಿಂದ ಎಲ್ಲ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ದೇವಾಲಯಗಳು ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳಗಳ ದೂರುಗಳನ್ನು ಸ್ಪಷ್ಟವಾಗಿ ಸೂಚಿಸುವ ಅಳತೆಗೆ ಸರಿಯಾಗಿ ಬರೆದ ಪಟ್ಟಣ ನಕ್ಷೆಯ ಒಂದು ಪ್ರತಿಯೊಂದಿಗೆ (ಬಟ್ಟೆಯ ಮೇಲೆ ಹಚ್ಚಿದು) ಆರು ಪ್ರತಿಗಳಲ್ಲಿ ಉದ್ಧೃತಿ;

(ಖ) ನಿವೇಶನ ನಕ್ಷೆಯಲ್ಲಿ ಯಾವುದೇ ಲಗತ್ತಾದ ಕಟ್ಟಡಗಳು, ಉಪಗೃಹಗಳು ಮತ್ತು ಇತರ ರಚನೆಗಳು, ಒಳದಾರಿಗಳು, ರಸ್ತೆಗಳು, ಮಾರ್ಗಗಳು, ಬಾವಿಗಳು, ತೊಟ್ಟಿಗಳು, ನೀರೆತ್ತುವ ಕೊಳಾಯಿಗಳು, ಯಾವುದಾದರೂ ಇದ್ದರೆ ಅವುಗಳು, ಚರಂಡಿಗಳು, ನೀರಿನ ಚರಂಡಿ ಮತ್ತು ಅನಿಲ ಪ್ರಧಾನ ನಾಳಗಳು, ಭೂಮಿಯೊಳಗಿರುವ ಕೇಬಲ್ಲುಗಳು, ಮೇಲಿರುವ ಅತೀವ ಮತ್ತು ಹೆಚ್ಚಿನ ಅತೀವ ವೋಲ್ಟೇಜ್ ಲೈನ್‌ಗಳು, ಟೆಲಿಗ್ರಾಫ್ ಮತ್ತು ಟೆಲಿಫೋನ್ ಲೈನುಗಳು, ನಿವೇಶನದ ಒಳಗಡೆ ಮಳೆಗಾಲದಲ್ಲಿ ಸಮೀಪದ ನದಿಗಳು ಅಥವಾ ನಾಲೆಗಳ ಅತೀವ ಪ್ರವಾಹ ಗುರುತುಗಳು, ಪಕ್ಕದ ಜಲಾಶಯ, ಕೆರೆಗಳ ನೀರಿನ ಗರಿಷ್ಠ ಮಟ್ಟ, ಪಕ್ಕದ ಬಾವಿಗಳು, ಯಾವುವಾದರೂ ಇದ್ದರೆ ಅವುಗಳ ನೀರಿನ ಮಟ್ಟ–ಇವುಗಳಿಗೆ ಸಂಬಂಧಿಸಿದಂತೆ ಸಿನಿಮಾ ಮತ್ತು ಅದರ ಆವರಣಗಳ ಸ್ಥಾನವನ್ನು ತೋರಿಸುವ ಮತ್ತು ನಿವೇಶನದ ಅಳತೆ ಹಾಗೂ ಅದರಲ್ಲಿ ಸ್ಥಳಾವಕಾಶ ಕಲ್ಪಿಸಬೇಕಾದ ಆಸನಗಳ ಸಂಖ್ಯೆಯೊಂದಿಗೆ ಉದ್ದೇಶಿತ ಕಟ್ಟಿದ ಮತ್ತು ಬಯಲು ಪ್ರದೇಶಗಳನ್ನು ಕೂಡುವ ಬ್ಲಾಕ್ ಮಟ್ಟಗಳನ್ನು ತೋರಿಸಿ 1/500ಕ್ಕಿಂತ ಕಡಿಮೆಯಲ್ಲದ ಅಳತೆಗೆ ಸರಿಯಾಗಿ ಬರೆದ ಆರು ಪ್ರತಿಗಳಲ್ಲಿ (ಅದರಲ್ಲಿ ಒಂದು ಪ್ರತಿಯನ್ನು ಬಟ್ಟೆಯ ಮೇಲೆ ಹಚ್ಚಿದ) ನಿವೇಶನ ನಕ್ಷೆಯು; ಮತ್ತು

(ಗ) ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ 29ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಫೀಜನ್ನು ಜಮೆ ಮಾಡಿರುವುದಕ್ಕೆ ಖಜಾನೆ ಚಲನು.

–ಇವುಗಳು ಇರತಕ್ಕದ್ದು.

(3) ಲೈಸೆನ್ಸ್ ಪಡೆದ ಆವರಣದೊಳಗೆ 25ನೇ ನಿಯಮದ ಮೇರೆಗೆ ಯಾವ ಸಿನಿಮಾಕ್ಕಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಅಸ್ತಿತ್ವದಲ್ಲಿರುವ ಸಿನಿಮಾ ಅಥವಾ ಉದ್ದೇಶಿತ ಸಿನಿಮಾದ ಪಕ್ಕದಲ್ಲಿ ಅಥವಾ ನೆಲ ಅಂತಸ್ತಿನಲ್ಲಿ ಅಥವಾ ಮೊದಲ ಅಂತಸ್ತಿನಲ್ಲಿ ಒಂದು ಅಥವಾ ಹೆಚ್ಚು ಹೆಚ್ಚುವರಿ ಸಿನಿಮಾಗಳನ್ನು ನಿರ್ಮಿಸಲು ಉದ್ದೇಶಿಸುವ ಯಾರೇ ವ್ಯಕ್ತಿಯು, ಪ್ರತ್ಯೇಕ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯುವ ಅಗತ್ಯವಿಲ್ಲ. ಆದಾಗ್ಯೂ, ಈ ನಿಯಮಗಳಲ್ಲಿನ ಖಾಯಂ ಸಿನಿಮಾಥೇಟೆರಿಗೆ ಸಂಬಂಧಿಸಿದ ಇತರ ಉಪಬಂಧಗಳು, ಅಂಥ ಹೆಚ್ಚುವರಿ ಸಿನಿಮಾ ಥೇಟರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(4) ಯಾವ ಸಿನಿಮಾ ನಿವೇಶನಗಳ ಸಂದರ್ಭದಲ್ಲಿ, ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡಲಾಗಿದೆಯೋ ಆ ಸಿನಿಮಾ ನಿವೇಶನಗಳ ಸಂದರ್ಭದಲ್ಲಿ (3)ನೇ ಉಪ–ನಿಯಮದಲ್ಲಿ ಉಲ್ಲೇಖಿತವಾದ ಹೆಚ್ಚುವರಿ ಸಿನಿಮಾಗಳಿಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅನುಮತಿಸಬಹುದು; ಪರಂತು, ನಿವೇಶನವು, ಹೆಚ್ಚುವರಿ ಸಿನಿಮಾಗಳಿಗೆ ಸ್ಥಳಾವಕಾಶ ಒದಗಿಸಲು ಮತ್ತು ಆ ಆವರಣಗಳೊಳಗೆ ಪ್ರವೇಶಿಸುವ ವ್ಯಕ್ತಿಗಳ ಮತ್ತು ವಾಹನಗಳ ಅವಶ್ಯಕತೆಗಳನ್ನು ಪೂರೈಸಲು ಸಾಕಷ್ಟು ವಿಶಾಲವಾಗಿರತಕ್ಕದ್ದು. ಕಾರು ನಿಲ್ದಾಣಕ್ಕಾಗಿನ ವ್ಯವಸ್ಥೆಯು ಎಲ್ಲ ಸಿನಿಮಾಗಳನ್ನು ಒಟ್ಟಿಗೆ ತೆಗೆದುಕೊಂಡಾಗ ಬರುವ ಒಟ್ಟು ಆಸನ ಸಾಮರ್ಥ್ಯದ ಆಧಾರದ ಮೇಲೆ 27(1)(ಚ) ನಿಯಮದ ಮೇರೆಗೆ ನಿಯಮಿಸಿದ ಪ್ರಮಾಣಗಳಿಗನುಸಾರವಾಗಿರತಕ್ಕದ್ದು. ಹೆಚ್ಚುವರಿ ಸಿನಿಮಾ ನೆಲ ಅಂತಸ್ತಿನಲ್ಲಿ ಅಥವಾ ಮೊದಲನೆಯ ಅಂತಸ್ತಿನಲ್ಲಿದ್ದರೆ ಅಂಥ ಹೆಚ್ಚುವರಿ ಸಿನಿಮಾದಿಂದ ತೆರೆದ ಪ್ರದೇಶಕ್ಕೆ ಹೋಗಲು ಸಾಕಷ್ಟು ಮುಕ್ತವಾದ ದಾರಿಗೆ ವ್ಯವಸ್ಥೆ ಮಾಡಿರತಕ್ಕದ್ದು

(5) ಯಾವ ನಿವೇಶನದಲ್ಲಿ ಹೆಚ್ಚುವರಿ ಸಿನಿಮಾವನ್ನು ಉದ್ದೇಶಿಸಲಾಗಿದೆಯೋ ಅದು ಸಂಚಾರ ಇಕ್ಕಟ್ಟುಗಳನ್ನು ನಿವಾರಿಸಲು 15 ಮೀಟರುಗಳಿಗೆ ಕಡಿಮೆಯಿಲ್ಲದಂತೆ (ಸುಮಾರು 50 ಅಡಿಗಳು) ಅಗಲವಾಗಿರುವ ಮುಖ್ಯ ರಸ್ತೆಗೆ ಲಗತ್ತಾಗಿರತಕ್ಕದ್ದು.

(6) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಈಗಾಗಲೇ ಅಸ್ತಿತ್ವದಲ್ಲಿರುವ ಸಿನಿಮಾ ಮಂದಿರದ ಆವರಣಗಳಲ್ಲಿ ಹೆಚ್ಚುವರಿ ಸಿನಿಮಾಕ್ಕಾಗಿ ಅನುಮತಿಯನ್ನು ಕೊಡುವುದಕ್ಕೆ ಮುಂಚೆ ಸ್ಥಳೀಯ ಪ್ರಾಧಿಕಾರ, ಪೊಲೀಸ್ ಪ್ರಾಧಿಕಾರ ಮತ್ತು ನಗರ ಯೋಜನೆಯ ನಿರ್ದೇಶಕರೊಂದಿಗೆ ಸಮಾಲೋಚಿಸತಕ್ಕದ್ದು.

**26. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆಕ್ಷೇಪಗಳನ್ನು ಆಹ್ವಾನಿಸತಕ್ಕದ್ದು.–** (1) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, 25ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಸದರಿ ಪ್ರದೇಶದಲ್ಲಿ ವ್ಯಾಪಕ ಪ್ರಸಾರವುಳ್ಳ ಎರಡು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ (ಒಂದು ಪ್ರಾದೇಶಿಕ ಭಾಷೆಯಲ್ಲಿ ಮತ್ತು ಇನ್ನೊಂದು ಇಂಗ್ಲೀಷಿನಲ್ಲಿ) ಆಕ್ಷೇಪಣೆಗಳನ್ನು ಆಹ್ವಾನಿಸಿ ಪ್ರಕಟಿಸುವ ಮೂಲಕ ಅಂಥ ಉದ್ದೇಶವನ್ನು ಸಾರ್ವಜನಿಕರಿಗೆ ಅರ್ಜಿದಾರನ ಖರ್ಚಿನಲ್ಲಿ ಅಧಿಸೂಚಿಸತಕ್ಕದ್ದು, ಅಂಥ ನೋಟೀಸು 'ಗ' ನಮೂನೆಯಲ್ಲಿರತಕ್ಕದ್ದು ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಆಕ್ಷೇಪಣೆಗಳನ್ನು ಕಳುಹಿಸತಕ್ಕ ಅವಧಿಯು ಅಂಥ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಾಗಿರತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಖಾಯಂ ಸಿನಿಮಾದ ಸ್ಥಾಪನೆಗಾಗಿ ಉದ್ದೇಶಿತವಾದ ನಿವೇಶನದ ಸೂಕ್ತತೆ ಅಥವಾ ಅನ್ಯಥಾ ಸಂದರ್ಭಾನುಸಾರ ನಗರ ಯೋಜನೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ನಿರ್ದೇಶಕರು, ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರಿ, ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಪೊಳಿಸ್ ಸೂಪರಿಂಟೆಂಡೆಂಟ್, ಪೊಲೀಸ್ ಕಮೀಷನರ್‌ರವರ ಅಭಿಪ್ರಾಯವನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅರ್ಜಿಯ ಪ್ರತಿಗಳನ್ನು ಅರ್ಜಿದಾರನು ಒದಗಿಸಿದ ಅದರ ಲಗತ್ತುಗಳೊಂದಿಗೆ ಏಕಕಾಲದಲ್ಲಿ ಅವರಿಗೆ ಕಳುಹಿಸಿಕೊಡತಕ್ಕದ್ದು.

(2) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಆದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಅರವತ್ತು ದಿವಸಗಳನ್ನು ಮೀರದ ಅವಧಿಯೊಳಗಾಗಿ ಕಾಯಂ ಸಿನಿಮಾದ ಸ್ಥಾಪನೆಗಾಗಿನ ಉದ್ದೇಶಿತ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ತೀರ್ಮಾನವನ್ನು ಕೈಗೊಳ್ಳತಕ್ಕದ್ದು. (1)ನೇ ಉಪ–ನಿಯಮದಲ್ಲಿ ನಮೂದಿಸಿದ ವಿವಿಧ ಪ್ರಾಧಿಕಾರಗಳು ಆದಷ್ಟು ಬೇಗ ಮತ್ತು ಯಾವುದೇ ಪ್ರಕರಣದಲ್ಲಿ (1)ನೇ ಉಪ–ನಿಯಮದಲ್ಲಿ ನಮೂದಿಸಲಾದ ಅವಧಿಯು ಮುಕ್ತಾಯಗೊಂಡ ತರುವಾಯ ಅರವತ್ತು ದಿನಗಳ ಅವಧಿಯೊಳಗಾಗಿ ಅವರ ಅಭಿಪ್ರಾಯಗಳನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ತಿಳಿಸತಕ್ಕದ್ದು.

(3) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಆ ಸಿನಿಮಾ ಸ್ಥಾಪನೆಗಾಗಿನ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ಇದಕ್ಕೆ ಸಂಬಂಧಿಸಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ (1)ನೇ ಉಪ–ನಿಯಮದಲ್ಲಿ ನಮೂದಿಸಲಾದ ವಿವಿಧ ಪ್ರಾಧಿಕಾರಿಗಳ ಅಭಿಪ್ರಾಯವನ್ನು ಮತ್ತು (1)ನೇ ಉಪ–ನಿಯಮದ ಮೇರೆಗಿನ ಪ್ರಕಟಣೆಗೆ ಉತ್ತರ ರೂಪವಾಗಿ ಸ್ವೀಕರಿಸಲಾದ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

**27. ನಿರಾಕ್ಷೇಪಣ ಪ್ರಮಾಣ ಪತ್ರವನ್ನು ಕೊಡುವುದಕ್ಕಾಗಿ ಷರತ್ತುಗಳು.**–(1) ಯಾವುದೇ ಸಿನಿಮಾಕ್ಕೆ ಸಂಬಂಧ ಪಟ್ಟಂತೆ,–

(ಕ) ಸಿನಿಮಾ ನಿವೇಶನವು,–

(i) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಆಸನಗಳ ಒಟ್ಟು ಸಂಖ್ಯೆಯು ಆರು ನೂರಕ್ಕಿಂತ ಹೆಚ್ಚಾಗಿದ್ದರೆ, ರಸ್ತೆಗೆ ಲಗತ್ತಾಗಿರುವ ಒಂದು ಪಕ್ಕವು ಇಪ್ಪತ್ಮೂರು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು, ಒಂದು ಸಾವಿರದ ಮೂರು ನೂರು ಐವತ್ತು ಚದರ ಮೀಟರುಗಳ,

(ii) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿ ಆಸನಗಳ ಒಟ್ಟು ಸಂಖ್ಯೆ ಆರು ನೂರು ಅಥವಾ ಅದಕ್ಕೂ ಕಡಿಮೆ ಇದ್ದರೆ, ರಸ್ತೆಗೆ ಲಗತ್ತಾಗಿರುವ ಇಪ್ಪತ್ಮೂರು ಮೀಟರುಗಳಿಗಿಂತ ಕಡಿಮೆಯಿಲ್ಲದಿದ್ದು ಒಂದು ಪಕ್ಕ ಒಂದು ಸಾವಿರ ಚದರ ಮೀಟರುಗಳ,

–ಕನಿಷ್ಠ ಪ್ರದೇಶದ್ದಾಗಿದ್ದ ಹೊರತು;

(ಖ) (i) ಸಿನಿಮಾ ನಿವೇಶನವು ಪ್ರಧಾನವಾಗಿ ವಾಣಿಜ್ಯ ಪ್ರದೇಶದಲ್ಲಿ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮ ಅಧಿನಿಯಮ, 1961ರ 4(ಗ) ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರ ಅಥವಾ ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರದಿಂದ ಪ್ರದೇಶಕ್ಕಾಗಿ ಸಿದ್ಧಪಡಿಸಿದ ಯಾವುದೇ ರೂಪುರೇಷೆ, ಅಭಿವೃದ್ಧಿ ಯೋಜನೆ ಅಥವಾ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಉದ್ದೇಶಿತ ವಾಣಿಜ್ಯ ವಲಯದಲ್ಲಿ ಇರುವ ಹೊರತು:

ಪರಂತು, ರೂಪುರೇಷೆ ಅಥವಾ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸದಿರುವಲ್ಲಿ ಅಸ್ತಿತ್ವದಲ್ಲಿರುವ ಪ್ರಧಾನ ವಾಣಿಜ್ಯ ಪ್ರದೇಶಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು;

(ii) ಯಾವುದೇ ವಾಣಿಜ್ಯ ಪ್ರದೇಶವನ್ನು ಹೊಂದಿಲ್ಲದ ಗ್ರಾಮಾಂತರ ಪ್ರದೇಶಗಳ ಸಂದರ್ಭದಲ್ಲಿ, ಅದು ಅಂಥ ಪ್ರದೇಶದ ಹೊರವಲಯಗಳಲ್ಲಿ ಇರುವ ಹೊರತು;

(ಗ) ಸಿನಿಮಾ ನಿವೇಶನವು, ಯಾವ ಸಾರ್ವಜನಿಕ ಮುಖ್ಯ ರಸ್ತೆಯ ಅಗಲಳತೆಯ, ಕಾಲುದಾರಿಯನ್ನು ಸೇರಿಸಿ ನಗರ ಪ್ರದೇಶಗಳಲ್ಲಿ ಹನ್ನೆರಡು ಮೀಟರುಗಳಿಗಿಂತ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕಾಲುದಾರಿ, ಯಾವುದಾದರೂ ಇದ್ದರೆ ಅದನ್ನು ಸೇರಿಸಿ ಒಂಬತ್ತು ಮೀಟರುಗಳಿಗಿಂತ ಹೆಚ್ಚಾಗಿರುವುದೋ ಅಂಥ ಸಾರ್ವಜನಿಕ ಮುಖ್ಯ ರಸ್ತೆಯ ಪಕ್ಕಕ್ಕೆ ಸಿನಿಮಾ ನಿವೇಶನವು ಇರುವ ಹೊರತು ಮತ್ತು ಎರಡು ಸಾವಿರಗಳಿಗಿಂತ ಹೆಚ್ಚು ಜನರಿಗೆ ಸ್ಥಳಾವಕಾಶವನ್ನು ಒದಗಿಸುವುದಕ್ಕಾಗಿ ಲೈಸೆನ್ಸ್‌ನ್ನು ಕೊಟ್ಟಿರುವ ಅಥವಾ ಕೊಡಲು ಉದ್ದೇಶಿಸಿರುವ ಸಿನಿಮಾ ಥಿಯೇಟರಿನ ಸಂದರ್ಭದಲ್ಲಿ ಎರಡು ಸಾರ್ವಜನಿಕ ಮುಖ್ಯ ರಸ್ತೆಗಳಿಗೆ ಹೋಗುವ ಹೊರದಾರಿಗಳನ್ನು ಹೊಂದಿರುವ ಹೊರತು;

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಬರಹದಲ್ಲಿನ ಆದೇಶದ ಮೂಲಕ ಅದು ವಿಧಿಸಬಹುದಾದಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಪಟ್ಟಣದ ವಿಸ್ತರಣೆಯಲ್ಲಿನ ಸಿನಿಮಾವನ್ನು ಅಥವಾ ಗ್ರಾಮಾಂತರ ಪ್ರದೇಶದಲ್ಲಿನ ಸಿನಿಮಾವನ್ನು ಹೊರತುಪಡಿಸಿ ಪಟ್ಟಣಗಳಲ್ಲಿನ ಯಾವುದೇ ಸಿನಿಮಾವನ್ನು ಈ ಉಪ–ಖಂಡದ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು;

(ಘ) ಸಿನಿಮಾ ಕಟ್ಟಡವು, ಯಾವುದೇ ಸ್ಥಳೀಯ ಪ್ರಾಧಿಕಾರದ ಪರಿಮಿತಿಯ ಒಳಗೆ ಬಂದಾಗ, ಅದು, ಕರ್ನಾಟಕ ಹೆದ್ದಾರಿಗಳ ನಿಯಮಗಳು, 1966ರಲ್ಲಿ ನಿಯಮಿಸಲಾದಂತೆ ಮುಂಭಾಗದ ಸೆಟ್ ಬ್ಯಾಕ್‌ನ್ನು ಹೊಂದಿರತಕ್ಕದ್ದು. ಉದ್ದೇಶಿತ ಸಿನಿಮಾ ಕಟ್ಟಡವು ಸ್ಥಳೀಯ ಪ್ರಾಧಿಕಾರದ ಮಿತಿಯೊಳಗಿರುವಂಥ ಸಂದರ್ಭದಲ್ಲಿ ಮುಂಭಾಗದ ಸೆಟ್ ಬ್ಯಾಕ್, ಕರ್ನಾಟಕ ರಾಷ್ಟ್ರೀಯ ಹೆದ್ದಾರಿ ನಿಯಮಗಳು, 1966ರಲ್ಲಿ ನಿಯಮಿಸಿದಂತೆ ಎಂಟು ಮೀಟರುಗಳಾಗಿ ಇರುವ ಹೊರತು;

(ಙ) ಸಿನಿಮಾ ನಿವೇಶನವು ಅಂಥ ಸಾರ್ವಜನಿಕ ಮುಖ್ಯ ರಸ್ತೆಯ ಮೇಲೆ ಸಾರ್ವಜನಿಕರಿಗೆ ಸೂಕ್ತ ಪ್ರವೇಶ ಮತ್ತು ನಿರ್ಗಮನ ಸಾಧನೆಗಳನ್ನು ಹೊಂದಿರುವ ಹೊರತು;

(ಚ) ಸಿನಿಮಾ ನಿವೇಶನವು,–

(i) ಹತ್ತು ಲಕ್ಷ ಮತ್ತು ಅದಕ್ಕೂ ಮೇಲ್ಪಟ್ಟ ಜನಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಇಪ್ಪತ್ತು ಕಾರುಗಳಿಗಾಗಿ ಕನಿಷ್ಠ ಸ್ಥಳಾವಕಾಶಕ್ಕೆ ಒಳಪಟ್ಟು, ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(ii) ಒಂದರಿಂದ ಹತ್ತು ಲಕ್ಷ ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ ಹದಿನೈದು ಕಾರುಗಳಿಗಾಗಿ ಕನಿಷ್ಟ ಸ್ಥಳಾವಕಾಶಕ್ಕೆ ಒಳಪಟ್ಟು ಪ್ರತಿ ಹದಿನೈದು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ;

(iii) ಐವತ್ತು ಸಾವಿರದಿಂದ ಒಂದು ಲಕ್ಷ ಜನ ಸಂಖ್ಯೆಯನ್ನು ಹೊಂದಿರುವ ಸ್ಥಳಗಳಲ್ಲಿ ಹತ್ತು ಕಾರುಗಳಿಗಾಗಿ ಕನಿಷ್ಟ ಸ್ಥಳಾವಕಾಶಕ್ಕೆ ಒಳಪಟ್ಟು, ಪ್ರತಿ ಐವತ್ತು ಆಸನಗಳಿಗೆ ಒಂದು ಕಾರು ನಿಲ್ದಾಣದಂತೆ,

–ಸೂಕ್ತ ನಿಲ್ದಾಣ ಸ್ಥಳಾವಕಾಶ ಹೊಂದಿರುವ ಹೊರತು; ಮತ್ತು

(ಛ) ಸಿನಿಮಾ ಕಟ್ಟಡ ಮತ್ತು ಆವರಣ ಗೋಡೆಯ ಒಳಪರಿಮಿತಿಗಳ ನಡುವಣ ಮತ್ತು ಅದೇ ಆವರಣದಲ್ಲಿನ ಸಿನಿಮಾ ಕಟ್ಟಡಗಳ ನಡುವಣ ಸ್ಪಷ್ಟ ದೂರವು ಪ್ರವೇಶ ದ್ವಾರದ ಕಡೆ ಎಂಟು ಮೀಟರುಗಳಿಗಿಂತ ಮತ್ತು ಇನ್ನೊಂದು ಕಡೆ ನಾಲ್ಕೂವರೆ ಮೀಟರುಗಳಿಗಿಂತ ಕಡಿಮೆಯಿಲ್ಲದಷ್ಟು ಇರುವ ಹೊರತು : ಪರಂತು, ಈ ಖಂಡವು ಅಸ್ತಿತ್ವದಲ್ಲಿರುವ ಯಾವುದೇ ಸಿನಿಮಾ ಥಿಯೇಟರುಗಳಿಗೆ ಮತ್ತು ಈ ನಿಯಮಗಳು ಜಾರಿಗೆ ಬರುವುದಕ್ಕೆ ಮುಂಚೆ ನಿರಾಕ್ಷೇಪಣ ಪ್ರಮಾಣಪತ್ರ ಕೊಡಲಾದಂಥ ಚಲನಚಿತ್ರ ಆವರಣಕ್ಕೆ ಅನ್ವಯವಾಗತಕ್ಕದ್ದಲ್ಲ;

(ಜ) ಸಿನಿಮಾ ನಿವೇಶನವು ಸಂಚಾರದ ತೊಂದರೆ ಉಂಟು ಮಾಡುವ ಸಂಭವವಿಲ್ಲದಿರುವ ಸ್ಥಳದಲ್ಲಿ ಇರುವ ಹೊರತು;

(ಝ) ಸಿನಿಮಾ ನಿವೇಶನವು,–

(i) (ಕ) ಯಾವುದೇ ಅಸ್ತಿತ್ವದಲ್ಲಿರುವ ಪೆಟ್ರೋಲ್ ಬಂಕ್ ಅಥವಾ ಪೆಟ್ರೋಲ್ ಬಂಕಿಗಾಗಿ, ಲೈಸೆನ್ಸ್ ಪಡೆದಿರುವ ಸ್ಥಳ ಮತ್ತು ಅಗ್ನಿ ಸಂಭಾವ್ಯ ಇತರ ಸ್ಥಳಗಳು; ಅಥವಾ

(ii) ಉಪಯೋಗದಲ್ಲಿರುವ ಸಮುದಾಯ ಆರಾಧನೆಯ ಯಾವುದೇ ಸ್ಥಳ, ಸುಡುಗಾಡು, ಸಮಾಧಿ ಭೂಮಿ ಅಥವಾ ಗೋರಿ ಸ್ಥಳ; ಅಥವಾ

(iii) ಯಾವುದೇ ಮನ್ನಣೆ ಪಡೆದ ಶೈಕ್ಷಣಿಕ ಸಂಸ್ಥೆ ಅಥವಾ ಅಂಥ ಶೈಕ್ಷಣಿಕ ಸಂಸ್ಥೆಗಳಿಗೆ ಲಗತ್ತಾದ ಯಾವುದೇ ವಸತಿ ಸಂಸ್ಥೆಯಿಂದ; ಅಥವಾ

(iv) ಯಾವುದೇ ಸಾರ್ವಜನಿಕ ಅಸ್ಪತ್ರೆ ಅಥವಾ ಖಾಸಗಿ ನರ್ಸಿಂಗ್ ಹೋಂನಿಂದ;

(v) ಯಾವುದೇ ಮನ್ನಣೆ ಪಡೆದ ಅನಾಥಾಲಯದಿಂದ ; ಅಥವಾ

(vi) ಯಾವುದೇ ಜನನಿಬಿಡ ವಸತಿ ಪ್ರದೇಶ ಅಥವಾ ವ್ಯಾಪಾರ ಉದ್ದೇಶಗಳಿಂದ ಭಿನ್ನವಾದ ನಿವಾಸದ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಉಪಯೋಗಿಸಿದ ಪ್ರದೇಶದಿಂದ ಐವತ್ತು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರದಲ್ಲಿದ್ದ ಹೊರತು; ಮತ್ತು

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಪ್ರಸ್ತಾವನೆಯು ಧ್ವನಿನಿರೋಧಕ ಸಿನಿಮಾ ಕಟ್ಟಡವನ್ನು ನಿರ್ಮಿಸುವುದಕ್ಕೆ ಆಗಿದ್ದರೆ, ಅವನ ವಿವೇಚನಾನುಸಾರ, ಸಾರ್ವಜನಿಕ ಹಿತಾಸಕ್ತಿಯಲ್ಲಿ ಉದ್ದೇಶಿತ ನಿವೇಶನವನ್ನು ಪರಿಶೀಲಿಸಿದ ತರುವಾಯ ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ, ಆ ಸ್ಥಳದ ಸೂಕ್ತತೆಯನ್ನು ಪರ್ಯಾಲೋಚಿಸಿ ಪ್ರತಿಯೊಂದು ಪ್ರಕರಣದಲ್ಲಿ ವಿಧಿಸಲು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಷರತ್ತುಗಳಿಗೊಳಪಟ್ಟು (i)ರಿಂದ (vi)ರವರೆಗಿನ ಬಾಬುಗಳಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಷರತ್ತನ್ನು ಸಡಿಲಗೊಳಿಸಬಹುದು ;

ಮತ್ತೂ ಪರಂತು, ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳನ್ನು ಪರ್ಯಾಲೋಚಿಸಿ ಬೇರೆ ಬೇರೆ ಪ್ರಕರಣಗಳಲ್ಲಿ ಬೇರೆ ಬೇರೆ ಷರತ್ತುಗಳನ್ನು ವಿಧಿಸಬಹುದು ;

(ಞ) ಯಾವುದೇ ಸಂರಕ್ಷಿತ ಸ್ಮಾರಕ, ರಕ್ಷಣಾ ಸ್ಥಾವರಗಳು, ರಾಷ್ಟ್ರೀಯ ಉದ್ಯಾನವನಗಳು, ವಸ್ತು ಸಂಗ್ರಹಾಲಯಗಳು ಮತ್ತು ಪ್ರಧಾನ ಟೆಲಿಫೋನ್ ಅಥವಾ ಟೆಲಿಗ್ರಾಫ್ ಅಥವಾ ವೈರ್‌ಲೆಸ್ ಅಥವಾ ದೂರ ಸಂಪರ್ಕ ಸ್ಥಾವರಗಳು ಇರುವಂಥ ಕಟ್ಟಡಗಳಿಂದ ಒಂದು ನೂರು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರ ಇದ್ದ ಹೊರತು;

(ಟ) ಸಿನಿಮಾ ನಿವೇಶನವು ಎತ್ತರದ ಸ್ಥಳದಲ್ಲಿರತಕ್ಕದ್ದು ಅಥವಾ ಸೂಕ್ತ ಚರಂಡಿ ವ್ಯವಸ್ಥೆಗಳನ್ನು ಹೊಂದಿದ್ದು ತೇವರಹಿತವಾಗಿದ್ದ ಹೊರತು ;

(ಟ) ಸಿನಿಮಾ ನಿವೇಶನವು ಕನಿಷ್ಠ ಐವತ್ತು ಸೈಕಲ್ಲುಗಳಿಗಾಗಿ ಸೂರು ಹಾಕಿದ ಸೈಕಲ್ ನಿಲ್ದಾಣಕ್ಕಾಗಿ ಜಾಗವನ್ನು ಹೊಂದಿದ್ದ ಹೊರತು

–ಈ ಅಧ್ಯಾಯದ ಮೇರೆಗೆ ಯಾವುದೇ ನಿರಾಕ್ಷೇಪಣ ಪ್ರಮಾಣಪತ್ರವನ್ನು ಕೊಡತಕ್ಕದ್ದಲ್ಲ.

(2) (ಕ) ಹತ್ತು ಸಾವಿರ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ ಸ್ಥಳಗಳಲ್ಲಿ, ಅನುಮತಿಸಬೇಕಾದ ಸಿನಿಮಾಗಳ ಸಂಖ್ಯೆಯನ್ನು,–

(i) ಅದು ಮಹಾನಗರ ಪ್ರದೇಶವಾಗಿದ್ದರೆ, ಪ್ರತಿ ಇಪ್ಪತ್ತು ಸಾವಿರ ಜನಸಂಖ್ಯೆ ಅಥವಾ ಹತ್ತು ಸಾವಿರವನ್ನು ಮೀರುವ ಅದರ ಭಾಗಕ್ಕಾಗಿ ಒಂದು ಸಿನಿಮಾದ ಆಧಾರದ ಮೇಲೆ; ಮತ್ತು

(ii) ಇತರ ಸ್ಥಳಗಳಲ್ಲಿ, ಪ್ರತಿ ಹತ್ತು ಸಾವಿರ ಜನಸಂಖ್ಯೆ ಅಥವಾ ಐದು ಸಾವಿರವನ್ನು ಮೀರುವ ಅದರ ಭಾಗಕ್ಕೆ ಒಂದು ಸಿನಿಮಾದ ಆಧಾರದ ಮೇಲೆ,

–ನಿರ್ಧರಿಸತಕ್ಕದ್ದು;

(ಖ) ಐದು ಲಕ್ಷ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳು ಮತ್ತು ನಗರಗಳಲ್ಲಿ ಒಂದರಿಂದ ಒಂದಕ್ಕೆ ನಾಲ್ಕು ನೂರು ಮೀಟರುಗಳ ದೂರದೊಳಗೆ ಸಿನಿಮಾವನ್ನು ಸ್ಥಾಪಿಸಲು ಅನುಮತಿಸತಕ್ಕದ್ದಲ್ಲ.

(3) (2)ನೇ ಉಪ–ನಿಯಮದಲ್ಲಿರುವುದಾವುದೂ, ಸಿನಿಮಾ ಕಟ್ಟಡವು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಒಡತನದಲ್ಲಿದ್ದರೆ, ಮಹಾನಗರ ಪ್ರದೇಶದಲ್ಲಿ ಸಿನಿಮಾಗಳ ಸ್ಥಾಪನೆಗಾಗಿ ಅನ್ವಯವಾಗತಕ್ಕದ್ದಲ್ಲ.

(4) (ಕ) ಮಹಾನಗರ ಪ್ರದೇಶದಲ್ಲಿನ ಪ್ರತಿಯೊಂದು ವಾರ್ಡು 7ನೇ ಪ್ರಕರಣದ ಉದ್ದೇಶಕ್ಕಾಗಿ ಒಂದು ಪ್ರದೇಶವಾಗಿರತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು 6ನೇ ಪ್ರಕರಣದ ಉಪಬಂಧಗಳು ಮತ್ತು (2)ನೇ ಉಪನಿಯಮದ ಉಪಬಂಧಗಳನ್ನು ಗಮನದಲ್ಲಿರಿಸಿ ಸದರಿ (2)ನೇ ಉಪನಿಯಮದ ಉದ್ದೇಶಕ್ಕಾಗಿ ಅಂಥ ಪ್ರತಿಯೊಂದು ವಾರ್ಡು ಸ್ಥಳವಾಗಿದಿದ್ದರೆ ಹೇಗೋ ಹಾಗೆ, ಅಂಥ ಪ್ರತಿಯೊಂದು ವಾರ್ಡಿನಲ್ಲಿ ಸದರಿ ಅಧಿನಿಯಮದ ಮೇರೆಗೆ ಲೈಸನ್ಸ್ ಕೊಡಬಹುದಾದ ಸ್ಥಳಗಳ ಸಂಖ್ಯೆಯನ್ನು ಪರಿಮಿತಿಗೊಳಿಸಬಹುದು;

ಪರಂತು, ಅಂಥ ಎಲ್ಲಾ ವಾರ್ಡುಗಳಿಗೆ ಸಂಬಂಧಿಸಿದಂತೆ ಹಾಗೆ ನಿರ್ಧರಿಸಿದ ಸ್ಥಳಗಳ ಒಟ್ಟು ಸಂಖ್ಯೆಯು ಮಹಾನಗರ ಪ್ರದೇಶವನ್ನು ಒಟ್ಟಾರೆ ತೆಗೆದುಕೊಂಡು ಅದಕ್ಕೆ ಸಂಬಂಧಿಸಿದಂತೆ (2)ನೇ ಉಪ–ನಿಯಮದ ಮೇರೆಗೆ ಅನುಮತಿಸಬಹುದಾದ ಸಂಖ್ಯೆಯನ್ನು ಮೀರತಕ್ಕದ್ದಲ್ಲ;

(ಖ) 7ನೇ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ಮಾಡತಕ್ಕದ್ದಲ್ಲ.

**ವಿವರಣೆ.**– (2) (3) ಮತ್ತು (4)ನೇ ಉಪ–ನಿಯಮಗಳ ಉದ್ದೇಶಕ್ಕಾಗಿ–

(1) "ದೂರ"ವನ್ನು ಎರಡು ಸಿನಿಮಾಗಳನ್ನು ಕೂಡಿಸುವ ಮತ್ತು ಸಾರ್ವಜನಿಕರು ಸಾಮಾನ್ಯವಾಗಿ ಉಪಯೋಗಿಸುವ ಅತಿ ಸಮೀಪದ ದಾರಿ, ಗಲ್ಲಿ, ಬೀದಿ ಅಥವಾ ರಸ್ತೆ ಗುಂಟ ಲೆಕ್ಕ ಹಾಕತಕ್ಕದ್ದು ;

(2) "ಮಹಾನಗರ ಪ್ರದೇಶ" ಎಂದರೆ ದಂಡ ಪ್ರಕ್ರಿಯಾ ಸಂಹಿತೆ, 1973ರ 8ನೇ ಪ್ರಕರಣದ ಮೇರೆಗೆ ಮಹಾನಗರ ಪ್ರದೇಶವೆಂದು ಘೋಷಿಸಲಾದ ನಗರ ಅಥವಾ ಪಟ್ಟಣ;

(3) "ಸ್ಥಳ" ಎಂದರೆ ಹತ್ತು ಸಾವಿರ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳು ಮತ್ತು ನಗರಗಳ ಸಂದರ್ಭದಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಬರುವ ಪ್ರದೇಶ ಮತ್ತು ಇತರ ಸಂದರ್ಭಗಳಲ್ಲಿ ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದಂಥ ಸ್ಥಳೀಯ ಪ್ರಾಧಿಕಾರದ ಕೇಂದ್ರದಿಂದ ಐದು ಕಿಲೋ ಮೀಟರುಗಳ ವ್ಯಾಸದೊಳಗಿನ ಪ್ರದೇಶ.

**28. ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡುವುದು.–** ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ (6ನೇ ಪ್ರಕರಣಕ್ಕೆ ಮತ್ತು 7ನೇ ಪ್ರಕರಣದ ಮೇರೆಗೆ ಅವನು ಮಾಡಿದ ಆದೇಶಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು) 27ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಷರತ್ತುಗಳನ್ನು ನಿವೇಶನವು ಪೂರೈಸುತ್ತದೆ ಎಂದು ಮನದಟ್ಟಾದರೆ, ಸಿನಿಮಾ ಕಟ್ಟಡದ ನಿರ್ಮಾಣಕ್ಕಾಗಿ 'ಫ' ನಮೂನೆಯಲ್ಲಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಅರ್ಜಿದಾರನಿಗೆ ಕೊಡತಕ್ಕದ್ದು. ಆ ಪ್ರಮಾಣಪತ್ರವು ಕಟ್ಟಡದ ನಿರ್ಮಾಣದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಈ ಪರವಾಗಿ ಮಾಡಲಾದ ಅರ್ಜಿಯ ಮೇಲೆ, ಅರ್ಜಿದಾರನು ಆ ಕಟ್ಟಡವನ್ನು ಸದರಿ ಎರಡು ವರ್ಷಗಳ ಅವಧಿಯೊಳಗೆ ಸಿಂಧುವಾದ ಕಾರಣಗಳಿಗಾಗಿ ಪೂರ್ಣಗೊಳಿಸಲು ಅಗಲಿಲ್ಲವೆಂದು ಮನದಟ್ಟಾದರೆ, ಅಂಥ ಪ್ರಮಾಣಪತ್ರದ ಸಿಂಧುತ್ವವನ್ನು ಒಂದು ವರ್ಷವನ್ನು ಮೀರದ ಅವಧಿಗಾಗಿ ವಿಸ್ತರಿಸಬಹುದು.

(2) ಅರ್ಜಿದಾರನು ಪ್ರಮಾಣಪತ್ರದ ದಿನಾಂಕದಿಂದ ಹನ್ನೆರಡು ತಿಂಗಳೊಳಗೆ ಆ ಕಟ್ಟಡದ ನಿರ್ಮಾಣವನ್ನು ಪ್ರಾರಂಭಿಸತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಈ ಬಗ್ಗೆ ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ, ಅರ್ಜಿದಾರನು ಸದರಿ ಅವಧಿಯೊಳಗಾಗಿ ಆ ಕಟ್ಟಡದ ನಿರ್ಮಾಣವನ್ನು ಸಿಂಧುವಾದ ಕಾರಣಗಳಿಗಾಗಿ ಪ್ರಾರಂಭಿಸಲು ಆಗಲಿಲ್ಲವೆಂದು ಅವನಿಗೆ ಮನದಟ್ಟಾದರೆ, ಆ ಅವಧಿಯನ್ನು, ಆರು ತಿಂಗಳನ್ನು ಮೀರದ ಅವಧಿಗೆ ವಿಸ್ತರಿಸಬಹುದು. ಕಟ್ಟಡದ ನಿರ್ಮಾಣವನ್ನು ಸದರಿ ಹನ್ನೆರಡು ತಿಂಗಳುಗಳ ಅವಧಿ ಅಥವಾ ವಿಸ್ತರಿಸಲಾದ ಅವಧಿ ಯಾವುದಾದರೂ ಇದ್ದರೆ ಆ ಅವಧಿಯೊಳಗೆ ಪ್ರಾರಂಭಿಸದಿದ್ದರೆ, ಆ ಪ್ರಮಾಣಪತ್ರವು ಸದರಿ ಅವಧಿ ಮುಕ್ತಾಯವಾದ ಮೇಲೆ ಕೊನೆಗೊಳ್ಳತಕ್ಕದ್ದು.

**29. ನಿರಾಕ್ಷೇಪಣಾ ಪ್ರಮಾಣಪತ್ರಕ್ಕಾಗಿ ಫೀಜು.–** ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿನ ಅರ್ಜಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು ಒಂದು ನೂರು ರೂಪಾಯಿಗಳಾಗಿರತಕ್ಕದ್ದು.

## ಅಧ್ಯಾಯ – V

## ಕಟ್ಟಡ ನಕ್ಷೆಯ ಅನುಮೋದನೆ

**30. ಅನುಮೋದನೆಗಾಗಿ ಅರ್ಜಿ.–** ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ, ಅರ್ಜಿದಾರನು, ಅನುಮೋದಿತ ನಿವೇಶನದ ಮೇಲೆ ನಿರ್ಮಿಸಬೇಕಾದ ಕಟ್ಟಡದ ನಕ್ಷೆಯ ಅನುಮೋದನೆಗಾಗಿನ ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು, ಅಂಥ ಅರ್ಜಿಯೊಂದಿಗೆ,–

(i) 28ನೇ ನಿಯಮದ ಮೇರೆಗೆ ಕೊಟ್ಟ ನಿರಾಕ್ಷೇಪಣಾ ಪ್ರಮಾಣಪತ್ರದ ಒಂದು ಪ್ರತಿ;

(ii) ಅನುಮೋದಿತ ನಿವೇಶನ ನಕ್ಷೆಯ ಒಂದು ಪ್ರತಿ;

(iii) ಆ ಆವರಣದ ಮತ್ತು ಅದರ ಮೇಲಿನ ನಿರ್ಮಿತಿಗಳ ಮತ್ತು ಕಟ್ಟಡಗಳ ಯಾವುದೇ ಮಾನಕ ಅಳತೆಯ ಅನುರೇಖನಗಳಿಂದ ತೆಗೆದುಕೊಂಡ ಪ್ರಿಂಟುಗಳ ಮೇಲೆ 1:100 ಕಡಿಮೆಯಲ್ಲದ ಪ್ರಮಾಣಕ್ಕೆ ಸರಿಯಾಗಿ ಬರೆದ, ಮತ್ತು,–

(ಕ) ಮೀಲಿ ಮೀಟರುಗಳಲ್ಲಿ ಎಲ್ಲ ಉದ್ದಗಲಗಳು ಮತ್ತು ವಿಭಿನ್ನ ಬಣ್ಣಗಳಲ್ಲಿ ವಿಭಿನ್ನ ಸಾಮಗ್ರಿಗಳನ್ನು ಸೂಚಿಸುವ ನಿರ್ಮಾಣ ಸಾಮಗ್ರಿಗಳು ಮತ್ತು ಗೋಡೆಗಳು, ತೊಲೆಗಳು, ಸ್ಕಾಟಲಿಂಗ್‌ಗಳು ಮತ್ತು ಟ್ರಸ್ಸುಗಳ ಉದ್ದಗಲಗಳು, ಆಳವನ್ನು ಅಂಕಿಗಳಲ್ಲಿ ಕೊಡುವ;

(ಖ) ಎಲ್ಲಾ ಪಾವಟಿಗೆಗಳ ಅಗಲ ಮತ್ತು ಮೆಟ್ಟಿಲುಗಳ ಎತ್ತರ ಮತ್ತು ಮೇಲ್‌ತಳದೊಂದಿಗೆ ಪ್ರತಿಯೊಂದು ಸಾಲಿನಲ್ಲಿ ಮೆಟ್ಟಿಲುಗಳ ಸಂಖ್ಯೆ, ಮೊಗಸಾಲೆಗಳು, ದಾರಿಗಳ ತೆರಪುಗಳು, ಹಜಾರಗಳು ಮತ್ತು ನಡುದಾರಿಗಳು ಹಾಗೂ ಎಲ್ಲಾ ಗ್ಯಾಲರಿಗಳ, ಅಂತಸ್ತುಗಳ, ಬಾಲ್ಕನಿಗಳ ಮತ್ತು ವೇದಿಕೆಗಳ ಎತ್ತರ ಮತ್ತು ನಿರ್ಮಾಣ;

(ಗ) ಎಲ್ಲಾ ಬಾಗಿಲುಗಳು, ಕಿಟಕಿಗಳು ಮತ್ತು ವಾಯುಸಂಚಾರಕಗಳ ನಿರ್ಮಾಣ ಮತ್ತು ಅವು ತೆರೆಯುವಂಥ ರೀತಿ ಮತ್ತು ವಾಯುಸಂಚಾರಗಳ ಉದ್ದೇಶಿತ ವ್ಯವಸ್ಥೆಯನ್ನು ತೋರಿಸುವ ಅವುಗಳ ಗಾತ್ರಗಳು;

(ಘ) ಉದ್ದೇಶಿತ ಆಸನಗಳ ವ್ಯವಸ್ಥೆ;

(ಙ) ನೆಲ ಅಂತಸ್ತು ಮತ್ತು ಅಂತಸ್ತುಗಳು, ಗ್ಯಾಲರಿಗಳು, ಅಥವಾ ಬಾಲ್ಕನಿಗಳಿಗೆ ಪ್ರತ್ಯಕವಾಗಿ ಚದರ ಮೀಟರುಗಳಲ್ಲಿ ಪ್ರತಿ ಕಟ್ಟಡದ ಮೇಲ್ಭಾಯ ಪ್ರದೇಶ;

(ಚ) ಪಾವಟಿಗೆಗಳು;

(ಛ) ಶೌಚಗೃಹಗಳು ಮತ್ತು ಮೂತ್ರಿಗಳು;

(ಜ) ನಕ್ಷೆಗಳು ಮತ್ತು ವಿಭಾಗಗಳಲ್ಲಿನ ಕಟ್ಟಡದ ವಿವಿಧ ಭಾಗಗಳ ಮಟ್ಟಗಳು, ಮತ್ತು

(ಝ) ಪ್ರೊಜೆಕ್ಟರುಗಳು, ಪರದೆ, ಧ್ವನಿಪೆಟ್ಟಿಗೆ ಮತ್ತು ಇತರ ಸ್ಥಾವರಗಳು ಮತ್ತು ಸಾಧನ ಸಾಮಗ್ರಿ ವಿವರಗಳು ಮತ್ತು ಸ್ಥಾನಗಳು

–ಇವುಗಳನ್ನು ಸ್ಪಷ್ಟವಾಗಿ ತೋರಿಸುವ ಪೂರ್ಣ ನಕ್ಷೆಗಳು, ಉನ್ನತಿ ಮತ್ತು ವಿಭಾಗಗಳನ್ನು ನಾಲ್ಕು ಪ್ರತಿಗಳಲ್ಲಿ (ಬಟ್ಟೆಯ ಮೇಲೆ ಅಂಟಿಸಿದ ಒಂದು ಪ್ರತಿಯೊಂದಿಗೆ); ಮತ್ತು

(iv) ಚಲನಚಿತ್ರ ಸಲಕರಣೆಗಳ ಮತ್ತು ವಿಭಿನ್ನ ಬಣ್ಣಗಳಲ್ಲಿ ವಿಭಿನ್ನ ವಿದ್ಯುತ್ ಪ್ರವಾಹ ಮಾರ್ಗಗಳನ್ನು ಸೂಚಿಸುವ ಎಲ್ಲಾ ವೈರಿಂಗ್‌ಗಳು, ದೀಪದ ಪಾಯಿಂಟುಗಳು, ಸ್ವಿಚ್ಚುಗಳು, ಪ್ಲಗ್ಗುಗಳು ಮತ್ತು ವಿತರಣಾ ಮೀಟರು ಬೋರ್ಡುಗಳು ಮತ್ತು ಇತರ ವಿದ್ಯುತ್ ಯಂತ್ರ ಸಾಮಗ್ರಿಯೊಂದಿಗೆ ಪೂರ್ಣ ಸ್ಥಾಪನೆಗಳು ಇರುವ ಸ್ಥಳವನ್ನು ತೋರಿಸಿ 1:100ಕ್ಕಿಂತ ಕಡಿಮೆಯಲ್ಲದ ಪ್ರಮಾಣಕ್ಕೆ ಬರೆದ ನಾಲ್ಕು ಪ್ರತಿಗಳಲ್ಲಿ ನಕ್ಷೆಗಳು; ಮತ್ತು (ಬಟ್ಟೆಯ ಮೇಲೆ ಮತ್ತು ಅಂಟಿಸಿದ ಒಂದು ಪ್ರತಿಯೊಂದಿಗೆ)

(v) ಎಲ್ಲ ತಳಪಾಯಗಳು, ಕಂಬಗಳು, ಸ್ತಂಭಗಳು, ಊರುಗಂಬಗಳು, ಹಾಸುಮರಗಳು, ತೊಲೆಗಳು, ಹಾಸುಗಲ್ಲುಗಳು, ದೂಲಗಳು ಮತ್ತು ಟ್ರಸ್ಸುಗಳಲ್ಲಿ ಬರುವ ಭಾರಗಳು ಮತ್ತು ಸಂಭವಿಸುವ ಒತ್ತಡಗಳನ್ನು ತೋರಿಸುವ ತ್ರಿಪ್ರತಿಯಲ್ಲಿ ಉಪಯೋಗಿಸಬೇಕಾದ ಸಾಮಗ್ರಿಗಳನ್ನು ಮತ್ತು ಲೆಕ್ಕಗಳೊಂದಿಗೆ ಅಳವಡಿಸಿಕೊಳ್ಳಬೇಕಾದ ನಿರ್ಮಾಣದ ವಿಧಾನವನ್ನು ಸಾಕಷ್ಟು ವಿವರಿಸುವ ನಿರ್ವಹಿಸಬೇಕಾಗಿರುವ ಕಾಮಗಾರಿಗಳ ವಿವರವಾದ ತಪಶೀಲುಗಳು ತ್ರಿಪ್ರತಿಗಳಲ್ಲಿ, ಅಂಥ ಲೆಕ್ಕಗಳನ್ನು ಪದವೀಧರ ಇಂಜಿನಿಯರ್ ಅಥವಾ ವಿನ್ಯಾಸ ಇಂಜಿನಿಯರ್ ಅಥವಾ ವಿನ್ಯಾಸ ವೃತ್ತಿಗೆ ಅಥವಾ ಅರ್ಹ ವಾಸ್ತುಶಿಲ್ಪಿಯು ಸರಿಯಾಗಿದೆಯೆಂದು ಪ್ರಮಾಣೀಕರಿಸಬೇಕು.

**31. ನಕ್ಷೆಗಳ ಅನುಮೋದನೆಗಾಗಿನ ಪ್ರಕ್ರಿಯೆ, ಇತ್ಯಾದಿ.–** (1) ಅರ್ಜಿಯನ್ನು ಮತ್ತು 30ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ವಿವರಗಳನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಕಟ್ಟಡದ ನಕ್ಷೆಗಳು ಈ ನಿಯಮಗಳ ಅಗತ್ಯಗಳನ್ನು ಪೂರೈಸುವುವೇ ಹೇಗೆ ಮತ್ತು ಕಟ್ಟಲು ಉದ್ದೇಶಿಸಿದ ಕಟ್ಟಡವು ಸಿನಿಮಾಕ್ಕಾಗಿ ಸೂಕ್ತವಾಗಿದೆಯೇ ಹೇಗೆ ಎಂಬ ಬಗ್ಗೆ ಸಂಬಂಧಪಟ್ಟ ನಿರ್ದೇಶಕರು ಮತ್ತು ಸ್ಥಳೀಯ ಪ್ರಾಧಿಕಾರಗಳೊಂದಿಗೆ ಏಕಕಾಲದಲ್ಲಿ ಸಮಾಲೋಚಿಸತಕ್ಕದ್ದು.

(2) ನಗರ ಯೋಜನಾ ನಿರ್ದೇಶಕರ ಮತ್ತು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಅಭಿಪ್ರಾಯವನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಸಂಬಂಧಪಟ್ಟ ದಾಖಲೆಗಳನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಗೆ ಕಳುಹಿಸತಕ್ಕದ್ದು. ಎಕ್ಸಿಕ್ಯೂಟಿವ್ ಇಂಜಿನಿಯರ್‌ನು ವಿನ್ಯಾಸದ ಲೆಕ್ಕಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಶೀಲನೆಯ ತರುವಾಯ ತಪಶೀಲು ಮತ್ತು ವಿನ್ಯಾಸಗಳಿಗೆ ಅನುಸಾರವಾಗಿ ಕಟ್ಟಡವನ್ನು ನಿರ್ಮಿಸಿದರೆ ಸಾಕಷ್ಟು ದೃಢವಾಗಿರುತ್ತದೆಯೆಂದು ಅವನಿಗೆ ಮನದಟ್ಟಾದರೆ ಅವನು ಅಭಿಪ್ರಾಯ ಕೋರಿಕೆಯ ತರುವಾಯ ಒಂದು ತಿಂಗಳೊಳಗೆ ತಪಶೀಲು ಮತ್ತು ವಿನ್ಯಾಸಗಳು ಅಂಗೀಕಾರಾರ್ಹವಾಗಿವೆಯೆಂಬ ಪ್ರಮಾಣಪತ್ರವನ್ನು ಲಗತ್ತಿಸಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಅವನ ವರದಿಯನ್ನು ಕಳುಹಿಸಿಕೊಡತಕ್ಕದ್ದು.

(3) ಆ ತರುವಾಯ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ವಿದ್ಯುತ್ ಪರಿಶೀಲಕ ಅಥವಾ ಉಪ ವಿದ್ಯುತ್ ಪರಿಶೀಲಕನಿಗೆ ದಾಖಲೆಗಳನ್ನು ಕಳುಹಿಸತಕ್ಕದ್ದು. ಅವನು ಚಲನಚಿತ್ರ ಸ್ಥಾವರ ವಿದ್ಯುಚ್ಛಕ್ತಿ ಸ್ಥಾಪನೆಗೆ ಸಂಬಂಧಿಸಿದ ವಿನ್ಯಾಸಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಶೀಲನೆಯ ತರುವಾಯ ಚಲನಚಿತ್ರ ಸ್ಥಾವರ, ವಿದ್ಯುತ್ ಸ್ಥಾಪನೆಗಳು ಆಗ್ನಿ ಮತ್ತು ಇತರ ವಿಷಯಗಳ ಸಂರಕ್ಷಣೆಗೆ ಸಂಬಂಧಪಟ್ಟ ಈ ನಿಯಮಗಳ ಉಪಬಂಧಗಳಿಗನುಸಾರವಾಗಿವೆಯೆಂದು ಅವನಿಗೆ ಮನದಟ್ಟಾದರೆ, ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಈ ಬಗ್ಗೆ ಒಂದು ವರದಿಯನ್ನು ಕಳುಹಿಸತಕ್ಕದ್ದು.

**32. ನಕ್ಷೆಯ ಅನುಮೋದನೆಯ ಮಂಜೂರಾತಿ ಅಥವಾ ನಿರಾಕರಣೆ.–** 31ನೇ ನಿಯಮದ ಮೇರೆಗೆ ವರದಿಗಳನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಈ ನಿಯಮಗಳ ಎಲ್ಲ ಅಗತ್ಯಗಳನ್ನು ಪೂರೈಸಲಾಗಿದೆ ಎಂದು ಮನದಟ್ಟಾದರೆ, ಕಟ್ಟಡದ ನಕ್ಷೆಯನ್ನು ಅನುಮೋದಿಸತಕ್ಕದ್ದು ಮತ್ತು ಲೈಸೆನ್ಸನ್ನು ಮಂಜೂರ್ಮಾಡತಕ್ಕದ್ದು. ಈ ನಿಯಮಗಳ ಅಗತ್ಯತೆಯನ್ನು ಪೂರೈಸಲಾಗಿಲ್ಲ ಎಂದು ಅವನಿಗೆ ಮನದಟ್ಟಾದರೆ, ಅವನು ಲೈಸೆನ್ಸನ್ನು ನಿರಾಕರಿಸತಕ್ಕದ್ದು. ಈ ನಿಯಮದ ಮೇರೆಗಿನ ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಆದೇಶವು ಬರಹದಲ್ಲಿರತಕ್ಕದ್ದು ಮತ್ತು ತೀರ್ಮಾನಕ್ಕಾಗಿನ ಕಾರಣಗಳನ್ನು ಸಂಕ್ಷಿಪ್ತವಾಗಿ ಅದು ಒಳಗೊಂಡಿರತಕ್ಕದ್ದು.

**33. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಆದೇಶವನ್ನು ತಿಳಿಸತಕ್ಕದ್ದು.–** 31ನೇ ನಿಯಮದ (3)ನೇ ಉಪ ನಿಯಮದಲ್ಲಿ ಉಲ್ಲೇಖಿಸಲಾದ ವರದಿಯನ್ನು ಸ್ವೀಕರಿಸಿದ ತರುವಾಯ, ಮೂವತ್ತು ದಿವಸಗಳ ಅವಧಿಯೊಳಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅವನ ಆದೇಶವನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

## ಅಧ್ಯಾಯ – VI

## ಕಟ್ಟಡ ನಿರ್ಮಾಣದ ಅನುಮೋದನೆ ಮತ್ತು ಲೈಸೆನ್ಸನ್ನು ಕೊಡುವುದು

**34. ನಿರ್ಮಿಸಿದ ಕಟ್ಟಡದ ಅನುಮೋದನೆ.–** (1) ಲೈಸೆನ್ಸ್‌ದಾರನು,–

(ಕ) ಎಕ್ಸಿಕ್ಯೂಟಿವ್ ಇಂಜಿನಿಯರನಿಗೆ (3)ನೇ ನಿಯಮದ ಮೇರೆಗೆ ದೃಢತೆಯ ಬಗ್ಗೆ ಪ್ರಮಾಣಪತ್ರವನ್ನು ಕೊಡಲು ಅವನನ್ನು ಸಾಧ್ಯಗೊಳಿಸಲು ಸಿನಿಮಾದ ಮತ್ತು ಸಹಾಯಕ ಕಟ್ಟಡಗಳ ನಿರ್ಮಾಣವನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿವಸಗಳಿಗೆ ಮುಂಚೆ; ಮತ್ತು

(ಖ) ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅಥವಾ ಉಪವಿದ್ಯುಚ್ಛಕ್ತಿ ಪರಿಶೀಲಕನಿಗೆ (4)ನೇ ಉಪ–ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪ್ರಮಾಣಪತ್ರವನ್ನು ಕೊಡಲು ಅವನನ್ನು ಸಾಧ್ಯಗೊಳಿಸಲು ವಿದ್ಯುಚ್ಛಕ್ತಿ ಸ್ಥಾಪನೆಗಾಗಿ ವೈರಿಂಗ್‌ನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿವಸಗಳ ಮುಂಚೆ,

–ನೋಟೀಸನ್ನು ಕೊಡತಕ್ಕದ್ದು, ಅಂಥ ನೋಟೀಸಿನೊಂದಿಗೆ ನಿಯಮಿಸಿದ ಫೀಜನ್ನು (8)ನೇ ಉಪ–ನಿಯಮದ ಮೇರೆಗೆ ಸಂದಾಯ ಮಾಡಿರುವುದಕ್ಕಾಗಿನ ಖಜಾನೆ ಚಲನ್ನು ಇರತಕ್ಕದ್ದು.

(2) ಅನುಮೋದಿತ ನಕ್ಷೆಗೆ ಅನುಸಾರವಾಗಿ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಯು ಪೂರ್ಣಗೊಂಡ ಮೇಲೆ, ಅರ್ಜಿದಾರನು ಅರ್ಜಿಯನ್ನು ಮಾಡಿಕೊಂಡ ತರುವಾಯ,–

(ಕ) 43ರಿಂದ 56ನೇ ನಿಯಮಗಳ ಉಪಬಂಧಗಳಲ್ಲಿ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ, ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಂದ ಪ್ರಮಾಣಪತ್ರವನ್ನು;

(ಖ) 4, 48, 51(9), 57 ರಿಂದ 73, 77(5) ಮತ್ತು 82ನೇ ನಿಯಮಗಳ ಉಪಬಂಧಗಳಲ್ಲಿ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನಿಂದ "ಜ" ನಮೂನೆಯಲ್ಲಿ ಪ್ರಮಾಣಪತ್ರವನ್ನು;

(ಗ) IXನೇ ಅಧ್ಯಾಯದಲ್ಲಿ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ಅಗ್ನಿಶಾಮಕ ದಳದ ನಿರ್ದೇಶಕ ಅಥವಾ ಅಗ್ನಿಶಾಮಕ ದಳದ ನಿರ್ದೇಶಕನು ನಾಮನಿರ್ದೇಶನ ಮಾಡಬಹುದಾದ ಉಪ ಅಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ಯಾರೇ ಅಗ್ನಿಶಾಮಕ ಅಧಿಕಾರಿಯಿಂದ ಪ್ರಮಾಣಪತ್ರವನ್ನು;

(ಫ) ಆರೋಗ್ಯ ಮತ್ತು ಆವರಣಗಳ ಸ್ವಚ್ಛತೆಗೆ ಸಂಬಂಧಪಟ್ಟ ಉಪಬಂಧಗಳು ಒಳಗೊಳ್ಳುವ ವಿಷಯಗಳಿಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಯೋಜನಾ ಸೇವೆಗಳ ನಿರ್ದೇಶಕ ಅಥವಾ ಜಿಲ್ಲಾ ಆರೋಗ್ಯ ಅಧಿಕಾರಿಯ ದರ್ಜೆಗೆ ಕಡಿಮೆಯಿಲ್ಲದ ಅವನ ನಾಮನಿರ್ದೇಶಿತನಿಂದ ಪ್ರಮಾಣಪತ್ರವನ್ನು

–ಪಡೆಯತಕ್ಕದ್ದು.

(3) ಎಕ್ಸಿಕ್ಯೂಟಿವ್ ಇಂಜಿನಿಯರನಿಗೆ ಕಟ್ಟಡದ ರಚನಾ ದೃಢತೆಯ ಬಗ್ಗೆ ಮನದಟ್ಟಾದರೆ, ಅವನು ಆ ಬಗ್ಗೆ ಪ್ರಮಾಣಪತ್ರವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು ಅವನು ಪ್ರಮಾಣೀಕರಿಸಬಹುದಾದಂಥ ಅವಧಿಗಾಗಿ ಸಿಂಧುವಾಗಿರತಕ್ಕದ್ದು, ಅಂಥ ಪ್ರಮಾಣಪತ್ರವನ್ನು (2)ನೇ ಉಪ–ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳೊಳಗೆ ಕೊಡತಕ್ಕದ್ದು.

(4) (2)ನೇ ಉಪ–ನಿಯಮದ ಮೇರೆಗೆ ಅರ್ಜಿಗಳನ್ನು ಸ್ವೀಕರಿಸಿದ ತರುವಾಯ, ಒಂದು ತಿಂಗಳೊಳಗೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನು ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಸಾಧನ ಸಾಮಗ್ರಿಗಳ ಸೂಕ್ತತೆಯ ಬಗ್ಗೆ ಅವನಿಗೆ ಮನದಟ್ಟಾದರೆ, ಆ ಬಗ್ಗೆ ಪ್ರಮಾಣಪತ್ರವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು "ಜ್ಞ" ನಮೂನೆಯಲ್ಲಿರತಕ್ಕದ್ದು ಮತ್ತು ಅದನ್ನು ಕೊಟ್ಟ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅದು ಸಿಂಧುವಾಗಿರತಕ್ಕದ್ದು.

ಪರಂತು, ವಿದ್ಯುಚ್ಛಕ್ತಿ ಪರಿಶೀಲಕನು ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಆ ಅವಧಿಯನ್ನು ಕಡಿಮೆ ಮಾಡಬಹುದು;

(4ಕ) ಆಗ್ನಿಶಾಮಕ ದಳದ ನಿರ್ದೇಶಕ ಅಥವಾ ಅವನಿಂದ ನಾಮನಿರ್ದೇಶಿತನಾದ ಯಾರೇ ಇತರ ಅಗ್ನಿಶಾಮಕ ಅಧಿಕಾರಿಗೆ, IXನೇ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ಅಗ್ನಿಶಾಮಕ ಉಪಕರಣಗಳು ಅಥವಾ ಇತರ ಸಾಧನ–ಸಾಮಗ್ರಿಗಳನ್ನು ಸಿನಿಮಾ ಕಟ್ಟಡಕ್ಕೆ ಒದಗಿಸಲಾಗಿದೆ ಎಂದು ಮನದಟ್ಟಾದರೆ, ಆ ಬಗ್ಗೆ ಪ್ರಮಾಣ ಪತ್ರವನ್ನು, ಅರ್ಜಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗಾಗಿ ಅವನು ಕೊಡತಕ್ಕದ್ದು.

(4ಖ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕನಿಗೆ ಅಥವಾ ಅವನಿಂದ ನಾಮನಿರ್ದೇಶಿನಾದ ಯಾರೇ ಅಧಿಕಾರಿಗೆ ಆರೋಗ್ಯಪಾಲನೆ ಮತ್ತು ಆವರಣಗಳ ಸ್ವಚ್ಛತೆಗಾಗಿ ಮಾಡಿದ ವ್ಯವಸ್ಥೆಗಳ ಬಗ್ಗೆ ಮನದಟ್ಟಾದರೆ, ಅವನು ಅರ್ಜಿಯನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳೊಳಗೆ ಆ ಬಗ್ಗೆ ಪ್ರಮಾಣಪತ್ರವನ್ನು ಕೊಡತಕ್ಕದ್ದು.

(5) ಕಟ್ಟಡವನ್ನು ಪೂರ್ಣಗೊಳಿಸಿದ ಮೇಲೆ, ಎಕ್ಸಿಕ್ಯೂಟಿವ್ ಇಂಜಿನಿಯರನು, 3ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದ ಪ್ರಮಾಣಪತ್ರದ ಪ್ರತಿಯನ್ನು ನಿರ್ದೇಶಕನಿಗೆ ಕಳುಹಿಸಿಕೊಡತಕ್ಕದ್ದು.

(6) (3), (4), (4ಕ) ಮತ್ತು (4ಖ) ಉಪನಿಯಮಗಳ ಮೇರೆಗೆ ಪ್ರಮಾಣಪತ್ರವನ್ನು ಕೊಡುವ ಉದ್ದೇಶಗಳಿಗಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಮುಖ್ಯ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಆ ಪ್ರದೇಶಕ್ಕಾಗಿ ಸರ್ಕಾರವು ನೇಮಕ ಮಾಡಿದ ಅವನ ಯಾರೇ ಸಹಾಯಕ ಅಥವಾ ಅಗ್ನಿಶಾಮಕ ದಳದ ನಿರ್ದೇಶಕ ಅಥವಾ ಅವನಿಂದ ನಾಮನಿರ್ದೇಶಿತನಾದ ಯಾರೇ ಅಗ್ನಿಶಾಮಕ ಅಧಿಕಾರಿ, ಅಥವಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕ ಅಥವಾ ಅವನಿಂದ ನಾಮನಿರ್ದೇಶಿತನಾದ ಇತರ ಯಾರೇ ಅಧಿಕಾರಿಯು, ನಿರ್ಮಿಸಲಾಗುತ್ತಿರುವಂಥ ಸಿನಿಮಾ ಕಟ್ಟಡವನ್ನು ಪ್ರವೇಶಿಸಬಹುದು ಮತ್ತು ಅದನ್ನು ಪರಿಶೀಲಿಸಬಹುದು.

(7) ಅರ್ಜಿದಾರನು, ರಚನಾ ಧೃಢತೆ ಪ್ರಮಾಣಪತ್ರವನ್ನು ಕೊಡಲು ನಿರಾಕರಿಸುವ ಎಕ್ಸಿಕ್ಯೂಟಿವ್ ಇಂಜಿನಿಯರ್‌ನ ಆದೇಶದಿಂದ ಬಾಧಿತನಾದರೆ, ಸಂಬಂಧಪಟ್ಟ ಸೂಪರಿಂಟೆಂಡಿಂಗ್ ಇಂಜಿನಿಯರ್‌ನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(8) (4)ನೇ ಉಪ–ನಿಯಮದ ಮೇರೆಗೆ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ಮತ್ತು ಸಿನಿಮಾಗಳ ಪರಿಶೀಲನೆಗಾಗಿ ಫೀಜು ಮುನ್ನೂರು ರೂಪಾಯಿಗಳಾಗಿರತಕ್ಕದ್ದು, ಅದನ್ನು "XIII ಇತರ ತೆರಿಗೆಗಳು ಮತ್ತು ಸುಂಕಗಳು (ಖ) ವಿದ್ಯುಚ್ಛಕ್ತಿ ಸುಂಕಗಳಿಂದ ಸ್ವೀಕೃತಿಗಳು (ಜ್ಞ) ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ರ ಮೇರೆಗೆ ವಾರ್ಷಿಕ ಪರಿಶೀಲನೆಗಾಗಿ ಮತ್ತು ಸಿನಿಮಾಗಳ ಪರಿಶೀಲನೆಗಾಗಿ ಫೀಜುಗಳು" ಎಂಬ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವುದರ ಮೂಲಕ ಸರ್ಕಾರಕ್ಕೆ ಅಥವಾ ವಿದ್ಯುಚ್ಛಕ್ತಿ ಪರಿಶೀಲಕನ ಕಛೇರಿಯಲ್ಲಿ ನಗದು ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(9) ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರದ ದ್ವಿಪ್ರತಿಯನ್ನು ವಿದ್ಯುಚ್ಛಕ್ತಿ ಪರಿಶೀಲಕನು ಹತ್ತು ರೂಪಾಯಿಗಳ ಫೀಜಿನ ಸಂದಾಯದ ಮೇಲೆ ಕೊಡಬಹುದು.

**35. ಲೈಸೆನ್ಸಿಗಾಗಿ ಅರ್ಜಿ.–** 34ನೇ ನಿಯಮದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರಗಳನ್ನು ಪಡೆದ ತರುವಾಯ ಅರ್ಜಿದಾರನು ಲೈಸನ್ಸನ್ನು ಕೊಡುವುದಕ್ಕಾಗಿ ಬರಹದಲ್ಲಿ ಅವನ ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಸಲ್ಲಿಸಬಹುದು, ಅರ್ಜಿಯೊಂದಿಗೆ,–

(ಕ) 34ನೇ ನಿಯಮದ (3)ನೇ ಉಪ–ನಿಯಮದ ಮೇರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರನು ಕೊಟ್ಟ ಪ್ರಮಾಣಪತ್ರ ;

(ಖ) 34ನೇ ನಿಯಮದ (4)ನೇ ಉಪ–ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನು ಕೊಟ್ಟ ಪ್ರಮಾಣಪತ್ರ;

(ಖಖ) 34ನೇ ನಿಯಮದ (4ಕ) ಉಪ–ನಿಯಮದ ಮೇರೆಗೆ ಅಗ್ನಿಶಾಮಕ ದಳದ ನಿರ್ದೇಶಕ ಅಥವಾ ಅವನಿಂದ ನಾಮನಿರ್ದೇಶಿತನಾದ ಯಾರೇ ಇತರ ಅಗ್ನಿಶಾಮಕ ಅಧಿಕಾರಿಯು ಕೊಟ್ಟ ಪ್ರಮಾಣಪತ್ರ;

(ಖಖಖ) 34ನೇ ನಿಯಮದ (4ಖ) ಉಪ–ನಿಯಮದ ಮೇರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕ ಅಥವಾ ಅವನಿಂದ ನಾಮನಿರ್ದೇಶಿತನಾದ ಇತರ ಯಾರೇ ಅಧಿಕಾರಿಯು ಕೊಟ್ಟ ಪ್ರಮಾಣಪತ್ರ;

(ಗ) ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಸ್ಥಿರೀಕರಿಸುವ ಸರಬರಾಜುದಾರರು ಕೊಟ್ಟ ವಿವರ ಪತ್ರದ ಜೊತೆಗೆ ಆ ಪ್ರತಿಯೊಂದು ಆಟದಲ್ಲಿ, ಪ್ರದರ್ಶನಕ್ಕಾಗಿ ಚಲನಚಿತ್ರ ವಿಭಾಗದ ಪೂರ್ವಾನುಮೋದನೆಯೊಂದಿಗೆ ಕೇಂದ್ರ ಸರ್ಕಾರವು ಅನುಮೋದಿಸಿದ ಚಲನಚಿತ್ರಗಳನ್ನು ಪಡೆಯುವುದಕ್ಕಾಗಿ ಅಂಥ ಎಲ್ಲಾ ವ್ಯವಸ್ಥೆಗಳನ್ನು ಅವನು ಪೂರ್ಣಗೊಳಿಸಿದ್ದಾನೆಂದು ಅರ್ಜಿದಾರನ ಘೋಷಣೆಯು; ಮತ್ತು

(ಘ) 38ನೇ ನಿಯಮದಲ್ಲಿ ನಿಯಮಿಸಿದ ದರಗಳ ಲೈಸೆನ್ಸ್ ಫೀಜನ್ನು ಸಂದಾಯ ಮಾಡಿರುವುದಕ್ಕಾಗಿ ಖಜಾನೆ ಚಲನು,

–ಇವುಗಳು ಇರತಕ್ಕದ್ದು.

**36. ಲೈಸನ್ಸಿನ ಮಂಜೂರಾತಿ ಅಥವಾ ನಿರಾಕರಣೆ.–** (1) ಲೈಸೆನ್ಸಿಗಾಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಅನುಮೋದಿತ ನಕ್ಷೆಗಳ ಪ್ರಕಾರ ಎಲ್ಲಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ ಮತ್ತು ಚಲನಚಿತ್ರದ ಪ್ರದರ್ಶನಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಅವನಿಗೆ ಮನದಟ್ಟಾದರೆ, ಅದನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ವಾರಗಳೊಳಗೆ ಅರ್ಜಿದಾರನಿಗೆ 'ಚ' ನಮೂನೆಯಲ್ಲಿ ಲೈಸೆನ್ಸನ್ನು ಕೊಡತಕ್ಕದ್ದು ಅಥವಾ ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಅಂಥ ಲೈಸೆನ್ಸ್ ಕೊಡುವುದನ್ನು ನಿರಾಕರಿಸತಕ್ಕದ್ದು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸಿಗಾಗಿನ ಅರ್ಜಿಯನ್ನು ನಿರಾಕ್ಷೇಪಣಾ ಪ್ರಮಾಣಪತ್ರದ ಸಿಂಧುತ್ವದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮಾಡಿಕೊಳ್ಳಲಾಗಿಲ್ಲದಿದ್ದರೆ, ಲೈಸೆನ್ಸ್ ಕೊಡುವುದನ್ನು ನಿರಾಕರಿಸಬಹುದು. ಈ ಉದ್ದೇಶಕ್ಕಾಗಿ ಲೈಸೆನ್ಸ್ ಕೊಡುವ

ಪ್ರಾಧಿಕಾರಿಯು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸ್ಥಳೀಯ ಪರಿಶೀಲನೆಯನ್ನು ಮಾಡಬಹುದು, 32ನೇ ನಿಯಮದಲ್ಲಿ ಉಲ್ಲೇಖಿಸಿದ ನಕ್ಷೆ ಮತ್ತು ರೇಖಾಚಿತ್ರಗಳ ಪ್ರತಿಯನ್ನು ಲೈಸೆನ್ಸ್‌ಗೆ ಲಗತ್ತಿಸತಕ್ಕದ್ದು.

(2) ಹತ್ತು ರೂಪಾಯಿಗಳ ಫೀಜನ್ನು ಸಂದಾಯ ಮಾಡಿದ ಮೇಲೆ ದ್ವಿಪ್ರತಿ ಲೈಸೆನ್ಸ್‌ನ್ನು ಕೊಡಬಹುದು.

**37. ಲೈಸೆನ್ಸಿನ ಅವಧಿ.–** 36ನೇ ನಿಯಮದ ಮೇರೆಗೆ ಕೊಟ್ಟ ಎಲ್ಲಾ ಲೈಸೆನ್ಸ್‌ಗಳು ಆ ಲೈಸೆನ್ಸನ್ನು ಕೊಟ್ಟ ದಿನಾಂಕದಿಂದ ಮೂರು ವರ್ಷಗಳ ಅವಧಿಗಾಗಿ ಸಿಂಧುವಾಗಿರತಕ್ಕದ್ದು:

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ, ಮೂರು ವರ್ಷಗಳಿಗಿಂತ ಕಡಿಮೇ ಅವಧಿಗಾಗಿ ಲೈಸನ್ಸನ್ನು ಕೊಡಬಹುದು.

**38. ಲೈಸೆನ್ಸ್‌ಗಾಗಿ ಫೀಜು.–** ಲೈಸೆನ್ಸ್ ಫೀಜು, ಒಂದು ನೂರು ಚದರ ಮೀಟರುಗಳು ಅಥವಾ ಅದಕ್ಕೂ ಕಡಿಮೆ ಪ್ರದೇಶಕ್ಕೆ ಒಂದು ನೂರು ರೂಪಾಯಿಗಳ ದರದಲ್ಲಿ, ಒಂದು ನೂರು ಚದರ ಮೀಟರುಗಳನ್ನು ಮೀರುವ ಪ್ರತಿ ಐವತ್ತು ಚರದ ಮೀಟರು ಅಥವಾ ಅದರ ಭಾಗಕ್ಕೆ ಐವತ್ತು ರೂಪಾಯಿಗಳ ಹೆಚ್ಚುವರಿ ಫೀಜಿನೊಂದಿಗೆ ದರದಲ್ಲಿರತಕ್ಕದ್ದು:

ಪರಂತು, ಲೈಸನ್ಸನ್ನು ಮೂರು ವರ್ಷಗಳಿಗಿಂತ ಕಡಿಮೆ ಅವಧಿಗಾಗಿ ಕೊಟ್ಟಿದ್ದರೆ, ಲೈಸೆನ್ಸ್ ಫೀಜನ್ನು ಪ್ರಮಾಣಾನುಸಾರವಾಗಿ ಕಡಿಮೆ ಮಾಡತಕ್ಕದ್ದು.

**ವಿವರಣೆ.–** ಈ ನಿಯಮದ ಉದ್ದೇಶಕ್ಕಾಗಿ **'**ಪ್ರದೇಶ**'** ಎಂದರೆ ಸಭಾಂಗಣದ ಪ್ರದೇಶ.

**39. ಸ್ಥಳಕ್ಕೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳು.–** 40 ಮತ್ತು 41ನೇ ನಿಯಮಗಳಿಗೆ ಅನುಸಾರವಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಪೂರ್ವಾನುಮೋದನೆಯಿಂದ ಹೊರತು, ಲೈಸೆನ್ಸನ್ನು ಕೊಡಲಾಗಿರುವಂಥ ಆ ಸಿನಿಮಾ ಕಟ್ಟಡಕ್ಕೆ ಸಂಬಂಧಿಸಿದಂತೆ ಯಾವುದೇ ತರುವಾಯದ ಸೇರ್ಪಡೆಯನ್ನು ಅಥವಾ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

**40. ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಅನುಮೋದನೆಗಾಗಿ ಪ್ರಕ್ರಿಯೆ.–** ಲೈಸೆನ್ಸ್‌ದಾರನು, ಲೈಸೆನ್ಸ್ ಪಡೆದ ಸ್ಥಳ ಅಥವಾ ಅದರ ಯಾವುದೇ ಭಾಗಕ್ಕೆ ಸೇರ್ಪಡೆಯನ್ನು ಅಥವಾ ಬದಲಾವಣೆಯನ್ನು ಮಾಡುವ ಅವನ ಉದ್ದೇಶದ ಬಗ್ಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು, ಅಂಥ ನೋಟೀಸು, ಉದ್ದೇಶಿತ ಸೇರ್ಪಡೆಗಳು ಅಥವಾ ಬದಲಾವಣೆಗಳನ್ನು ಸಪಷ್ಟವಾಗಿ ತಿಳಿಸತಕ್ಕದ್ದು ಮತ್ತು ಅದರ ಜೊತೆಗೆ ಮೂಲ ಪ್ರಮಾಣಪತ್ರಗಳ ಜೊತೆಗೆ 30ನೇ ನಿಯಮದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ನಾಲ್ಕು ಪ್ರತಿಗಳಲ್ಲಿ ಬರೆಯಲಾದ, ನಿರ್ವಹಿಸಬೇಕಾದ ಕಾಮಗಾರಿಯ ಸಂಪೂರ್ಣ ನಕ್ಷೆಗಳು, ಉನ್ನತಿಗಳು ಮತ್ತು ವಿಭಾಗಗಳು ಮತ್ತು ಬ್ಲಾಕ್ ನಕ್ಷೆಗಳು ಮತ್ತು ತಪಶೀಲುಗಳೊಂದಿಗೆ ಇರತಕ್ಕದ್ದು. ಈ ಉದ್ದೇಶಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಪಡೆಯುವುದು ಅವಶ್ಯವಿರತಕ್ಕದ್ದಲ್ಲ. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಉದ್ದೇಶಿತ ಸೇರ್ಪಡೆಗಳು ಮತ್ತು ಬದಲಾವಣೆಗಳಿಗೆ ಮಂಜೂರಾತಿಯನ್ನು ಕೊಡುವುದಕ್ಕೆ ಮುಂಚೆ 31ನೇ ನಿಯಮದ (1)ನೇ ಮತ್ತು (2)ನೇ ಉಪ–ನಿಯಮಗಳಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಆದಷ್ಟುಮಟ್ಟಿಗೆ ಅನುಸರಿಸತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು 31ನೇ ನಿಯಮದ ಮೇರೆಗೆ ಅಭಿಪ್ರಾಯವನ್ನು ಸ್ವೀಕರಿಸಿದ ತರುವಾಯ ಅಂಥ ಸೇರ್ಪಡೆಗಳು ಅಥವಾ ಬದಲಾವಣೆಗಳ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

**41. ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ತರುವಾಯದ ಸೇರ್ಪಡೆಗಳು ಮತ್ತು ಬದಲಾವಣೆಗಳ ಮಂಜೂರಾತಿಗಾಗಿ ಪ್ರಕ್ರಿಯೆ.–** (1)ನೇ ಲೈಸೆನ್ಸ್‌ದಾರನು, ಲೇಸೆನ್ಸ್ ಕೊಡುವ ಪ್ರಾಧಿಕಾರಿಗೆ ವಿದ್ಯುಚ್ಛಕ್ತಿ ಸ್ಥಾಪನೆಗಳು ಅಥವಾ ಸಲಕರಣೆಗಳಿಗೆ ಸೇರ್ಪಡೆ ಅಥವಾ ಬದಲಾವಣೆಗಳನ್ನು ಮಾಡುವ ಅವನ ಉದ್ದೇಶದ ಬಗ್ಗೆ ಬರಹದಲ್ಲಿ ನೋಟೀಸ್ ಕೊಡತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಂಥ ನೋಟೀಸನ್ನು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನಿಂದ ಅಧಿಕೃತವಾದ ಯಾರೇ ವ್ಯಕ್ತಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನಿಂದ ಅಧಿಕೃತವಾದ ಯಾರೇ ವ್ಯಕ್ತಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ

ಅವನಿಂದ ಅಧಿಕೃತನಾದ ಯಾರೇ ವ್ಯಕ್ತಿಯು ಪರಿಶೀಲನೆಯ ತರುವಾಯ ಉದ್ದೇಶಿತ ಬದಲಾವಣೆಗಳು ಅಥವಾ ಸೇರ್ಪಡೆಗಳು ಈ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿವೆ ಎಂದು ವರದಿ ಮಾಡಿದಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು 5ನೇ ನಿಯಮದ (3)ನೇ ಉಪ-ನಿಯಮದಲ್ಲಿ ವಿಧಿಸಿದ ಪ್ರಕ್ರಿಯೆಯನ್ನು ಆದಷ್ಟುಮಟ್ಟಿಗೆ ಅನುಸರಿಸಿ ಆ ಪ್ರಸ್ತಾವನೆಯನ್ನು ಅನುಮೋದಿಸತಕ್ಕದ್ದು.

(2) ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಮತ್ತಷ್ಟು ಪರಿಶೀಲನೆಯು ಅವಶ್ಯವಿದ್ದರೆ ಅವನು ಅದಕ್ಕಾಗಿ ನಿರ್ದೇಶಿಸಬಹುದು ಮತ್ತು ಅರವತ್ತು ರೂಪಾಯಿಗಳ ಫೀಜನ್ನು ಮುಂಗಡವಾಗಿ ಸಂದಾಯ ಮಾಡಲು ಲೈಸೆನ್ಸ್‌ದಾರನನ್ನು ಅಗತ್ಯಪಡಿಸಬಹುದು.

(3) ಎರಡು ನಿಯತಕಾಲಿಕ ಪರಿಶೀಲನೆಗಳ ನಡುವಣ ಮಧ್ಯಂತರದಲ್ಲ 5ನೇ ನಿಯಮದ (2)ನೇ ಉಪನಿಯಮದ ಮೇರೆಗೆ ಹೊರಡಿಸಿದ ಅಂಥ ಅಧಿಕಾರಿಯ ಯಾವುದೇ ಬರಹದಲ್ಲಿನ ಆದೇಶಗಳನ್ನು ಅವನು ನಿರ್ದಿಷ್ಟಪಡಿಸಿದ ಕಾಲದೊಳಗೆ ಕಾರ್ಯಗತಗೊಳಿಸುವಲ್ಲಿ ಪ್ರಭಾರದಲ್ಲಿರುವ ವ್ಯಕ್ತಿಯ ಉಪೇಕ್ಷೆ ಅಥವಾ ವಿಫಲತೆಯ ಕಾರಣದಿಂದಾಗಿ ಯಾವುದೇ ಮತ್ತಷ್ಟು ಪರಿಶೀಲನೆಯು ಅವಶ್ಯವೆಂದು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಅಭಿಪ್ರಾಯಪಟ್ಟರೆ ಅಥವಾ ಯಾವುದೇ ಪರಿಶೀಲನೆ ಮಾಡುವಲ್ಲಿ, ಸ್ಥಾಪನೆಯು ದೋಷಪೂರ್ಣವೆಂದು ಕಂಡುಬಂದರೆ, ಅಂಥ ಮತ್ತಷ್ಟು ಪರಿಶೀಲನೆಗಾಗಿ ಇಪ್ಪತ್ತೊಂದು ರೂಪಾಯಿ ಫೀಜನ್ನು ವಿಧಿಸತಕ್ಕದು ಮತ್ತು ಅಂಥ ಫೀಜನ್ನು ಲೈಸೆನ್ಸ್‌ದಾರನು ಸಂದಾಯ ಮಾಡತಕ್ಕದ್ದು.

**41ಕ. ಒಂದು ದಿವಸದಲ್ಲಿ ಅನುಮತಿಸಲಾದ ಪ್ರದರ್ಶನಗಳ ಸಂಖ್ಯೆ.–** ಯಾರೇ ಲೈಸೆನ್ಸ್‌ದಾರನು ಒಂದು ದಿವಸದಲ್ಲಿ ನಾಲ್ಕಕ್ಕಿಂತ ಹೆಚ್ಚು ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸತಕ್ಕದ್ದಲ್ಲ.

## ಭಾಗ – III

## ಕಟ್ಟಡಗಳಿಗೆ ಸಂಬಂಧಿಸಿದಂತೆ ಉಪಬಂಧ

## ಅಧ್ಯಾಯ –VII

## ಕಟ್ಟಡಗಳು ಮತ್ತು ಸ್ಥಾಪನೆಗಳು

**42. ಪರಿಭಾಷೆಗಳು.–** ಈ ಅಧ್ಯಾಯದ ಉದ್ದೇಶಕ್ಕಾಗಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ಹಜಾರುಗಳು"** ಎಂದರೆ, ಆಸನಗಳ ಗುಂಪಿನೊಳಕ್ಕೆ ಅಥವಾ ಅದರಿಂದ ಹೊರಕ್ಕೆ (ನಡೆದು ಹೋಗುವುದಕ್ಕಾಗಿ) ಆಸನವನ್ನು ಒದಗಿಸಿದ ಪ್ರದೇಶದ ಒಳಗೆ ಮತ್ತು ಸುತ್ತಲೂ ಬಿಟ್ಟಿರುವ ನಡುದಾರಿ ;

(2) **"ವೇದಿಕೆ ಹಿಂಬದಿ ಗೋಡೆ"** ಎಂದರೆ, ಪ್ರೇಕ್ಷಕರಿಗೆ ಅಭಿಮುಖವಾಗಿರುವ ವೇದಿಕೆಯ ಹಿಂದೆ ಇರುವ ಗೊಡೆ;

(3) **"ಬಾಲ್ಕನಿ ಅಂತಸ್ತು"** ಎಂದರೆ, ಹಿಂಬದಿಯ ಗೋಡೆಯಿಂದ ಆಚೆ ಮುಂಚಾಚಿರಬಹುದಾದ ಅಥವಾ ಮುಂಚಾಚದಿರಬಹುದಾದಂಥ ಹೆಚ್ಚಿನ ಪ್ರೇಕ್ಷಕರು ಕುಳಿತುಕೊಳ್ಳುವುದಕ್ಕಾಗಿ ಚಿತ್ರಮಂದಿರದ ಭಾಗದ ಮೇಲೆ ನಿರ್ಮಿಸಿದ ಹೆಚ್ಚುವರಿ ಅಂತಸ್ತು;

(4) **"ಬಾಲ್ಕನಿ ತಳ"** ಎಂದರೆ, ಹಾಲಿನೊಳಗೆ ಬಾಲ್ಕನಿಯ ಕೆಳಮೇಲ್ಮೈ ಪ್ರದೇಶ ;

(5) **"ಚಲನಚಿತ್ರ ಆವರಣಗಳು"** ಎಂದರೆ, ಸಿನಿಮಾವನ್ನು ನಡೆಸುವುದಕ್ಕಾಗಿ ಲೈಸೆನ್ಸ್ ಪಡೆದ ಇಡೀ ನಿವೇಶನದ ಪ್ರದೇಶ ಮತ್ತು ಸಿನಿಮಾ ಕಟ್ಟಡ ಮತ್ತು ನಿವೇಶನದೊಳಗೆ ಇತರ ಲಗತ್ತುಗಳನ್ನು ಅದು ಒಳಗೊಳ್ಳುತ್ತದೆ;

(5ಕ) "ನಡವೆ", "ದಾರಿ", "ವರಾಂಡ" ಎಂದರೆ, ಸಿನಿಮಾ ಕಟ್ಟಡಗಳಿಗೆ, ಆದರೆ ಸಭಾಂಗಣದ ಹೊರಗೆ ವ್ಯಕ್ತಿಗಳ ಓಡಾಟದ ಉದ್ದೇಶಕ್ಕಾಗಿ ಒದಗಿಸಿದ ಜಾಗ;

(6) "ಕುಷ್ ಹಾಲ್" ಎಂದರೆ, ಟಿಕೆಟ್ಟುಗಳನ್ನು ಕೊಳ್ಳುವ ಮತ್ತು ನಿರೀಕ್ಷಣೆಯಂಥ ಉದ್ದೇಶಗಳಿಗಾಗಿ ಮುಖ್ಯ ಹಾಲಿನ ಹೊರಗಡೆಯ ಪ್ರಥಮ ಪ್ರವೇಶದ ಹಾಲ್ (ಇದನ್ನು ಆರಾಮ ಕೋಣೆಯ ಜೊತೆಗೆ ಒದಗಿಸಬಹುದಾದ);

(7) "ಆರಾಮ ಕೋಣೆ" ಎಂದರೆ, ಪ್ರೇಕ್ಷಕರು ಸಿನಿಮಾ ಮಂದಿರದೊಳಕ್ಕೆ ವಾಸ್ತವವಾಗಿ ಪ್ರವೇಶಿಸುವುದಕ್ಕೆ ಮುಂಚೆ ಕಾಯಬಹುದಾದಂಥ ಪ್ರವೇಶದ ಮುಂದಿರುವ ಹಾಲು ;

(8) "ಮೊಗಸಾಲೆ" ಎಂದರೆ, ಒಂದು ಅಥವಾ ಹೆಚ್ಚು ಕೊಠಡಿಗಳಿಗೆ ಹೋಗುವಂಥ ದಾರಿ ಅಥವಾ ಮುಂಗೋಣಿ;

(9) "ಆರಾಮಶಾಲೆ" ಎಂದರೆ, ಕುಳಿತುಕೊಳ್ಳುವ ಕೊಠಡಿ ಅಥವಾ ವಿಶ್ರಾಂತಿಯ ಸ್ಥಳ;

(10) "ರಂಗಸ್ಥಳದ ಮುಂಭಾಗ" ಎಂದರೆ, ರಂಗಸ್ಥಳದ ಮೇಲಿನ ಪ್ರದರ್ಶನವನ್ನು ಪ್ರೇಕ್ಷಕರು ವೀಕ್ಷಿಸುವಂಥ ರಂಗಸ್ಥಳ ಮತ್ತು ಮುಂದಿರದ ನಡುವಣ ಒಟ್ಟು ತೆರೆದ ಸ್ಥಳ;

(11) "ರಂಗಸ್ಥಳದ ಮುಂಭಾಗದ ಚಾಚು" ಎಂದರೆ, ಪರದೆಯನ್ನು ಕೆಳಗಿಳಿಸಿದಾಗಲೂ ಪ್ರೇಕ್ಷಕರಿಗೆ ಕಾಣುವ ರಂಗಸ್ಥಳದ ಮುಂಭಾಗದ ಪ್ರದೇಶ ಮತ್ತು ಅದು ಪರದೆಯನ್ನು ಮತ್ತು ಅದನ್ನು ಹಿಡಿದುಕೊಂಡಿರುವ ಚೌಕಟ್ಟಿನ ಕಮಾನನ್ನು ಒಳಗೊಳ್ಳುತ್ತದೆ;

(12) "ಆಸನಗಳ ಶ್ರೇಣೀಕರಣ" ಎಂದರೆ, ಪ್ರೇಕ್ಷಕರಿಗೆ ರಂಗಸ್ಥಳದ ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸುನಿಶ್ಚಿತಗೊಳಿಸುವ ಹಾಗೆ ರಂಗಸ್ಥಳದಿಂದ ಆಚೆಗೆ ಅನುಕ್ರಮ ಸಾಲುಗಳಲ್ಲಿ ಆಸನಗಳ ಮಟ್ಟಗಳಲ್ಲಿ ಕ್ರಮೇಣ ಏರಿಕೆ;

(13) "ಹಿಂಭಾಗದ ಗೋಡೆ" ಎಂದರೆ, ಹಾಲಿನ ಕೊನೆಯಲ್ಲಿ ರಂಗಸ್ಥಳಕ್ಕೆ ಅಭಿಮುಖವಾಗಿರುವ ಗೋಡೆ;

(14) "ರಂಗಸ್ಥಳದ ಮುಂಭಾಗದ ಅಗ್ರಭಾಗ" ಎಂದರೆ, ರಂಗಸ್ಥಳದ ಮುಂಭಾಗದ ಆಚೆ ಮಂದಿರದೊಳಕ್ಕೆ ವಿಸ್ತರಿಸುವ ರಂಗಸ್ಥಳದ ಭಾಗ;

(15) "ಆಸನಗಳ ವ್ಯವಸ್ಥೆ" ಎಂದರೆ, ಪ್ರತಿಯೊಂದು ಅನುಕ್ರಮ ಸಾಲಿನಲ್ಲಿ ಅರ್ಧ ಆಸನ ಇಳಿಜಾರು ಮಟ್ಟದ ಮೂಲಕ (ಪ್ರತಿಯೊಂದು ಸಾಲಿಗೆ ಸಂಬಂಧಪಟ್ಟಂತೆ) ಆಸನಗಳನ್ನು ಸ್ಥಾನಾಂತರ ಮಾಡುವ ರೀತಿಯಲ್ಲಿ ಆಸನಗಳ ಏರ್ಪಾಟುಗಳು.

**43. ನಿವೇಶನದ ಬಗ್ಗೆ ಪೂರೈಸಬೇಕಾಗಿರುವ ಷರತ್ತುಗಳು.–** (1) ನಿವೇಶನದ ಮಟ್ಟ ಅಥವಾ ಅದು ಇರುವ ಸ್ಥಳದ ಕಾರಣದಿಂದ ಅದರೊಳಕ್ಕೆ ಹರಿದು ಬರುವ ಮಳೆಯ ನೀರು ಸೇರುವಂಥ ಯಾವುದೇ ನಿವೇಶನವನ್ನು ಕಟ್ಟಡದ ನಿರ್ಮಾಣಕ್ಕಾಗಿ ಮಳೆ ನೀರಿನ ಮಾರ್ಗ, ಲಭ್ಯವಿರುವುದು ಯಾವುದಾದರೂ ಇದ್ದರೆ ಅದರೊಳಕ್ಕೆ ಹರಿಸುವ ಮೂಲಕವಾಗಿಯಾಗಲಿ ಅಥವಾ ಮರಳು ಅಥವಾ ಕೊಳೆಯದೆ ಇರುವ ಸಾಮಗ್ರಿಗಳ ಪದರಗಳನ್ನು ಹಾಕುವ ಮೂಲಕ ಆ ನಿವೇಶನದ ಮಟ್ಟವನ್ನು ಸಾಕಷ್ಟು ಎತ್ತರಕ್ಕೆ ಏರಿಸುವ ಮೂಲಕವಾಗಿಯಾಗಲಿ ಪರಿಣಾಮಕಾರಿಯಾಗಿ ಪ್ರವಾಹವನ್ನು ತಡೆಗಟ್ಟಲು ಏರ್ಪಾಟುಗಳನ್ನು ಮಾಡಿದ ಹೊರತು ಉಪಯೋಗಿಸತಕ್ಕದ್ದಲ್ಲ.

(2) ಯಾವುದರಲ್ಲಿ ಆ ಕಟ್ಟಡದ ನೆಲದ ಮತ್ತು ಗೋಡೆಗಳ ತೇವವು ಅನಿವಾರ್ಯವಾಗುವಂತೆ ನೀರಿನಿಂದ ಆ ಮಣ್ಣು ಮತ್ತು ಒಳ ಮಣ್ಣು ನೆನೆದಿರುವುದೋ ಆ ಯಾವುದೇ ನಿವೇಶನವನ್ನು ಕಟ್ಟಡದ ನಿರ್ಮಾಣಕ್ಕಾಗಿ, ಕಟ್ಟಡದ ಮೇಲ್ಭಾಯದಲ್ಲಿ ತೇವ ನಿರೋಧಕ ವರಸೆಯನ್ನು ಅತಿ ಕೆಳಗಿನ ಅಂತಸ್ತಿನ ಮಟ್ಟಕ್ಕಿಂತ ಎತ್ತರವಾಗಿಲ್ಲದಂತೆ ಒದಗಿಸಿದ ಹೊರತು ಮತ್ತು ಆ ಕಟ್ಟಡದ ನೆಲದಲ್ಲಿ ಪರಿಣಾಮಕಾರಿಯಾಗಿ ತೇವವು

ಹೆಚ್ಚಾಗುವುದನ್ನು ತಡೆಗಟ್ಟುವಂಥ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅನುಮೋದಿಸಿದ ಸಾಮಗ್ರಿಯಿಂದ ನೆಲಗಟ್ಟು ಮಾಡಿದ ಹೊರತು ಉಪಯೋಗಿಸತಕ್ಕದ್ದಲ್ಲ.

(3) ಕಟ್ಟಡವನ್ನು ನಿರ್ಮಿಸುವ, ಪುನರ್‌ನಿರ್ಮಿಸುವ ಅಥವಾ ಮಾರ್ಪಡಿಸುವ ಅಥವಾ ಅದಕ್ಕೆ ಸೇರ್ಪಡೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಕೆರೆ, ಜಲಾಶಯ, ಜಲಮಾರ್ಗ, ನದಿ, ಸಿಹಿನೀರಿನ ಕಾಲುವೆ ಅಥವಾ ಬಾವಿಯಿಂದ ಹದಿನೈದು ಮೀಟರುಗಳೊಳಗಿರುವಲ್ಲೆಲ್ಲಾ ಅಂಥ ಕೆರೆ, ಜಲಾಶಯ, ಜಲಮಾರ್ಗ, ನದಿ, ಸಿಹಿ ನೀರು ಕಾಲುವೆ, ಅಥವಾ ಬಾವಿಯ ಯಾವುದೇ ಮಾಲಿನ್ಯವನ್ನು ಮತ್ತು ಅದರೊಳಕ್ಕೆ ಕಟ್ಟಡದ ಚರಂಡಿಯು ಹಾಯುವುದರ ಯಾವುದೇ ಆಪಾಯವನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರ್ದೇಶಿಸಬಹುದಾದಂಥ ಕ್ರಮಗಳನ್ನು ಕಾರ್ಯಗತಗೊಳಿಸತಕ್ಕದ್ದು.

**44. ಸಿನಿಮಾ ಆವರಣವನ್ನು ಆವೃತಗೊಳಿಸತಕ್ಕದ್ದು.–** ಸಿನಿಮಾ ಆವರಣವನ್ನು ಅನುಕ್ರಮವಾಗಿ 350 ಎಮ್‌ಎಮ್, 400 ಎಮ್‌ಎಮ್, 300 ಎಮ್‌ಎಮ್ ಮತ್ತು 150 ಎಮ್‌ಎಮ್‌ಗಳಿಗಿಂತ ಕಡಿಮೆಯಿಲ್ಲದಂಥ ಮತ್ತು ಸಾಕಷ್ಟು ಎತ್ತರದ ಇಟ್ಟಿಗೆ, ಕಲ್ಲು, ಕಾಂಕ್ರೀಟ್ ಮತ್ತು ಆರ್‌ಸಿಸಿಯ ಸರಿಯಾದ ಹೊರ ಅಥವಾ ವಿಭಾಗಿಸುವ ಗೋಡೆಗಳಿಂದ ಆವೃತವಾಗಿರತಕ್ಕದ್ದು.

**45. ಕಟ್ಟಡ ಸಾಮಗ್ರಿಗಳು.–** ಸಿನಿಮಾ ಆವರಣದೊಳಗಿನ ಎಲ್ಲಾ ಕಟ್ಟಡಗಳು ಮತ್ತು ನಿರ್ಮಿತಿಗಳನ್ನು ಮತ್ತು ನೆಲ, ಛಾವಣಿ, ಛತ್ತು, ಬಾಲ್ಕನಿಗಳು, ಗ್ಯಾಲರಿಗಳು, ಅಂತಸ್ತುಗಳು, ವಿಭಾಜಕಗಳು ಮತ್ತು ಅಂಥ ಕಟ್ಟಡಗಳಲ್ಲಿನ ಪ್ರತಿಯೊಂದು ಕೊಠಡಿ, ಮೊಗಸಾಲೆ, ನಡವೆ ದಾರಿಗಳು ಮತ್ತು ಪಾವಟಿಗೆಗಳು ಮತ್ತು ಪ್ರದರ್ಶನದ ಕಾಲದಲ್ಲಿ ಸಾರ್ವಜನಿಕರ ಅನನ್ಯ ಉಪಯೋಗಕ್ಕಾಗಿ ಉದ್ದೇಶಿಸಿದ ನಿರ್ಮಿತಿಗಳನ್ನು ಅಗ್ನಿ ಪ್ರತಿರೋಧಕ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು ಮತ್ತು ಎಲ್ಲಾ ಉಕ್ಕು ಮತ್ತು ಎರಕ ಕಬ್ಬಿಣದ ಟ್ರಾಸ್ಸುಗಳು ಮತ್ತು ಸ್ತಂಭಗಳು, ಕಂಬಗಳು, ಊರುಗಂಬಗಳನ್ನು ಅಗ್ನಿ ಪ್ರತಿರೋಧಕ ಸಾಮಗ್ರಿಗಳಿಂದ ಸಂರಕ್ಷಿಸತಕ್ಕದ್ದು, ಎಂದರೆ 'ಖ' ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂಥವುಗಳಾದ ಐಎಸ್ ತಪಶೀಲುಗಳು:

ಪರಂತು, ಛತ್ತು ಮತ್ತು ಗೋಡೆಗಳಿಗಾಗಿ ಈ ಕೆಳಕಂಡ ಸಾಮಗ್ರಿಗಳನ್ನು ಉಪಯೋಗಿಸಬಹುದು, ಎಂದರೆ:–

(1) ತೂತು ಕೊರೆಯದ ಅಥವಾ ತೂತು ಕೊರೆದ ಸಂಕುಚಿಸಿದ ಬೆತ್ತ ಅಥವಾ ಮರದ ನಾರಿನ ಹಲಗೆ;

(2) ಮರದ ಕಣದ ಹಲಗೆ;

(3) ಸಂಕುಚಿಸಿದ ಹತ್ತರಿ ಹುಡಿ;

(4) ಖನಿಜ ಅಥವಾ ಗಾಜು ತುಪ್ಪಟ ಕ್ವಿಲ್ಟ್ಸ್ ನಟ್ಟುಗಳು;

(5) ಖನಿಜ ಅಥವಾ ಸಂಕುಚಿಸಿದ ಗಾಜು ತುಪ್ಪಟ ಹೆಂಚುಗಳು;

(6) ಖನಿಜ ಅಥವಾ ಗಾಜು ತುಪ್ಪಟ ಕ್ವಿಲ್ಟ್ ಅಥವಾ ಹಲಗೆಯಿಂದ ಕೂಡಿದ ತೂತು ಕೊರೆದ ಹಲಗೆ, ಕಾಡ್‌ಬೋರ್ಡ್, ಆಸ್ಬೆಸ್ಟಾಸ್ ಹಲಗೆ ಅಥವಾ ಮೆಟಲ್ ಷೀಟ್‌ನ ಸಂಯುಕ್ತ ಘಟಕಗಳು;

(7) ಗಾಳಿ ಆಧಾರಿತ ಗಟ್ಟಿ ಹಲಗೆ ತೇಗದ ಪದರದಿಂದ ರಚಿಸಿದ ವಿಶೇಷ ಹೀರುಕಗಳು;

(8) ತೂತು ಕೊರೆದ ನಾರಿನ ಹಲಗೆ ಆಧಾರಿತ ತೂತು ಕೊರೆದ ಗಟ್ಟಿ ಹಲಗೆಯ ಸಂಯುಕ್ತ ಘಟಕಗಳು;

(9) ಪ್ಲಾಸ್ಟರ್ ಆಫ್ ಪ್ಯಾರಿಸ್, ಇತ್ಯಾದಿಗಳು ಮತ್ತು ಲೈಸೆನ್ ಕೊಡುವ ಪ್ರಾಧಿಕಾರಿಯು ಅನುಮೋದಿಸಿದ ಇತರ ಅಂಥವೇ ಸಾಮಗ್ರಿಗಳು.

**46. ಸಭಾಂಗಣ.–** (1) ಸಭಾಂಗಣದ ನೆಲವು ನೆಲ ಅಂತಸ್ತಿನಲ್ಲಿರತಕ್ಕದ್ದು ಮತ್ತು ಅದು ಮೊದಲ ಅಂತಸ್ತಿನಲ್ಲಿರುವಲ್ಲಿ, ಬೆಂಕಿ ಮತ್ತು ಇತರ ಅಪಘಾತಗಳ ಸಂದರ್ಭದಲ್ಲಿ ಮುಖ್ಯ ಆರಾಮಕೋಣೆ ಮತ್ತು ಪಕ್ಕದ

ವರಾಂಡಗಳಿಂದ ಖುಲ್ಲಾ ಜಾಗಕ್ಕೆ ಹೋಗುವುದಕ್ಕಾಗಿ ಸಾರ್ವಜನಿಕರು ಸುಲಭವಾಗಿ ಹೊರಗೆ ಹೋಗುವುದಕ್ಕಾಗಿ ಸಭಾಂಗಣದ ನೆಲಪ್ರದೇಶದ ಪ್ರತಿಯೊಂದು ಐವತ್ತು ಮೀಟರುಗಳಿಗಾಗಿ ಒಂದು ಮೀಟರು ರೇಖಾತ್ಮಕ ಅಗಲದ ಪಾವಟಿಗೆಗಳಂತೆ ಒದಗಿಸತಕ್ಕದ್ದು. ಎಲ್ಲಾ ಅಂತಸ್ತುಗಳು, ಗ್ಯಾಲರಿಗಳು ಮತ್ತು ಸಮತಟ್ಟುಗಳನ್ನು ಸಭಾಂಗಣದ ಮುಂಭಾಗದ ಮೇಲೆ ಮತ್ತು ಅದರ ಪಾರ್ಶ್ವಗಳಲ್ಲಿ ಸರಿಯಾಗಿ ವಿತರಿಸಿರಬೇಕು.

(2) ನೆಲವು, ಪರದೆಯು ಚೆನ್ನಾಗಿ ಕಾಣುವಂತೆ ಮಾಡಲು ಇಳಿಜಾರು ಆಗಿರತಕ್ಕದ್ದು, ಅದು 1:4ರ ಪ್ರಮಾಣಕ್ಕಿಂತ ಹೆಚ್ಚು ಕಡಿದಾಗಿರತಕ್ಕದ್ದಲ್ಲ ಮತ್ತು ಅಂತಸ್ತಿನ ಯಾವುದೇ ಭಾಗವು ಹೊಂದಿಕೊಂಡಿರುವ ವರಾಂಡಕ್ಕಿಂತ 0.9 ಮೀಟರುಗಳಿಗಿಂತ ಹೆಚ್ಚಿಗೆ ಕೆಳಗಿರತಕ್ಕದ್ದಲ್ಲ ಅಥವಾ 1:3 ಮೀಟರುಗಳಿಗಿಂತ ಎತ್ತರವಾಗಿರತಕ್ಕದ್ದಲ್ಲ.

(3) ಪರದೆಯು ಚೆನ್ನಾಗಿ ಕಾಣುವಂತೆ ಮಾಡಲು ಸಭಾಂಗಣದ ನೆಲವು ಇಳುಜಾರು ಆಗಿರತಕ್ಕದ್ದು ಮತ್ತು ಸಭಾಂಗಣದಲ್ಲಿನ ಇಳಕಲು ನೆಲದ ಉನ್ನತಿ ಕೋನವು 1:7ಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ ಮತ್ತು 1:4ಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ ಮತ್ತು ನೆಲದ ಯಾವುದೇ ಭಾಗವು ಹೊಂದಿಕೊಂಡಿರುವ ದಾರಿ ಅಥವಾ ವರಾಂಡಕ್ಕಿಂತ ಒಂದು ಮೀಟರಿಗಿಂತ ಹೆಚ್ಚಿಗೆ ಕೆಳಗೆ ಅಥವಾ ಒಂದೂವರೆ ಮೀಟರುಗಳಿಗಿಂತ ಹೆಚ್ಚಿಗೆ ಎತ್ತರವಾಗಿರತಕ್ಕದ್ದಲ್ಲ.

(4) ಸಭಾಂಗಣಕ್ಕಾಗಿನ ಕೃತಕ ಛಾವಣಿ ಛತ್ತು ಯಾವುದಾದರೂ ಇದ್ದರೆ ಅದು 45ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಸಾಮಗ್ರಿಗಳದ್ದಾಗಿರತಕ್ಕದ್ದು.

**47. ಅಂತಸ್ತುಗಳು, ಗ್ಯಾಲರಿಗಳು ಮತ್ತು ಬಾಲ್ಕನಿಗಳು.–** ಮೊದಲನೇ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯು ಸಭಾಂಗಣದ ಯಾವುದೇ ಭಾಗದ ಮೇಲೆ ವ್ಯಾಪಿಸಿರುವಲ್ಲಿ ಸಭಾಂಗಣದ ನೆಲ ಮತ್ತು ತಳದ ಛತ್ತು ಅಥವಾ ಅಂಥ ಅಂತಸ್ತು ಗ್ಯಾಲರಿ ಅಥವಾ ಬಾಲ್ಕನಿಯ ನಡುವಣ ಎತ್ತರವು ಯಾವುದೇ ಭಾಗದಲ್ಲಿ ಮೂರು ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ, ಆ ಅಂತಸ್ತುಗಳ ಗ್ಯಾಲರಿ ಅಥವಾ ಬಾಲ್ಕನಿಯ ಅತಿ ಎತ್ತರದ ಭಾಗದ ನೆಲ ಮತ್ತು ಅದರ ಮೇಲಿನ ಛಾವಣಿ ಛತ್ತಿನ ಅತಿ ಕೆಳಗಿನ ಭಾಗದ ನಡುವಣ ಎತ್ತರವು ಯಾವುದೇ ಭಾಗದಲ್ಲಿ 3.35 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ. ಯಾವುದೇ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿ ಮತ್ತು ಅದರ ಮೇಲಿನ ಇನ್ನೊಂದು ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯ ತಳದ ಛತ್ತಿನ ನಡುವಣ ಎತ್ತರವು ಯಾವುದೇ ಸಂದರ್ಭದಲ್ಲಿ 2.75 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**48. ಪ್ರೊಜೆಕ್ಷನ್ ಕೊಠಡಿ.–** (1) ಚಲನಚಿತ್ರಗ್ರಾಹಕ ಯಂತ್ರದ ಸಲಕರಣೆಯನ್ನು ಅಗ್ನಿನಿರೋಧಕ ಸಾಮಗ್ರಿಯಿಂದ ದೃಢವಾಗಿ ನಿರ್ಮಿಸಲಾದ ಕೊಠಡಿಯಲ್ಲಿ ಇಡತಕ್ಕದ್ದು. ಅದರ ನೆಲವು 67ನೇ ನಿಯಮದ ಮೇರೆಗೆ ಕೇಬಲ್ಲುಗಳನ್ನು ಹೂಳಲು ಕನಿಷ್ಠ ಐವತ್ತು ಮಿಲಿ ಮೀಟರುಗಳ ಪೂರ್ಣಗೊಳಿಸಿದ ನೆಲವನ್ನು ಹೊಂದಿರತಕ್ಕದ್ದು.

(2) ಪ್ರೊಜೆಕ್ಷನ್ ಮತ್ತು ಪ್ರೇಕ್ಷಕ ಕಿಂಡಿಗಳನ್ನು ಹೊರತುಪಡಿಸಿ, ಪ್ರೊಜೆಕ್ಷನ್ ಕೊಠಡಿಯು ಸಭಾಂಗಣದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರತಕ್ಕದ್ದಲ್ಲ.

(3) ಒಂದು ಪ್ರೊಜೆಕ್ಟರನ್ನು ಹೊಂದಿರುವ ಪ್ರೊಜೆಕ್ಷನ್ ಕೊಠಡಿಯು ಅತಿ ಚಿಕ್ಕ ಉದ್ದ, ಅಗಲವಾದ 2.5 ಮೀಟರುಗಳ ಮತ್ತು 3 ಮೀಟರುಗಳಿಗೆ ಕಡಿಮೆಯಿಲ್ಲದ ಪೂರ್ತಿ ಎತ್ತರದ ಕನಿಷ್ಠ ಪಕ್ಷ ಏಳೂವರೆ ಚದುರ ಮೀಟರುಗಳ ನೆಲ ಪ್ರದೇಶವನ್ನು ಹೊಂದಿರಬೇಕು. ಪ್ರತಿಯೊಂದು ಹೆಚ್ಚುವರಿ ಪ್ರೊಜೆಕ್ಟರಿಗಾಗಿ 2.3 ಚದರ ಮೀಟರುಗಳ ನೆಲದ ಜಾಗವು ಇರತಕ್ಕದ್ದು.

(4) * * * *

(5) ನೆಲ ಅಂತಸ್ತು ಅಥವಾ ಅದರ ಕೆಳಗಿನ ಅಂತಸ್ತಿಗೆ ಹೋಗಲು ಕ್ರಮವಾದ ಪಾವಟಿಗೆಗಳು ಇರತಕ್ಕದ್ದು.

(6) ಪ್ರೊಜೆಕ್ಷನ್ ಕೊಠಡಿಯ ಬಾಗಿಲು ಅಗ್ನಿ ನಿರೋಧಕದ್ದಾಗಿರತಕ್ಕದ್ದು ಮತ್ತು ಎಲ್ಲಾ ಕಿಂಡಿಗಳು, ಉಳಿಬಳೆಗಳು ಮತ್ತು ಜೋಡಣೆಗಳು ಸಭಾಂಗಣದೊಳಕ್ಕೆ ಯಾವುದೇ ಹೊಗೆಯು ಹೋಗುವುದನ್ನು ಸಾಧ್ಯವಾದ ಮಟ್ಟಿಗೆ ತಡೆಗಟ್ಟುವ ಹಾಗೆ ನಿರ್ಮಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಪ್ರೊಜೆಕ್ಷನ್ ಕೊಠಡಿಗಾಗಿ ವಾಯು ಸಂಚಾರವನ್ನು ಒದಗಿಸತಕ್ಕದ್ದು. ಆದರೆ ವಾಯು ಸಂಚಾರ ನಾಳಗಳು ಸಭಾಂಗಣದೊಂದಿಗೆ ನೇರ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ. ವಾಯು ಸಂಚಾರ ನಾಳಗಳ ಪ್ರದೇಶವು ಪ್ರೊಜೆಕ್ಷನ್ ಕೊಠಡಿಯ ನೆಲಪ್ರದೇಶದ ಶೇಕಡಾ ಒಂದಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

**ವಿವರಣೆ.–** ಈ ನಿಯಮದಲ್ಲಿ ಉಳಿಬಳೆ ಎಂದರೆ ಯಾವ ತೂತುಗಳ ಮೂಲಕ ಪೈಪುಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ ಆ ತೂತುಗಳಲ್ಲಿ, ಅಂಥ ತೂತುಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

(7) ಫಿಲ್ಮ್‌ಗಳನ್ನು ಸುತ್ತುವ ಉದ್ದೇಶಕ್ಕಾಗಿ ಪ್ರೊಜೆಕ್ಷನ್ ಕೊಠಡಿಯ ಪಕ್ಕದಲ್ಲಿ ರಿವೈಂಡಿಂಗ್ ಕೊಠಡಿ ಅಥವಾ ಆವರಣ ಇರತಕ್ಕದ್ದು ಮತ್ತು ರಿವೈಂಡಿಂಗ್ ಕೊಠಡಿ ಅಥವಾ ಆವರಣವು ಪ್ರೊಜೆಕ್ಷನ್ ಕೊಠಡಿಗೆ ಹೊಂದಿಕೊಂಡಿರುವಲ್ಲಿ ಮತ್ತು ಒಂದರಿಂದ ಮತ್ತೊಂದಕ್ಕೆ ಹೋಗಲು ಅವುಗಳ ನಡುವೆ ಬಾಗಿಲು ಇರುವಲ್ಲಿ ಈ ಬಾಗಿಲಿಗೆ ಅದೇ ಮುಚ್ಚಿಕೊಳ್ಳುವಂತೆ ಮಾಡಲು ಸೂಕ್ತ ಸ್ಪ್ರಿಂಗ್‌ಗಳನ್ನು ಹೊಂದಿರುವ ಒಂದೇ ಕದವನ್ನು ಒದಗಿಸತಕ್ಕದ್ದು.

(8) ಆವರಣವು ಸಭಾಂಗಣದೊಳಗಿದ್ದರೆ, ಪ್ರೊಜೆಕ್ಷನ್‌ಗಾಗಿ ಮತ್ತು ಆವರಣದ ವೀಕ್ಷಣೆಗಾಗಿ ಅಗತ್ಯವಾದುವುಗಳನ್ನು ಹೊರತುಪಡಿಸಿ ಯಾವುವೇ ಕಿಂಡಿಗಳಿಗೆ ಸಭಾಂಗಣದೊಂದಿಗೆ ಸಂಪರ್ಕಿಸಲು ಅವಕಾಶವಿರತಕ್ಕದ್ದಲ್ಲ.

(9) ಪ್ರೊಜೆಕ್ಟರ್ ಕಿಂಡಿಗಳು 35 ಎಮ್.ಎಮ್. 70 ಎಮ್.ಎಮ್.ನ ಸಿನಿಮಾ ಸ್ಕೋಪ್ ಮತ್ತು ಸಿನೇರಾಮ, ವೈಡ್–ಆ್ಯಂಗಲ್, ವಿಸ್ಟಾವಿಷನ್‌ಗಳಂಥ ಪ್ರೊಜೆಕ್ಷನ್ ಮಾದರಿಗಳಿಗೆ ಅನುಸಾರವಾಗಿರತಕ್ಕದ್ದು.

(10) ಪ್ರತಿಯೊಂದು ಕಿಂಡಿಗೆ ದಪ್ಪದಲ್ಲಿ 5 ಮಿಲಿ ಮೀಟರಿಗಿಂತ ಕಡಿಮೆಯಿಲ್ಲದ ದಪ್ಪ ಗಾಜು ಹಲಗೆ ಪರದೆಯನ್ನು ಹೊಗೆ ಬರದಂತೆ ಜೋಡಣೆಯೊಂದಿಗೆ ಸ್ಥಾನದಲ್ಲಿ ಕೂಡಿಸಿ ಒದಗಿಸತಕ್ಕದ್ದು:

ಪರಂತು, 250 ಚದರ ಮಿಲಿ ಮೀಟರಿಗಿಂತ ಹೆಚ್ಚಿಗೆ ಆದ ಕಿಂಡಿಗಳಿಗಾಗಿ,–

(i) ಉಪಯೋಗಿಸಿದ ಗಾಜಿನ ಪರದೆಗಳು ದಪ್ಪ ಅಥವಾ ತಂತಿ ಕೂಡಿದ ದಪ್ಪ ಗಾಜಿನವು ಆಗಿರತಕ್ಕದ್ದು.

(ii) ಗಾಜಿನ ಪರದೆಗಳ ಜೊತೆಗೆ ಲೋಹದ ಪರದೆಗಳನ್ನು ಒದಗಿಸತಕ್ಕದ್ದು ಮತ್ತು ಪ್ರೊಜೆಕ್ಷನ್‌ಗಾಗಿ ಉಪಯೋಗಿಸದೆ ಇರುವಾಗ ಕಿಂಡಿಗಳನ್ನು ಲೋಹ ಪರದೆಗಳಿಂದ ಮುಚ್ಚತಕ್ಕದ್ದು.

(iii) ಕಿಂಡಿಗಳು ಉಪಯೋಗದಲ್ಲಿಲ್ಲದೆ ಇರುವಾಗ ಆ ಕಿಂಡಿಗಳನ್ನು ಲೋಹ ಪರದೆಗಳಿಂದ ಮುಚ್ಚಿಸತಕ್ಕದ್ದೆಂದು ಕ್ಯಾಬಿನ್‌ನಲ್ಲಿ ನೋಟೀಸು ಹಾಕತಕ್ಕದ್ದು.

(11) (i) ಪ್ರೊಜೆಕ್ಷನ್ ಕೊಠಡಿಯು 18 ವರ್ಷ ವಯಸ್ಸು ತುಂಬಿದ ಮತ್ತು ಸರ್ಕಾರದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರ್ ಕೊಟ್ಟ ಸಿನಿಮಾ ಚಾಲಕರ ಲೈಸೆನ್ಸ್‌ನ್ನು ಹೊಂದಿರುವ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು, ಅಂಥ ಚಾಲಕನನ್ನು ನಿಯೋಜಿಸಿಕೊಳ್ಳಲು ತಪ್ಪಿದಲ್ಲಿ ವಿದ್ಯುಚ್ಛಕ್ತಿ ಪ್ರಮಾಣಪತ್ರವು ಅಮಾನತ್ತು ಅಥವಾ ರದ್ದಿಯಾತಿಗೆ ಗುರಿಯಾಗತಕ್ಕದ್ದು;

(ii) ಚಾಲಕನು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಎಲ್ಲ ಕೇಬಲ್ಲುಗಳು, ಲೀಡ್‌ಗಳು, ಸಂಯೋಗಗಳು ಮತ್ತು ಪ್ರತಿಶೋಧಗಳು ಮತ್ತು ಪ್ರೊಜೆಕ್ಷನ್ ಕೊಠಡಿಯಲ್ಲಿರುವ ಅಗ್ನಿ ಶಾಮಕ

ಉಪಕರಣಗಳು ಸರಿಯಾದ ಸುಸ್ಥಿತಿಯಲ್ಲಿವೆ ಎಂಬುದನ್ನು ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು, ಅವನು ಯಾಂತ್ರಿಕ ಚಾಲನೆಯಲ್ಲಿರುವ ಕಾಲದಲ್ಲಿ ಪ್ರೇಕ್ಷಕನು ಕೊಠಡಿಯಲ್ಲಿ ಇರತಕ್ಕದ್ದು.

**49. ಆಸನ ವ್ಯವಸ್ಥೆಯ ಬಗ್ಗೆ ಷರತ್ತುಗಳು.–** (1) ಯಾವುದೇ ಸಿನಿಮಾಕ್ಕೆ ಸಭಾಂಗಣದಲ್ಲಿ ಪ್ರತಿ ಒಂಭತ್ತು ಚದರ ಕಿ.ಮೀ.ಗೆ ಇಪ್ಪತ್ತಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಸ್ಥಳಾವಕಾಶ ನೀಡಲು ಲೈಸೆನ್ಸ್ ನೀಡತಕ್ಕದ್ದಲ್ಲ ಮತ್ತು ಸಭಾಂಗಣದ ಪ್ರತಿಯೊಂದು ಭಾಗಕ್ಕಾಗಿ ಹಾಗೆ ನಿಗದಿಪಡಿಸಲಾದ ಸಂಖ್ಯೆಯನ್ನು ಲೈಸೆನ್ಸ್‌ನಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಆಸನ ವ್ಯವಸ್ಥೆಯನ್ನು ನಿರ್ಧರಿಸುವುದಕ್ಕಾಗಿ ಲಭ್ಯವಿರುವ ಪ್ರದೇಶವನ್ನು ಲೆಕ್ಕ ಹಾಕುವುದಕ್ಕೆ ಮುಂಚೆ ಪ್ರವೇಶಗಳು, ಹಜಾರಗಳು, ರಂಗಸ್ಥಳ, ರಂಗಸ್ಥಳದ ಮುಂಭಾಗದ ಮೆಟ್ಟಿಲುಗಳು, ಅಗ್ರಭಾಗ, ಪಾವಟಿಗೆಗಳು, ದಾರಿಗಳು, ನಡವೆಗಳನ್ನು ಕಳೆಯತಕ್ಕದ್ದು.

(3) ಆಸನಗಳ ಸಾಲುಗಳನ್ನು ಹಿಂದಿನ ಗೋಡೆಯಿಂದ ಪರದೆಯ ಅಂತರದಷ್ಟು ಅದರ ಕೇಂದ್ರಕ್ಕೆ ಆದಷ್ಟು ಹಿಂದುಗಡೆ ಇರುವ ಕೇಂದ್ರದಿಂದ ಎಳೆದ ವೃತ್ತಗಳ ಸಮಾನ ಕೇಂದ್ರ ಪ್ರದೇಶಗಳ ರೂಪದಲ್ಲಿ ವ್ಯವಸ್ಥೆ ಮಾಡತಕ್ಕದ್ದು.

(4) ಆಸನಗಳು ಪರದೆಗೆ ಬಹಳ ಹತ್ತಿರ ಇರತಕ್ಕದ್ದಲ್ಲ. ಈ ಉದ್ದೇಶಕ್ಕಾಗಿ ಮುಂದಿನ ಸಾಲಿನಲ್ಲಿನ ಪ್ರೇಕ್ಷಕನ ಕಣ್ಣಿನಿಂದ (ನೆಲಮಟ್ಟದ ಮೇಲೆ 1,066 ಮಿಲಿ ಮೀಟರ್‌ಗಳು ಎಂದು ಊಹಿಸಿಕೊಳ್ಳಬೇಕಾದ) ಸಭಾಂಗಣದ ರೇಖಾಂಶದ ಭಾಗದಲ್ಲಿ ಪರದೆಯ ಮೇಲ್ ತುದಿಯವರೆಗೆ ಎಳೆದ ಗೆರೆಯು ಸಮತಲ ರೇಖೆಯೊಂದಿಗೆ 35 ಡಿಗ್ರಿಗಳಿಗಿಂತ ಹೆಚ್ಚಿನ ಕೋನವನ್ನು ರೂಪಿಸತಕ್ಕದ್ದಲ್ಲ. ಕೊಟ್ಟ ಕೊನೆಯಿಂದ ಅಥವಾ ಮುಂದಿನ ಸಾಲಿನಿಂದ ಪ್ರೇಕ್ಷಕನ ಕಣ್ಣಿನಿಂದ ನಕ್ಷೆಯಲ್ಲಿ ಪರದೆಯ ಕೊಟ್ಟ ಕೊನೆಗೆ ಎಳೆದ ಗೆರೆಯು ಪರದೆಯೊಂದಿಗೆ 25 ಡಿಗ್ರಿಗಳಿಗಿಂತ ಕಡಿಮೆಯಾದ ಕೋನವನ್ನು ರೂಪಿಸತಕ್ಕದ್ದಲ್ಲ.

(5) ರಂಗಸ್ಥಳದಿಂದ ಆಚೆ ಅಸನಗಳ ಅನುಕ್ರಮ ಸಾಲುಗಳನ್ನು ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸುನಿಶ್ಚಿತಗೊಳಿಸುವ ಹಾಗೆ ವ್ಯವಸ್ಥೆ ಮಾಡತಕ್ಕದ್ದು.

(6) ಒಂದು ಸಾಲಿನ ಹತ್ತಕ್ಕಿಂತ ಹೆಚ್ಚಿಲ್ಲದ ಆಸನಗಳಿಗೆ ಪಕ್ಕದ ಹಜಾರದಿಂದ ಮತ್ತು ಐದಕ್ಕಿಂತ ಹೆಚ್ಚಿಲ್ಲದ ಆಸನಗಳಿಗೆ ಮಧ್ಯದ ಹಜಾರದಿಂದ ಪ್ರವೇಶ ಅವಕಾಶ ಇರತಕ್ಕದ್ದು.

(7) ಪ್ರತಿಯೊಂದು ಆಸನಕ್ಕೆ ಕನಿಷ್ಠ ಪಕ್ಷ 0.46 ಮೀಟರುಗಳ ಆಗಲದ ಮತ್ತು 0.915 ಮೀಟರುಗಳ ಆಳದಷ್ಟಿರುವ ನೆಲದ ಜಾಗವನ್ನು ಒದಗಿಸತಕ್ಕದ್ದು.

(8) ಎಲ್ಲ ಸಂದರ್ಭಗಳಲ್ಲಿ, ಆಧಾರ ರೇಖೆಗಳ ನಡುವೆ ಅಳತೆ ಮಾಡಿದ ಒಂದು ಆಸನದ ಹಿಂಬದಿ ಮತ್ತು ಅದರ ನಿಕಟ ಹಿಂದಿನ ಆಸನದ ಮುಂಬದಿಯ ನಡುವೆ ಕನಿಷ್ಠ ಪಕ್ಷ 0.5 ಮೀಟರುಗಳಷ್ಟು ಮಧ್ಯ ಬರುವ ಜಾಗ ಇರತಕ್ಕದ್ದು.

(9) ಒಳ ಹಜಾರಗಳು ಇರಲಿ ಇಲ್ಲದಿರಲಿ ಪಕ್ಕದ ಹಜಾರಗಳು ಇರತಕ್ಕದ್ದು. ಯಾವುದೇ ಪಕ್ಕದ ಹಜಾರವು ಅಗಲದಲ್ಲಿ 0.915 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಯಾವುದೇ ಒಳ ಹಜಾರವು ಅಗಲದಲ್ಲಿ 1.12 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(10) ಆಸನಗಳನ್ನು ಪ್ರೇಕ್ಷಕನ ಮುಂದೆ ಇರುವ ವ್ಯಕ್ತಿಯ ತಲೆಯ ಮೇಲೆ ನೇರವಾಗಿ ಯಾವುದೇ ಸಾಲಿನಲ್ಲಿರುವ ಅವನು ನೋಡದೆ ಹಾಗೆ ಮುಂಬದಿಯಲ್ಲಿರುವವುಗಳಿಗೆ ಸಂಬಂಧಪಟ್ಟಂತೆ ಪಕ್ಕವಾಗಿ ವ್ಯವಸ್ಥೆಗೊಳಿಸತಕ್ಕದ್ದು:

ಪರಂತು, ಯಾವುದೇ ಆಸನಗಳ ವ್ಯವಸ್ಥೆಯು ಗ್ಯಾಲರಿ ಮಾದರಿಯ ಆಸನದ ವ್ಯವಸ್ಥೆಯನ್ನು ಒದಗಿಸಿದ್ದರೆ ಮತ್ತು ಪ್ರದರ್ಶನದ ಅಪ್ರತಿಬಂಧಿತ ವೀಕ್ಷಣೆಯನ್ನು ಸುನಿಶ್ಚಿತಗೊಳಿಸಿದ್ದರೆ ಅವಶ್ಯವಿರತಕ್ಕದ್ದಲ್ಲ.

(11) ಮಧ್ಯದ ಬಾಗಿಲು ಅಥವಾ ಬಾಗಿಲುಗಳನ್ನು ವ್ಯವಸ್ಥೆ ಮಾಡಿದ್ದರೆ ಅವುಗಳನ್ನು ಹೊರತುಪಡಿಸಿ ಆಸನಗಳ ಪ್ರತಿ ಆರು ಸಾಲುಗಳಿಗಾಗಿ ಒಂದು ಹೊರಗೆ ಹೋಗುವ ದಾರಿಯನ್ನು ಒದಗಿಸತಕ್ಕದ್ದು.

(12) ಸಭಾಂಗಣದ ಯಾವುದೇ ಭಾಗದೊಳಕ್ಕೆ ಬಿಟ್ಟ ವ್ಯಕ್ತಿಗಳ ಸಂಖ್ಯೆಯು ಸಭಾಂಗಣದ ಆ ಭಾಗಕ್ಕಾಗಿ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(13) ಬಾಕ್ಸ್‌ಗಳಲ್ಲಿನ ಆಸನಗಳನ್ನು ಹೊರತುಪಡಿಸಿ, ಎಲ್ಲಾ ಆಸನಗಳನ್ನು ಪೂರ್ತಿಯಾಗಿ ಉದ್ದಕ್ಕೂ ಒಟ್ಟಿಗೆ ಪಟ್ಟಿ ಹೊಡೆದಿರತಕ್ಕದ್ದು ಮತ್ತು ನೆಲಕ್ಕೆ ಖಾಯಂ ಆಗಿ ಜೋಡಿಸಿರತಕ್ಕದ್ದು.

(14) ಪ್ರತಿ ಕುರ್ಚಿಗಾಗಿ 0.65 ಚದರ ಮೀಟರುಗಳ ನೆಲ ಪ್ರದೇಶವನ್ನು ಒದಗಿಸುವ ಬಾಕ್ಸ್‌ಗಳಲ್ಲಿ (ಪ್ರತಿ ಬಾಕ್ಸಿಗೆ ಎಂಟು ಆಸನಗಳಿಗಿಂತ ಹೆಚ್ಚಿಲ್ಲದ) ಆಸನಗಳನ್ನು ಹೊರತುಪಡಿಸಿ ಯಾವುದೇ ಬಿಡಿ ಕುರ್ಚಿಗಳು ಇರತಕ್ಕದ್ದಲ್ಲ.

(15) ಸಭಾಂಗಣದಲ್ಲಿ ವಿವಿಧ ವರ್ಗಗಳ ನಡುವೆ ಅಡ್ಡಗಟ್ಟೆಯಂತೆ ಇರುವುದಕ್ಕಲ್ಲದೆ ಯಾವುದೇ ದಾರಿ, ಹಜಾರ ಅಥವಾ ಪಾವಟಿಗೆ ಇಳಿಯುವ ಸ್ಥಳದಲ್ಲಿ ಯಾವುದೇ ಕುರ್ಚಿ ಅಥವಾ ಇತರ ಅಡ್ಡಿಯನ್ನು ಇಡತಕ್ಕದ್ದಲ್ಲ.

(16) ಆಸನ ವ್ಯವಸ್ಥೆಗೆ ಅಡ್ಡಲಾಗಿ ಹಜಾರದಲ್ಲಿ ಯಾರೇ ವ್ಯಕ್ತಿಯು ಕುಳಿತುಕೊಳ್ಳಲು ಅಥವಾ ನಿಂತುಕೊಳ್ಳಲು ಅಥವಾ ಪರದೆ ಮತ್ತು ಕೊನೆಯ ಸಾಲಿನ ನಡುವಣ ಯಾವುದೇ ಹಜಾರದಲ್ಲಿ ಕುಳಿತುಕೊಳ್ಳಲು ಅವಕಾಶ ಕೊಡತಕ್ಕದ್ದಲ್ಲ.

(17) ಮಧ್ಯದ ಹಜಾರವನ್ನು ಪಕ್ಕದ ಹಜಾರಗಳಿಗೆ (1) ಒಂದು ವರ್ಗದಲ್ಲಿನ ಮೂರು ನೂರು ಆಸನಗಳ ಪ್ರತಿಯೊಂದು ಬ್ಲಾಕಿಗಾಗಿ ಅಗಲದಲ್ಲಿ 1.22 ಮೀಟರುಗಳಿಗಿಂತ ಕಡಿಮೆಯಿಲ್ಲದ ಒಂದು ಅಡ್ಡ ಹಜಾರದ ಮತ್ತು (ii) ಪ್ರತಿಯೊಂದು ವರ್ಗದಲ್ಲಿ ಆಸನಗಳ ಕೊನೆಯ ಸಾಲಿನ ತರುವಾಯ ಅಗಲದಲ್ಲಿ 1.22 ಮೀಟರುಗಳಿಗಿಂತ ಕಡಿಮೆಯಿಲ್ಲದ ಒಂದು ಅಡ್ಡ ಹಜಾರದ ಮೂಲಕ ಸಂಪರ್ಕವನ್ನು ಒದಗಿಸತಕ್ಕದ್ದು:

ಪರಂತು, ಯಾವುದೇ ಅಡ್ಡಿ ಇಲ್ಲದೆ ಮಧ್ಯದ ಹಜಾರವು ಹೊರಕ್ಕೆ ಹೋಗುವವರಿಗೆ ಅಥವಾ ಮಧ್ಯದ ಬಾಗಿಲಿಗೆ ಹೋಗುವ ಹಾಗೆ ಇದ್ದರೆ ಯಾವುದೇ ಅಡ್ಡ ಜಾರವು ಅವಶ್ಯವಿರತಕ್ಕದ್ದು.

**50. ದಾರಿಗಳು, ನಡವೆಗಳು, ಇತ್ಯಾದಿ.–** (1) ಪಕ್ಕದ ಪ್ರವೇಶ ದ್ವಾರಗಳಿರುವೆಡೆಯಲ್ಲೆಲ್ಲಾ ಸಭಾಂಗಣವು ವರಾಂಡ ಅಥವಾ ಮುಚ್ಚಿದ ಹಜಾರವನ್ನು ಹೊಂದಿರತಕ್ಕದ್ದು. ಹೊರಕ್ಕೆ ಹೋಗುವ ದಾರಿಯಾಗಿ ಉಪಯೋಗಿಸುವುದಕ್ಕಾಗಿ ಉದ್ದೇಶಿಸಿದ ಆಸನಗಳ ಸಾಲುಗಳ ನಡುವಣ ಒಳದಾರಿಯಾಗಿಲ್ಲದ ಯಾವುದೇ ನಡುವೆ, ವರಾಂಡ, ದಾರಿ ಅಥವಾ ಪಾವಟಿಗೆ ಇಳಿಯುವ ಸ್ಥಳದ ಮೊಗಸಾಲೆಯು ಅಗಲದಲ್ಲಿ ಪೂರ್ತ 1.83 ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ನೆಲದಿಂದ 2.1 ಮೀಟರುಗಳ ಎತ್ತರದ ಒಳಗೆ ಅಂಥ ನಡವೆಗಳು, ವರಾಂಡಗಳು, ದಾರಿಗಳು ಅಥವಾ ಪಾವಟಿಗೆ ಇಳಿಯುವ ಸ್ಥಳದ ಮೊಗಸಾಲೆಯ ಗೋಡೆಯಲ್ಲಿ ದೀಪಗಳ ಯಾವುದೇ ಚಾಚುವಿಕೆ ಇರತಕ್ಕದ್ದಲ್ಲ.

(2) ಸಾಧ್ಯವಿರುವೆಡೆಗಳಲ್ಲೆಲ್ಲ ಮೆಟ್ಟಲುಗಳ ಬದಲಾಗಿ ಏರಿಳಿವಿನ ಪ್ರಮಾಣ ಅಥವಾ ಇಳಿಜಾರು ಸಮತಲಗಳನ್ನು ಉಪಯೋಗಿಸತಕ್ಕದ್ದು. ಆದರೆ ಅಂಥ ಏರಿಳಿವಿನ ಪ್ರಮಾಣ ಅಥವಾ ಇಳಿಜಾರು ಸಮತಲಗಳು 10ರಲ್ಲಿ 1ಕ್ಕಿಂತ ಕಡಿದಾಗಿರತಕ್ಕದ್ದಲ್ಲ.

(3) ಯಾವುದೇ ಹಜಾರ, ವರಾಂಡ ಅಥವಾ ದಾರಿ ಅಥವಾ ನಡುದಾರಿಯನ್ನು ಸಾಮಾನು ಇಡುವ ಕೋಣೆಯನ್ನಾಗಿ ಉಪಯೋಗಿಸತಕ್ಕದ್ದು ಮತ್ತು ಅವುಗಳಲ್ಲಿ ಯಾವುದೇ ಟೋಪಿಗಳನ್ನು ಅಥವಾ ಬಟ್ಟೆಬರೆಗಳನ್ನು ನೇತುಹಾಕುವುದಕ್ಕಾಗಿ ಯಾವುದೇ ಗೂಟಗಳಿಗೆ ಅವಕಾಶ ಕೊಡತಕ್ಕದ್ದಲ್ಲ. ಯಾವುದೇ ಅಂಥ ಹಜಾರ, ವರಾಂಡ, ದಾರಿ ಅಥವಾ ನಡುದಾರಿಯನ್ನು ಸಭಾಂಗಣದಿಂದ ಹೊರಕ್ಕೆ ಹೋಗುವ ದಾರಿ ಮತ್ತು ಅದರೊಳಗೆ ಪ್ರವೇಶಕ್ಕಾಗಿ ಅಲ್ಲದೆ ದಾಸ್ತಾನಿನ ಉದ್ದೇಶಕ್ಕಾಗಿ ಅಥವಾ ಯಾವುದೇ ಉದ್ದೇಶಕ್ಕಾಗಿಯೇ ಆಗಲಿ ಉಪಯೋಗಿಸತಕ್ಕದ್ದಲ್ಲ.

(4) ಸಾಮಾನು ಇಡುವ ಕೋಣೆಗಳನ್ನು ಒದಗಿಸಿರುವಲ್ಲಿ ಅವುಗಳ ಉಪಯೋಗವು ಯಾವುದೇ ಹಜಾರ, ವರಾಂಡ, ದಾರಿ ಅಥವಾ ಹೊರಕ್ಕೆ ಹೋಗುವ ದಾರಿಯಾಗಿ ಮುಕ್ತ ಉಪಯೋಗವನ್ನು ಅಡ್ಡಿಪಡಿಸದ ಹಾಗೆ ಇರತಕ್ಕದ್ದು.

(5) ಪ್ರದರ್ಶನ ಕಿಟಕಿಗಳು, ಷೋಕೇಸುಗಳು ಮತ್ತು ಸ್ಲಾಟಂಗ್ ಯಂತ್ರಗಳಿಗೆ, ವರಾಂಡಗಳು, ನಡವೆಗಳು ಮತ್ತು ಆರಾಮ ಶಾಲೆಗಳಲ್ಲಿ ಅವಕಾಶ ಮಾಡಿಕೊಟ್ಟಿರುವಾಗಲೆಲ್ಲ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸನ್ನು ಕೊಡುವುದಕ್ಕೆ ಮತ್ತು ಅದನ್ನು ಮರು ಮಂಜೂರು ಮಾಡುವುದಕ್ಕೆ ಮುಂಚೆ (1)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಿದ ಪೂರ್ಣ ಜಾಗವು ಉಳಿದಿದೆ ಮತ್ತು ಅವುಗಳು ಪ್ರವೇಶ ದ್ವಾರಗಳು ಮತ್ತು ಹೊರಗಡೆ ಹೋಗುವುದಕ್ಕಾಗಿನ ದಾರಿಗಳ ಹತ್ತಿರ ಸಾರ್ವಜನಿಕರು ಜಮಾಯಿಸುವುದನ್ನು ಮತ್ತು ಸುಲಭ ಓಡಾಟಕ್ಕೆ ಅಡ್ಡಿಯನ್ನು ತಪ್ಪಿಸುವ ಹಾಗೆ ಇರುವುದಿಲ್ಲ ಎಂಬ ಬಗ್ಗೆ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು.

**51. ಬಾಗಿಲುಗಳ ಬಗ್ಗೆ ಷರತ್ತುಗಳು.–** (1) ಅಧಿನಿಯಮವು ಅನ್ವಯಿಸುವಂತಹ ಸಿನಿಮಾಕ್ಕಾಗಿ ಯಾವುದೇ ಕಟ್ಟಡವನ್ನು ಪ್ರೇಕ್ಷಕರಿಗೆ ಸುರಕ್ಷಿತವಾಗಿ ಹೊರಕ್ಕೆ ಹೋಗುವ ಸಾಕಷ್ಟು ಸಾಧನವನ್ನು ಸುಲಭವಾಗಿ ಒದಗಿಸುವ ಹಾಗೆ ಇಟ್ಟ ಮತ್ತು ನಿರ್ವಹಿಸಿದ ಸಾಕಷ್ಟು ಸಂಖ್ಯೆಯ ಸ್ಪಷ್ಟವಾಗಿ ತೋರಿಸಿದ ಹೊರಕ್ಕೆ ಹೋಗುವ ದಾರಿಗಳನ್ನು ಒದಗಿಸಿದ್ದ ಹೊರತು ಉಪಯೋಗಿಸತಕ್ಕದ್ದಲ್ಲ. ಸಭಾಂಗಣ, ಬಾಲ್ಕನಿ, ಅಂತಸ್ತು ಅಥವಾ ಗ್ಯಾಲರಿಯಲ್ಲಿ ಪ್ರತಿ ಒಂದು ನೂರು ಆಸನಗಳಿಗಾಗಿ ತೆರೆದ ಸ್ಥಿತಿಯಲ್ಲಿ ಬಾಗಿಲಿನ ಕದಗಳ ನಡುವೆ ಅಳತೆ ಮಾಡಿದ 1.5 ಮೀಟರುಗಳ ಪೂರ್ಣ ಅಗಲದ ಮತ್ತು 2.2 ಮೀಟರುಗಳ ಪೂರ್ಣ ಎತ್ತರದ ಕನಿಷ್ಠ ಪಕ್ಷ ಒಂದು ಬಾಗಿಲು ಆದರೆ ಸಭಾಂಗಣ, ಬಾಲ್ಕನಿ, ಅಂತಸ್ತು ಅಥವಾ ಗ್ಯಾಲರಿಯ ವಿವಿಧ ಗೋಡೆಗಳಲ್ಲಿ ಎರಡಕ್ಕಿಂತ ಕಡಿಮೆ ಇಲ್ಲದ ಬಾಗಿಲುಗಳು ಇರತಕ್ಕದ್ದು.

(2) ನಿರ್ಗಮನದ ಸಾಮಾನ್ಯ ಸ್ಥಳವು ಸಭಾಂಗಣದ ಎಲ್ಲ ಅಂತಸ್ತುಗಳಿಗಾಗಿ ಹೊರಕ್ಕೆ ಹೋಗುವ ದಾರಿಯಾಗಿರಬಹುದಾದ ದಾರಿಯಾಗಿರತಕ್ಕದ್ದು: ಪರಂತು ಅಂಥ ನಿರ್ಗಮನದ ಸ್ಥಳದ ಸಾಮರ್ಥ್ಯವು ಅಂಥ ಅಂತಸ್ತು ಅಥವಾ ಟಯರಿನಿಂದ ಹೋಗಲು ಅವಶ್ಯ ಹೊರದಾರಿಗಳಿಗಾಗಿ (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ಸಾಮರ್ಥ್ಯಕ್ಕೆ ಸಮನಾಗಿರಬೇಕು.

(3) ಸಭಾಂಗಣದ ಅಂತಸ್ತು ಅಥವಾ ಯಾವುದೇ ಟಯರನ್ನು ಎರಡು ಅಥವಾ ಹೆಚ್ಚಿನ ಭಾಗಗಳಿಗಾಗಿ ವಿಭಾಗಿಸಿದ್ದರೆ, ಅಂಥ ಭಾಗಕ್ಕಾಗಿ ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರತ್ಯೇಕ ಹೊರಕ್ಕೆ ಹೋಗುವ ದಾರಿಗಳನ್ನು ಒದಗಿಸತಕ್ಕದ್ದು.

(4) ನಿರ್ಗಮನದ ಸಾಧನವಾಗಿ ಉಪಯೋಗಿಸಬೇಕಾದ ಎಲ್ಲ ಬಾಗಿಲುಗಳು ಅಗ್ನಿ ಪ್ರತಿರೋಧಕ ರಚನೆಗಳಿಂದ ಆಗಿರತಕ್ಕದ್ದು: ಪರಂತು 4.4 ಸೆಂಟಿಮೀಟರ್‌ಗಳ ದಪ್ಪಕ್ಕೆ ಕಡಿಮೆ ಇಲ್ಲದ ಭಾರವಾದ ಮರದ ಬಾಗಿಲನ್ನು ನಿರ್ಗಮನದ ಸಾಧನವಾಗಿ ಉಪಯೋಗಿಸಬಹುದು.

(5) ಸಭಾಂಗಣಕ್ಕಾಗಿ ಯಾವುದೇ ಸುತ್ತ ತಿರುಗುವ, ಸುರುಳಿ ಸುತ್ತುವ, ಸರಿದಾಡುವ, ಮಡಚಿಕೊಳ್ಳುವ, ಬೀಳು ಬಾಗಿಲುಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

(6) ಹೊರಕ್ಕೆ ಹೋಗುವ ದಾರಿಗೆ ಸಾರ್ವಜನಿಕರು ಹೋಗುವಂತೆ ಆ ಕಡೆಗೆ ತೆಗೆಯುವ ಪ್ರತ್ಯೇಕವಾಗಿ ತೆಗೆಯುವ ಎರಡು ಬಾಗಿಲುಗಳು ಇರತಕ್ಕದ್ದು ಮತ್ತು ಎಲ್ಲಾ ಬೋಲ್ಟುಗಳನ್ನು ತುರ್ತು ಸಂದರ್ಭಗಳಲ್ಲಿ ಒಳಗಡೆಯಿಂದ ಅವುಗಳನ್ನು ತೆಗೆಯಬಹುದಾದ ಹಾಗೆ ವ್ಯವಸ್ಥೆ ಮಾಡಿರತಕ್ಕದ್ದು. ಸಾರ್ವಜನಿಕರಿಗಾಗಿನ ಬಾಗಿಲಿಗೆ ಯಾವುವೇ ಹೊರಗಡೆ ಬೋಲ್ಟುಗಳನ್ನು ಅಥವಾ ಬೀಗಗಳನ್ನು ಜೋಡಿಸತಕ್ಕದ್ದಲ್ಲ. ತೆರೆದ ಬಾಗಿಲ ಕದಗಳು 50ನೇ ನಿಯಮದ (1)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿದಂಥ ದಾರಿಗೆ ಅಡ್ಡಿಯುಂಟು ಮಾಡತಕ್ಕದ್ದಲ್ಲ ಅಥವಾ ಅದರ ಪೂರ್ಣ ಅಗಲವನ್ನು ಕಡಿಮೆ ಮಾಡತಕ್ಕದ್ದಲ್ಲ. ಯಾವುದೇ ಬಾಗಿಲು ಮೆಟ್ಟಿಲುಗಳ ಸಾಲಿಗೆ ನೇರವಾಗಿ ತೆರೆದಿರತಕ್ಕದ್ದಲ್ಲ. ನೆಲದೊಂದಿಗೆ ಕನಿಷ್ಠ ಪಕ್ಷ 1.5 ಮೀಟರುಗಳ ಮಟ್ಟದ ನಡುನಿಲ್ಲೆಡೆಯಿರತಕ್ಕದ್ದು.

(7) ಎಲ್ಲಾ ಹೊರಕ್ಕೆ ಹೋಗುವ ಬಾಗಿಲುಗಳನ್ನು ಪ್ರದರ್ಶನಕಾಲದಲ್ಲಿ ಬೋಲ್ಟ್ ಹಾಕಿರತಕ್ಕದ್ದಲ್ಲ. ಅಂಥ ಬಾಗಿಲುಗಳ ಮೇಲಿನ ಮತ್ತು ಕೆಳಗಿನ ಬೋಲ್ಟುಗಳು ಸಾಧ್ಯವಾಗಿರುವಾಗಲೆಲ್ಲಾ ಪ್ರತಿಯೊಂದು ಜತೆ ಬಾಗಿಲು ಕದಗಳ ಮೇಲೆ ಮಧ್ಯದ ಒಂದು ಹಿಡಿಕೆಯಿಂದ ಚಾಲನೆ ಮಾಡುವ ಹಾಗಿರತಕ್ಕದ್ದು.

(8) ತೆಗೆಯುವ ವಿಧಾನವನ್ನು ತೋರಿಸುವ ಹೊರಕ್ಕೆ ಹೋಗುವ ಬಾಗಿಲುಗಳ ಮೇಲೆ ನೋಟೀಸನ್ನು ಸ್ಪಷ್ಟವಾಗಿ ಬಣ್ಣದಲ್ಲಿ ಬರೆಯತಕ್ಕದ್ದು.

(9) ಸಭಾಂಗಣದಿಂದ ಹೊರಕ್ಕೆ ಹೋಗುವ ಪ್ರತಿಯೊಂದು ಬಾಗಿಲಿನ ಮೇಲೆ ಎಕ್ಸಿಟ್ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಅದರ ಸಮಾನ ಪದವನ್ನು ಅಥವಾ ಅವೆರಡನ್ನು ಮೇಲುಗಡೆ 150 ಮಿಲಿ ಮೀಟರುಗಳ ಎತ್ತರದ ಕೆಂಪು ಅಕ್ಷರಗಳಲ್ಲಿ ಬಣ್ಣದಿಂದ ಬರೆದಿರತಕ್ಕದ್ದು. ಅದು ಸಾರ್ವಜನಿಕರು ಆವರಣದಲ್ಲಿರುವ ಕಾಲದಲ್ಲಿ ಉರಿಯುತ್ತಿರುವಂಥ ದೀಪದ ಮೂಲಕ ಬೆಳಗುವಂತೆ ಇರತಕ್ಕದ್ದು.

(10) ಬಾಗಿಲು ದಾರಿಯನ್ನು ಮುಚ್ಚಲು ಪರದೆಯನ್ನು ಉಪಯೋಗಿಸಿರುವಲ್ಲಿ, ಅದನ್ನು ಪಕ್ಕಕ್ಕೆ ಸುಲಭವಾಗಿ ತಳ್ಳುವ ಹಾಗೆ ತೂಗು ಹಾಕಿರತಕ್ಕದ್ದು ಮತ್ತು ಆ ಪರದೆಯ ಕೆಳತುದಿಯು ನೆಲದ ಮಟ್ಟದಿಂದ ಮೇಲೆ ಒಂದು ನೂರು ಮಿಲಿ ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

**52. ವಾಯು ಸಂಚಾರಕಗಳು.–** (1) ಸಭಾಂಗಣಕ್ಕಾಗಿ ಮತ್ತು ನೆಲಪ್ರದೇಶದ ಎಂಟನೇ ಒಂದಕ್ಕಿಂತ ಕಡಿಮೆಯಿಲ್ಲದ ಪ್ರದೇಶವನ್ನು ಹೊಂದಿರುವ ಪ್ರತಿಯೊಂದು ಸಿನಿಮಾದಲ್ಲಿನ ಪ್ರತಿಯೊಂದು ಕೊಠಡಿ ಅಥವಾ ದಾರಿಗಳಿಗಾಗಿ ಸಾಕಷ್ಟು ಸಂಖ್ಯೆಯ ಕಿಟಕಿಗಳು ಮತ್ತು ವಾಯು ಸಂಚಾರಕಗಳು ಇರತಕ್ಕದ್ದು. ಆ ನೆಲಪ್ರದೇಶದ ಮೂರನೇ ಎರಡರಷ್ಟನ್ನು ಪ್ರದರ್ಶನದ ಕಾಲದಲ್ಲಿ ತೆಗೆದಿಟ್ಟಿರುವ ಹಾಗೆ ವ್ಯವಸ್ಥೆ ಮಾಡಿರತಕ್ಕದ್ದು. ಪ್ರತಿ ಐವತ್ತು ಆಸನಗಳಿಗಾಗಿ ಒಂದು ಸೀಲಿಂಗ್ ಫ್ಯಾನು ಮತ್ತು ಸಭಾಂಗಣದ ಪ್ರತಿ ಐವತ್ತು, ಚದರ ಮೀಟರುಗಳಿಗಾಗಿ ಒಂದು ಎಕ್ಸಾಸ್ಟ್ ಫ್ಯಾನು–ಇದಕ್ಕೆ ಕಡಿಮೆಯಿಲ್ಲದ ಫ್ಯಾನಿನ ಸಹಾಯದಿಂದ ಕೃತಕ ವಾಯು ಸಂಚಾರದ ಸಾಕಷ್ಟು ಸಾಧನಗಳೂ ಸಹ ಇರತಕ್ಕದ್ದು. ಅವುಗಳನ್ನು ಎಕ್ಸಿಕ್ಯೂಟಿವ್ ಇಂಜಿನಿಯರನು ಅನುಮೋದಿಸಿರಬೇಕು.

(2) ಪರ್ಯಾಯವಾಗಿ ಸಾಕಷ್ಟು ಸಾಮರ್ಥ್ಯದ ಸೂಕ್ತ ಕೇಂದ್ರೀಕೃತ ವ್ಯವಸ್ಥೆಯಿರತಕ್ಕದ್ದು. ಅದನ್ನು ಎಕ್ಸಿಕ್ಯೂಟಿವ್ ಇಂಜಿನಿಯರನು ಅನುಮೋದಿಸಿರಬೇಕು.

ಪರಂತು, ಪ್ರದರ್ಶನದ ಕಾಲದಲ್ಲಿ ವಾಯುಸಂಚಾರ ವ್ಯವಸ್ಥೆ ವಿಫಲವಾದಾಗ, ಆ ಅವಧಿಯಲ್ಲಿ ಪ್ರದರ್ಶನವನ್ನು ನಿಲ್ಲಿಸತಕ್ಕದ್ದು.

**53. ಪಾವಟಿಗೆಗಳು.–** ಐವತ್ತಕ್ಕಿಂತ ಹೆಚ್ಚಿನ ಆಸನಗಳನ್ನುಳ್ಳ ಪ್ರತಿಯೊಂದು ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯು ಹೊರಗಡೆಯಿರುವ ಬಾಗಿಲುಗಳೊಂದಿಗಿನ ನೆಲ ಅಂತಸ್ತಿನ ಕೊಠಡಿಗೆ ದಾರಿ ಅಥವಾ ವರಾಂಡಕ್ಕೆ ನೇರವಾಗಿ ಕೊಂಡೊಯ್ಯುವ ಕನಿಷ್ಠ ಪಕ್ಷ ಎರಡು ಪ್ರತ್ಯೇಕ ಪಾವಟಿಗೆಗಳನ್ನು ಹೊಂದಿರತಕ್ಕದ್ದು.

(2) ಯಾವುದೇ ಪಾವಟಿಗೆಯು 1.25 ಮೀಟರುಗಳ ಅಗಲಕ್ಕಿಂತ ಕಡಿಮೆ ಅಥವಾ 2.5 ಮೀಟರುಗಳ ಅಗಲಕ್ಕಿಂತ ಹೆಚ್ಚು ಇರತಕ್ಕದ್ದಲ್ಲ. ಅವುಗಳ ಅಗಲವನ್ನು ಹಿಡಿ ಕಂಬಿಗಳ ನಡುವೆ ಅಳತೆ ಮಾಡಬೇಕು.

(3) ಎಲ್ಲಾ ಪಾವಟಿಗೆಗಳನ್ನು ಅಗ್ನಿ ಪ್ರತಿರೋಧಕ ಛಾವಣಿ ಮತ್ತು ಭಿತ್ತಿನಿಂದ ಕೂಡಿದ ಅಗ್ನಿ ನಿರೋಧಕ ಸಾಮಗ್ರಿಗಳಿಂದ ನಿರ್ಮಿಸತಕ್ಕದ್ದು ಮತ್ತು ಅವುಗಳು ಜಾರದಂತೆ ಪೂರ್ಣಗೊಳಿಸಿದ ತುದಿಯಿಂದ ತುದಿಯ ನಡುವೆ ಸಮತಲದಲ್ಲಿ ಅಳತೆ ಮಾಡಿದ 300 ಮಿಲಿ ಮೀಟರುಗಳಿಗೆ ಕಡಿಮೆಯಿಲ್ಲದ ಮೆಟ್ಟುಮೈಗಳೊಂದಿಗೆ ಮತ್ತು ಹದಿನೈದಕ್ಕಿಂತ ಹೆಚ್ಚಿಲ್ಲದ ಅಥವಾ ಮೂರಕ್ಕಿಂತ ಕಡಿಮೆಯಿಲ್ಲದ ಮೆಟ್ಟಿಲುಗಳ ಎತ್ತರವುಳ್ಳ ಒಂದು ನೂರ ಅರವತ್ತೈದು ಮಿಲಿ ಮೀಟರುಗಳಿಗಿಂತ ಹೆಚ್ಚಿಲ್ಲದ ಗಟ್ಟಿ ನಿಲುಪಟ್ಟಿಯಿಂದ ನಡುನಿಲ್ಲೆಡೆಯ ಗಟ್ಟಿ ಮೆಟ್ಟಿಲುಗಳನ್ನು ಹೊಂದಿರತಕ್ಕದ್ದು ;

ಪರಂತು, ಅಂಡಾಕೃತಿ ಮತ್ತು ತಿರುವು ರೂಪದ ಮೆಟ್ಟಿಲುಗಳ ಸಂದರ್ಭದಲ್ಲಿ ಒಳಭಾಗದಲ್ಲಿನ ಮೆಟ್ಟುಮೈ ಇನ್ನೂರೈವತ್ತು ಮಿಲಿ ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(4) ಯಾವುದೇ ಪಾವಟಿಗೆಯು ತಿರುವಿಲ್ಲದೆ ಹದಿನೈದು ಮೆಟ್ಟಿಲುಗಳ ಎರಡಕ್ಕಿಂತ ಹೆಚ್ಚು ಸಾಲುಗಳನ್ನು ಹೊಂದಿರತಕ್ಕದ್ದಲ್ಲ ಮತ್ತು ಅಂಥ ಸಾಲುಗಳ ನಡುವಣ ನಡುನಿಲ್ಲೆಡೆಯ ಅಗಲವೂ ಅದು ಕನಿಷ್ಠ ಪಕ್ಷ ಪಾವಟಿಗೆಯ ಅಗಲದಷ್ಟು ಇರತಕ್ಕದ್ದು.

(5) ಇಳಿಜಾರು 1.10ಕ್ಕಿಂತ ಕಡಿದಾಗಿರತಕ್ಕದ್ದಲ್ಲ.

(6) ಯಾವುದೇ ಪಾವಟಿಗೆಯಲ್ಲಿ ಯಾವುದೇ ವೈಂಡರುಗಳನ್ನು ಉಪಯೋಗಿಸತಕ್ಕದ್ದಲ್ಲ.

(7) ಸಭಾಂಗಣದ ಮೇಲಿನ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಯಿಂದ ಹೊರಕ್ಕೆ ಹೋಗುವ ದಾರಿಯಾಗುವ ಪ್ರತಿಯೊಂದು ಪಾವಟಿಗೆಯು ಅದು ಹಾದು ಹೋಗುವಂಥ ಮಹಡಿಗಳಲ್ಲಿ ಇಟ್ಟಿಗೆ ಅಥವಾ ಅಗ್ನಿ ಪ್ರತಿರೋಧಕ ಸಾಮಗ್ರಿಗಳ ಗೋಡೆಗಳಿಂದ ಎರಡೂ ಪಕ್ಕಗಳಲ್ಲಿ ಆವೃತವಾಗಿರತಕ್ಕದ್ದು:

ಪರಂತು, ಮೊದಲ ಅಥವಾ ಕೆಳಗಿನ ಅಂತಸ್ತು, ಗ್ಯಾಲರಿ ಅಥವಾ ಬಾಲ್ಕನಿಗೆ ಒಯ್ಯುವ ಪಾವಟಿಗೆಗಳನ್ನು ಒಂದು ಪಕ್ಕದಲ್ಲಿ ಖುಲ್ಲಾ ಬಿಟ್ಟಿರಬಹುದು ಇಂಥ ಸಂದರ್ಭದಲ್ಲಿ ಖುಲ್ಲಾ ಬಿಟ್ಟಿರುವ ಪಕ್ಕಕ್ಕೆ ಅತಿ ದಪ್ಪನಾದ ಹಿಡಿ ಕಂಬಿಗಳು ಮತ್ತು ಚಿಕ್ಕ ಕಂಬಿಗಳನ್ನು ಒದಗಿಸತಕ್ಕದ್ದು, ಆದರೆ ಯಾವುದೇ ಸಂದರ್ಭದಲ್ಲಿ ಪಾವಟಿಗೆಯನ್ನು ಎರಡೂ ಪಕ್ಕಗಳಲ್ಲಿ ಖುಲ್ಲಾ ಬಿಡತಕ್ಕದ್ದಲ್ಲ.

(8) ಪ್ರತಿಯೊಂದು ಪಾವಟಿಗೆಯ ಮೇಲಿನ ಮೆಟ್ಟಿಲುಗಳ ಮೆಟ್ಟುಮೈ ಮತ್ತು ನಿಲುಪಟ್ಟಿಗಳು ಏಕರೂಪದ ಮಧ್ಯಗಲ ಮತ್ತು ಎತ್ತರದ್ದಾಗಿರತಕ್ಕದ್ದು.

(9) ಮೆಟ್ಟಿಲುಗಳ ಸಾಲು ಅದರ ಮೇಲೆಯೇ ಬರುವಲ್ಲಿ, ತಿರುಗಿ ಆರಂಭವಾಗುವ ಗೋಡೆಯನ್ನು ಹಿಡಿ ಕಂಬಿಗಳು ನಡುನಿಲ್ಲೆಡೆಯ ಮೇಲೆ ಮುಂಚಾಚದಂತೆ ಹೋಗುವ ಹಾಗೆ ಮುಂದುವರಿಸತಕ್ಕದ್ದು.

(10) ಎಲ್ಲ ಪಾವಟಿಗೆಗಳು ಅವುಗಳ ಎರಡೂ ಪಕ್ಕಗಳಲ್ಲಿ ಅದರಿಂದ ಪೂರ್ಣ ಸುಮಾರು ಎಪ್ಪತ್ತೈದು ಮಿಲಿ ಮೀಟರು ಮತ್ತು ಮೆಟ್ಟಿಲುಗಳ ಮೇಲೆ ಸುಮಾರು ಒಂದು ಮೀಟರಿನ ಮೇಲೆ ಬಲವುಳ್ಳ ಲೋಹದ ಬ್ರಾಕೆಟುಗಳಿಂದ ಗೋಡೆಗೆ ಸ್ಥಿರವಾಗಿ ಭದ್ರಪಡಿಸಿದ ಬಲವುಳ್ಳ ಹಿಡಿ ಕಂಬಿಗಳನ್ನು ಹೊಂದಿರತಕ್ಕದ್ದು. ಅಂತಹ ಹಿಡಿ ಕಂಬಿಗಳು ಜಗಲಿ ಅಥವಾ ನಡುನಿಲ್ಲೆಡೆಯ ಉದ್ದವು ಮೆಟ್ಟಲುಗಳ ಅಗಲವನ್ನು ಮೀರುವಲ್ಲಿ ಅಂಥ ಜಗಲಿಗಳ ಅಂಥ ಮಟ್ಟದ ಜಗಲಿಗಳು ಮತ್ತು ನಡುನಿಲ್ಲೆಡೆಯ ಮಟ್ಟದ ಮೇಲೆ ಹಾಯತಕ್ಕದ್ದಲ್ಲ.

(11) ನೆಲದ 2.2 ಮೀಟರುಗಳೊಳಗೆ ಅಂಥ ಪಾವಟಿಗೆಗಳ ಗೋಡೆಗಳಲ್ಲಿ ಯಾವುವೇ ಗೂಡುಗಳು ಅಥವಾ ಮುಂಚಾಚುಗಳಿರತಕ್ಕದ್ದಲ್ಲ ಮತ್ತು ದೀಪ ವ್ಯವಸ್ಥೆಗಾಗಿನ ಯಾವುದೇ ಜೋಡಣೆಗಳು, ಮೆಟ್ಟಿಲುಗಳು ಅಥವಾ ನಡುನಿಲ್ಲೆಡೆಯ ಮೇಲೆ ಕನಿಷ್ಠ ಪಕ್ಷ 2.2 ಮೀಟರುಗಳಷ್ಟು ಮೇಲಿರತಕ್ಕದ್ದು.

(12) ಕನಿಷ್ಠ ಪಕ್ಷ 2.15 ಮೀಟರುಗಳಷ್ಟು ಮೇಲಿನ ಜಾಗ ಇರತಕ್ಕದ್ದು.

**54. ಶೌಚಗೃಹಗಳು ಮತ್ತು ಮೂತ್ರಿಗಳು ಮತ್ತು ನೀರಿನ ಸೌಲಭ್ಯಗಳು.–** (1) ಪ್ರತಿಯೊಂದು ಸಿನಿಮಾದಲ್ಲಿ ಪ್ರಧಾನ ಕಟ್ಟಡದೊಳಗೆ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಸಾಕಷ್ಟು ಸಂಖ್ಯೆಯಲ್ಲಿ ಶೌಚಗೃಹಗಳು ಮತ್ತು ಮೂತ್ರಿಗಳನ್ನು ಒದಗಿಸತಕ್ಕದ್ದು.

(2) ಒದಗಿಸಬೇಕಾದ ನೈರ್ಮಲ್ಯ ಸ್ಥಳಾವಕಾಶದ ಶ್ರೇಣಿಯು 'ಗ' ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(3) ಶೌಚಗೃಹಗಳು ಮತ್ತು ಮೂತ್ರಿಗಳನ್ನು ಭೂಗತ ಗ್ರಾಮಸಾರ ಚರಂಡಿ ಲೈನಿಗೆ ಸೇರಿಸತಕ್ಕದ್ದು ಮತ್ತು ಅಂಥ ಯಾವುವೇ ಸೌಲಭ್ಯಗಳಿಲ್ಲದಿರುವಲ್ಲಿ ಅವುಗಳನ್ನು ಸಾಕಷ್ಟು ಗಾತ್ರದ ಮಲನಾಶಕ ತೊಟ್ಟಿಗೆ ಸೇರಿಸತಕ್ಕದ್ದು. ನೀರು ಸರಬರಾಜು ಸೌಲಭ್ಯಗಳಿಲ್ಲದೆ ಸ್ಥಳಗಳಲ್ಲಿ ನೈರ್ಮಲ್ಯ ಪ್ರಾಧಿಕಾರಿಗಳು ಅನುಮೋದಿಸಿದಂತೆ ಸೂಕ್ತ ನಿರ್ಮಲೀಕರಣ ವ್ಯವಸ್ಥೆಗಳನ್ನು ಮಾಡತಕ್ಕದ್ದು.

(4) ಪ್ರತಿಯೊಂದು ಸಿನಿಮಾದಲ್ಲಿ ಪುರುಷರು ಮತ್ತು ಸ್ತ್ರೀಯರಿಗಾಗಿ ಪ್ರತ್ಯೇಕವಾಗಿ ಕುಡಿಯುವ ನೀರಿನ ನಲ್ಲಿಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಒದಗಿಸತಕ್ಕದ್ದು. ಆದರೆ, ಯಾವುದೇ ಸಂದರ್ಭದಲ್ಲಿ ಪುರುಷರಿಗೆ ಒಂದು ಮತ್ತು ಸ್ತ್ರೀಯರಿಗೆ ಇನ್ನೊಂದರಂತೆ ಎರಡಕ್ಕಿಂತ ಕಡಿಮೆ ನೀರಿನ ನಲ್ಲಿಗಳಿರತಕ್ಕದ್ದಲ್ಲ. ನೀರಿನ ನಲ್ಲಿಗಳನ್ನು ನೀರು ಸರಬರಾಜು ಕೊಳವೆಗೆ ಜೋಡಿಸತಕ್ಕದ್ದು ಅಥವಾ ಕೊಳವೆಯ ಮೂಲಕ ನೀರಿನ ಸರಬರಾಜನ್ನು ನಿಲ್ಲಿಸಿದಾಗ ಅಥವಾ ನೀರು ಸರಬರಾಜು ಕೊಳವೆಯಿಲ್ಲದಿರುವಾಗ, ಸ್ವಚ್ಛ ಕುಡಿಯುವ ನೀರಿನ ತೊಟ್ಟಿ ಅಥವಾ ನೀರಿನ ಸಂಪುಟಕ್ಕೆ ಅವುಗಳನ್ನು ಜೋಡಿಸತಕ್ಕದ್ದು.

**55. ಟಿಕೆಟ್ ಬೂತುಗಳು.–** (1) ಸಾರ್ವಜನಿಕ ರಸ್ತೆಯಲ್ಲಿ ಸಂಚಾರಕ್ಕೆ ಯಾವುದೇ ಅಡ್ಡಿಯನ್ನುಂಟು ಮಾಡದಂತೆ ಆ ಆವರಣದೊಳಗೆ ಟಿಕೆಟ್ಟುಗಳನ್ನು ಖರೀದಿಸುವವರ ಕ್ಯೂಗಳಿಗಾಗಿ ನಿಲ್ಲಲು ಸ್ಥಳವಿರುವಂತೆ ಅಂಥ ಸ್ಥಾನದಲ್ಲಿ ಆವರಣಗಳೊಳಗೆ ಸೂಕ್ತ ಟಿಕೇಟುಗಳನ್ನು ಮಾರುವ ಕಿಂಡಿಗಳನ್ನು ವಿವಿಧ ಮಾರ್ಗಗಳಿಗಾಗಿ ಒದಗಿಸತಕ್ಕದ್ದು.

(2) ಟಿಕೇಟು ಬೂತಿನ ಮುಂದೆ ಸಾರ್ವಜನಿಕರಿಗಾಗಿ ಸೂಕ್ತ ಪ್ರವೇಶ ಮತ್ತು ನಿರ್ಗಮನದ ಸೂಕ್ತ ಸಾಧನಗಳನ್ನು ಒದಗಿಸತಕ್ಕದ್ದು.

(3) (i) ಲೈಸೆನ್ಸ್‌ದಾರ ಅಥವಾ ಬರಹದಲ್ಲಿ ಅವನು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಅವನ ಏಜೆಂಟನನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಯು ಯಾವುದೇ ಟಿಕೇಟು ಅಥವಾ ಪಾಸು ಅಥವಾ ಯಾವುದೇ ಸಿನಿಮಾಕ್ಕೆ ಪ್ರವೇಶದ ಹಕ್ಕಿನ ಯಾವುದೇ ಇತರ ಸಾಕ್ಷ್ಯವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಇಟ್ಟುಕೊಳ್ಳತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಕೊಡ ಮಾಡತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ ಅಥವಾ ಮಾರಾಟ ಮಾಡುವಂತೆ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಟ್ಟುಕೊಳ್ಳುವಂತೆ ಅಥವಾ ಇಡುವಂತೆ ಮಾಡತಕ್ಕದ್ದಲ್ಲ.

(ii) ಯಾವುದೇ ಟಿಕೇಟು ಅಥವಾ ಪಾಸು ಅಥವಾ ಯಾವುದೇ ಸಿನಿಮಾಕ್ಕೆ ಪ್ರವೇಶದ ಹಕ್ಕಿನ ಇತರ ಸಾಕ್ಷ್ಯವನ್ನು ಆ ಉದ್ದೇಶಕ್ಕಾಗಿ ಒದಗಿಸಿದ ಟಿಕೇಟ್ ಮಾರುವ ಕಿಂಡಿಗಳನ್ನು ಹೊರತುಪಡಿಸಿ ಇತರ ಯಾವುದೇ ಸ್ಥಳದಲ್ಲಿ ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಡತಕ್ಕದ್ದಲ್ಲ ಅಥವಾ ಕೊಡ ಮಾಡತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ ಮತ್ತು ಟಿಕೆಟ್ ಮಾರುವ ಕಿಡಿಯ ಮುಂದೆ ಕ್ಯೂ ಯಾವುದಾದರೂ ಇದ್ದರೆ, ಅದರಲ್ಲಿ ಸಾಲಾಗಿ ನಿಲ್ಲುವ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ಇತರ ವ್ಯಕ್ತಿಗೆ ಮಾರಾಟ ಮಾಡತಕ್ಕದ್ದಲ್ಲ :

ಪರಂತು, ಬೆಂಗಳೂರು ನಗರ ಪೊಲೀಸ್ ಕಮೀಷನರ್ ಮತ್ತು ಜಿಲ್ಲೆಗಳ ಪೊಲೀಸ್ ಸೂಪರಿಂಟೆಂಡೆಂಟ್‌ರು ಅವರ ಅನುಕ್ರಮ ಅಧಿಕಾರ ವ್ಯಾಪ್ತಿಯಲ್ಲಿ ಧರ್ಮಾರ್ಥ ಪ್ರದರ್ಶನಗಳ ಸಂದರ್ಭದಲ್ಲಿ ಟಿಕೆಟ್ ಮಾರುವ ಕಿಂಡಿಗಳನ್ನು ಹೊರತುಪಡಿಸಿ ಇತರ ಸ್ಥಳಗಳಲ್ಲಿ ಮತ್ತು ಲೈಸೆನ್ಸ್‌ದಾರ ಅಥವಾ ಅವನ ಏಜೆಂಟನನ್ನು ಹೊರತುಪಡಿಸಿ ಇತರ ವ್ಯಕ್ತಿಗಳು ಟಿಕೇಟುಗಳು, ಪಾಸುಗಳು ಅಥವಾ ಪ್ರವೇಶದ ಹಕ್ಕಿನ ಯಾವುದೇ ಇತರ ಸಾಕ್ಷ್ಯದ ಮಾರಾಟವನ್ನು ಬರಹದಲ್ಲಿ ಅನುಮತಿಸಬಹುದು.

(4) ಲೈಸೆನ್ಸ್‌ದಾರ ಅಥವಾ ಅವನ ಏಜೆಂಟನು ಫಿಲ್ಮಿನ ಪ್ರದರ್ಶನದ ದಿವಸಕ್ಕೆ ಹಿಂದಿನ ಮೂರು ದಿವಸಗಳಿಗಿಂತ ಮುಂಚಿತವಾಗಿ ಟಿಕೆಟುಗಳನ್ನು ಮಾರಾಟ ಮಾಡುವುದರ ಮೂಲಕ ಅಥವಾ ಅನ್ಯಥಾ ಮುಂಗಡವಾಗಿ ಯಾವುದೇ ವರ್ಗದಲ್ಲಿ ಆಸನಗಳನ್ನು ಕಾಯ್ದಿರಿಸತಕ್ಕದ್ದಲ್ಲ.

**56. ಉಪಗೃಹಗಳು ಇತ್ಯಾದಿ.–** (1) (1) ಮತ್ತು (3)ನೇ ಉಪ–ನಿಯಮಗಳಲ್ಲಿ ಉಪಬಂಧಿಸಿದಂತೆ ಹೊರತು, ಸಿನಿಮಾ ಕಟ್ಟಡದಲ್ಲಿ ಯಾವುವೇ ಪ್ರದರ್ಶನ ಕೊಠಡಿಗಳು, ಹೋಟೆಲುಗಳು, ಅಂಗಡಿಗಳು, ಕಛೇರಿಗಳು, ಬ್ಯಾಂಕುಗಳು ಮತ್ತು ಕ್ಯಾಂಟೀನುಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

(2) ಸಿನಿಮಾ ಕಟ್ಟಡವನ್ನು ದಹ್ಯವಲ್ಲದ ಸಾಮಗ್ರಿಗಳಿಂದ ಮತ್ತು ಶಬ್ದ ಕೇಳಿಸದಿರುವಂತೆ ನಿರ್ಮಿಸಿದ್ದರೆ, ಲೈಸೆನ್ಸ್ ಕೊಡುವ ಪ್ರಾಧಿಕಾರವು ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರ ಮತ್ತು ನಗರ ಯೋಜನಾ ನಿರ್ದೇಶಕನೊಂದಿಗೆ ಸಮಾಲೋಚಿಸಿದ ತರುವಾಯ,–

(ಕ) ನೆಲ ಅಂತಸ್ತಿನಲ್ಲಿ ಸಭಾಂಗಣವಿದ್ದರೆ ಸಿನಿಮಾ ಕಟ್ಟಡಗಳ ನೆಲಮಾಳಿಗೆಯಲ್ಲಿ ;

(ಖ) ಸಿನಿಮಾ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಸಭಾಂಗಣವು ಇದ್ದರೆ ನೆಲ ಅಂತಸ್ತಿನಲ್ಲಿ

– ಪ್ರದರ್ಶನ ಕೊಠಡಿಗಳು, ಹೋಟೆಲುಗಳು, ಅಂಗಡಿಗಳು, ಕ್ಯಾಂಟೀನುಗಳು, ಬ್ಯಾಂಕುಗಳು ಮತ್ತು ಕಛೇರಿಗಳಂಥ ಸಂಸ್ಥಾಪನೆಗಳನ್ನು ತೆರೆಯಲು ಅನುಮತಿಸಬಹುದು.

(3) (2)ನೇ ಉಪ ನಿಯಮದ ಮೇರೆಗೆ ಯಾವುದೇ ಅನುಮತಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ,–

(ಕ) ಅಂಥ ಸಂಸ್ಥಾಪನೆಗಳನ್ನು ತೆರೆಯಬೇಕಾಗಿರುವಂಥ ಅಂತಸ್ತಿನಲ್ಲಿ ಅಗ್ನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ಆರಿಸುವುದಕ್ಕಾಗಿ ಸಾಕಷ್ಟು ವ್ಯವಸ್ಥೆಯನ್ನು ಮಾಡಲಾಗಿದೆಯೆಂದು;

(ಖ) ಬೆಂಕಿ ಹೊತ್ತಿಕೊಂಡ ಸಂದರ್ಭದಲ್ಲಿ ಸುಲಭವಾಗಿ ಮತ್ತು ಶೀಘ್ರವಾಗಿ ಹೋಗಲು ಅಂಥ ವ್ಯವಸ್ಥಾಪನೆಗಳಿಗೆ ಬರುವ ಸಂದರ್ಶಕರಿಗೆ ಅವಕಾಶವಿರುವ ಹಾಗೆ ಅಂಥ ಸ್ಥಾಪನೆಗಳಿಗೆ ಪ್ರತ್ಯೇಕ ಪ್ರವೇಶಾವಕಾಶ ಮತ್ತು ಹೊರಕ್ಕೆ ಹೋಗುವ ದಾರಿಯನ್ನು ಒದಗಿಸಲಾಗಿದೆಯೆಂದು ;

(ಗ) ಯಾವ ರಸ್ತೆಗೆ ಅಂಥ ಸ್ಥಾಪನೆಗಳು ತೆರೆದಿರುವುವೋ ಆ ರಸ್ತೆಯು ಅಗ್ನಿಶಾಮಕ ಇಂಜಿನ್ನು ಮತ್ತು ಉಪಕರಣಗಳು ತಲುಪುವುದಕ್ಕೆ ಮುಖ್ಯ ರಸ್ತೆಯಾಗಿದೆಯೆಂದು,

–ಮನದಟ್ಟಾದ ಹೊರತು ಕೊಡತಕ್ಕದ್ದಲ್ಲ.

## ಅಧ್ಯಾಯ – VIII

## ವಿದ್ಯುತ್ ಸ್ಥಾಪನೆಗಳು

**57. ಪರಿಭಾಷೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, 'ಉಳಿಬಳೆ' ಎಂದರೆ ಯಾವ ತೂತುಗಳ ಮೂಲಕ ಕೊಳವೆಗಳು ಮತ್ತು ಕೇಬಲ್ಲುಗಳನ್ನು ಹಾಯಿಸಲಾಗಿದೆಯೋ ಆ ತೂತುಗಳಲ್ಲಿ ಅಂಥ ತೂತುಗಳನ್ನು ಯುಕ್ತವಾಗಿ ಹೊಗೆ ನಿರೋಧಕಗೊಳಿಸುವ ದೃಷ್ಟಿಯಿಂದ ಸೇರಿಸಲಾದ ಪ್ಯಾಕಿಂಗ್.

**58. ಮುಖ್ಯ ಪರಿಪಥಗಳು.–** ಆವರಣದ ವಿದ್ಯುತ್ ದೀಪ ವ್ಯವಸ್ಥೆಯು ಕನಿಷ್ಟ ಪಕ್ಷ ಮೂರು ಪ್ರತ್ಯೇಕ ಮತ್ತು ವಿಭಿನ್ನ ಮುಖ್ಯ ಪರಿಪಥಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳು,–

(ಕ) ಪ್ರೊಜೆಕ್ಷನ್ ಕೊಠಡಿಗಾಗಿ ಮತ್ತು ಅಲ್ಲಿಂದ ಡಿಮ್ಮಿಂಗ್ ರೆಗ್ಯುಲೇಟರು ಯಾವುದಾದರೂ ಇದ್ದರೆ ಅದರ ಮೂಲಕ ಸಭಾಂಗಣದ ಕೇಂದ್ರ ದೀಪ ವ್ಯವಸ್ಥೆಗಾಗಿ 'ಎ' ಪರಿಪಥ ;

(ಖ) ಸಭಾಂಗಣದ ಸರಿಸುಮಾರು ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಿಲುದಾರಿಗಳು, ಹೊರಕ್ಕೆ ಹೋಗುವ ದಾರಿಗಳು ಮತ್ತು ಕಟ್ಟಡದ ಭಾಗಗಳಿಗಾಗಿ 'ಬಿ' ಪರಿಪಥ; ಮತ್ತು

(ಗ) ಸಭಾಂಗಣದ ಉಳಿದ ಅರ್ಧಭಾಗ ಸಾರ್ವಜನಿಕರಿಗೆ ತೆರೆದಿರುವ ದಾರಿಗಳು, ಮೆಟ್ಟಲು ದಾರಿಗಳು, ಹೊರಕ್ಕೆ ಹೋಗುವ ದಾರಿ ಮತ್ತು ಕಟ್ಟಡದ ಭಾಗಗಳಿಗಾಗಿ 'ಸಿ', ಪರಿಪಥಗಳು

–ಇರತಕ್ಕದ್ದು.

(2) 'ಬಿ' ಮತ್ತು 'ಸಿ' ಪರಿಪಥಗಳಿಗೆ ಸಂಬಂಧಿಸಿದಂತೆ ಪರಿಪಥಗಳ ನಿಯಂತ್ರಣವು ಒಂದರಿಂದ ಇನ್ನೊಂದಕ್ಕೆ ದೂರದಲ್ಲಿರತಕ್ಕದ್ದು.

**59. ಸರಬರಾಜು ವ್ಯವಸ್ಥೆ.–** (1) ಸರಬರಾಜು ಮೂರು ಹಂತಗಳ ಎಸಿ ವ್ಯವಸ್ಥೆಯಲ್ಲಿ ಲಭ್ಯವಿರುವಲ್ಲಿ, 'ಎ' 'ಬ' ಮತ್ತು 'ಸಿ' ಪರಿಪಥಗಳನ್ನು ಲೋಡನ್ನು ಸರಿತೂಗಿಸಲು ಮೂರು ವಿವಿಧ ಸ್ಥಳಗಳಿಂದ ಸರಬರಾಜು ಮಾಡತಕ್ಕದ್ದು.

(2) ಎ, ಬಿ ಮತ್ತು "ಸಿ" ಮುಖ್ಯ ಪರಿಪಥಗಳನ್ನು ಅವಶ್ಯವೆಂದು ಪರ್ಯಾಲೋಚಿಸಬಹುದಾದಷ್ಟು ಉಪ–ಪರಿಪಥಗಳಾಗಿ ಉಪ–ವಿಭಾಗಿಸಬಹುದು. ಪ್ರತಿಯೊಂದು ಉಪ–ಪರಿಪಥವು ವಿತರಣಾ ಫಲಕದಿಂದ ಪ್ರಾರಂಭವಾಗತಕ್ಕದ್ದು.

(3) ಆವರಣದ ಒಳಗಡೆ ಮತ್ತು ಹೊರಗಡೆಯ ದೀಪಗಳು ಪ್ರತ್ಯೇಕ ಪರಿಪಥದಲ್ಲಿರತಕ್ಕದ್ದು. ಫ್ಯಾನುಗಳು, ವಿದ್ಯುತ್ ಮತ್ತು ತಂಪುಗೊಳಿಸುವ ಉದ್ದೇಶಗಳಿಗಾಗಿನ ಪರಿಪಥಗಳನ್ನು ಈ ವ್ಯವಸ್ಥೆಯ ಪರಿಪಥಗಳಿಂದ ವಿಭಿನ್ನ ಮತ್ತು ಪ್ರತ್ಯೇಕವಾಗಿ ಇಡತಕ್ಕದ್ದು.

**60. ಸ್ವಿಚ್ಚು ಮತ್ತು ಫ್ಯೂಸ್.–** ಎಲ್ಲ ಪರಿಪಥಗಳನ್ನು ಸಿಬ್ಬಂದಿ ವರ್ಗಕ್ಕೆ ಸುಲಭವಾಗಿ ಸಿಗಬಹುದಾದ ಸ್ಥಾನಗಳಲ್ಲಿ ಮತ್ತು ಅವುಗಳು ಯಾವುದೇ ದಾರಿ ಅಥವಾ ಹೊರಕ್ಕೆ ಹೋಗುವ ದಾರಿಗೆ ಅಡ್ಡಿಪಡಿಸುವ ಸಂಭವವಿಲ್ಲದಿರಬಹುದಾದ ಸ್ಥಳದಲ್ಲಿ ಇಟ್ಟು ಕಟೌಟುಗಳ ಮೂಲಕ ಸಮರ್ಥವಾಗಿ ಪರಿರಕ್ಷಿಸತಕ್ಕದ್ದು.

(2) ಸ್ವಿಚ್ಚುಗಳು ಮತ್ತು ಫ್ಯೂಸ್ ಫಲಕಗಳಿಗೆ ಅವು ಸಾರ್ವಜನಿಕರಿಗೆ ಸಿಕ್ಕುವಂತಿದ್ದರೆ ಮತ್ತು ಅವು ಟಿಕೆಟ್ ಕಿಂಡಿಗಳಲ್ಲಿ ಇದ್ದರೆ, ಗಾಜು ಅಥವಾ ಲೋಹದ ಮುಂಭಾಗದಿಂದ ಸರಿಯಾದ ಬೀಗ ಹಾಕುವ ಪೆಟ್ಟಿಗೆಗಳನ್ನು ಒದಗಿಸತಕ್ಕದ್ದು ಮತ್ತು ಗಾಜನ್ನು (ಸಾಕಷ್ಟು ದಪ್ಪವಾಗಿದ್ದ ಹೊರತು) ರಕ್ಷಕ ತಂತಿಯ ಮೂಲಕ ಅಥವಾ ಪರ್ಯಾಯವಾಗಿ ಮುಚ್ಚಳವಿರುವ ಪೆಟ್ಟಿಗೆಗಳಿಂದ ಪರಿರಕ್ಷಿಸತಕ್ಕದ್ದು ಮತ್ತು ಸ್ವಿಚ್ಚುಗಳು ಒಟ್ಟಾರೆ ಆವೃತ ಲೋಹ ಹೊದಿಕೆ ಮಾದರಿಯ ಸ್ವಿಚ್ಚುಗಳಾಗಿದ್ದಾಗ ಹೊರತು ಅಸ್ಬಸ್ಟಾಸ್ ಪೀಟುಗಳನ್ನು ಉಪಯೋಗಿಸಿ ಪಕ್ಕಗಳನ್ನು ಅಗ್ನಿ ನಿರೋಧಕಗೊಳಿಸತಕ್ಕದ್ದು.

(3) ಎಲ್ಲ ಸ್ವಿಚ್ಚುಗಳು ಮತ್ತು ಕಟೌಟುಗಳನ್ನು ಯಾವ, ದೀಪಗಳ ಪರಿಪಥವನ್ನು ಅವುಗಳು ನಿಯಂತ್ರಿಸುವುವೋ ಅವುಗಳನ್ನು ಸ್ಪಷ್ಟವಾಗಿ ತೋರಿಸುವ ಹಾಗೆ ಗುರುತು ಮಾಡತಕ್ಕದ್ದು.

**61. ಸಂಚಯಗಳು.–** ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಬಹುದಾದಂಥ ಸಂಖ್ಯೆಯ ಮತ್ತು ಬಗೆಯ ಸಂಚಯಕಗಳು ಅಥವಾ ಸ್ವಯಂಚಾಲಿತ ಡಿಸಿ ದೀಪಗಳನ್ನು ತುರ್ತು ಪರಿಸ್ಥಿತಿ ಅಥವಾ ವಿದ್ಯುಚ್ಛಕ್ತಿಯು ನಿಂತು ಹೋದ ಕಾಲದಲ್ಲಿ, ಸಭಾಂಗಣವನ್ನು ದೀಪದಿಂದ ಬೆಳಗಿಸಲು ಸ್ಥಾಪಿಸತಕ್ಕದ್ದು.

(2) ಸಂಚಯಕಗಳನ್ನು ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ ಕೊಠಡಿಯಲ್ಲಿ ಇಡತಕ್ಕದ್ದು ಮತ್ತು ಈ ಕೊಠಡಿಯು ಅಗ್ನಿನಿರೋಧಕ ಬಾಗಿಲುಗಳೊಂದಿಗೆ ಅಗ್ನಿ ಪ್ರತಿರೋಧಕ ರಚನೆಯದ್ದಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**62. ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರ ಸಾಮಗ್ರಿ.–** ನಿಯಂತ್ರಿಸುವ ಸ್ವಿಚ್ಚುಗಳು ಮತ್ತು ಕಟೌಟ್‌ಗಳೊಂದಿಗೆ ರೂಪಾಂತರಿಸುವ ಮತ್ತು ಪರಿವರ್ತಿಸುವ ಯಂತ್ರ ಸಾಮಗ್ರಿಯನ್ನು, ಹೊರಗಿನ ಗಾಳಿಗೆ ಸಾಕಷ್ಟು ವಾಯು ಸಂಚಾರವಿರುವ, ಸರಿಯಾಗಿ ಬೆಳಕಿರುವ ಮತ್ತು ಆಡಳಿತ ವರ್ಗಕ್ಕೆ ಸಿಗುವ ಸ್ಥಳದಲ್ಲಿಡತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ. ಪರಂತು, ಈ ನಿಯಮಗಳು ಜಾರಿಗೆ ಬಂದಂಥ ದಿನಾಂಕದಂದು ಅಸ್ತಿತ್ವದಲ್ಲಿದ್ದ ಸಿನಿಮಾಗಳಿಗೆ ಈ ನಿಯಮವು ಅನ್ವಯವಾಗತಕ್ಕದ್ದಲ್ಲ.

**63. ಮೋಟಾರುಗಳು, ಇತ್ಯಾದಿ.–** ಎಲ್ಲ ಮೋಟಾರುಗಳು ಮತ್ತು ವಿದ್ಯುಚ್ಛಕ್ತಿ ಸಾಧನ ಸಾಮಗ್ರಿಗಳನ್ನು ಅವುಗಳಿಗೆ ಅವಕಾಶ ಕೊಟ್ಟಿದ್ದರೆ, ಅವುಗಳು ವಿಶೇಷ ಷರತ್ತುಗಳಿಗೊಳಪಟ್ಟಿರತಕ್ಕದ್ದು. ಆದರೆ, ಮುನ್ನೂರು ವ್ಯಾಟ್‌ಗಳಿಗಿಂತ ಹೆಚ್ಚಾಗಿ ತೆಗೆದುಕೊಳ್ಳುವ ವಿದ್ಯುತ್ ಪಂಕಗಳು ಮತ್ತು ಅಂಥವೇ ಮೋಟಾರುಗಳನ್ನು ಸೂಕ್ತ ವಿತರಣಾ ಫಲಕದ ಮೇಲೆ ಫ್ಯೂಸುಗಳಿಂದ ಪ್ರತ್ಯೇಕವಾಗಿ ವೈರಿಂಗ್ ಮಾಡಿದ್ದರೆ ಉಪಯೋಗಿಸಬಹುದು.

**64. ಪ್ರತಿರೋಧ.–** ನಿಯಂತ್ರಣ ಉದ್ದೇಶಕ್ಕಾಗಿ ಪ್ರತಿರೋಧವನ್ನು ಹೊರತುಪಡಿಸಿ ಎಲ್ಲ ಪ್ರತಿರೋಧಗಳನ್ನು ಪ್ರೊಜೆಕ್ಷನ್ ಕೊಠಡಿಯ ಹೊರಗೆ ಮತ್ತು ಯುಕ್ತವಾಗಿ ಕಾರ್ಯಸಾಧ್ಯವಿದ್ದರೆ ಸಭಾಂಗಣದ ಹೊರಗಡೆ ಇಡತಕ್ಕದ್ದು, ಸಭಾಂಗಣದ ಒಳಗಡೆ ಇಟ್ಟರೆ, ಅಂಥ ಪ್ರತಿರೋಧವನ್ನು ಹೂತ ರಕ್ಷಕ ತಂತಿಯ ಮೂಲಕ ಅಥವಾ ಇತರ ಆಕಸ್ಮಿಕ ಸಂಪರ್ಕಗಳನ್ನು ತಡೆಗಟ್ಟುವ ಸಮರ್ಥ ಸಾಧನಗಳಿಂದ ಪರಿರಕ್ಷಿಸತಕ್ಕದ್ದು.

**65. ಚಾಪ ದೀಪಗಳು.–** (1) ಯಾವುದೇ ಸಿನಿಮಾದಲ್ಲಿ, ವಿದ್ಯುಚ್ಛಕ್ತಿ ಪರಿಶೀಲಕನ ಅನುಮತಿಯಿಲ್ಲದೆ ಸಭಾಂಗಣದಲ್ಲಿ ಅಥವಾ ಸಾರ್ವಜನಿಕರಿಗಾಗಿ ತರೆದಿರುವ ಯಾವುದೇ ಭಾಗದಲ್ಲಿ ಚಾಪ ದೀಪಗಳನ್ನು ಉಪಯೋಗಿಸತಕ್ಕದ್ದಲ್ಲ ಅಂಥ ಆವರಣಗಳ ಯಾವುದೇ ಭಾಗದಲ್ಲಿ ಅವುಗಳನ್ನು ಉಪಯೋಗಿಸಿದಾಗ ಬೀಳುವ ಗಾಜು ಮತ್ತು ಪ್ರಜ್ವಲಿಸುವ ಇಂಗಾಲದ ಕಣಗಳಿಂದ ಆಪಾಯದ ವಿರುದ್ಧ ರಕ್ಷಿಸಲು ವಿಶೇಷ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳತಕ್ಕದ್ದು. ಅವುಗಳನ್ನು ಸ್ಪರ್ಶಿಸಲು ನಿಯೋಜಿತನಾದ ವ್ಯಕ್ತಿಯ ಹೊರತು ಬೇರೆಯವರು ಸ್ಪರ್ಶಿಸಬಹುದಾದಂಥ ದೀಪಗಳು, ಲಾಂದ್ರಗಳ ಮತ್ತು ಜೋಡಣೆಗಳ ಎಲ್ಲ ಭಾಗಗಳನ್ನು ಚೌಕಟ್ಟಿನಿಂದ ವಿದ್ಯುತ್ ನಿರೋಧಕಗೊಳಿಸತಕ್ಕದ್ದು.

(2) ದೃಶ್ಯ ಸಲಕರಣೆ ಅಥವಾ ಇತರ ದಹ್ಯ ಸಾಮಗ್ರಿಗಳೊಂದಿಗೆ ಸಂಪರ್ಕದ ಮೂಲಕ ಬೆಂಕಿ ಹೊತ್ತಿಕೊಳ್ಳಲು ಸಾಕಷ್ಟು ಉಷ್ಣಾಂಶಕ್ಕೆ ಕಾವೇರಬಹುದಾದ ದಈಪದ ಲೋಹದ ಕೆಲಸದ ಯಾವುದೇ ತೆರೆದ ಭಾಗವನ್ನು ತಂತಿ ರಕ್ಷಕ ಮೂಲಕ ಪರಿರಕ್ಷಿಸತಕ್ಕದ್ದು. ಯಾವುದೇ ಸಂದರ್ಭದಲ್ಲಿ ಚಾಪ ದೀಪಗಳನ್ನು ಸಂವಾಹಕಗಳ ಮೂಲಕ ತೂಗುಬಿಡತಕ್ಕದ್ದಲ್ಲ.

(3) ಎಲ್ಲ ಚಾಪ ದೀಪಗಳನ್ನು ವಾತಾವರಣಕ್ಕೆ ಒಯ್ಯುವ ಗಾಳಿ ತೂರದ ನಾಳಗಳೊಂದಿಗೆ ಕೂಡಿಸತಕ್ಕದ್ದು.

**66. ಚಲನಚಿತ್ರ ದೀಪಗಳಿಗಾಗಿ ಕೇಬಲ್ಲುಗಳು.–** ಚಲನಚಿತ್ರ ದೀಪಗಳಿಗಾಗಿ ಕೇಬಲ್ಲುಗಳನ್ನು ಸಾಮಾನ್ಯ ದೀಪ ವ್ಯವಸ್ಥೆಯ ಪರಿಪಥದಲ್ಲಿ ಮುಖ್ಯ ಫ್ಯೂಜುಗಳ ಸರಬರಾಜು ಭಾಗದಿಂದ ಪ್ರತ್ಯೇಕ ಪರಿಪಥಗಳಾಗಿ ತೆಗೆದುಕೊಳ್ಳತಕ್ಕದ್ದು. ಸರಿಯಾದ ಫ್ಯೂಜ್ ರಕ್ಷಣೆಯೊಂದಿಗೆ ಸ್ವಿಚ್ಚನ್ನು ಸಮರ್ಥ ಜೋಡಿ ಕಂಬದಿಂದ ಚಲನಚಿತ್ರ ದೀಪ ಪರಿಪಥದಲ್ಲಿ ಪ್ರೊಜೆಕ್ಷನ್ ಕೊಠಡಿಯೊಳಗೆ ಜೋಡಿಸತಕ್ಕದ್ದು.

**67. ಕೇಬಲ್ಲುಗಳಿಗಾಗಿ ವಿದ್ಯುತ್ ನಿರೋಧಕ ಸಾಮಗ್ರಿ.–** ಪ್ರೊಜೆಕ್ಷನ್ ಕೊಠಡಿಯೊಳಗೆ ಪ್ರಕಾಶ ಬೀರುವ ದೀಪಗಳಿಗೆ ಹೋಗುವವಗಳನ್ನೊಳಗೊಂಡ ಎಲ್ಲಾ ವಿದ್ಯುತ್ ಕೇಬಲ್ಲುಗಳ ವಿದ್ಯುತ್ ನಿರೋಧಕ ಸಾಮಗ್ರಿಯನ್ನು ಅಗ್ನಿ ಪ್ರತಿರೋಧಕ ಸಾಮಗ್ರಿಯಿಂದ ಮುಚ್ಚತಕ್ಕದ್ದು. ವಿದ್ಯುತ್ ವೋಲ್ಟೇಜು ಒಂದು ನೂರು ಇಪ್ಪತ್ತೈದು ವೋಲ್ಟ್‌ಗಳನ್ನು ಮೀರಿದರೆ ಎಲ್ಲಾ ಕೇಬಲ್ಲುಗಳನ್ನು ಭೂಮಿಗೆ ಸೇರಿಸಿದ, ಸ್ಕ್ರೂ ಹಾಕಿರುವ ಲೋಹದ ನಳಿಕೆಗಳಲ್ಲಿ ಮುಚ್ಚಿಡತಕ್ಕದ್ದು. ಸ್ವಿಚ್ಚು ಬೋರ್ಡಿನಿಂದ ಪ್ರೊಜೆಕ್ಟರು ಮತ್ತು ಮೋಟಾರುಗಳಿಗೆ ಹೋಗುವ ಎಲ್ಲಾ ನಳಿಕೆಗಳನ್ನು ನೆಲದ ಹಾಸನ್ನು ಅಗೆಯದೆ ಪೂರ್ಣಗೊಳಿಸಿದ ನೆಲದಲ್ಲಿ ಹೂಳತಕ್ಕದ್ದು ಮತ್ತು ಯವುದೇ ಸಂದರ್ಭದಲ್ಲಿ ಕೇಬಲ್ಲುಗಳ ಮೇಲಿನ ನಳಿಕೆಗಳಿಗೆ ನೆಲದ ಮೇಲ್ಮೈ ಮೇಲೆ ಅವಕಾಶ ಕೊಡತಕ್ಕದ್ದಲ್ಲ. ಅಂಥ ನಳಿಗೆಗಳಲ್ಲಿ ಮುಚ್ಚಿದ್ದ ಹೊರತು ಸೀಸದಿಂದ ಮುಚ್ಚಿದ್ದ ಕೇಬಲ್ಲುಗಳನ್ನು ಉಪಯೋಗಿಸತಕ್ಕದ್ದಲ್ಲ.

**68. ನಿರ್ಗಮನ ಚಿಹ್ನೆ, ದಾರಿಗಳು, ಇತ್ಯಾದಿಗಳಿಗಾಗಿ ಸಹಾಯಕ ಸರಬರಾಜು.– (1)** ಸಭಾಂಗಣದೊಳಗೆ ನಡುದಾರಿಗಳು ಮತ್ತು ದಾರಿಗಳಲ್ಲಿ ನೆಲದೀಪಗಳನ್ನು ಒದಗಿಸತಕ್ಕದ್ದು. ಅವುಗಳ ವೋಲ್ಟೇಜು ಇಪ್ಪತ್ನಾಲ್ಕು ವೋಲ್ಟುಗಳನ್ನು ಮೀರತಕ್ಕದ್ದಲ್ಲ.

(2) ಸಾರ್ವಜನಿಕರು ಸಿನಿಮಾದೊಳಗೆ ಇರುವ ಕಾಲದಲ್ಲಿ ಪಾವಟಿಗೆಗಳು, ನಡೆವೆಗಳು, ದಾರಿಗಳು ಮತ್ತು ಹೊರಕ್ಕೆ ಹೋಗುವ ದಾರಿಗಳಲ್ಲಿ ಎಲ್ಲಾ ದೀಪಗಳನ್ನು ಹೊತ್ತಿಸಿಟ್ಟಿರತಕ್ಕದ್ದು.

(3) ಸಾರ್ವಜನಿಕರು ಆವರಣದಲ್ಲಿರುವಾಗ ಆದ್ಯಂತವಾಗಿ ಆವರಣದಲ್ಲಿ ಸುಸ್ಥಿತಿಯಲ್ಲಿರುವ ಕನಿಷ್ಠ ಪಕ್ಷ ಆರು ಟಾರ್ಚುಗಳನ್ನು ಇಟ್ಟಿರತಕ್ಕದ್ದು ಮತ್ತು ಅದು ದ್ವಾರಪಾಲಕರಿಗೆ ಸುಲಭವಾಗಿ ಸಿಗುವ ಹಾಗೆ ಇಡೀ ಕಟ್ಟಡದಲ್ಲಾ ಹಂಚಿರತಕ್ಕದ್ದು.

**69. ವೈರಿಂಗ್.–** (1) ಇಡೀ ಸಿನಿಮಾ ಆವರಣದ ವಿದ್ಯುತ್ ವೈರಿಂಗ್‌ನ್ನು ಲೋಹ ಅಥವಾ ಅನುಮೋದಿತ ಗಟ್ಟಿ ಪಾಲಿ ವೈನಲ್ ಕ್ಲೋರೈಡ್‌ನ ನಳಿಕೆ ಕೊಳವೆಗಳಲ್ಲಿ ಮಾಡತಕ್ಕದ್ದು.

(2) ಲೋಹದ ನಳಿಕೆ ಕೊಳವೆಗಳಿಗಾಗಿ ಉಳಿಬಳೆಗಳನ್ನು ಅವಶ್ಯವಿರುವಾಗಲೆಲ್ಲಾ ಉಪಯೋಗಿಸತಕ್ಕದ್ದು. ಎಲ್ಲಾ ಲೋಹದ ಕೊಳವೆಗಳನ್ನು ಸಮರ್ಥವಾಗಿ ಭೂಮಿಗೆ ಸಂಪರ್ಕಿಸತಕ್ಕದ್ದು ಮತ್ತು ಅವುಗಳಿಗೆ ಸ್ಕ್ರೂ ಜಾಯಿಂಟುಗಳು ಅಥವಾ ಒಳ್ಳೆಯ ಮತ್ತು ಕಾಯಂ ವಿದ್ಯುತ್ ಸಂಪರ್ಕವನ್ನು ಸುನಿಶ್ಚಿತಗೊಳಿಸುವ ಇತರೆ ಸಾಧನಗಳನ್ನು ಒದಗಿಸತಕ್ಕದ್ದು. ಅದನ್ನು ರಕ್ಷಾ ಸಂಪುಟಗಳು ಮತ್ತು ಇತರ ಜೋಡಣೆಗಳೊಂದಿಗೆ ಮುಂದುವರಿಸತಕ್ಕದ್ದು.

**70. ಜೋಡಣೆಗಳು.–** (1) ಎಲ್ಲ ತೂಗು ಹಾಕಿದ ಜೋಡಣೆಗಳನ್ನು ಭದ್ರವಾಗಿ ಜೋಡಿಸತಕ್ಕದ್ದು.

(2) ಸಂಯೋಜಿತ ಅನಿಲ ಮತ್ತು ವಿದ್ಯುತ್ ಜೋಡಣೆಗಳನ್ನು ಉಪಯೋಗಿಸತಕ್ಕದ್ದಲ್ಲ.

(3) ಸಭಾಂಗಣದಲ್ಲಿ ಮತ್ತು ಸಿನಿಮಾ ಕಟ್ಟಡದ ಮುಂಭಾಗದಲ್ಲಿ ಯಾವುವೇ ವಿದ್ಯುತ್ ದೀಪದ ಲೋಲಕಗಳು ಅಥವಾ ಬ್ರ್ಯಾಕೆಟ್ಟುಗಳು ಸಾಮಾನ್ಯವಾಗಿ ನೆಲದ ಮೇಲೆ ಜೋಡಣೆಗಳ ಅತಿ ಕೆಳಗಿನ ಮುಂಚಾಚಿರುವ ಭಾಗಕ್ಕೆ ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಿರತಕ್ಕದ್ದು. ಯಾವುವೇ ವಿದ್ಯುತ್ ಜೋಡಣೆಗಳು ಅಥವಾ ಯಾವುದೇ ವಿವರಣೆಯ ಸಲಕರಣೆಗಳನ್ನು ಸುರಕ್ಷಾ ಪರದೆಯು ಸರಿಯಾಗಿ ಕೆಲಸ ಮಾಡುವುದಕ್ಕೆ ಯಾವುದೇ ಕಾಲದಲ್ಲಿ ಅಡ್ಡಿಯಾಗುವ ಹಾಗೆ ಜೋಡಿಸತಕ್ಕದ್ದಲ್ಲ ಅಥವಾ ಅಳವಡಿಸತಕ್ಕದ್ದಲ್ಲ.

(4) ವಿದ್ಯುಚ್ಛಕ್ತಿ ಸ್ಥಾಪನೆಯ, ಕರ್ನಾಟಕ ಸರ್ಕಾರದ ಲೈಸೆನ್ಸ್ ಕೊಡುವ ಮಂಡಲಿಯು ಕೊಟ್ಟ ವೈರ್‌ಮೆನ್ನರ ಅಥವಾ ಮೇಲ್ವಿಚಾರಕನ ಪರ್ಮಿಟ್ಟನ್ನು ಹೊಂದಿರುವ ಸರಿಯಾದ ಅರ್ಹತೆ ಪಡೆದ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು ಅಥವಾ ಅದು ಲೈಸೆನ್ಸ್ ಪಡೆದ ವಿದ್ಯುಚ್ಛಕ್ತಿ ಕಾಂಟ್ರಾಕ್ಟರನ ಪ್ರಭಾರದಲ್ಲಿರತಕ್ಕದ್ದು, ಅವನ ಹೆಸರನ್ನು ವಿದ್ಯುಚ್ಛಕ್ತಿ ಪರಿಶೀಲಕನಿಗೆ ತಿಳಿಸತಕ್ಕದ್ದು.

(5) ವಿದ್ಯುತ್ ಆಘಾತದಿಂದ ನರಳುತ್ತಿರುವ ವ್ಯಕ್ತಿಗಳ ಚೇತರಿಕೆಗಾಗಿ ಇಂಗ್ಲಿಷ್‌ನಲ್ಲಿ ಮತ್ತು ಪ್ರಾದೇಶಿಕ ಭಾಷೆಗಳೆರಡರಲ್ಲೂ ಸೂಚನೆಗಳನ್ನು ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ವೈರ್‌ಮೆನ್ನರ ಉಪಯೋಗಕ್ಕಾಗಿ ಕನಿಷ್ಠಪಕ್ಷ ಸುಸ್ಥಿತಿಯಲ್ಲಿರುವ ಒಂದು ಜೊತೆ ರಬ್ಬರ್ ಕೈಚೀಲಗಳನ್ನು ಒದಗಿಸತಕ್ಕದ್ದು.

(6) ಭಾರತ ವಿದ್ಯುಚ್ಛಕ್ತಿ ನಿಯಮಗಳು, 1950 ಇವುಗಳ 33 ಮತ್ತು 61ನೇ ನಿಯಮಗಳ ಪ್ರಕಾರ ಭೂಸಂಪರ್ಕವನ್ನು ಸಮರ್ಥವಾಗಿ ಮತ್ತು ಪೂರ್ಣವಾಗಿ ಮಾಡತಕ್ಕದ್ದು ಮತ್ತು ಅದನ್ನು ಸರಿಯಾಗಿ ಇಟ್ಟುಕೊಂಡು ಬರತಕ್ಕದ್ದು. ಭೂ ವಿದ್ಯುತ್ ಧ್ರುವಗಳನ್ನು ತೆರೆದಿಡತಕ್ಕದ್ದು ಮತ್ತು ನಿಯತವಾಗಿ ನೀರು ಹಾಕುವುದು, ಪರಿಶೀಲನೆ ಮತ್ತು ಪರೀಕ್ಷೆಯನ್ನು ಅನುಗೊಳಿಸುವ ಹಾಗೆ ಐ.ಎಸ್. ಮಾನಕಗಳ ಪ್ರಕಾರ ಕಲ್ಲುಕಟ್ಟಡ ಆವೃತಗಳಲ್ಲಿ ಆವೃತಗೊಳಿಸತಕ್ಕದ್ದು.

**71. ಉತ್ಪಾದಿಸುವುದು.–** ವಿದ್ಯುತ್ ಸರಬರಾಜನ್ನು ಆವರಣದಲ್ಲಿನ ವಿಶೇಷ ಸ್ಥಾವರದಿಂದ ಪಡೆದಿರುವಲ್ಲಿ, ಅಂಥ ಸ್ಥಾವರವನ್ನು ಎಲ್ಲಾ ಸಂದರ್ಭಗಳಲ್ಲಿ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನು ಅನುಮೋದಿಸಿರಬೇಕು.

**72. ವೈರಿಂಗ್ ಯೋಜನೆ.–** ವಿದ್ಯುಚ್ಛಕ್ತಿ ಸ್ಥಾಪನೆಯ ಎಲ್ಲಾ ಪರಿಪಥಗಳ ಮತ್ತು ಉಪ ಪರಿಪಥಗಳ ವ್ಯವಸ್ಥೆಯನ್ನು ವಿತರಣಾ ಫಲಕಗಳ ಸ್ಥಾನವನ್ನು ಮತ್ತು ಕೇಬಲ್ಲುಗಳ ಗಾತ್ರವನ್ನು ಸ್ಪಷ್ಟವಾಗಿ ಸೂಚಿಸುವ ಏಕರೇಖೆಯಲ್ಲಿ ಚೌಕಟ್ಟು ಹಾಕಿರುವ ವೈರಿಂಗ್ ರೇಖಾಚಿತ್ರವನ್ನು ಆವರಣದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದನ್ನು ತಹಲ್‌ವರೆಗೆ ಇಡತಕ್ಕದ್ದು, ಅಂಥ ರೇಖಾಚಿತ್ರವನ್ನು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನು ಕ್ರಮಬದ್ಧವಾಗಿ ಅನುಮೋದಿಸಿರತಕ್ಕದ್ದು.

**73. ದೀಪ ವ್ಯವಸ್ಥೆಯ ಸಂವಾಹಕಗಳು.–** (1) ಪ್ರತಿಯೊಂದು ಸಿನಿಮಾ ಕಟ್ಟಡದಲ್ಲಿ ಸಂಬಂಧಪಟ್ಟ ಐ.ಎಸ್. ಮಾನಕಗಳಿಗೆ ಅನುಗುಣವಾದ ದೀಪ ವ್ಯವಸ್ಥೆಯ ಸಂವಾಹಕಗಳನ್ನು ಒದಗಿಸತಕ್ಕದ್ದು.

(2) ನಿಯಾನ್ ಚಿಹ್ನೆಗಳನ್ನು ಸ್ಥಾಪಿಸಿದ್ದರೆ ಅವುಗಳನ್ನು ಪ್ರಾರಂಭಿಸುವ ಮುಂಚೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನಿಂದ ಪರಿಶೀಲಿಸಿಕೊಳ್ಳತಕ್ಕದ್ದು.

## ಅಧ್ಯಾಯ – IX

## ಅಗ್ನಿ ನಂದಿಸುವುದು

**74. ದೂರವಾಣಿ.–** (1) ದೂರವಾಣಿ ಸೇವೆಗಳು ಮತ್ತು ಅಗ್ನಿಶಾಮಕ ಸಂಸ್ಥೆಯನ್ನು ಒದಗಿಸಿರುವ ಸ್ಥಳಗಳಲ್ಲಿ ಎಲ್ಲಾ ಸಿನಿಮಾಗಳೂ, ಸುಲಭವಾಗಿ ಲಭ್ಯವಾಗುವ ಸ್ಥಳದಲ್ಲಿ ಜೋಡಿಸತಕ್ಕಂಥ ದೂರವಾಣಿಯ ಮೂಲಕ ಅತಿ ಹತ್ತಿರದ ಅಗ್ನಿಶಾಮಕ ಠಾಣೆಯೊಂದಿಗೆ ಸಂಪರ್ಕವನ್ನು ಹೊಂದಿರತಕ್ಕದ್ದು.

(2) ಸಮಗ್ರ ದೂರವಾಣಿ ಸಂಪರ್ಕದ ಸ್ಥಾಪನೆ ಮತ್ತು ನಿರ್ವಹಣೆಯನ್ನು ಲೈಸೆನ್ಸ್‌ದಾರನ ಖರ್ಚಿನಲ್ಲಿ ನಿರ್ವಹಿಸತಕ್ಕದ್ದು.

**75. ಅಗ್ನಿಶಾಮಕ ಸಲಕರಣೆ.–** ಪ್ರತಿಯೊಂದು ಸಿನಿಮಾ ಕಟ್ಟಡದಲ್ಲಿ ಈ ಕೆಳಕಂಡ ಅಗ್ನಿಶಾಮಕ ಉಪಕರಣಗಳನ್ನು ಒದಗಿಸತಕ್ಕದ್ದು, ಎಂದರೆ:–

(ಕ) ಪ್ರೊಜೆಕ್ಷನ್ ಕೊಠಡಿಯಲ್ಲಿ,

(i) ಅಸ್ಬೆಸ್ಟಾಸ್ ಅಥವಾ ಒಂದು ದಪ್ಪ ಉಣ್ಣೆ ಕಂಬಳಿ ;

(ii) ಒಂದು ಬಕೆಟ್ ನೀರು ;

(iii) ಎರಡು ಕಿಲೋಗ್ರಾಂ ಸಾಮರ್ಥ್ಯದ ಒಂದು ಇಂಗಾಲಾಮ್ಲ ನಂದಿಗೆ ಅಥವಾ ಒಂದು ಲೀಟರು ಸಾಮರ್ಥ್ಯಕ್ಕಿಂತ ಕಡಿಮೆ ಇಲ್ಲದ ಒಂದು ಕಾರ್ಬನ್ ಟೆರೋಕ್ಲೋರೇಡ್‌ನಂದಿಗೆ ;

(ಖ) ಸಭಾಂಗಣ ಮತ್ತು ಬಾಲ್ಕನಿಯಲ್ಲಿ,–

(i) ಸಭಾಂಗಣದಲ್ಲಿ ಪ್ರತಿಯೊಂದು ಒಂಬತ್ತು ಲೀಟರ್ ಸಾಮರ್ಥ್ಯದ ನಾಲ್ಕು ಸೋಡಾ ಆಸಿಡ್ ನಂದಿಗೆಗಳು ಮತ್ತು ಬಾಲ್ಕನಿಯು ಇರುವಲ್ಲೆಲ್ಲಾ ಬಾಲ್ಕನಿಯಲ್ಲಿ ಎರಡು ಅಂಥ ನಂದಿಗೆಗಳು;

(ii) ಸಭಾಂಗಣದಲ್ಲಿ ಉದ್ದದಲ್ಲಿ ಆರು ಮೀಟರುಗಳಿಗಿಂತ ಕಡಿಮೆಯಿಲ್ಲದ ಬಗ್ಗಿಸಬಹುದಾದ ಮತ್ತು ನೀರ್ಕೊಳವೆಗೆ ಲಗತ್ತಿಸಿದ ಎರಡು ರಿಕಾಪು ಪಂಪುಗಳು ಮತ್ತು ಬಾಲ್ಕನಿಯು ಇರುವಲೆಲ್ಲಾ ಬಾಲ್ಕನಿಯಲ್ಲಿ ಒಂದು ರಿಕಾಪು ಪಂಪು, ಪ್ರತಿಯೊಂದು ರಿಕಾಪು ಪಂಪಿಗೆ ಯಾವಾಗಲೂ ನೀರು ತುಂಬಿಡಬೇಕಾದ ಪ್ರತಿಯೊಂದು ಹತ್ತು ಲೀಟರು ಸಾಮರ್ಥ್ಯದ ಸಮತಲವುಳ್ಳ ಎರಡು ಬಕೆಟುಗಳು ;

(iii) ನೆಲ ಪ್ರದೇಶದ ಪ್ರತಿ ಒಂದು ನೂರು ಚದರ ಮೀಟರುಗಳು ಅಥವಾ ಅದರ ಭಾಗಕ್ಕಾಗಿ ನೀರು ತುಂಬಿದ ಹತ್ತು ಲೀಟರುಗಳ ಸಾಮರ್ಥ್ಯದ ಒಂದು ಅಗ್ನಿಶಾಮಕ ಬಕೆಟ್, ಸಭಾಂಗಣದಲ್ಲಿ ಕನಿಷ್ಠ ಪಕ್ಷ ಹನ್ನೆರಡು ಬಕೆಟುಗಳು ಮತ್ತು ಬಾಲ್ಕನಿಯಲ್ಲಿ ಎರಡು ಇರತಕ್ಕದ್ದು ;

(ಗ) ವಿದ್ಯುಚ್ಛಕ್ತಿ ಸ್ಥಾಪನೆಗಳ ಹತ್ತಿರ,

(i) ಮುಖ್ಯ ಸ್ವಿಚ್ ಫಲಕದ ಹತ್ತಿರದಲ್ಲಿ ಒಂದು ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ ಇಲ್ಲದ ಒಂದು ಕಾರ್ಬನ್ ಟೆಟ್ರಾಕ್ಲೋರೈಡ್ ನಂದಿಗೆ ಅಥವಾ ಎರಡು ಕಿಲೋಗ್ರಾಂ ಸಾಮರ್ಥ್ಯಕ್ಕಿಂತ ಕಡಿಮೆಯಿಲ್ಲದ ಇಂಗಾಲಾಮ್ಲ ನಂದಿಗೆ;

(ii) ಯಾವುದೇ ಇತರ ವಿದ್ಯುಚ್ಛಕ್ತಿ ಯಂತ್ರ ಸಾಮಗ್ರಿ ಅಥವಾ ಸಲಕರಣೆಯಂತೆ ವಿದ್ಯುಚ್ಛಕ್ತಿ ಮೀಟರುಗಳು, ರೋಟರಿ ಕನ್ವರ್ಟರುಗಳನ್ನು ಸ್ಥಾಪಿಸಿರುವಾಗಲೆಲ್ಲಾ ಎರಡು ಕಿಲೋಗ್ರಾಂ ಸಾಮರ್ಥ್ಯದ ಒಂದು ಇಂಗಾಲಾಮ್ಲ ನಂದಿಗೆ ಅಥವಾ ಒಂದು ಲೀಟರ್ ಸಾಮರ್ಥ್ಯದ ಒಂದು ಕಾರ್ಬನ್ ಟೆಟ್ರಾಕ್ಲೋರೈಡ್ ನಂದಿಗೆ;

–ಇರತಕ್ಕದ್ದು.

(2) ಎಲ್ಲಾ ಅಗ್ನಿಶಾಮಕ ಉಪಕರಣಗಳನ್ನು ಉಪಯೋಗಕ್ಕೆ ಸಿದ್ದವಾಗಿ ಲಭ್ಯವಾಗುವಂಥ ರೀತಿಯಲ್ಲಿ ಇಡತಕ್ಕದ್ದು. ಸಭಾಂಗಣದಲ್ಲಿನ ಅಗ್ನಿಶಾಮಕ ಉಪಕರಣಗಳ ಬಹುಭಾಗವನ್ನು ಪರದೆಯ ಅಕ್ಕಪಕ್ಕದಲ್ಲಿ ಜೋಡಿಸತಕ್ಕದ್ದು.

(3) ರಿಕಾಪು ಪಂಪುಗಳೊಂದಿಗೆ ಜೋಡಿಸಿ ಉಪಯೋಗಿಸಲು ಒದಗಿಸಲಾದವುಗಳನ್ನು ಹೊರತುಪಡಿಸಿ ಅಗ್ನಿಶಾಮಕ ಬಕೆಟುಗಳು ದುಂಡನೆಯ ತಳವನ್ನು ಮತ್ತು ಹಿಡಿಕೆಗಳನ್ನು ಹೊಂದಿರತಕ್ಕದ್ದು ಮತ್ತು ಅವು ಹತ್ತು ಲೀಟರು ನೀರನ್ನು ಹಿಡಿಯುವ ಸಾಮರ್ಥ್ಯವನ್ನು, ಹೊಂದಿರತಕ್ಕದ್ದು ಅವುಗಳಿಗೆ ಕೆಂಪು ಬಣ್ಣವನ್ನು ಬಳಿದಿರತಕ್ಕದ್ದು ಇಂಗ್ಲೀಷ್ ಮತ್ತು ಕನ್ನಡದಲ್ಲಿ ದೊಡ್ಡ ಬಿಳಿಯ ಅಕ್ಷರಗಳಲ್ಲಿ **"FIRE"** ಎಂಬ ಪದನ್ನು ಬರೆದಿರತಕ್ಕದ್ದು.

(4) ಸಾಗಿಸಲು ಸಾಧ್ಯವಾದ ಸೋಡಾ ಆಸಿಡ್ ಅಗ್ನಿನಂದಿಗೆಯು ಮೂರು ವರ್ಷಗಳಿಗಿಂತ ಹೆಚ್ಚು ಹಳೆಯದಾಗಿರುವಲ್ಲಿ ಅಥವಾ ಈ ಹಿಂದೆ ಅದನ್ನು ಪರೀಕ್ಷಿಸಿಲ್ಲದಿರುವಲ್ಲಿ ಅದನ್ನು ಇಪ್ಪತ್ತು ಕಿಲೋಗ್ರಾಮ ಚದರ ಸೆಂಟೀ ಮೀಟರ್ ಒತ್ತಡವನ್ನು ಒಂದು ನಿಮಿಷ ತಡೆದುಕೊಳ್ಳಬಲ್ಲದು ಎಂದು ತೋರಿಸಲು ಮುಖ್ಯ ಅಗ್ನಿಶಾಮಕ ಅಧಿಕಾರಿ ಬೆಂಗಳೂರು ಇವರು ಅಥವಾ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಇಂಜಿನಿಯರಿಂಗ್ ಫರ್ಮ್ ಹೈಡ್ರಾಲಿಕ್ ಒತ್ತಡದ ಮೂಲಕ ಪರೀಕ್ಷಿಸತಕ್ಕದ್ದು ಮತ್ತು ಅಂಥ ಪರೀಕ್ಷೆಯ ಪ್ರಮಾಣಪತ್ರವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು. ಆ ತರುವಾಯ ವಾರ್ಷಿಕವಾಗಿ ಅಂಥವೇ ಪರೀಕ್ಷೆಗಳನ್ನು ಪುನರಾವರ್ತಿಸತಕ್ಕದ್ದು.

(5) ಸಿನಿಮಾ ಕಟ್ಟಡದ ಸೇವಕರು ಮತ್ತು ಸಿಬ್ಬಂದಿಗೆ ಆವರಣಗಳಲ್ಲಿ ಇಟ್ಟುಕೊಂಡು ಬಂದಿರುವ ಎಲ್ಲ ಅಗ್ನಿಶಾಮಕ ಸಾಧನ ಸಾಮಗ್ರಿಯ ಉಪಯೋಗದಲ್ಲಿ ತರಬೇತಿ ಕೊಡತಕ್ಕದ್ದು.

(6) ಲೈಸೆನ್ಸ್‌ದಾರನ,–

(i) ಪ್ರತಿ ಮೂರು ತಿಂಗಳಿಗೊಂದು ಸಲ ಲೈಸೆನ್ಸ್ ಪಡೆದ ಆವರಣದಲ್ಲಿ ಒದಗಿಸಲಾದ ಪ್ರತಿಯೊಂದು ಸಾಗಿಸಲು ಸಾಧ್ಯವಾದ ಅಗ್ನಿನಂದಿಗೆಯ ಸಂಪುಟವನ್ನು ಖಾಲಿ ಮಾಡತಕ್ಕದ್ದು, ಅದರ ಮೂತಿಗಳನ್ನು ಮತ್ತು ಕೆಲಸ ಮಾಡುತ್ತಿರುವ ಭಾಗಗಳನ್ನು ಸ್ವಚ್ಛಗೊಳಿಸತಕ್ಕದ್ದು, ಅದರಲ್ಲಿರುವ ದ್ರವಗಳನ್ನು ಕಲಕತಕ್ಕದ್ದು ಮತ್ತು ಅದನ್ನು ಮುಚ್ಚಳದಿಂದ ಮುಚ್ಚತಕ್ಕದ್ದು ಮತ್ತು ಕೂಡಲೇ ಹಾಗೆ ಮಾಡಿರುವುದರ ಬಗ್ಗೆ ಕಾಗದದ ಚೀಟಿಯ ಮೇಲೆ ದಿನಾಂಕವನ್ನು ಕೂಡಲೇ ದಾಖಲ್ಮಾಡತಕ್ಕದ್ದು ಮತ್ತು ಅದನ್ನು ಅಂಥ ಸಂಪುಟದ ಹೊರಗಡೆ ಅಂಟಿಸತಕ್ಕದ್ದು;

(ii) ಲೈಸೆನ್ಸ್ ಪಡೆದ ಆವರಣದಲ್ಲಿ ಒದಗಿಸಿದ ಸುಲಭವಾಗಿ ಸಾಗಿಸಬಹುದಾದ ಪ್ರತಿಯೊಂದು ಅಗ್ನಿನಂದಿಗೆಯನ್ನು ಪ್ರತಿ ಒಂದು ವರ್ಷಕ್ಕೊಮ್ಮೆ ವಿಸರ್ಜಿಸತಕ್ಕದ್ದು, ಖಾಲಿ ಮಾಡತಕ್ಕದ್ದು ಮತ್ತು ಅದನ್ನು ಪುನಃ ತುಂಬತಕ್ಕದ್ದು ಮತ್ತು ಅಂಥ ಪುನಃ ತುಂಬಿದ ದಿನಾಂಕವನ್ನು ಸುಲಭವಾಗಿ ಸಾಗಿಸಬಹುದಾದ ಆಗ್ನಿನಂದಿಗೆಯ ಸಂಪುಟದ ಹೊರಮೈ ಮೇಲೆ ಸೂಕ್ತ ಜಾಗದಲ್ಲಿ ದಾಖಲ್ಮಾಡತಕ್ಕದ್ದು ;

(iii) ಅಗ್ನಿ ನಂದಿಗೆಗಳ ಉಪಯೋಗಕ್ಕಾಗಿ ಕನಿಷ್ಠ ಪಕ್ಷ ಐದು ಬಿಡಿ ರೀಫಿಲ್ಲುಗಳನ್ನು ದಾಸ್ತಾನಿಟ್ಟಿರತಕ್ಕದ್ದು.

**76. ಅಗ್ನಿಯ ಬಗ್ಗೆ ಮುನ್ನೆಚ್ಚರಿಕೆ.–** (1) ಬಾಗಿಲುಗಳು ಮತ್ತು ದಾರಿಗಳನ್ನು ಮುಚ್ಚುವ ಎಲ್ಲ ಪರದೆಗಳನ್ನು, ನೆಲದ ಮೇಲೆ ಎಳದಾಡುವ ಹಾಗೆ ತೂಗುಹಾಕತಕ್ಕದ್ದು ಮತ್ತು ಅದರ ಕೆಳತುದಿಯು ಬಾಗಿಲ ಮಟ್ಟದ ಮೇಲೆ ಕನಿಷ್ಠ ಪಕ್ಷ ಹತ್ತು ಸೆಂಟೀ ಮೀಟರ್ ಮೇಲೆ ಇರತಕ್ಕದ್ದು.

(2) ಯಾರೇ ಅನಧಿಕೃತ ವ್ಯಕ್ತಿಗೆ ಪ್ರೊಜೆಕ್ಷನ್ ಕೊಠಡಿಯನ್ನು ಪ್ರವೇಶಿಸಲು ಅವಕಾಶ ಕೊಡತಕ್ಕದ್ದಲ್ಲ.

(3) ಪ್ರೊಜೆಕ್ಷನ್ ಕೊಠಡಿಯಲ್ಲಿ ಯಾವುದೇ ಧೂಮಪಾನಕ್ಕೆ ಅವಕಾಶ ಕೊಡತಕ್ಕದ್ದಲ್ಲ.

(4) ಯಾವುದೇ ದಹ್ಯ ವಸ್ತುವನ್ನು ಪ್ರೊಜೆಕ್ಷನ್ ಕೊಠಡಿಯೊಳಕ್ಕೆ ಅನವಶ್ಯಕವಾಗಿ ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ಅದರಲ್ಲಿ ಉಳಿಯಲು ಅವಕಾಶ ಕೊಡತಕ್ಕದ್ದಲ್ಲ.

(5) ಚಲನಚಿತ್ರ ಪ್ರೊಜೆಕ್ಟರುಗಳಿಗೆ ದೃಢವಾದ ರಚನೆಯ ಎರಡು ಲೋಹದ ಫಿಲ್ಮಂ ಪೆಟ್ಟಿಗೆಗಳೊಂದಿಗೆ ಜೋಡಿಸತಕ್ಕದ್ದು, ಅದಕ್ಕೆ ಮತ್ತು ಅದರಿಂದ ಫಿಲ್ಮಂ ಹೋಗುವಂತೆ ಮತ್ತು ಬರುವಂತೆ ಮಾಡತಕ್ಕದ್ದು.

(6) ಫಿಲ್ಮು ಪೆಟ್ಟಿಗೆಗಳಿಗೆ, ಪೆಟ್ಟಿಗೆಯ ಒಳಕ್ಕೆ ಜ್ವಾಲೆ ಹೋಗುವುದನ್ನು ತಡೆಗಟ್ಟುವ ಹಾಗೆ ರಚಿಸಿದ ಫಿಲ್ಮ್ ಕಂಡಿಯೊಂದಿಗೆ ಜೋಡಿಸತಕ್ಕದ್ದು.

(7) ಫಿಲ್ಮುಗಳನ್ನು, ಉರುಳೆಯ ಪಕ್ಕ ಪಟ್ಟಿಯ ಅಂಚುಗಳಾಚೆ ಸುತ್ತಿದ ಫಿಲ್ಮು ಯಾವುದೇ ಕಾಲದಲ್ಲಿ ಹೋಗದ ಅಥವಾ ಮುಂಚಾಚದ ರೀತಿಯಲ್ಲಿ ಅಂಥ ಉರುಳೆಗಳ ಮೇಲೆ ಸುರಳಿ ಸುತ್ತತಕ್ಕದ್ದು. ಫಿಲ್ಮುಗಳ ರಿವೈಂಡಿಂಗನ್ನು ರಿವೈಂಡಿಂಗ್ ರೂಮು ಅಥವಾ ಆವರಣದಲ್ಲಿ ಮಾತ್ರ ನಡೆಸತಕ್ಕದ್ದು.

(8) ಮುಚ್ಚಿದ ಲೋಹ ಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ಒಂದರ ಮೇಲೆ ಒಂದನ್ನು ಹೇರದಂತೆ ಮುಚ್ಚಿದ ಲೋಹದ ಪೆಟ್ಟಿಗೆಗಳನ್ನು ದಾಸ್ತಾನು ಮಾಡುವುದಕ್ಕಾಗಿ ಪೆಟ್ಟಿಗೆಯನ್ನು ಒದಗಿಸತಕ್ಕದ್ದು.

(9) ಸಿನಿಮಾ ಥಿಯೇಟರಿನಲ್ಲಿ ಜಮಖಾನೆಗಳನ್ನು ಹಾಸಿದ್ದರೆ, ಅವುಗಳು ಉಣ್ಣೆ ಅಥವಾ ರೇಷ್ಮೆ ಅಥವಾ ಯಾವುದೇ ಉರಿಯದ ವಸ್ತುವಿನವು ಮಾತ್ರ ಆಗಿರತಕ್ಕದ್ದು ಮತ್ತು ಅವುಗಳನ್ನು ಅಂಚುಗಳು ಸುತ್ತಿಕೊಳ್ಳದಂತೆ ಅಥವಾ ಮಡಚಿಕೊಳ್ಳದಂತೆ ನೆಲಕ್ಕೆ ಭದ್ರವಾಗಿ ಜೋಡಿಸತಕ್ಕದ್ದು. ಚಾಪೆಗಳನ್ನು ಉಪಯೋಗಿಸಿದರೆ, ಅವುಗಳು ಅಗ್ನಿ ಪ್ರತಿರೋಧಕ ಸಾಮಗ್ರಿಯದಾಗಿರತಕ್ಕದ್ದು ಮತ್ತು ಅವುಗಳನ್ನು ಚಾಪೆಯ ಗಾತ್ರವನ್ನು ಮೀರದ ಮತ್ತು ಚಾಪೆಯ ದಪ್ಪಕ್ಕಿಂತ ಅಳವಲ್ಲದ ತಗ್ಗಿನಲ್ಲಿ ನೆಲದೊಳಕ್ಕೆ ಬಿಡತಕ್ಕದ್ದು,

(10) ವಿದ್ಯುತ್ ಸ್ವಿಚ್ಚುಗಳನ್ನು ಟಿಕೆಟ್ ಬೂತುಗಳಲ್ಲಿ ಸ್ಥಾಪಿಸಿದ್ದರೆ ಅವುಗಳನ್ನು ಸರಿಯಾಗಿ ಮುಚ್ಚುವುದರ ಮೂಲಕ ಸಾರ್ವಜನಿಕರಿಗೆ ನಿಲುಕದಂತೆ ಮಾಡತಕ್ಕದ್ದು.

## ಅಧ್ಯಾಯ – X

## ಆವರಣದ ನಿರ್ವಹಣೆ

**77. ಸ್ವಚ್ಛತೆಯ ನಿರ್ವಹಣೆ ಇತ್ಯಾದಿ.–** ಲೈಸೆನ್ಸ್‌ದಾರನು,–

(1) ಕಟ್ಟಡದಲ್ಲಿನ ಎಲ್ಲ ಕಿಟಕಿಗಳು ಮತ್ತು ವಾಯುಸಂಚಾರದ ಇತರ ಸಾಧನಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡಿರುವಂತೆ ;

(2) ಅಂಥ ಕಟ್ಟಡ ಅಥವಾ ಸ್ಥಳದ ಪ್ರತಿಯೊಂದು ಭಾಗವನ್ನು ಸರಿಯಾದ ನೈರ್ಮಲ್ಯ ಸ್ಥಿತಿಗಳಲ್ಲಿ ಇಟ್ಟುಕೊಂಡಿರುವಂತೆ ;

(3) ಕಟ್ಟಡದ ಗೋಡೆಗಳಿಗೆ ಕನಿಷ್ಠ ಪಕ್ಷ ಪ್ರತಿ ಆರು ತಿಂಗಳಿಗೊಂದು ಸಲ ಸುಣ್ಣ ಬಳಿಸುವಂತೆ ಅಥವಾ ಪ್ರತಿ ಎರಡು ವರ್ಷಗಳಿಗೊಂದು ಸಲ ಬಣ್ಣ ಬಳಿಸುವಂತೆ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಬಣ್ಣ ಬಳಿಸುವಂತೆ;

(4) ಆವರಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ಮತ್ತು ಕನಿಷ್ಠಪಕ್ಷ ಪ್ರತಿ ಇಪ್ಪತ್ತನಾಲ್ಕು ಗಂಟೆಗಳಿಗೊಂದು ಸಲ ಅಥವಾ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಥವಾ ಇತರ ಸಕ್ಷಮ ಪೌರ ಅಥವಾ ಆರೋಗ್ಯ ಪ್ರಾಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಮೇಲಿಂದ ಮೇಲೆ ಎಲ್ಲ ಕಸಕುಪ್ಪೆ ವಸ್ತುಗಳನ್ನು ತೆಗೆದುಹಾಕುವಂತೆ; ಮತ್ತು

(5) ಫ್ಯಾನುಗಳು, ಗಾಜು ಮತ್ತು ಶೇಡುಗಳಂಥ ವಿದ್ಯುತ್ ಸಾಧನ ಸಾಮಗ್ರಿಯನ್ನು ನಿಯತ ಕಾಲಿಕವಾಗಿ ಸ್ವಚ್ಛಗೊಳಿಸುವಂತೆ ಮತ್ತು ಅಂದವಾದ ಸ್ಥಿತಿಯಲ್ಲಿಡುವಂತೆ,

– ಮಾಡತಕ್ಕದ್ದು.

**78. ಧೂಮಪಾನ ನಿಷೇಧ.–** ಯಾರೇ ವ್ಯಕ್ತಿಯು, ಸಭಾಂಗಣದಲ್ಲಿ ಧೂಮಪಾನ ಮಾಡತಕ್ಕದ್ದಲ್ಲ ಮತ್ತು ಸಿನಿಮಾ ಲೈಸೆನ್ಸ್‌ನ ಯಾರೇ ಧಾರಕ ಅಥವಾ ಅವನು ನಾವಲ್ಲಿ ನಿರ್ದೇಶಿಸಿದ ವ್ಯವಸ್ಥಾಪಕ ಅಥವಾ ವ್ಯವಸ್ಥಾಪಕರು ಪ್ರದರ್ಶನದ ಅವಧಿಯಲ್ಲಿ ಸಭಾಂಗಣದಲ್ಲಿ ಧೂಮಪಾನಕ್ಕೆ ಅವಕಾಶ ಕೊಡತಕ್ಕದ್ದಲ್ಲ,

**79. ಪೀಕದಾನಿಗಳು.–** ಲೈಸೆನ್ಸ್‌ದಾರನು, ಸಾರ್ವಜನಿಕ ಉಪಯೋಗಕ್ಕಾಗಿ ಸಂಬಂಧಪಟ್ಟ ಆರೋಗ್ಯಾಧಿಕಾರಿಯ ಶಿಫಾರಸ್ಸಿನ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗಳು ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯನ್ನು ಮತ್ತು ಸ್ಥಳಗಳಲ್ಲಿ ಅಂಥ ವಿವರಣೆಯ ಪೀಕದಾನಿಗಳನ್ನು ಒದಗಿಸತಕ್ಕದ್ದು, ಪೀಕದಾನಿಗಳು, ಬಲವಾದ ಸೋಂಕು ನಿವಾರಕವನ್ನೊಳಗೊಂಡಿರತಕ್ಕದ್ದು ಮತ್ತು ಅದನ್ನು ಕಾಲಕಾಲಕ್ಕೆ ಖಾಲಿ ಮಾಡತಕ್ಕದ್ದು. ಅಂಥ ಪೀಕದಾನಿಗಳ ಉಪಯೋಗಕ್ಕಾಗಿ ನೋಟೀಸ್‌ಗಳನ್ನು ಸಿನಿಮಾದ ಪ್ರಮುಖ ಭಾಗಗಳಲ್ಲಿ ಪ್ರದರ್ಶಿಸತಕ್ಕದ್ದು. ಯಾರೇ ವ್ಯಕ್ತಿಯು ಯಾವುದೇ ಕಾಲದಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಪೀಕದಾನಿಗಳಲ್ಲಿ ಅಲ್ಲದೆ ಸಿನಿಮಾ ಆವರಣದ ಯಾವುದೇ ಇತರ ಭಾಗದಲ್ಲಿ ಉಗುಳತಕ್ಕದ್ದಲ್ಲ.

**80. ತಿರುಗು ವ್ಯಾಪಾರದ ನಿಷೇಧ.–** ಯಾರೇ ವ್ಯಕ್ತಿಯು ಆಟ ಅಥವಾ ಪ್ರದರ್ಶನದ ಮಧ್ಯಂತರ ಕಾಲದಲ್ಲಿ ಮತ್ತು ಯಾರೇ ಲೈಸೆನ್ಸ್‌ದಾರ ಅಥವಾ ಅವನ ನಾಮನಿರ್ದೇಶಿತನು ಆಟ ಅಥವಾ ಪ್ರದರ್ಶನದ ಅವಧಿಯಲ್ಲಿ ಅಥವಾ ಆಟ ಅಥವಾ ಪ್ರದರ್ಶನದ ಮಧ್ಯಂತರ ಕಾಲದಲ್ಲಿ ಯಾರೇ ವ್ಯಕ್ತಿಗೆ,–

(1) ಸಭಾಂಗಣದಲ್ಲಿ ತಿರುಗಿಕೊಂಡು ವ್ಯಾಪಾರ ಮಾಡಲು; ಅಥವಾ

(2) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ತಿಂಡಿ ತಿನಿಸು ಅಥವಾ ಪಾನೀಯವನ್ನು ಮಾರಾಟ ಮಾಡಲು ಅಥವಾ ಸರಬರಾಜು ಮಾಡಲು ; ಅಥವಾ

(3) ಸಭಾಂಗಣದಲ್ಲಿಯೇ ಪ್ರೇಕ್ಷಕ ವರ್ಗದ ಯಾರೇ ಸದಸ್ಯನಿಗೆ ಯಾವುದೇ ವಸ್ತುಗಳನ್ನು ಅಥವಾ ಪದಾರ್ಥವನ್ನು ಪ್ರತಿಫಲಕ್ಕಾಗಿಯೇ ಆಗಲಿ ಅಥವಾ ಅದಿಲ್ಲದೆಯೇ ಅಗಲಿ ವಿತರಿಸಲು ಅಥವಾ ಮಾರಾಟ ಮಾಡಲು

– ಅವಕಾಶ ಕೊಡತಕ್ಕದ್ದಲ್ಲ.

**81. ಮಿತಿಮೀರಿದ ಜನಸಂದಣಿ ನಿಷೇಧ.–** ಯಾರೇ ಲೈಸೆನ್ಸ್‌ದಾರನ್ನು ಸಭಾಂಗಣದ ಯಾವುದೇ ಭಾಗಕ್ಕೆ ಅಂಥ ಭಾಗದಲ್ಲಿ ಆ ಸ್ಥಳಾವಕಾಶ ಒದಗಿಸಲು ಲೈಸೆನ್ಸ್‌ನಲ್ಲಿ ಅಧಿಕೃತಗೊಳಿಸಿದ ಗರಿಷ್ಠ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳನ್ನು ಸೇರಿಸತಕ್ಕದ್ದಲ್ಲ, ಈ ಗರಿಷ್ಠತೆಯನ್ನು ಮೀರಿಲ್ಲವೆಂಬುದನ್ನು ನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಇನ್ನೂ ವಿಶೇಷವಾಗಿ ಯಾವುದೇ ಕಾಲದಲ್ಲಿ ಸಕ್ಷಮ ಪ್ರಾಧಿಕಾರಿಯು ಪರಿಶೀಲಿಸಲು ಸಾಧ್ಯವಾಗುವಂತೆ ಲೈಸೆನ್ಸ್‌ದಾರನು ಪ್ರತಿಗಳು ಮತ್ತು ಪಕ್ಕ ಪ್ರತಿಗಳ ಮೇಲೆ ಕ್ರಮ ಸಂಖ್ಯೆಗಳು ಮತ್ತು ಪ್ರದರ್ಶನದ ದಿನಾಂಕ ಮತ್ತು ಸಂಖ್ಯೆಯನ್ನು ಹೊಂದಿರುವ ಟಿಕೇಟುಗಳನ್ನು ಕೊಡತಕ್ಕದ್ದು. ಪ್ರತಿಯೊಂದು ಪ್ರದರ್ಶನದ ತರುವಾಯ, ಟಿಕೆಟ್ ಪುಸ್ತಕಗಳಲ್ಲಿ ಕೊಟ್ಟ ಕೊನೆಯ ಪಕ್ಕ ಪ್ರತಿಯ ಮೇಲೆ 'ಮುಕ್ತಾಯವಾಗಿದೆ' ಎಂದು ಗುರುತು ಮಾಡತಕ್ಕದ್ದು.

**82. ಅಪರೇಟರುಗಳ ಕರ್ತವ್ಯ ಇತ್ಯಾದಿ.–** ಪ್ರೊಜೆಕ್ಟಿಂಗ್ ಸಲಕರಣೆ, ವಿದ್ಯುಚ್ಛಕ್ತಿ ಸ್ಥಾಪನೆಗಳು ಮತ್ತು ಸ್ಥಿರಯಂತ್ರ ಮತ್ತು ಎಂಜಿನ್ ಕೊಠಡಿಗಳು ಯಾವುವಾದರೂ ಇದ್ದರೆ ಅವುಗಳ ಪ್ರಭಾರದಲ್ಲಿರುವ ವ್ಯಕ್ತಿಗಳು ಪ್ರತಿಯೊಂದು ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಮುಂಚೆ ಅವರ ಅನುಕ್ರಮ ಪ್ರಭಾರದಲ್ಲಿರುವ ಸಲಕರಣೆಗಳು ಅಥವಾ ಸ್ಥಿರಯಂತ್ರವು ಕೆಲಸ ಮಾಡುವ ಸ್ಥಿತಿಯಲ್ಲಿದೆ ಎಂದು ಅವನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

**83. ಯಾವುದೇ ಸಿನಿಮಾ ಕಟ್ಟಡವನ್ನು ಯಾವುದೇ ಇತರೆ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.–** ಯಾವುದೇ ಸಿನಿಮಾ ಕಟ್ಟಡವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಬರಹದಲ್ಲಿನ ಪೂರ್ವಾನುಮತಿಯ ಹೊರತು ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಅಲ್ಲದೆ ಯಾವುದೇ ಇತರ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

**84. ಕಂಡಿ ಯಂತ್ರದ ನಿಷೇಧ.–** ಯಾವುದೇ ಕಂಡಿ ಅಥವಾ ಮನೋರಂಜನಾ ಯಂತ್ರವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಬರಹದಲ್ಲಿನ ಅನುಮತಿಯ ಹೊರತು ಸಿನಿಮಾ ಕಟ್ಟಡದಲ್ಲಿ ನಡೆಸತಕ್ಕದ್ದಲ್ಲ : ಪರಂತು, ಅಂಥ ಯಾವುದೇ ಅನುಮತಿಯು ಮಿಠಾಯಿಗಳು ಅಥವಾ ಸಿಗರೇಟುಗಳಂಥ ವಸ್ತುಗಳ ಮಾರಾಟಕ್ಕಾಗಿ ಅಥವಾ ತೂಕದ ದಾಖಲೆಗಾಗಿ ಅಥವಾ ಟಿಕೇಟುಗಳನ್ನು ಕೊಡುವುದಕ್ಕಾಗಿ ಅನನ್ಯವಾಗಿ ಉಪಯೋಗಿಸಿದ ಯಂತ್ರಗಳಿಗಾಗಿ ಅಗತ್ಯವಿರತಕ್ಕದ್ದಲ್ಲ.

## ಅಧ್ಯಾಯ –XI

## ಲೈಸೆನ್ಸ್‌ಗಳ ಮರುಮಂಜೂರಾತಿ

**85. ಮರುಮಂಜೂರಾತಿಗಾಗಿ ಅರ್ಜಿ.–** (1) ಲೈಸೆನ್ಸ್‌ನ ಮರುಮಂಜೂರಾತಿಗಾಗಿನ ಪ್ರತಿಯೊಂದು ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಲೈಸೆನ್ಸ್ ಮುಕ್ತಾಯವಾಗುವುದಕ್ಕೆ ಒಂದು ತಿಂಗಳು ಮುಂಚೆ ಮಾಡಿಕೊಳ್ಳತಕ್ಕದ್ದು. ಅಂಥ ಅರ್ಜಿಯೊಂದಿಗೆ,–

(i) 35ನೇ ನಿಯಮದ (ಕ), (ಖ), (ಖಖ) ಮತ್ತು (ಖಖಖ) ಖಂಡಗಳಲ್ಲಿ ಉಲ್ಲೇಖಿಸಿದ ಪ್ರಮಾಣ ಪತ್ರಗಳು ಮತ್ತು (ಗ) ಖಂಡದಲ್ಲಿ ಉಲ್ಲೇಖಿಸಿದ ಘೋಷಣೆ ; ಮತ್ತು

(ii) 87ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಫೀಜುಗಳನ್ನು ಸಂದಾಯ ಮಾಡಿದ ಬಗ್ಗೆ ಸಾಕ್ಷ್ಯವಾಗಿರುವ ಖಜಾನೆ ಚಲನ್ನು

–ಇವು ಇರತಕ್ಕದ್ದು.

(2) ಪ್ರತಿಯೊಂದು ಅಂಥ ಅರ್ಜಿಯ ಪ್ರತಿಯನ್ನು ವಿದ್ಯುಚ್ಛಕ್ತಿ ಸ್ಥಾಪನೆಗಳ ಯೋಗ್ಯತಾ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನಿಗೆ ಏಕಕಾಲದಲ್ಲಿ ನೇರವಾಗಿ ಕಳುಹಿಸತಕ್ಕದ್ದು. ಅದರೊಂದಿಗೆ ಮೂರು ವರ್ಷಗಳ ಪರಿಶೀಲನೆಯ ಅವಧಿಗಾಗಿ ಸಂದಾಯ ಮಾಡಿದ ಒಂದು ನೂರ ಎಂಬತ್ತೈದು ರೂಪಾಯಿಗಳ ಫೀಜಿಗಾಗಿನ ಖಜಾನೆ ರಶೀದಿ ಇರತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವರಲ್ಲಿ ಯಾವನಾದರೂ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ವಿದ್ಯುಚ್ಛಕ್ತಿ ಸ್ಥಾಪನೆಗಳು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸುತ್ತವೆಯೋ ಹೇಗೆ ಎಂಬ ಬಗ್ಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಯಾರೇ ಆದರೂ ಯಾರಾದರೊಬ್ಬರಿಂದ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಅವುಗಳಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ ಅವನು ಅದರ ಬಗ್ಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ವರದಿ ಮಾಡತಕ್ಕದ್ದು, ಅವನು ಆ ತರುವಾಯ ಕೂಡಲೇ ಒಡೆಯ ಅಥವಾ ಆ ಆವರಣದ ಪ್ರಭಾರದಲ್ಲಿರುವ ವ್ಯಕ್ತಿಗೆ ಅವುಗಳನ್ನು ಸರಿಪಡಿಸುವುದಕ್ಕಾಗಿ ಬರಹದಲ್ಲಿನ ನೋಟೀಸನ್ನು ಕೊಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂಥ ಸರಿಪಡಿಸುವಿಕೆಯನ್ನು ಕಾರ್ಯಗತಗೊಳಿಸತಕ್ಕದ್ದೋ ಆ ಕಾಲದೊಳಗೆ ಸೂಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸ್‌ದಾರನು ಅಂಥ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ, ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ಅಮಾನತ್ತು ಅಥವಾ ರದ್ದುಪಡಿಸತಕ್ಕದ್ದು ಅಥವಾ ಲೈಸೆನ್ಸ್‌ನ್ನು ಮರು ಮಂಜೂರ್ಮಾಡತಕ್ಕದ್ದಲ್ಲ.

(3) (1)ನೇ ಉಪ–ನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯ ಪ್ರತಿಯನ್ನು ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ತ್ರೈಮಾಸಿಕ ಪರಿಶೀಲನೆಗೆ ಒಂದು ನೂರು ಎಂಬತ್ತು ರೂಪಾಯಿಗಳ ಅಥವಾ ವಾರ್ಷಿಕ ಪರಿಶೀಲನೆಗೆ ಅರವತ್ತು ರೂಪಾಯಿಗಳ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ರಸೀತಿಯೊಂದಿಗೆ ಏಕಕಾಲದಲ್ಲಿ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕಳುಹಿಸತಕ್ಕದ್ದು. ಎಕ್ಸಿಕ್ಯೂಟಿವ್ ಇಂಜಿನಿಯರನು ಆ

ಸಿನಿಮಾ ಕಟ್ಟಡವು ಈ ನಿಯಮಗಳ ಅಗತ್ಯತೆಯನ್ನು ಪೂರೈಸುತ್ತದೆಯೋ ಹೇಗೆ ಎಂಬ ಬಗ್ಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ಅದರಲ್ಲಿ ಯಾವುದೇ ನ್ಯೂನತೆಯನ್ನು ಕಂಡುಹಿಡಿದರೆ, ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ವರದಿ ಮಾಡತಕ್ಕದ್ದು. ಅವನು ಆ ತರುವಾಯ ಒಡೆಯ ಅಥವಾ ಸಿನಿಮಾ ಕಟ್ಟಡದ ಪ್ರಭಾರದಲ್ಲಿರುವ ವ್ಯಕ್ತಿಗೆ ಅವುಗಳನ್ನು ಸರಿಪಡಿಸುವುದಕ್ಕಾಗಿ ಬರಹದಲ್ಲಿನ ನೋಟೀಸನ್ನು ಕೂಡಲೇ ಕೊಡತಕ್ಕದ್ದು ಮತ್ತು ಯಾವ ಕಾಲದೊಳಗೆ ಅಂಥ ಸರಿಪಡಿಸುವಿಕೆಯನ್ನು ಕಾರ್ಯತಗೊಳಿಸತಕ್ಕದ್ದೋ ಆ ಯುಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪಾಲಿಸಲು ಲೈಸೆನ್ಸ್‌ದಾರನು ತಪ್ಪಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸ್‌ದಾರನು ಅಂಥ ಸರಿಪಡಿಸುವಿಕೆಗಳನ್ನು ಮಾಡುವವರೆಗೆ, ಸಂದರ್ಭಾನುಸಾರ ಆ ಲೈಸೆನ್ಸ್‌ನ್ನು ಅಮಾನತ್ತು ಅಥವಾ ರದ್ದುಪಡಿಸತಕ್ಕದ್ದು ಅಥವಾ ಮರುಮಂಜೂರಾತಿ ಮಾಡತಕ್ಕದ್ದಲ್ಲ.

(4) (2)ನೇ ಉಪ–ನಿಯಮದ ಮೇರೆಗೆ ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರ ಮತ್ತು (3)ನೇ ಉಪ–ನಿಯಮದ ಮೇರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರನ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸ್‌ನ್ನು ಮರು ಮಂಜೂರಾತಿ ಮಾಡುವುದಕ್ಕೆ ಮುಂಚೆ ಆ ಎಲ್ಲಾ ನಿಯಮಗಳನ್ನು ಪಾಲಿಸಲಾಗಿದೆಯೋ ಹೇಗೆ ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

**86. ತಾತ್ಕಾಲಿಕ ಪರ್ಮಿಟ್ಟು.–** (1) 85ನೇ ನಿಯಮದ ಮೇರೆಗೆ ಲೈಸೆನ್ಸ್ ಮರು ಮಂಜೂರಾತಿಗಾಗಿ ಮಾಡಿಕೊಂಡ ಅರ್ಜಿಯ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸಿನ ಮುಕ್ತಾಯದ ದಿನಾಂಕಕ್ಕೆ ಮುಂಚೆ ಯಾವುದೇ ಕಾರಣಕ್ಕಾಗಿ ಲೈಸೆನ್ಸ್‌ನ್ನು ಮರು ಮಂಜೂರ್ಮಾಡದಿದ್ದರೆ, ಅಥವಾ ಅದನ್ನು ಪುನಃ ಮಾಡಲು ನಿರಾಕರಿಸದಿದ್ದರೆ ಅವನು **'ಎಚ್'** ನಮೂನೆಯಲ್ಲಿ ಒಂದು ತಾತ್ಕಾಲಿಕ ಪರ್ಮಿಟನ್ನು ಮಂಜೂರ್ಮಾಡತಕ್ಕದ್ದು. ಪರಂತು, ವಿದ್ಯುಚ್ಛಕ್ತಿ ಪರಿಶೀಲಕನ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರವು ಸಿಂಧುವಾಗಿರುವುದು ಮುಂದುವರಿಯಬೇಕು.

(2) ಅಂಥ ತಾತ್ಕಾಲಿಕ ಪರ್ಮಿಟನ್ನು ನವೀಕರಿಸಲು ಕೋರಿದ ಲೈಸೆನ್ಸ್‌ನ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅದು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅರ್ಜಿಯನ್ನು ವಿಲೇ ಮಾಡುವವರಿಗೆ ಸಿಂಧುವಾಗಿರತಕ್ಕದ್ದು :

ಪರಂತು, ತಾತ್ಕಾಲಿಕ ಪರ್ಮಿಟ್ಟು ಸಿಂಧುವಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅದನ್ನು ಅರ್ಜಿದಾರನು ಕ್ರಮಬದ್ಧವಾಗಿ ಮರುಮಂಜೂರಾತಿಯಾದ ಲೈಸೆನ್ಸ್‌ನ್ನು ಸ್ವೀಕರಿಸಿದ ಮೇಲೆ ಅಥವಾ ಅವನು ಆ ಲೈಸೆನ್ಸ್‌ನ ಮರುಮಂಜೂರಾತಿಯ ನಿರಾಕರಣೆಯ ಆದೇಶವನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು:

ಮತ್ತೂ ಪರಂತು, ತಾತ್ಕಾಲಿಕ ಲೈಸೆನ್ಸನ್ನು ಆ ಬಗ್ಗೆ ಯಾವುದೇ ಕಾಲದಲ್ಲಿ ತಗಾದೆ ಮಾಡಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(3) ತಾತ್ಕಾಲಿಕ ಪರ್ಮಿಟ್ಟನ್ನು ಮಂಜೂರ್ಮಾಡುವುದಕ್ಕಾಗಿ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(4) ತಾತ್ಕಾಲಿಕ ಪರ್ಮಿಟ್ಟನ್ನು ಅದರ ಸಿಂಧುತ್ವದ ಅವಧಿಯಲ್ಲಿ, ಈ ನಿಯಮಗಳ ಉದ್ದೇಶಕ್ಕಾಗಿ ಲೈಸೆನ್ಸ್ ಎಂಬುದಾಗಿ ಭಾವಿಸತಕ್ಕದ್ದು.

**87. ಲೈಸೆನ್ಸ್‌ನ ಮರುಮಂಜೂರಾತಿಗಾಗಿ ಫೀಜು.–** ಪ್ರತಿಯೊಂದು ಲೈಸೆನ್ಸಿನ ಮರು ಮಂಜೂರಾತಿಗಾಗಿ 38ನೇ ನಿಯಮದಲ್ಲಿ ವಿಧಿಸಿದಂಥ ದರದಲ್ಲಿ ಫೀಜನ್ನು ವಿಧಿಸತಕ್ಕದ್ದು.

## ಭಾಗ – IV

## ಅಧ್ಯಾಯ – XII

## ಸಂಚಾರಿ ಸಿನಿಮಾಗಳು

**88. ನಿಯಮಗಳ ಅನ್ವಯ.–** ಈ ಭಾಗದಲ್ಲಿನ ನಿಯಮಗಳು ಮತ್ತು ಈ ಕೆಳಕಂಡ ನಿಯಮಗಳು ಮತ್ತು ಉಪ ನಿಯಮಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಚಾರಿ ಸಿನಿಮಾಗಳಿಗೆ ಅನ್ವಯವಾಗತಕ್ಕದ್ದು, ಎಂದರೆ:–

2, 3, 4, 5, 6, 7, 25, 26, 27ನೇ ನಿಯಮದ (1)ನೇ ಉಪನಿಯಮದ (ಜ) (ಝ) (ಜ) ಮತ್ತು (ಟ) ಖಂಡಗಳು, 41–ಕ, 56, 58, 62, 63, 64, 68ನೇ ನಿಯಮದ (3)ನೇ ಉಪನಿಯಮ, 70, 71 ಮತ್ತು 77 ರಿಂದ 83ರವರೆಗಿನ ನಿಯಮಗಳು:

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಈ ಬಗ್ಗೆ ಅವನಿಗೆ (1)ನೇ ಉಪ–ನಿಯಮದ ಮೇರೆಗೆ 'ಖ' ನಮೂನೆಯಲ್ಲಿನ ನೋಟೀಸನ್ನು ಮತ್ತು 25ನೇ ನಿಯಮದ (2)ನೇ ಉಪ–ನಿಯಮದ (ಕ) ಮತ್ತು (ಖ) ಖಂಡಗಳ ಅಗತ್ಯತೆಗಳು ಮತ್ತು ಹಿಂದಿನ ಸಂದರ್ಭದಲ್ಲಿ ಶಿಬಿರ ನಿವೇಶನದ ಮೇಲೆ ಶಿಬಿರವನ್ನು ಹೂಡಲು ಸಂಚಾರಿ ಸಿನಿಮಾಗೆ ಅವಕಾಶವನ್ನು ಕೊಡಲಾಗಿದ್ದರೆ, ಸಂಚಾರಿ ಸಿನಿಮಾದ ಆ ನಿವೇಶನಕ್ಕೆ ಸಂಬಂಧಪಟ್ಟಂತೆ ನಿರಾಕ್ಷೇಪಣ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ 26ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ವಿನಾಯಿತಿಗೊಳಿಸಬಹುದು.

**89. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ,–

(1) 'ಕಟ್ಟಡ'ವು ಯಾವುದೇ ಬೂತು, ಡೇರೆ ಅಥವಾ ಅಂಥದೇ ರಚನೆಯನ್ನು ಒಳಗೊಳ್ಳುತ್ತದೆ.

(2) "ಸಂಚಾರಿ ಸಿನಿಮಾ" ಎಂದರೆ,–

(i) ಸಿನಿಮಾ ಪ್ರದರ್ಶನವನ್ನು ಕೊಡುವುದಕ್ಕಾಗಿ, ಕರ್ನಾಟಕ ರಾಜ್ಯದಲ್ಲಿ ಸ್ಥಳದಿಂದ ಸ್ಥಳಕ್ಕೆ ಸಾಧನ ಸಾಮಗ್ರಿಗಳನ್ನು ತೆಗೆದುಕೊಂಡು ಹೋದ ಸಿನಿಮಾ ಸಲಕರಣೆಗಳು ಮತ್ತು ಸ್ಥಿರಯಂತ್ರ ಮತ್ತು ಉಪಸಾಧನ ಗಳನ್ನೊಳಗೊಂಡ ಸಜ್ಜು; ಅಥವಾ

(ii) ಯಾವುದೇ ಸ್ಥಳೀಯ ಥಿಯೇಟರ್ ಅಥವಾ ಹಾಲಿನಲ್ಲಿ ಪ್ರದರ್ಶನಗಳನ್ನು ನಡೆಸುವುದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಸ್ಥಳದಿಂದ ಸ್ಥಳಕ್ಕೆ ತೆಗೆದುಕೊಂಡು ಹೋದ ಸಿನಿಮಾ ಸಲಕರಣೆ ಮತ್ತು ಸ್ಥಿರಯಂತ್ರವನ್ನೊಳಗೊಂಡ ಸಜ್ಜು.

**90. ಸಂಚಾರಿ ಸಿನಿಮಾ ಮಂದಿರದ ಕಟ್ಟಡ ನಿರ್ಮಾಣಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ.–** (1) ಸಂಚಾರಿ ಸಿನಿಮಾ ಮಂದಿರದ ಮೂಲಕ ಚಲನಚಿತ್ರದ ಪ್ರದರ್ಶನಕ್ಕಾಗಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು 'ಕ' ನಮೂನೆಯಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(2) ಆ ಅರ್ಜಿಯೊಂದಿಗೆ,–

(i) ಕಟ್ಟಡದ ನಿರ್ಮಾಣ ಮತ್ತು ಯಂತ್ರ ಸಾಮಗ್ರಿಯ ಸ್ಥಾಪನೆಗಾಗಿ ಸ್ಥಳೀಯ ಪ್ರಾಧಿಕಾರವು ನಿಯಮಿಸಿದ ದರದಲ್ಲಿ ಫೀಜು, ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ್ದಕ್ಕಾಗಿ ರಸೀತಿ ;

(ii) 'ನಿರಾಕ್ಷೇಪಣಾ ಪ್ರಮಾಣಪತ್ರ'ವನ್ನು ಕೊಡುವುದಕ್ಕಾಗಿ 100ನೇ ನಿಯಮದ ಮೇರೆಗೆ ನಿಯಮಿಸಿದ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆಯ ರಸೀತಿ ;

(iii) ಸಂದರ್ಭಾನುಸಾರ, ಪಟ್ಟಣ ಅಥವಾ ಗ್ರಾಮಕ್ಕೆ ಸಂಬಂಧಪಟ್ಟಂತೆ ಅದರ ಸ್ಥಳವನ್ನು ತೋರಿಸುವ ಮತ್ತು ಉದ್ದೇಶಿತ ನಿವೇಶನದಿಂದ ಎರಡು ನೂರು ಮೀಟರುಗಳ ದೂರದವರೆಗೆ ಇರುವಂಥ ಸುತ್ತಮುತ್ತಲಿನ ರಸ್ತೆಗಳು ಮತ್ತು ಕಟ್ಟಡಗಳನ್ನು ಸೂಚಿಸುವ ನಿವೇಶನದ ನಕ್ಷೆಯ ಉದ್ಧೃತಿಯನ್ನು ತ್ರಿಪ್ರತಿಗಳಲ್ಲಿ,–

(iv) ಕಟ್ಟಡದ ನಿರ್ಮಾಣದ ವಿವರಗಳನ್ನು ತೋರಿಸುವ ಅದರ ಪ್ರದೇಶ ಮತ್ತು ಮೀಟರುಗಳಲ್ಲಿ ಉದ್ದಗಲಗಳನ್ನು ಕೊಡುವ ನಕ್ಷೆ ತ್ರಿಪ್ರತಿಗಳಲ್ಲಿ ಇರತಕ್ಕದ್ದು. ಈ ಬಗ್ಗೆ 'ಖ' ನಮೂನೆಯಲ್ಲಿ ಕನ್ನಡ ಭಾಷೆ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ನೋಟಿಸನ್ನು ಉದ್ದೇಶಿತ ನಿವೇಶನದ ಬಗ್ಗೆ ಫಲಕದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಯಿಂದ ಸ್ಪಷ್ಟವಾಗಿ ಅದನ್ನು ನೋಡಬಹುದಾದಂಥ ಸ್ಥಾನದಲ್ಲಿ ಹಾಕತಕ್ಕದ್ದು. ಫಲಕದ ಮೇಲಿನ ನೋಟೀಸು ಲೈಸೆನ್ಸ್‌ಗಾಗಿನ ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ತೀರ್ಮಾನಿಸುವವರೆಗೆ ಪ್ರದರ್ಶಿತವಾಗಿರತಕ್ಕದ್ದು. ಆ ನೋಟೀಸು ಆ ಫಲಕವು 1.25 ಮೀ ಮೀಟರು ಗಾತ್ರದಲ್ಲಿರತಕ್ಕದ್ದು ಮತ್ತು ನೋಟೀಸು ದಪ್ಪ ಮತ್ತು ಸ್ಪಷ್ಟವಾಗಿ ಕಾಣುವ ಅಕ್ಷರಗಳಲ್ಲಿರತಕ್ಕದ್ದು.

**91. ಕಟ್ಟಡದ ಬಗ್ಗೆ ಷರತ್ತುಗಳು.–** (1) ಕಟ್ಟಡದ ಎಲ್ಲಾ ಕಡೆಗಳಲ್ಲಿ ಖುಲ್ಲಾ ಜಾಗವನ್ನು ಒದಗಿಸತಕ್ಕದ್ದು. ಅದರ ಯಾವುದೇ ಭಾಗವು ಅಗಲದಲ್ಲಿ ಹತ್ತು ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(2) ಯಾವ ಮುಖ್ಯ ರಸ್ತೆಯಲ್ಲಿ ಅಂಥ ಕಟ್ಟಡದ ನಿವೇಶನವು ಹೊಂದಿಕೊಂಡಿರುವುದೋ ಆ ಸಾರ್ವಜನಿಕ ಮುಖ್ಯ ರಸ್ತೆಯಲ್ಲಿ ಕಟ್ಟಡವು ರಸ್ತೆ ಮುಂಭಾಗವನ್ನು ಹೊಂದಿರತಕ್ಕದ್ದು.

(3) ಅಂಥ ಮುಂಭಾಗದಲ್ಲಿ ಸಾರ್ವಜನಿಕರಿಗಾಗಿ ಪ್ರವೇಶ ಹಾಗೂ ನಿರ್ಗಮನದ ಸೂಕ್ತ ಸಾಧನಗಳು ಇರತಕ್ಕದ್ದು.

(4) ಕಟ್ಟಡದ ಸೂರುಗಳು ಎರಡೂವರೆ ಮೀಟರುಗಳಿಗಿಂತ ಕಡಿಮೆಯಿಲ್ಲದ ಎತ್ತರವನ್ನು ಹೊಂದಿರತಕ್ಕದ್ದು.

**92. ನೈರ್ಮಲ್ಯ ಅನುಕೂಲತೆಗಳು.–** ಲೈಸೆನ್ಸ್‌ದಾರನು 54ನೇ ನಿಯಮದಲ್ಲಿ ವಿಧಿಸಿದ ಪ್ರಮಾಣಕ್ಕನುಸಾರವಾಗಿ ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷರ ಪ್ರತ್ಯೇಕ ಉಪಯೋಗಕ್ಕಾಗಿಯೇ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿಯಮಿಸಬಹುದಾದಂಥ ನೈರ್ಮಲ್ಯ ಅನುಕೂಲತೆಗಳನ್ನು ಒದಗಿಸತಕ್ಕದ್ದು ಮತ್ತು ಅವುಗಳನ್ನು ಸುಸ್ಥಿತಿಯಲ್ಲಿ ಮತ್ತು ನೈರ್ಮಲ್ಯಯುತವಾಗಿ ಇಟ್ಟುಕೊಂಡು ಬರುವಂತೆ ಮಾಡತಕ್ಕದ್ದು.

**93. ಕೆಲವು ಸಂದರ್ಭಗಳಲ್ಲಿ ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕದ್ದಲ್ಲ.–** ಸಾರ್ವಜನಿಕರಿಗೆ ಅಪಾಯದ ಮೂಲವಾಗಿರುವ ಹಾಗೆ ಅಥವಾ ಇತರ ಯಾವುದೇ ಹತ್ತಿರದ ಕಟ್ಟಡಕ್ಕೆ ಅನ್ಯಥಾ ಅಪಾಯಕಾರಿಯಾಗುವ ಹಾಗೆ ಪೂರ್ಣ ಅಥವಾ ಭಾಗಶಃ ದಹ್ಯ ಸಾಮಗ್ರಿಯಿಂದ ಕಟ್ಟಡವನ್ನು ಕಟ್ಟಲಾಗಿದೆಯೆಂದು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಭಿಪ್ರಾಯಪಟ್ಟರೆ ಲೈಸೆನ್ಸ್‌ನ್ನು ಮಂಜೂರು ಮಾಡತಕ್ಕದ್ದಲ್ಲ.

**94. ದಹ್ಯ ಸಾಮಗ್ರಿಗಳಿಂದ ನಿರ್ಮಿಸಿದ ಕಟ್ಟಡ.–** ದಹ್ಯ ಸಾಮಗ್ರಿಗಳಿಂದ ನಿರ್ಮಿಸಿದ ಪ್ರತಿಯೊಂದು ಕಟ್ಟಡದಲ್ಲಿ, ಪ್ರತಿಯೊಂದು ಭಾಗದಲ್ಲಿ ಕನಿಷ್ಠ ಪಕ್ಷ ಎರಡು ಮೀಟರು ಎತ್ತರ ಹಾಗೂ ಐದೂವರೆ ಮೀಟರುಗಳ ಕಿಂಡಿ ಇರತಕ್ಕದ್ದು. ಈ ಕಿಂಡಿಯನ್ನು ಸೀಳಿದ ಬಿದಿರಿನ ಚೌಕಟ್ಟಿನ ಮೇಲೆ ಜೋಡಿಸಿದ ಮತ್ತು ಒಳಗಡೆ ಟ್ವೈನ್‌ದಾರದಿಂದ ಬಲವಾಗಿ ಕಟ್ಟಿದ ತಟ್ಟಿಗಳಿಂದ ಮುಚ್ಚಬಹುದು.

**95. ಬಾಗಿಲುಗಳು ಮತ್ತು ಕಿಂಡಿಗಳು.–** ಸಾಮಾನ್ಯವಾಗಿ ಬಳಕೆಯಲ್ಲಿಲ್ಲದ ಬಾಗಿಲುಗಳು ಮತ್ತು ಕಿಂಡಿಗಳನ್ನು ಕಟ್ಟಡದ ಒಳಗಿನಿಂದ ಕೊಂಚ ಒತ್ತುವುದರಿಂದ ತೆಗೆಯಬಹುದಾದಂಥ ಚಾಪೆ, ಪರದೆ ಅಥವಾ ಅಂಥದೇ ಸಾಮಗ್ರಿಗಳಿಂದ ಮಾಡಬಹುದು ಅಥವಾ ಆವೃತಗೊಳಿಸಬಹುದು ಅಥವಾ ಮುಚ್ಚಬಹುದು.

**96. ಅರ್ಜಿಯ ಮೇಲಿನ ಪ್ರಕ್ರಿಯೆ.–** (1) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, 90ನೇ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರ್ಜಿದಾರನ ಖರ್ಚಿನಲ್ಲಿ ಆ ಪ್ರದೇಶದ ಅತಿ ಹೆಚ್ಚು ಪ್ರಸಾರವನ್ನು ಹೊಂದಿರುವ ಒಂದು ಇಂಗ್ಲೀಷ್ ಮತ್ತು ಒಂದು ಕನ್ನಡ ದೈನಿಕ ವೃತ್ತಪತ್ರಿಕೆಯಲ್ಲಿ ಪ್ರಕಟಣೆಯ ಮೂಲಕ ಮತ್ತು

ಅದು ಯೋಗ್ಯವೆಂದು ಭಾವಿಸುವಂಥ ಇತರ ವಿಧಾನಗಳ ಮೂಲಕ, ಆಕ್ಷೇಪಣೆಗಳನ್ನು ಆಹ್ವಾನಿಸಿ ಅಂಥ ಉದ್ದೇಶವನ್ನು ಸಾರ್ವಜನಿಕರಿಗೆ ತಿಳಿಸತಕ್ಕದ್ದು. ಅಂಥ ನೋಟೀಸು 'ಗ' ನಮೂನೆಯಲ್ಲಿರುತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಯಾವ ಅವಧಿಯೊಳಗೆ ಕಳುಹಿಸಿಕೊಡತಕ್ಕದ್ದೋ ಆ ಅವಧಿಯು ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಹತ್ತು ದಿವಸಗಳಾಗಿರತಕ್ಕದ್ದು.

(2) ಪ್ರಮಾಣಪತ್ರದ ಮಂಜೂರಾತಿಗಾಗಿ ಅಥವಾ ಅನ್ಯಥಾ ಅರ್ಜಿಯ ಮೇಲೆ ಮುಂದಿನ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು 90ನೇ ನಿಯಮದ (1)ನೇ ಉಪ-ನಿಯಮದ ಅಗತ್ಯತೆಗಳನ್ನು ಅರ್ಜಿದಾರನು ಪಾಲಿಸಿದ್ದಾನೆಯೆ ಎಂಬ ಬಗ್ಗೆ ಸ್ವತಃ ಪರಿಶೀಲನೆ ಮೂಲಕ ಅಥವಾ ಅನ್ಯಥಾ ಅವನು ಮನದಟ್ಟು ಮಾಡಿಕೊಳ್ಳತಕ್ಕದ್ದು.

(3) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, 90ನೇ ನಿಯಮದ (1)ನೇ ನಿಯಮವನ್ನು ಪಾಲಿಸಲಾಗಿದೆಯೆಂಬ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ, ಆ ಅರ್ಜಿಯನ್ನು ನಕ್ಷೆಗಳು ಮತ್ತು ಇತರ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಸಿನಿಮಾದ ಸ್ಥಳಕ್ಕಾಗಿ ನಿವೇಶನದ ಸೂಕ್ತತೆಯ ಬಗ್ಗೆ ಅಥವಾ ಅನ್ಯಥಾ ಅದರ ಅಭಿಪ್ರಾಯಕ್ಕಾಗಿ ಕಳುಹಿಸತಕ್ಕದ್ದು. ಸ್ಥಳೀಯ ಪ್ರಾಧಿಕಾರವು ಹಾಗೆ ಇಚ್ಛಿಸಿದರೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ತಹಶೀಲ್ದಾರರ ದರ್ಜೆಗೆ ಕಡಿಮೆಯಿಲ್ಲದ ಅಧಿಕಾರಿಯನ್ನು ಸ್ಥಳೀಯ ಪ್ರಾಧಿಕಾರದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿವೇಶನದ ಜಂಟಿ ಪರಿಶೀಲನೆಗಾಗಿ ಪ್ರತಿನಿಯೋಜಿಸತಕ್ಕದ್ದು. ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಅವನ ಅಭಿಪ್ರಾಯವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಮಾಡಿದಂಥ ಉಲ್ಲೇಖದ ದಿನಾಂಕದಿಂದ ಹತ್ತು ದಿವಸಗಳ ಅವಧಿಯೊಳಗೆ ಒದಗಿಸತಕ್ಕದ್ದು.

(4) ಅದರ ಅಭಿಪ್ರಾಯದೊಡನೆ ಸ್ಥಳೀಯ ಪ್ರಾಧಿಕಾರದಿಂದ ದಾಖಲೆಗಳು ವಾಪಸಾದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಮತ್ತು ಸ್ಥಳೀಯ ಪ್ರಾಧಿಕಾರದ ಅಭಿಪ್ರಾಯವನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅದು ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರ್ಮಾಡಲು ತೀರ್ಮಾನಿಸಿದರೆ, ಸ್ಥಳೀಯ ಪ್ರಾಧಿಕಾರದಿಂದ ದಾಖಲೆಗಳು ವಾಪಸಾದ ತರುವಾಯ ಎರಡು ವಾರಗಳೊಳಗೆ 'ಘ' ನಮೂನೆಯಲ್ಲಿ ಲೈಸೆನ್ಸನ್ನು ಮಂಜೂರ್ಮಾಡಬಹುದು ಅಥವಾ ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಅದನ್ನು ಮಂಜೂರ್ಮಾಡಲು ನಿರಾಕರಿಸಬಹುದು. ಹಾಗೆ ಮಾಡುವಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಸಾರ್ವಜನಿಕರಿಂದ ಸ್ವೀಕರಿಸಿದ ಆಕ್ಷೇಪಣೆಗಳ ಬಗ್ಗೆ ಮತ್ತು ಸ್ಥಳೀಯ ಪ್ರಾಧಿಕಾರದ ಅಭಿಪ್ರಾಯಗಳನ್ನು ಗಮನಿಸಿ 6ನೇ ನಿಯಮ ಮತ್ತು 27ನೇ ನಿಯಮದ (1)ನೇ ಉಪ-ನಿಯಮದ (ಜ), (ಝ), (ಞ) ಮತ್ತು (ಟ) ಖಂಡಗಳ ಮತ್ತು 107ನೇ ನಿಯಮದ ಉಪಬಂಧಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು.

(5) (i) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಈ ಬಗ್ಗೆ ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ ಪರಿಶೀಲನೆ ಅಥವಾ ಅವನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ವಿಚಾರಣೆಯ ತರುವಾಯ 27ನೇ ನಿಯಮದ (1)ನೇ ಉಪ-ನಿಯಮದ (ಜ), (ಝ), (ಞ) ಮತ್ತು (ಟ) ಖಂಡಗಳು ಮತ್ತು 107ನೇ ನಿಯಮದ ಉಪಬಂಧಗಳಿಗೆ ಅನುಗುಣವಾಗಿ ನಿವೇಶನವು ಮುಂದುವರಿಯುತ್ತಿದೆಯೆಂದು ಮನದಟ್ಟಾದರೆ, 90ನೇ ನಿಯಮದ (1)ನೇ ಉಪ-ನಿಯಮದ ಮೇರೆಗಿನ ನೋಟೀಸನ ಅಗತ್ಯತೆಗಳನ್ನು ಮತ್ತು ಹಿಂದಿನ ವರ್ಷದಲ್ಲಿ ಸಂಚಾರಿ ಸಿನಿಮಾಕ್ಕಾಗಿ ಲೈಸೆನ್ಸ್ ಪಡೆದ ಶಿಬಿರ ನಿವೇಶನಕ್ಕೆ ಸಂಬಂಧಿಸಿದಂತೆ ಎರಡನೇ ವರ್ಷಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ (3)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗೆ ವಿನಾಯಿತಿಕೊಡತಕ್ಕದ್ದು:

ಪರಂತು, ಅಂಥ ಯಾವುದೇ ವಿನಾಯಿತಿಯನ್ನು, ಅರ್ಜಿಯ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ 98ನೇ ನಿಯಮದ (2)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ವಿರಾಮ ಅವಧಿಯನ್ನು ಹೊರತುಪಡಿಸಿ ಎರಡು ವರ್ಷಗಳ ಅವಧಿಗಾಗಿ ಲೈಸೆನ್ಸನ್ನು ಕೊಡಲಾಗಿದ್ದಂಥ ಶಿಬಿರ ನಿವೇಶನಕ್ಕೆ ಸಂಬಂಧಿಸಿದಂತೆ ಕೊಡತಕ್ಕದ್ದಲ್ಲ.

(ii) ಯಾವುದೇ ಜಾತ್ರೆ, ಮೇಳ ಅಥವಾ ಇತರ ಅಂಥದೇ ಸಂದರ್ಭದಲ್ಲಿ ಅಂಥ ಜಾತ್ರೆ, ಮೇಳ ಅಥವಾ ಇತರ ಸಂದರ್ಭವು ಪ್ರಾರಂಭವಾಗುವ ಮುಂಚೆ ಒಂದು ವಾರದ ಅವಧಿಯವರೆಗೆ ಮತ್ತು ಅದು ಮುಕ್ತಾಯವಾದ ತರುವಾಯ ಒಂದು ವಾರಕ್ಕಾಗಿ ಸಂಚಾರಿ ಸಿನಿಮಾವನ್ನು ನಡೆಸಲು ನಿರಾಕ್ಷೇಪಣಾ ಪ್ರಮಾಣ ಪತ್ರದ ಮಂಜೂರಾತಿಗಾಗಿ ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಪರಿಶೀಲಿಸಿದ ತರುವಾಯ ಅಥವಾ ಅವನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಯಾವ ನಿವೇಶನಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಆ ನಿವೇಶನವು 27ನೇ ನಿಯಮದ (1)ನೇ ಉಪ–ನಿಯಮದ (ಜ), (ಝ), (ಞ) ಮತ್ತು (ಟ) ಖಂಡಗಳ ಮತ್ತು 107ನೇ ನಿಯಮದ ಉಪಬಂಧಗಳಿಗೆ ಅನುಗುಣವಾಗಿದೆಯೆಂದು ಮನದಟ್ಟು ಮಾಡಿಕೊಂಡರೆ, ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಈ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಯನ್ನು ವಿನಾಯಿತಿಗೊಳಿಸಿ ಕೋರಿಕೊಂಡ ಪ್ರಮಾಣಪತ್ರವನ್ನು ಕೊಡತಕ್ಕದ್ದು.

(5ಎ) ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರ್ಮಾಡಬಹುದಾದಂಥ ಗರಿಷ್ಠ ಅವಧಿಯು ಒಂದು ವರ್ಷದ ಅವಧಿಯನ್ನು ಮೀರತಕ್ಕದ್ದಲ್ಲ. ಯಾವುದೇ ತರುವಾಯದ ಅವಧಿ ಅಥವಾ ಅವಧಿಗಳಿಗಾಗಿ ಹೊಸ "ನಿರಾಕ್ಷೇಪಣಾ ಪ್ರಮಾಣಪತ್ರ"ವನ್ನು ಪಡೆಯತಕ್ಕದ್ದು.

(6) "ನಿರಾಕ್ಷೇಪಣಾ" ಪ್ರಮಾಣಪತ್ರವನ್ನು ಕೊಟ್ಟ ಮೇಲೆ, ಅರ್ಜಿದಾರನು ಕೊಟ್ಟ ಅಂಥ ದಿನಾಂಕದಿಂದ ಎರಡು ತಿಂಗಳುಗಳೊಳಗಾಗಿ ಆ ಕಟ್ಟಡದ ನಿರ್ಮಾಣವನ್ನು ಮುಗಿಸತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಈ ಬಗ್ಗೆ ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ, ಅರ್ಜಿದಾರನು, ಸಮಂಜಸವಾದ ಕಾರಣಗಳಿಗಾಗಿ ಸದರಿ ಎರಡು ತಿಂಗಳುಗಳ ಅವಧಿಯೊಳಗೆ, ಆ ಕಟ್ಟಡವನ್ನು ಮುಗಿಸಲಾಗಲಿಲ್ಲವೆಂದು ಮನದಟ್ಟು ಮಾಡಿಕೊಂಡರೆ ಅಂಥ ಪ್ರಮಾಣಪತ್ರದ ಸಿಂಧುತ್ವವನ್ನು ಮೂರು ತಿಂಗಳುಗಳನ್ನು ಮೀರದ ಅವಧಿಗೆ ವಿಸ್ತರಿಸಬಹುದು. ಆ ಕಟ್ಟಡವನ್ನು ಎರಡು ತಿಂಗಳುಗಳೊಳಗೆ ಅಥವಾ ವಿಸ್ತರಿಸಿದ ಅವಧಿಯೊಳಗೆ ನಿರ್ಮಿಸದಿದ್ದರೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸದರಿ "ನಿರಾಕ್ಷೇಪಣಾ ಪ್ರಮಾಣಪತ್ರ" ವನ್ನು ರದ್ದುಗೊಳಿಸಬಹುದು.

**97. ಲೈಸೆನ್ಸ್‌ಗಾಗಿ ಅರ್ಜಿ.–** (1) ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ ಕಟ್ಟಡವನ್ನು ಮುಗಿಸಿದ ಮೇಲೆ ಅರ್ಜಿದಾರನು ಲೈಸೆನ್ಸ್‌ಗಾಗಿ ಅವನ ಅರ್ಜಿಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು, ಆ ಅರ್ಜಿಯೊಂದಿಗೆ,–

(ಕ) 96ನೇ ನಿಯಮದ ಮೇರೆಗೆ ಕೊಟ್ಟ ನಿರಾಕ್ಷೇಪಣಾ ಪ್ರಮಾಣಪತ್ರದ ಪ್ರತಿ ;

(ಖ) ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನು ಕೊಟ್ಟ ಪ್ರಮಾಣಪತ್ರ ಮತ್ತು 35ನೇ ನಿಯಮದ (ಗ) ಖಂಡದಲ್ಲಿ ನಿಯಮಿಸಿದ ಘೋಷಣೆ ; ಮತ್ತು

(ಗ) 106ನೇ ನಿಯಮದಲ್ಲಿ ನಿಯಮಿಸಿದ ದರಗಳಲ್ಲಿ ಲೈಸೆನ್ಸ್‌ಗಾಗಿನ ಫೀಜುಗಳ ಸಂದಾಯಕ್ಕಾಗಿ ಖಜಾನೆ ರಸೀತಿ ;

(ಘ) 91, 93, 94 ಮತ್ತು 95ನೇ ನಿಯಮಗಳಲ್ಲಿ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಂಪರ್ಕಗಳು ಮತ್ತು ಕಟ್ಟಡಗಳ ಪ್ರಭಾರದಲ್ಲಿರುವ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರನು ಕೊಟ್ಟ ಪ್ರಮಾಣಪತ್ರ,

–ಇವು ಇರತಕ್ಕದ್ದು.

(2) ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನು ಅರ್ಜಿದಾರನಿಂದ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳಿಗೆ ಮೀರದ ಅವಧಿಯೊಳಗೆ ವಿದ್ಯುಚ್ಛಕ್ತಿ ಪ್ರಮಾಣಪತ್ರವನ್ನು ಕೊಡತಕ್ಕದ್ದು.

**98. ಲೈಸೆನ್ಸಿನ ಮಂಜೂರಾತಿ ಅಥವಾ ನಿರಾಕರಣೆ.–** (1) ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರ ಮತ್ತು 97ನೇ ನಿಯಮದಲ್ಲಿ ಉಲ್ಲೇಖಿಸಿದ ಘೋಷಣೆಯೊಂದಿಗೆ ಲೈಸೆನ್ಸಿಗಾಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ,

ಲೈಸೆನ್ಸ್ ಕೊಡುವ ಪ್ರಾಧಿಕಾರಿಯು (2)ನೇ ಉಪನಿಯಮಕ್ಕೆ ಒಳಪಟ್ಟು ಅರ್ಜಿದಾರನಿಗೆ 'ಛ' ನಮೂನೆಯಲ್ಲಿ ಲೈಸೆನ್ಸ್‌ನ್ನು ಕೊಡತಕ್ಕದ್ದು ಅಥವಾ ಅದನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳಿಗೆ ಮೀರದ ಅವಧಿಯೊಳಗೆ ಅಂಥ ಲೈಸೆನ್ಸನ್ನು ಕೊಡಲು ನಿರಾಕರಿಸತಕ್ಕದ್ದು.

(2) ನಿವೇಶನಕ್ಕೆ ಸಂಬಂಧಿಸಿದಂತೆ, ಯಾವುದೇ ಲೈಸೆನ್ಸನ್ನು ಸದರಿ ಒಂದು ವರ್ಷದ ಅವಧಿಯು ಮುಕ್ತಾಯವಾದ ತರುವಾಯ ಒಂದು ತಿಂಗಳು ಗತಿಸಿದ ಹೊರತು, ಮಂಜೂರ್ಮಾಡತಕ್ಕದ್ದಲ್ಲ ಅಥವಾ ಒಂದು ವರ್ಷವನ್ನು ಮೀರುವ ಅವಧಿಗಾಗಿ ಸತತವಾಗಿ ಮರು ಮಂಜೂರ್ಮಾಡತಕ್ಕದ್ದಲ್ಲ.

**99**. **ಲೈಸೆನ್ಸಿನ ಅವಧಿ.–** 98ನೇ ನಿಯಮದ (2)ನೇ ಉಪ–ನಿಯಮಕ್ಕೆ ಒಳಪಟ್ಟು, ಯಾವುದೇ ಲೈಸೆನ್ಸನ್ನು 98ನೇ ನಿಯಮದ ಮೇರೆಗೆ ಮಂಜೂರ್ಮಾಡತಕ್ಕದ್ದಲ್ಲ ಅಥವಾ ಒಂದು ವರ್ಷವನ್ನು ಮೀರುವ ಅವಧಿಗಾಗಿ 105ನೇ ನಿಯಮದ ಮೇರೆಗೆ ಮರು ಮಂಜೂರಾತಿ ಮಾಡತಕ್ಕದ್ದಲ್ಲ ಆದರೆ, ಒಂದು ಲೈಸೆನ್ಸನ್ನು ಒಂದು ವರ್ಷಕ್ಕಿಂತ ಕಡಿಮೆ ಅವಧಿಗಾಗಿ ಮಂಜೂರ್ಮಾಡಬಹುದು.

**100**. **ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೊಡುವುದಕ್ಕಾಗಿ ಫೀಜು.–** ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರ್ಮಾಡುವುದಕ್ಕಾಗಿ 90ನೇ ನಿಯಮದ (1)ನೇ ಉಪ–ನಿಯಮದ ಮೇರೆಗಿನ ಅರ್ಜಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು ಐವತ್ತು ರೂಪಾಯಿಗಳಾಗಿರತಕ್ಕದ್ದು.

**101**. **ವಿದ್ಯುಚ್ಛಕ್ತಿ ಸ್ಥಾಪನೆ, ಇತ್ಯಾದಿಗಳ ಪರಿಶೀಲನೆಗಾಗಿ ಫೀಜು.–** (1) ಮೊದಲನೇ ಸಲ ನಿರ್ಮಿಸಿದಾಗ, ಆವರಣ, ಸಿನಿಮಾ ಸಲಕರಣೆ ಮತ್ತು ಸ್ಥಿರಯಂತ್ರ, ವಿದ್ಯುಚ್ಛಕ್ತಿ ಸ್ಥಾಪನೆ, ಅಗ್ನಿ ಶಾಮಕ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಪರಿಶೀಲನೆ, ಲೈಸೆನ್ಸ್‌ಗಾಗಿ ಅರ್ಜಿದಾರನು ಮುಂಗಡವಾಗಿ ಅರವತ್ತು ರೂಪಾಯಿಗಳ ಫೀಜನ್ನು 34ನೇ ನಿಯಮದಲ್ಲಿ ಉಲ್ಲೇಖಿಸಿದ ಲೆಕ್ಕ ಶೀರ್ಷಿಕೆಗೆ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು. ಹಾಗೆ ಮಂಜೂರ್ಮಾಡಿದ ಪ್ರಮಾಣಪತ್ರಿಕೆಯು 102ನೇ ನಿಯಮದ (2)ನೇ ಉಪ ನಿಯಮಕ್ಕೆ ಒಳಪಟ್ಟು ಒಂದು ವರ್ಷದ ಅವಧಿಗಾಗಿ ಸಿಂಧುವಾಗಿರತಕ್ಕದ್ದು.

(2) ಪರಿಶೀಲನೆ ಮತ್ತು 97ನೇ ನಿಯಮದ (1)ನೇ ಉಪ–ನಿಯಮದ (ಘ) ಖಂಡದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರದ ಮಂಜೂರಾತಿಗಾಗಿ ಇಪ್ಪತ್ತೈದು ರೂಪಾಯಿಗಳ ಫೀಜನ್ನು 34ನೇ ನಿಯಮದಲ್ಲಿ ಉಲ್ಲೇಖಿಸಿದ ಲೆಕ್ಕ ಶೀರ್ಷಿಕೆಗೆ ಸರ್ಕಾರಿ ಖಜಾನೆಗೆ ಮುಂಗಡವಾಗಿ ಸಂದಾಯ ಮಾಡತಕ್ಕದ್ದು.

ಹಾಗೆ ಮಂಜೂರ್ಮಾಡಿದ ಪ್ರಮಾಣಪತ್ರವು ಒಂದು ವರ್ಷದ ಅವಧಿಗಾಗಿ ಸಿಂಧುವಾಗಿರತಕ್ಕದ್ದು.

**102**. **ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಸಹಾಯಕ ವಿದ್ಯುಚ್ಛಕ್ತಿ ಪರಿಶೀಲಕನಿಂದ ಪರಿಶೀಲನೆಗಾಗಿ ಫೀಜು.–** (1) ವಿದ್ಯುಚ್ಛಕ್ತಿ ಪರಿಶೀಲಕನಿಂದ ಪ್ರಮಾಣಪತ್ರದ ಮರು ಮಂಜೂರಾತಿಗಾಗಿ ಮುಂಗಡವೆಂದು ಐವತ್ತು ರೂಪಾಯಿಗಳ ಫೀಜನ್ನು ಸರ್ಕಾರಿ ಖಜಾನೆಗೆ ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಮಂಜೂರಾತಿಗಾಗಿನ ಅರ್ಜಿಯೊಂದಿಗೆ ಆ ಖಜಾನೆ ರಸೀತಿಯನ್ನು ಆ ಪ್ರಮಾಣಪತ್ರದ ಸಿಂಧುತ್ವದ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಒಂದು ತಿಂಗಳು ಮುಂಚೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಸಹಾಯಕ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಒದಗಿಸತಕ್ಕದ್ದು.

(2) ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಸಹಾಯಕ ವಿದ್ಯುಚ್ಛಕ್ತಿ ಪರಿಶೀಲಕನಿಂದ ಮಂಜೂರಾದ ಪ್ರಮಾಣಪತ್ರವು ಸಂಚಾರಿ ಸಿನಿಮಾದ ಸಿನಿಮಾ ಸಲಕರಣೆ ಮತ್ತು ಸ್ಥಿರಯಂತ್ರವನ್ನು ಬೇರೆ ಥಿಯೇಟರ್ ಅಥವಾ ಹಾಲಿಗೆ ಸ್ಥಳಾಂತರಿಸಿದಾಗ ಸಿಂಧುವಾಗಿರುವುದು ನಿಂತು ಹೋಗತಕ್ಕದ್ದು.

(3) * * *

**103. ಸಭಾಂಗಣದಲ್ಲಿ ಸ್ಥಳಾವಕಾಶ.–** ಸಭಾಂಗಣದಲ್ಲಿ ಸ್ಥಳಾವಕಾಶ ಮಾಡಿ ಕೊಡಬಹುದಾದ ವ್ಯಕ್ತಿಗಳ ಸಂಖ್ಯೆಯು, 108ನೇ ನಿಯಮದಲ್ಲಿ ಉಲ್ಲೇಖಿಸಿದವುಗಳನ್ನು ಬಿಟ್ಟು ಬಿಟ್ಟ ತರುವಾಯ ನೆಲ ಪ್ರದೇಶದ ಪ್ರತಿ ಹತ್ತು ಚದರ ಮೀಟರಿಗೆ ಇಪ್ಪತ್ತೈದು ವ್ಯಕ್ತಿಗಳಂತೆ ಲೆಕ್ಕ ಹಾಕುವ ಮೂಲಕ ಬಂದ ಸಂಖ್ಯೆಯಾಗಿರತಕ್ಕದ್ದು.

**103ಕ. ಪರ್ಯಾಯ ದೀಪಗಳನ್ನಿಡಲು ವ್ಯವಸ್ಥೆಗಳು.–** ಲೈಸೆನ್ಸ್‌ದಾರನು ತುರ್ತು ಪರಿಸ್ಥಿತಿಯಲ್ಲಿ ಅಥವಾ ವಿದ್ಯುಚ್ಛಕ್ತಿ ವಿಫಲವಾದಾಗ ಸಭಾಂಗಣವನ್ನು ಬೆಳಗಿಸಲು ಉಪಯೋಗಿಸುವುದಕ್ಕಾಗಿ ಆರಕ್ಕಿಂತ ಕಡಿಮೆಯಿಲ್ಲದ ಪೆಟ್ರೋಮ್ಯಾಕ್ಸ್ ದೀಪಗಳು ಅಥವಾ ಹರಿಕೆನ್ ಲಾಂದ್ರಗಳನ್ನು ಉಪಯೋಗಕ್ಕಾಗಿ ಸಿದ್ಧವಾಗಿಟ್ಟಿರತಕ್ಕದ್ದು.

**104. ಅಗ್ನಿ ಶಾಮಕಗಳು.–** ಸಂಭವಿಸಬಹುದಾದಂಥ ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಅಗ್ನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ನಂದಿಸುವುದಕ್ಕಾಗಿ ವ್ಯವಸ್ಥೆಯನ್ನು ಮಾಡತಕ್ಕದ್ದು. ಪ್ರತಿ ಪ್ರದೇಶದ ಪ್ರತಿ ಹತ್ತು ಚದರ ಮೀಟರುಗಳಿಗೆ ಮತ್ತು ಲೀಟರುಗಳಿಗಿಂತ ಕಡಿಮೆಯಿಲ್ಲದ ನೀರಿನ ಅರ್ಧವನ್ನು ಕಟ್ಟಡದೊಳಗಡೆ ಮತ್ತು ಇನ್ನೊಂದು ಅರ್ಧವನ್ನು ಅದರ ಹೊರಗಡೆ 75ನೇ ನಿಯಮದ (1)ನೇ ಉಪ ನಿಯಮದಲ್ಲಿ ವಿವರಿಸಿದಂಥಹುದೇ ಆದ ಬಕೆಟುಗಳಲ್ಲಿ ಸಿದ್ಧವಾಗಿ ದಾಸ್ತಾನು ಮಾಡಿಟ್ಟಿರತಕ್ಕದ್ದು.

**105. ಲೈಸೆನ್ಸ್‌ನ ಮರು ಮಂಜೂರಾತಿ.–** (1) ಲೈಸೆನ್ಸ್‌ಗಾಗಿ ಮರು ಮಂಜೂರಾತಿಗಾಗಿನ ಅರ್ಜಿಯನ್ನು ಮೊದಲು ಮಂಜೂರ್‌ಮಾಡಿದ ಲೈಸೆನ್ಸಿನ ಮುಕ್ತಾಯಕ್ಕೆ ಮುಂಚೆ 15 ದಿವಸಗಳಿಗೆ ಕಡಿಮೆಯಿಲ್ಲದಂತೆ ಮಾಡತಕ್ಕದ್ದು:

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ, (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಸಮಂಜಸ ಕಾರಣಗಳಿಗಾಗಿ ಅರ್ಜಿಯನ್ನು ಮಾಡಿಕೊಳ್ಳಲಾಗಲಿಲ್ಲವೆಂದು ಮನದಟ್ಟಾದರೆ, ಅವನು ಸದರಿ ದಿನಾಂಕದ ತರುವಾಯ ಮಾಡಿಕೊಂಡ ಅರ್ಜಿಯನ್ನು ಸ್ವೀಕರಿಸಬಹುದು.

(2) ಲೈಸೆನ್ಸ್‌ನ ಮರುಮಂಜೂರಾತಿಗಾಗಿನ ಪ್ರತಿಯೊಂದು ಅರ್ಜಿಯೊಂದಿಗೆ ಕ್ರಮಬದ್ಧವಾಗಿ ಮರು ಮಂಜೂರ್‌ಮಾಡಿದ ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣ ಪತ್ರ, 97ನೇ ನಿಯಮದ (1)ನೇ ಉಪ ನಿಯಮದ (ಫ) ಖಂಡದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರ 106ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದರಗಳಲ್ಲಿ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ರಸೀತಿಗಳು ಮತ್ತು ಮೊದಲು ಮಂಜೂರ್‌ಮಾಡಿದ ಲೈಸೆನ್ಸಿನ ಪ್ರತಿ ಇವು ಇರತಕ್ಕದ್ದು.

(3) ಲೈಸೆನ್ಸ್‌ನ ಮರು ಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅವನು 99ನೇ ನಿಯಮಕ್ಕೊಳಪಟ್ಟು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಲೈಸೆನ್ಸನ್ನು ಮರುಮಂಜೂರ್‌ಮಾಡಬಹುದು.

**106. ಲೈಸೆನ್ಸ್ ಅಥವಾ ಲೈಸೆನ್ಸಿನ ಪ್ರತಿಯನ್ನು ಕೊಡುವುದಕ್ಕಾಗಿ ಫೀಜು.–** (1) ಸಂಚಾರಿ ಸಿನಿಮಾಕ್ಕಾಗಿನ ಪ್ರತಿಯೊಂದು ಲೈಸೆನ್ಸ್‌ಗಾಗಿ, ಒಂದು ಸಾವಿರ ಚದರ ಮೀಟರುಗಳನ್ನು ಮೀರದ ಪ್ರದೇಶಕ್ಕಾಗಿ ಒಂದು ತಿಂಗಳು ಅಥವಾ ಅದರ ಭಾಗಕ್ಕೆ ಐದು ರೂಪಾಯಿಗಳ ಫೀಜನ್ನು ವಿಧಿಸತಕ್ಕದ್ದು. ಒಂದು ನೂರು ಚದರ ಮೀಟರುಗಳನ್ನು ಮೀರುವ ಪ್ರತಿ ಐವತ್ತು ಚದರ ಮೀಟರುಗಳು ಅಥವಾ ಅದರ ಭಾಗಕ್ಕಾಗಿ ಒಂದು ತಿಂಗಳಿಗೆ ಅಥವಾ ಅದರ ಭಾಗಕ್ಕೆ ಐದು ರೂಪಾಯಿಗಳ ಹೆಚ್ಚಿನ ಫೀಜನ್ನು ವಿಧಿಸತಕ್ಕದ್ದು.

(2) ಐದು ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ ಲೈಸೆನ್ಸಿನ ದ್ವಿಪ್ರತಿಯನ್ನು ಕೊಡಬಹುದು.

**106ಕ. ಮರುಪಾವತಿ.–** ಲೈಸೆನ್ಸ್‌ನ್ನು ಕೊಡಲು ನಿರಾಕರಿಸಿದ ಸಂದರ್ಭದಲ್ಲಿ ಲೈಸೆನ್ಸ್ ಕೊಡುವುದಕ್ಕಾಗಿನ ಅರ್ಜಿಯನ್ನು ತಿರಸ್ಕರಿಸುವ ಆದೇಶಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಮರುಪಾವತಿಗಾಗಿನ ಅರ್ಜಿಯನ್ನು ಅರ್ಜಿದಾರನು ಮಾಡಿಕೊಂಡರೆ, ಸಂಗ್ರಹಿಸಿದ ಫೀಜಿನ ಒಟ್ಟು ಮೊಬಲಗಿನ ಅರ್ಧದಷ್ಟರ ದರದಲ್ಲಿ ಅಂಥ ಮರುಪಾವತಿಯನ್ನು ಅರ್ಜಿದಾರನಿಗೆ ಮಾಡತಕ್ಕದ್ದು. ಅಪೀಲನ್ನು ಹೂಡಲಾಗಿದ್ದರೆ ಮರು ಪಾವತಿಯನ್ನು ಅಪೀಲಿನ ಅವಧಿ ಮುಕ್ತಾಯವಾದ ತರುವಾಯ ಅಥವಾ ಆ ಅಪೀಲು ವಿಲೆಯಾದ ತರುವಾಯ ಮಾಡತಕ್ಕದ್ದು.

**107. ಸಂಚಾರಿ ಸಿನಿಮಾದ ಬಗ್ಗೆ ಲೈಸೆನ್ಸ್ ಮಂಜೂರಾತಿ ಮೇಲೆ ಪರಿಬಂಧಗಳು.–** (1) ಸಂಚಾರಿ ಸಿನಿಮಾಗಾಗಿ ಯಾವುದೇ ಲೈಸೆನ್ಸನ್ನು,–

(ಕ) ಕಾಯಂ ಸಿನಿಮಾದಿಂದ 1.9 ಕಿ.ಮೀ. ಮೀಟರುಗಳ ದೂರದೊಳಗೆ ಅಥವಾ ಇನ್ನೊಂದು ಸಂಚಾರಿ ಸಿನಿಮಾದಿಂದ 800 ಮೀಟರುಗಳ ದೂರದೊಳಗೆ ಇರುವ ನಿವೇಶನಕ್ಕೆ ಸಂಬಂಧಿಸಿದಂತೆ.

(ಖ) ಹದಿನೈದು ಸಾವಿರ ಅಥವಾ ಅದಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ನಗರಗಳು ಮತ್ತು ಪಟ್ಟಣಗಳಲ್ಲಿ ಮತ್ತು ಅಂಥ ನಗರಗಳು ಮತ್ತು ಪಟ್ಟಣಗಳು ಪರಿಮಿತಿಗಳಿಂದ 1.6 ಕಿಲೋ ಮೀಟರುಗಳ ದೂರದೊಳಗೆ ಮಂಜೂರ್ಮಾಡತಕ್ಕದ್ದಲ್ಲ.

ಪರಂತು, ಈ ಉಪನಿಯಮದ (ಖ) ಖಂಡವು ಅಂಥ ನಗರ ಅಥವಾ ಪಟ್ಟಣದಲ್ಲಿ ಯಾವುದೇ ಖಾಯಂ ಸಿನಿಮಾ ಇಲ್ಲದಿರುವಲ್ಲಿ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** ಈ ನಿಯಮದ ಉದ್ದೇಶಕ್ಕಾಗಿ ಎರಡು ಸಿನಿಮಾಗಳನ್ನು ಸಂಪರ್ಕಿಸುವ ಮತ್ತು ಸಾರ್ವಜನಿಕರು ಸಾಮಾನ್ಯವಾಗಿ ಉಪಯೋಗಿಸುವ ಅತಿ ಸಮೀಪದ ದಾರಿ, ಓಣಿ, ಬೀದಿ ಅಥವಾ ರಸ್ತೆಗುಂಟ ದೂರವನ್ನು ಪರಿಗಣಿಸತಕ್ಕದ್ದು.

(2) (1)ನೇ ಉಪ ನಿಯಮಕ್ಕೆ ಒಳಪಟ್ಟು ಸಂಚಾರಿ ಸಿನಿಮಾಗಳಿಗಾಗಿ ಲೈಸೆನ್ಸ್‌ನ್ನು ಕೊಡಲು ಯವುದೇ ಇತರ ಪರಿಬಂಧಗಳು ಇರತಕ್ಕದ್ದಲ್ಲ.

**108. ಆಸನಗಳು.–** ಕುಳಿತುಕೊಳ್ಳಲು ಅಥವಾ ನಿಂತುಕೊಳ್ಳಲು ಲಭ್ಯವಿರುವ ಜಾಗದಲ್ಲಿ ಪ್ರತಿ ಹತ್ತು ಚದರ ಮೀಟರುಗಳಿಗೆ ಇಪ್ಪತ್ತು ವ್ಯಕ್ತಿಗಳಿಗಿಂತ ಹೆಚ್ಚು ವ್ಯಕ್ತಿಗಳಿಗೆ ಯಾವುವೇ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಒದಗಿಸತಕ್ಕದ್ದಲ್ಲ. ಲಭ್ಯವಿರುವ ಪ್ರದೇಶವನ್ನು ಲೆಕ್ಕ ಹಾಕುವುದಕ್ಕೆ ಮುಂಚೆ, ಪ್ರವೇಶಗಳು, ನಡುದಾರಿಗಳು ಮತ್ತು ಹಂತಗಳು ಆವರಿಸಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ ರಿಯಾಯಿತಿ ಕೊಡತಕ್ಕದ್ದು, ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಯಾವುದೇ ಕಾಲದಲ್ಲಿ ಮತ್ತು ಕಾಲ ಕಾಲಕ್ಕೆ ಆ ಆವರಣ ಅಥವಾ ಅದರ ಭಾಗದೊಳಕ್ಕೆ ಸೇರಿಸಬೇಕಾದ ವ್ಯಕ್ತಿಗಳ ಸಂಖ್ಯೆಯನ್ನು ಬದಲಾಯಿಸಬಹುದು.

**109. ಸೂರುಗಳು, ದ್ವಾರಗಳು, ಇತ್ಯಾದಿ.–** (1) ಕಟ್ಟಡದ ಸೂರುಗಳು ಕನಿಷ್ಠ ಪಕ್ಷ ಎರಡೂವರೆ ಮೀಟರುಗಳಷ್ಟು ಎತ್ತರವಾಗಿರತಕ್ಕದ್ದು.

(2) ದ್ವಾರಗಳ ಗಾತ್ರವು, ಅಗಲದಲ್ಲಿ ಎರಡು ಮೀಟರುಗಳು ಮತ್ತು ಎತ್ತರದಲ್ಲಿ ಎರಡೂವರೆ ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ.

(3) ಸಾಮಾನ್ಯವಾಗಿ ಉಪಯೋಗದಲ್ಲಿಲ್ಲದ ದ್ವಾರ ಅಥವಾ ಕಂಡಿಗಳನ್ನು ಕಟ್ಟಡದ ಒಳಗಡೆಯಿಂದ ಕೊಂಚ ಒತ್ತುವುದರ ಮೂಲಕ ಸುಲಭವಾಗಿ ತೆಗೆಯಬಹುದಾದಂಥ ಚಾಪೆ ಪರದೆಗಳು ಅಥವಾ ಅಂಥವೇ ಸಾಮಗ್ರಿಗಳಿಂದ ಮಾಡಬಹುದು.

(4) ಯಾವುದೇ ವಿವರಣೆಯ ಯಾವುದೇ ಅಡ್ಡ ಕಂಬಿಯನ್ನು ಯಾವುದೇ ಬಾಗಿಲಿನ ಒಳಗೆ ಅಥವಾ ಹೊರಗೆ ಹಾಕತಕ್ಕದ್ದಲ್ಲ.

(5) ಯಾವುದೇ ಹೊಸಲು ಮೆಟ್ಟಿಲು ಕಟ್ಟಡದ ನೆಲದ ಮಟ್ಟಕ್ಕಿಂತ ಮೇಲೆ ಇರತಕ್ಕದ್ದಲ್ಲ.

(6) ಕಟ್ಟಡದ ಒಳಗಡೆ ಸುತ್ತ ಆಗಲ ಒಂದು ಕಾಲು ಮೀಟರುಗಳಿಗಿಂತ ಕಡಿಮೆ ಇಲ್ಲದ ನಡುದಾರಿಗಳು ಅಥವಾ ದಾರಿಗಳು ಇರತಕ್ಕದ್ದು ಮತ್ತು ಅಂಥ ನಡುದಾರಿಗಳನ್ನು ಖುಲ್ಲಾ ಇಟ್ಟಿರತಕ್ಕದ್ದು.

(7) ಗ್ಯಾಲರಿಗಳನ್ನು,–

(ಕ) ಭದ್ರವಾಗಿ ಕಟ್ಟಿರತಕ್ಕದ್ದು;

(ಖ) ಕನಿಷ್ಠ ಪಕ್ಷ ಒಂದೂವರೆ ಮೀಟರಿನಷ್ಟು ಅಗಲವಾಗಿರುವ ಎರಡಕ್ಕಿಂತ ಕಡಿಮೆಯಿಲ್ಲದ ಮೆಟ್ಟಿಲುಗಳು ಮತ್ತು ಕೂಡುದಾರಿಗಳ ಮೂಲಕ ಪ್ರವೇಶಾವಕಾಶವನ್ನು ಒದಗಿಸತಕ್ಕದ್ದು;

(ಗ) ಮುಂಭಾಗದಿಂದ ಹಿಂಭಾಗದವರೆಗೆ ಹತ್ತು ಮೀಟರುಗಳಿಗಿಂತ ಹೆಚ್ಚಲ್ಲದ ಅಂತರಗಳಲ್ಲಿರುವ ಕನಿಷ್ಠ ಪಕ್ಷ ಒಂದೂ ಕಾಲು ಮೀಟರುಗಳ ಅಗಲದ ಪೂರ್ಣ ನಡುದಾರಿಗಳ ಮೂಲಕ ಅವುಗಳನ್ನು ಪ್ರತ್ಯೇಕ ಬ್ಲಾಕುಗಳಲ್ಲಿ ವಿಭಜಿಸಿರತಕ್ಕದ್ದು.

(8) * * *

(9) ಕಟ್ಟಡದ ನಾಲ್ಕು ಮೀಟರುಗಳ ಒಳಗೆ ಯಾವುದೇ ಹೊರ ಬೇಲಿಗೆ ಅವಕಾಶವಿರತಕ್ಕದ್ದಲ್ಲ.

**110. ಪ್ರೊಜೆಕ್ಷನ್ ಕೊಠಡಿ.–** (1) ಪ್ರೊಜೆಕ್ಷನ್ ಕೊಠಡಿಯನ್ನು ಅಗ್ನಿ ಪ್ರತಿರೋಧಕ ಸಾಮಗ್ರಿಯಿಂದ ರಚಿಸಿರತಕ್ಕದ್ದು ಮತ್ತು ಅದು ಪ್ರೇಕ್ಷಣಾ ಮತ್ತು ವೀಕ್ಷಣಾ ಕಿಂಡಿಗಳ ಮೂಕಲವಲ್ಲದೆ ಸಭಾಂಗಣದೊಂದಿಗೆ ಯವುದೇ ರೀತಿಯ ಸಂಪರ್ಕವನ್ನು ಹೊಂದಿರತಕ್ಕದ್ದಲ್ಲ.

(2) ಪ್ರೊಜೆಕ್ಷನ್ ಕೊಠಡಿಯು, ಅತಿ ಸಣ್ಣ ಗಾತ್ರದ ಎರಡು ಮೀಟರುಗಳು ಮತ್ತು ಎರಡು ಮೀಟರುಗಳಿಗಿಂತ ಕಡಿಮೆಯಿಲ್ಲದಷ್ಟು ಪೂರ್ಣ ಎತ್ತರದ ಕನಿಷ್ಠ ಪಕ್ಷ ಆರು ಚದರ ಮೀಟರುಗಳಷ್ಟು ನೆಲ ಪ್ರದೇಶವನ್ನು ಹೊಂದಿರತಕ್ಕದ್ದು.

(3) ಪ್ರೊಜೆಕ್ಷನ್ ಕೊಠಡಿಯು, ಸಭಾಂಗಣದಿಂದ ಆಚೆ ಇರುವಂಥ ನಿವೇಶನದಲ್ಲಿನ ಖುಲ್ಲಾ ಜಾಗಕ್ಕೆ ನೇರ ಮತ್ತು ಸ್ವತಂತ್ರವಾದ ಹೊರಕ್ಕೆ ಹೋಗುವ ದಾರಿಯನ್ನು ಹೊಂದಿರತಕ್ಕದ್ದು.

(4) ಸಭಾಂಗಣದ ಭಾಗವಾಗುವ ಪ್ರೊಜೆಕ್ಷನ್ ಕೊಠಡಿಯ ಗೋಡೆಗಳ ಹೊರ ಮೇಲ್ಮೈ ಮತ್ತು ಛಾವಣಿ ಮತ್ತು ಡೇರೆ, ಬೂತು ಅಥವಾ ಜೋಪಡಿಯ ನಡುವೆ ಎರಡು ಮೀಟರುಗಳಿಗಿಂತ ಕಡಿಮೆಯಿಲ್ಲದ ಅಂತರವಿರತಕ್ಕದ್ದು.

(5) 48ನೇ ನಿಯಮದ (1)ನೇ ಉಪ–ನಿಯಮದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಸಂಚಾರಿ ಸಿನಿಮಾದ ಪ್ರೊಜೆಕ್ಷನ್ ಕೊಠಡಿಗೆ ಅನ್ವಯವಾಗತಕ್ಕದ್ದು.

**111. ಫಿಲ್ಮುಗಳಿಗಾಗಿ ಉಗ್ರಾಣ.–** ಅಗ್ನಿ ಪ್ರತಿರೋಧಕ ಸಾಮಗ್ರಿಗಳಿಂದ ರಚಿಸಿದ ಫಿಲ್ಮು ಸಾಮಗ್ರಿಗಳಿಗಾಗಿ ಪ್ರೊಜೆಕ್ಷನ್ ಕೊಠಡಿ ಮತ್ತು ಸಭಾಂಗಣದಿಂದ ಎಂಟು ಮೀಟರುಗಳಿಗಿಂತ ಕಡಿಮೆಯಿಲ್ಲದ ದೂರದಲ್ಲಿ ಸ್ವತಂತ್ರವಾದ ಉಗ್ರಾಣವಿರತಕ್ಕದ್ದು.

## ಭಾಗ – IV 'ಕ'

## ಅಧ್ಯಾಯ – XII 'ಕ'

## ಡ್ರೈವ್ ಇನ್ ಸಿನಿಮಾಗಳು

**111ಕ. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **'ಡ್ರೈವ್ ಇನ್ ಸಿನಿಮಾ'** ಎಂದರೆ ಮೋಟಾರು ಕಾರುಗಳಲ್ಲಿ ಕುಳಿತುಕೊಂಡು ಸಿನಿಮಾವನ್ನು ನೋಡಲು ಇಚ್ಛಿಸುವ ವ್ಯಕ್ತಿಗಳಿಗೆ ಸಾಮಾನ್ಯವಾಗಿ ಪ್ರವೇಶವನ್ನು ಕೊಡಬಹುದಾದಂಥ ಬಯಲು ಥಿಯೇಟರ್ ಆವರಣದೊಂದಗಿನ ಸಿನಿಮಾ. ಆದಾಗ್ಯೂ, **'ಡ್ರೈವ್ ಇನ್ ಸಿನಿಮಾ'** ಆವರಣದಲ್ಲಿ ಸಭಾಂಗಣವನ್ನು ಸಹ ಒದಗಿಸಿರುವಲ್ಲಿ ಮೋಟಾರು ಕಾರುಗಳಲ್ಲಿ ಕುಳಿತುಕೊಂಡು ಸಿನಿಮಾವನ್ನು ನೋಡಲು ಇಚ್ಛಿಸುವ ವ್ಯಕ್ತಿಗಳನ್ನು

ಹೊರತುಪಡಿಸಿ ಇತರರು ಸಹ ಅಲ್ಲಿಗೆ ಪ್ರವೇಶ ಪಡೆಯಬಹುದು. ಅಂಥ ಡ್ರೈವ್ ಇನ್ ಸಿನಿಮಾಗಳು ಒಂದು ಸಾವಿರವನ್ನು ಮೀರದಷ್ಟು ಸಂಖ್ಯೆಯ ಕಾರುಗಳಿಗೆ ಸ್ಥಳಾವಕಾಶ ಸಾಮರ್ಥ್ಯವನ್ನು ಹೊಂದಿರಬಹುದು.

(2) 'ಮೋಟಾರು ಕಾರು' ಎಂದರೆ, ಮೋಟಾರು ವಾಹನಗಳ ಅಧಿನಿಯಮ, 1939ರ (1939ರ IVನೇ ಕೇಂದ್ರ ಅಧಿನಿಯಮದ) 2ನೇ ಪ್ರಕರಣದ 16ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಮೋಟಾರು ಕಾರು.

**111ಖ. ಇತರ ನಿಯಮಗಳ ಅನ್ವಯ.–** (1) 111ಗ ನಿಯಮ ಮತ್ತು (2)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಟುಗಳಿಗೆ ಒಳಪಟ್ಟು ಖಾಯಂ ಸಿನಿಮಾಗಳಿಗೆ ಅನ್ವಯವಾಗಬಹುದಾದ ಈ ನಿಯಮಗಳ ಉಪಬಂಧಗಳು ಡ್ರೈವ್ ಇನ್ ಸಿನಿಮಾಗಳಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(2) ಡ್ರೈವ್ ಇನ್ ಸಿನಿಮಾಗಳಿಗೆ ಅವುಗಳ ಅನ್ವಯದ ಬಗ್ಗೆ 25ನೇ, 28ನೇ ಮತ್ತು 38ನೇ ನಿಯಮಗಳು ಈ ಕೆಳಕಂಡ ಮಾರ್ಪಾಟುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗಿರತಕ್ಕದ್ದು ಎಂದರೆ:–

(ಕ) 25ನೇ ನಿಯಮದಲ್ಲಿ,–

(i) 2ನೇ ಉಪ–ನಿಯಮದ (ಕ) ಖಂಡದಲ್ಲಿ 'ಎರಡು ನೂರು ಮೀಟರುಗಳು' ಎಂಬ ಪದಗಳಿಗೆ ಬದಲಾಗಿ 'ಒಂದು ಕಿಲೋಮೀಟರು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ಗ) ಖಂಡದಲ್ಲಿ "29ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಫೀಜುಗಳು" ಎಂಬ ಪದಗಳನ್ನು ಮತ್ತು ಅಂಕಿಗಳಿಗೆ ಬದಲಾಗಿ 'ಒಂದು ಸಾವಿರ ರೂಪಾಯಿಗಳ ಫೀಜು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಖ) 28ನೇ ನಿಯಮದಲ್ಲಿ, 'ಒಂಭತ್ತು ತಿಂಗಳು' ಎಂಬ ಪದಗಳು ಬರುವ ಎರಡೂ ಕಡೆಗಳಲ್ಲಿ ಅವುಗಳಿಗೆ ಬದಲಾಗಿ 'ಒಂದು ವರ್ಷ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು:

(ಗ) 38ನೇ ನಿಯಮಕ್ಕೆ ಬದಲಾಗಿ ಈ ಕೆಳಕಂಡ ನಿಯಮವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

**38. ಲೈಸೆನ್ಸ್‌ಗಳಿಗಾಗಿ ಫೀಜು.–** ಡ್ರೈವ್–ಇನ್ ಸಿನಿಮಾಕ್ಕಾಗಿನ ಲೈಸೆನ್ಸ್ ಫೀಜುಗಳು ಈ ಕೆಳಕಂಡಂತೆ ಇರತಕ್ಕದ್ದು:–

| **ಥಿಯೇಟರ್‌ನ ಸಾಮರ್ಥ್ಯ ಮೋಟಾರು ಕಾರುಗಳ ಸಂಖ್ಯೆ** | **ಮೂರು ತಿಂಗಳುಗಳಿಗೆ ಮೀರದ ಅವಧಿಗಾಗಿ ಲೈಸೆನ್ಸ್ ಫೀಜು** | **ಮೂರು ತಿಂಗಳುಗಳನ್ನು ಮೀರುವ ಆದರೆ ಆರು ತಿಂಗಳುಗಳಿಗೆ ಮೀರದ ಅವಧಿಗಾಗಿನ ಲೈಸೆನ್ಸ್ ಫೀಜು** | **ಆರು ತಿಂಗಳುಗಳಿಗೂ ಮೀರುವ ಆದರೆ ಒಂದು ವರ್ಷವನ್ನು ಮೀರದ ಅವಧಿಗಾಗಿ ಲೈಸೆನ್ಸ್ ಫೀಜು** |
|---|---|---|---|
| | ರೂ. | ರೂ. | ರೂ. |
| 100 ಕ್ಕಿಂತ ಹೆಚ್ಚಿಲ್ಲದ | 250 | 500 | 1000 |
| 101 ರಿಂದ 250 | 350 | 700 | 1500 |
| 250ಕ್ಕಿಂತ ಹೆಚ್ಚು | 500 | 1000 | 2000 |

**111ಗ. ಡ್ರೈವ್–ಇನ್ ಸಿನಿಮಾದ ರಚನೆಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.–** (1) ಡ್ರೈವ್ ಇನ್ ಸಿನಿಮಾವು ಹೊಂದಿಕೊಂಡಿರುವ ನಿವೇಶನದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಗೆ ಅದು

ಅಭಿಮುಖವಾಗಿರತಕ್ಕದ್ದು ಮತ್ತು ಅಂಥ ಮುಂಭಾಗದಲ್ಲಿ ಮೋಟಾರು ಕಾರುಗಳಿಗಾಗಿ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಸೂಕ್ತ ವ್ಯವಸ್ಥೆ ಇರತಕ್ಕದ್ದು. ಪ್ರವೇಶ ದ್ವಾರದಲ್ಲಿ ಆ ಆವರಣವನ್ನು ಪ್ರವೇಶಿಸಲು ಕಾಯುತ್ತಿರುವ ಮೋಟಾರು ಕಾರುಗಳಿಗೆ ಸಾಕಷ್ಟು ಜಾಗವನ್ನು ಒದಗಿಸತಕ್ಕದ್ದು. ಡ್ರೈವ್–ಇನ್ ಸಿನಿಮಾಗಳಲ್ಲಿ ಮೋಟಾರು ಕಾರುಗಳ ಒಟ್ಟು ಸಂಖ್ಯೆಯ ಕನಿಷ್ಠ ಪಕ್ಷ 1/5ರಷ್ಟು ಹಿಡಿಯಲು ಸಾಕಷ್ಟು ಸ್ಥಳ ಇರತಕ್ಕದ್ದು ಮತ್ತು ಆ ಪ್ರದೇಶದೊಳಕ್ಕೆ ಅಂಥ ಕಾರುಗಳ ಪ್ರವೇಶಕ್ಕಾಗಿ ಟಿಕೇಟು ಬೂತ್‌ಗಳೊಂದಿಗೆ ಕನಿಷ್ಟ ಪಕ್ಷ ಎರಡು ಪ್ರತ್ಯೇಕವಾದ ಹೋಗುವ ದಾರಿಗಳನ್ನು ಒದಗಿಸತಕ್ಕದ್ದು. 600ಕ್ಕಿಂತ ಹೆಚ್ಚಿನ ಮೋಟಾರು ಕಾರುಗಳಿಗೆ ಸ್ಥಳಾವಕಾಶ ಮಾಡಿಕೊಡಲು ಸಿನಿಮಾವನ್ನು ನಿರ್ಮಿಸಿರುವಲ್ಲಿ ಮೋಟಾರು ಕಾರುಗಳ ನಿರ್ಗಮನಕ್ಕಾಗಿ ಕನಿಷ್ಟ ಎರಡು ಗೇಟುಗಳನ್ನು ಒದಗಿಸತಕ್ಕದ್ದು. ಪ್ರವೇಶ ಮತ್ತು ನಿರ್ಗಮನದ ಪ್ರತಿಯೊಂದು ಗೇಟಿನ ಅಗಲವು ನಾಲ್ಕು ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(2) ಡ್ರೈವ್–ಇನ್ ಸಿನಿಮಾದ ಸರಹದ್ದುಗಳಲ್ಲಿ ಕಾಂಪೌಂಡಿನೊಳಗೆ ಗೋಡೆಗೆ ಲಗತ್ತಾಗಿ ಭೂಮಿಯ ಮಟ್ಟದ ಮೇಲೆ ಎರಡು ಮೀಟರುಗಳಿಗಿಂತ ಕಡಿಮೆ ಇಲ್ಲದ ಎತ್ತರವನ್ನು ಹೊಂದಿದ ಅಗ್ನಿ ಪ್ರತಿರೋಧಕ ಸಾಮಗ್ರಿಯ ಕಾಂಪೌಂಡ್ ಗೋಡೆಯನ್ನು ರಚಿಸತಕ್ಕದ್ದು ಅಥವಾ ಇಡೀ ಕಾಂಪೌಂಡಿನ ಸುತ್ತ ಮುಳ್ಳು ತಂತಿ ಬೇಲಿ ಮತ್ತು ಕಂಬಿಯ ಬೇಲಿಯು ಇರತಕ್ಕದ್ದು.

(3) ಪ್ರವೇಶ ಹಾಗೂ ನಿರ್ಗಮನದ ಪ್ರದೇಶಗಳನ್ನು ಸಾಕಷ್ಟು ಪ್ರಕಾಶ ಮಾನವಾದ ದೀಪಗಳ ಮೂಲಕ ಬೆಳಗಿಸತಕ್ಕದ್ದು.

(4) ಪರದೆಯ ಇಡೀ ಗೆರೆಗೆ ಸಂಬಂಧಿಸಿದಂತೆ ವೀಕ್ಷಕರ ಪ್ರದೇಶದ ಪಾರ್ಶ್ವದಲ್ಲಿಯ ಪರಿಮಿತಿಯು 350ರ ಕೋನಕ್ಕೆ ಸೀಮಿತವಾಗಿರತಕ್ಕದ್ದು.

(5) ಪರದೆಗೆ ಅಭಿಮುಖವಾಗಿರುವ ಮೋಟಾರು ಕಾರುಗಳ ಸಾಲುಗಳನ್ನು ಕೇಂದ್ರ ರೇಖೆಯ ಮೇಲೆ ಪರದೆಯ ಹಿಂಭಾಗದಲ್ಲಿ 0.6 X ಪರದೆಯ ಅಗಲದ ದೂರದಲ್ಲಿ ಅದರ ಕೇಂದ್ರವನ್ನು ಹೊಂದಿರುವ ವೃತ್ತ ಪರಿಧಿಯ ರೂಪದಲ್ಲಿ ವ್ಯವಸ್ಥೆ ಮಾಡತಕ್ಕದ್ದು.

(6) ಪರದೆಗೆ ಅಭಿಮುಖವಾಗಿರುವ ಸಾಲಿನಲ್ಲಿ ಮೋಟಾರು ವಾಹನಗಳಿಗೆ ಸ್ಥಳಾವಕಾಶವನ್ನು ಒದಗಿಸಿರುವ ಬಂದು ಹೋಗುವ ದಾರಿಯ ಆಗಲವು 10 ಮೀಟರ್‌ಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(7) ಪರದೆ ಹಾಗೂ ವಾಹನಗಳ ಮುಂದಿನ ಸಾಲಿನ ನಡುವಣ ಅಂತರವು ಪರದೆಯ ಮೇಲಿನ ಚಿತ್ರದ ಅಗಲದ 1.5ರಷ್ಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(8) ವೀಕ್ಷಕರ ಪ್ರದೇಶದ ಎರಡೂ ಬದಿಯಲ್ಲಿ 10 ಮೀಟರುಗಳಿಗಿಂತ ಕಡಿಮೆ ಇಲ್ಲದ ಅಗಲದ ತಡೆ ಇಲ್ಲದ ದಾರಿಯನ್ನು ಒದಗಿಸತಕ್ಕದ್ದು.

(9) ಮೋಟಾರು ಕಾರುಗಳ ಎಲ್ಲಾ ಸಾಲುಗಳಲ್ಲಿ, ಮೋಟಾರು ಕಾರುಗಳ ಮುಂಭಾಗವು ಹಿಂದುಗಡೆಯಿಂದ ಪರದೆಯ ಪೂರ್ಣ ನೋಟವು ಕಾಣುವುದನ್ನು ಸುನಿಶ್ಚಿತಗೊಳಿಸಲು ಹಿಂಭಾಗಕ್ಕಿಂತ ಹೆಚ್ಚು ಎತ್ತರದಲ್ಲಿ ಇರತಕ್ಕದ್ದು.

(10) ಪರದೆಯ ಮೇಲೆ ಬಿಟ್ಟ ಚಿತ್ರದ ಗಾತ್ರವು ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು, ಎಂದರೆ:–

| | | |
|---|---|---|
| 1. | 200ರಿಂದ 400 ಮೋಟಾರು ಕಾರುಗಳಿಗಾಗಿ | ಎತ್ತರ 11 ಮೀಟರುಗಳು ಅಗಲ 25 ಮೀಟರುಗಳು ಭೂಮಿಯ ಮೇಲೆ ತಳ 6 ಮೀಟರುಗಳು |
| 2. | 401ರಿಂದ 600 ಮೋಟಾರು ಕಾರುಗಳಿಗಾಗಿ | ಎತ್ತರ 13 ಮೀಟರುಗಳು ಅಗಲ 30 ಮೀಟರುಗಳು ಭೂಮಿಯ ಮೇಲೆ ತಳ 7 ಮೀಟರುಗಳು |

3. 601ರಿಂದ 1000 ಮೋಟಾರು ಕಾರುಗಳಿಗಾಗಿ ಎತ್ತರ 19 ಮೀಟರುಗಳು ಅಗಲ 43 ಮೀಟರುಗಳು ಭೂಮಿಯ ಮೇಲೆ ತಳ 3 ಮೀಟರುಗಳು

(11) ಪರದೆಯು, ಸೂರ್ಯನು ಮುಳುಗುವುದರಿಂದ ಅಥವಾ ಮುಚ್ಚಂಜೆಯ ಇಳಕು ಅದರ ಮೇಲೆ ಬೀಳದ ಹಾಗೆ ಇರತಕ್ಕದ್ದು. ಅದನ್ನು ಕಾಂಕ್ರೀಟು ಸಾಮಗ್ರಿ ಅಥವಾ ಉಕ್ಕಿನ ಚೌಕಟ್ಟಿನಿಂದ ನಿರ್ಮಿಸಿರತಕ್ಕದ್ದು.

(12) ಗಂಟೆಗೆ 160 ಕಿಲೋ ಮೀಟರುಗಳಷ್ಟು ವೇಗದ ಗಾಳಿಯನ್ನು ಅಥವಾ ಪ್ರತಿ ಚದರ ಮೀಟರಿಗೆ 120 ಕಿಲೋ ಗ್ರಾಂಗಳ ಒತ್ತಡವನ್ನು ತಡೆದುಕೊಳ್ಳುವ ಹಾಗೆ ಪರದೆಯನ್ನು ನಿರ್ಮಿಸಬೇಕು. ಪರದೆಯು ಸ್ವಲ್ಪ ಮುಂದಕ್ಕೆ ಬಾಗಿರತಕ್ಕದ್ದು. ಗರಿಷ್ಠ ಬಾಗುವಿಕೆಯು ಲಂಬ ಅಕ್ಷದೊಂದಿಗೆ 8 ಡಿಗ್ರಿಗಳಷ್ಟಿರತಕ್ಕದ್ದು.

(13) ಪರದೆ ಅಥವಾ ಅದರ ಭಾಗವು ರಸ್ತೆಯ ಬದಿಯಿಂದ ಕಾಣಿಸತಕ್ಕದ್ದಲ್ಲ.

(14) ಪರದೆಯ ತುತ್ತ ತುದಿಯಲ್ಲಿ ಕೆಂಪು ಎಚ್ಚರಿಕೆ ಮಿತಿಗಳನ್ನು ಏರಿಸಿರತಕ್ಕದ್ದು ಮತ್ತು ಅದರ ಮೇಲೆ ವೀಕ್ಷಕರ ಪ್ರದೇಶಕ್ಕೆ ಬೆಳಕು ನೀಡಲು ಪ್ರವಾಹ ಏರಿಸತಕ್ಕದ್ದು.

(15) ಮೋಟಾರು ಕಾರುಗಳ ಹೋಗುವ ದಾರಿಗಳು ಪರ್ಯಾಯವಾಗಿ 12 ಮೀಟರುಗಳ ಅಗಲ ಅಥವಾ 10 ಮೀಟರುಗಳು ಮತ್ತು 8 ಮೀಟರುಗಳು ಅಗಲವಾಗಿ ಏಕ ಪ್ರಕಾರವಾಗಿ ಇರತಕ್ಕದ್ದು. ಪರಂತು, ಮೊದಲಿನ 4 ಸಾಲುಗಳು 12 ಮೀಟರುಗಳ ಅಗಲದ ಹೋಗುವ ದಾರಿಗಳನ್ನು ಹೊಂದಿರತಕ್ಕದ್ದು.

(16) ಧ್ವನಿವರ್ಧಕ ಕಂಬಗಳನ್ನು ಒಂದು ಮೋಟಾರು ಕಾರಿನ ಎರಡೂ ಕಡೆಯಲ್ಲಿ ಇರುವ ಹಾಗೆ ಒದಗಿಸತಕ್ಕದ್ದು. ಒಂದು ಸಾಲಿನಲ್ಲಿ ಎರಡು ಕಂಬಗಳ ನಡುವಿನ ಅಂತರವು 6 ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ. ಧ್ವನಿವರ್ಧಕಗಳಿಗಾಗಿನ ಕಂಬಗಳನ್ನು ಕಾಂಕ್ರೀಟಿನ ತಳದಲ್ಲಿ ಹೂಳತಕ್ಕದ್ದಲ್ಲ ಮತ್ತು ಅವುಗಳ ಸ್ಥಾನವನ್ನು ಸೂಚಿಸುವ ಹಾಗೆ ಅವುಗಳ ಮೇಲೆ ದೀಪವು ಇರತಕ್ಕದ್ದು. ದೀಪಗಳು ಕಂಬಗಳ ಪಕ್ಕದಲ್ಲಿ ಪರದೆಗೆ ವಿಮುಖವಾಗಿ ಇರತಕ್ಕದ್ದು. ಅದು ಆ ಸಾಲು ಮತ್ತು ಸ್ಥಳದ ಸಂಖ್ಯೆಯನ್ನು ಸಹ ಬೆಳಗಿಸತಕ್ಕದ್ದು: ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮನದಟ್ಟಾಗುವಂತೆ ಆ ಧ್ವನಿಯ ಸಂವಹನಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದರೆ ಪ್ರತಿಯೊಂದು ಮೋಟಾರು ಕಾರಿಗಾಗಿ ಧ್ವನಿವರ್ಧಕ ಸಹಿತ ಕಂಬವನ್ನು ಒದಗಿಸುವುದು ಅವಶ್ಯವಿರತಕ್ಕದ್ದಲ್ಲ: ಮತ್ತು ಪರಂತು, ಯಾವುದೇ ಸಂದರ್ಭದಲ್ಲಿ ಒಂದೇ ಸಾಲಿನಲ್ಲಿ ಪಕ್ಕಪಕ್ಕದಲ್ಲಿ ನಿಂತಿರುವ ಯಾವುವೇ ಎರಡು ಮೋಟಾರು ಕಾರುಗಳ ನಡುವಣ ಅಂತರವು ಎರಡು ಮೀಟರುಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(17) ಪ್ರೊಜೆಕ್ಷನ್ ಕೊಠಡಿಯು ಆವರಣದ ಕೇಂದ್ರದಲ್ಲಿ ಆವೃತ ಕಟ್ಟಡದಲ್ಲಿ ಇರತಕ್ಕದ್ದು ಅಂಥ ಪ್ರೊಜೆಕ್ಷನ್ ಕೊಠಡಿಯು ಸಾರ್ವಜನಿಕ ಶೌಚಗೃಹ, ಕ್ಯಾಂಟಿನ್, ಅಡುಗೆ ಮನೆ, ಅಂಗಡಿಗಳ ಒಂದು ಭಾಗ ಮತ್ತು ಅಂಥವೇ ಸೌಕರ್ಯಗಳಿಗೆ ಸ್ಥಳಾವಕಾಶವನ್ನು ಒದಗಿಸುವ ರಚನೆಯ ಭಾಗವಾಗಿರಬಹುದು. ಈ ರಚನೆಗಳಿಂದ ಬೆಳಕು ಚಿತ್ರವನ್ನು ಬಿಡುವುದರ ಮೇಲೆ ಬೀಳದಂತೆ ಅಥವಾ ಅದನ್ನು ಸರಿಯಾಗಿ ನೋಡುವುದನ್ನು ಅಡ್ಡಿಪಡಿಸದಂತೆ ಸಾಕಷ್ಟು ಎಚ್ಚರಿಕೆಯನ್ನು ವಹಿಸತಕ್ಕದ್ದು. ಪ್ರೊಜೆಕ್ಷನ್ ಕೊಠಡಿಯ ಹಿಂಭಾಗದಲ್ಲಿ ಸಹ ಕಾರು ಹೋಗುವ ದಾರಿಗಳನ್ನು ಒದಗಿಸಿರುವಲ್ಲಿ ಆ ಪ್ರದೇಶವನ್ನು ಪರದೆಯ ಸರಿಯಾದ ದೃಶ್ಯವನ್ನು ಪಡೆಯುವ ಹಾಗೆ ಎತ್ತರಿಸಿರತಕ್ಕದ್ದು.

**111ಫ. ನಿಯಮಗಳ ಅನ್ವಯದಿಂದ ವಿನಾಯಿತಿ.–** ರಾಜ್ಯ ಸರ್ಕಾರವು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅದು ವಿಧಿಸಲು ಸೂಕ್ತವೆಂದು ಯೋಚಿಸಬಹುದಾದಂಥ ಷರತ್ತುಗಳು ಮತ್ತು ಪರಿಬಂಧಗಳಿಗೆ ಒಳಪಟ್ಟು, ಬರಹದಲ್ಲಿನ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಎಲ್ಲ ಅಥವಾ ಯಾವುದೇ ಡ್ರೈವ್ ಇನ್ ಸಿನಿಮಾವನ್ನು ಈ ನಿಯಮಗಳ IV, VII, VIII, IX, X, XI ಮತ್ತು XIVನೇ ಅಧ್ಯಾಯಗಳ ಎಲ್ಲಾ ಅಥವಾ ಯಾವುದೆ ಉಪಬಂಧದಿಂದ ವಿನಾಯಿತಿಗೊಳಿಸಬಹುದು.

## ಭಾಗ – IVಖ

## ಅಧ್ಯಾಯ – XII ಖ

## ಅರೆ ಕಾಯಂ ಸಿನಿಮಾ ಕಟ್ಟಡಗಳು

**111ಙ. ಅರೆಕಾಯಂ ಸಿನಿಮಾ ಕಟ್ಟಡ.–** ಈ ಅಧ್ಯಾಯದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, **"ಅರೆ ಕಾಯಂ ಸಿನಿಮಾ ಕಟ್ಟಡ"** ಎಂದರೆ, ಸಂಚಾರಿ ಸಿನಿಮಾ, ಡ್ರೈವ್ ಇನ್ ಸಿನಿಮಾ ಮತ್ತು ಕಾಯಂ ಸಿನಿಮಾಕ್ಕಾಗಿ ಲೈಸೆನ್ಸ್ ಕೊಟ್ಟ ಕಟ್ಟಡವನ್ನು ಹೊರತುಪಡಿಸಿ ಇತರ ಕಟ್ಟಡ.

**111ಚ. ನಿಯಮಗಳ ಅನ್ವಯ.–** ಈ ಅಧ್ಯಾಯದಲ್ಲಿನ ನಿಯಮಗಳು ಮತ್ತು ಕೆಳಗೆ ನಿರ್ದಿಷ್ಟಪಡಿಸಿದ ನಿಯಮಗಳು ಮತ್ತು ಉಪನಿಯಮಗಳು ಉಚಿತ ವ್ಯತ್ಯಾಸಗಳೊಂದಿಗೆ ಅರೆ ಕಾಯಂ ಸಿನಿಮಾ ಕಟ್ಟಡಗಳಿಗೆ ಅನ್ವಯವಾಗತಕ್ಕದ್ದು, ಎಂದರೆ.– ನಿಯಮ 2.3ನೇ ನಿಯಮದ (1) ರಿಂದ (8), (11) ರಿಂದ (16), (18) ರಿಂದ (22)ರವರೆಗಿನ ಉಪ–ನಿಯಮಗಳು, 4–6–7ನೇ ನಿಯಮಗಳು, 25ನೇ ನಿಯಮದ (2)ನೇ ಉಪ–ನಿಯಮದ (ಕ)ದಿಂದ (ಗ)ವರೆಗಿನ ಬಾಬುಗಳು, 28ನೇ ನಿಯಮದ (1)ನೇ ಉಪ–ನಿಯಮದ (ಖ)ದಿಂದ (ಜ್ಞ) ಮತ್ತು (ಜ)ದಿಂದ (ಟ)ವರೆಗಿನ ಬಾಬುಗಳು, 28–29–38–43ನೇ ನಿಯಮಗಳು, 46ನೇ ನಿಯಮದ (2) ಮತ್ತು (3)ನೇ ಉಪ–ನಿಯಮಗಳು, 49ನೇ ನಿಯಮದ (1)ರಿಂದ (5), (7)ರಿಂದ (12), (15) ಮತ್ತು (17)ರವರೆಗಿನ ಉಪ–ನಿಯಮಗಳು, (50)ನೇ ನಿಯಮ, (51)ನೇ ನಿಯಮದ (8)ರಿಂದ (10)ರವರೆಗಿನ ಉಪ–ನಿಯಮಗಳು, 62 ರಿಂದ 67, 70, 71ನೇ ನಿಯಮಗಳು 76ನೇ ನಿಯಮದ (1)ರಿಂದ(8)ರವರೆಗಿನ ಉಪ–ನಿಯಮಗಳು, 77 ರಿಂದ 84, 86 ಮತ್ತು 87ನೇ ನಿಯಮಗಳು.

**111ಛ. ಅರೆಕಾಯಂ ಥಿಯೇಟರುಗಳ ಸ್ಥಾಪನೆಗಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಯ ಮೇಲೆ ಪರಿಬಂಧಗಳು.–** (ಕ) ಯಾವುದರ ಜನಸಂಖ್ಯೆಯು 50,000 ಅಥವಾ ಅದಕ್ಕಿಂತ ಹೆಚ್ಚು ಇರುವುದೋ ಆ ಪಟ್ಟಣಗಳು ಮತ್ತು ನಗರಗಳು ;

(ಖ) ಅಸ್ತಿತ್ವದಲ್ಲಿರುವ ಕಾಯಂ ಸಿನಿಮಾಗಳ ಮತ್ತು ಅರೆ ಕಾಯಂ ಸಿನಿಮಾಗಳ ಒಟ್ಟು ಸಂಖ್ಯೆಯು 27ನೇ ನಿಯಮದ (2)ನೇ ಉಪ–ನಿಯಮಕ್ಕನುಸಾರವಾಗಿ ಅಂಥ ಸ್ಥಳದಲ್ಲಿ ಲೈಸೆನ್ಸ್ ಕೊಡಬಹುದಾದ ಕಾಯಂ ಸಿನಿಮಾಗಳ ಸಂಖ್ಯೆಯನ್ನು ಮೀರುವಲ್ಲಿ ಅರೆ ಕಾಯಂ ಸಿನಿಮಾಗಳ ಸ್ಥಾಪನೆಗಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೊಡತಕ್ಕದ್ದಲ್ಲ.

**111ಜ. ಕೆಲವು ಅಧಿಕಾರಿಗಳಿಂದ ಪರಿಶೀಲನಾ ಅಧಿಕಾರ.–** (1) ಥಿಯೇಟರು ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಗ್ನಿಶಾಮಕ ದಳದ ಅಧಿಕಾರಿ ಯಾವನಾದರೂ ಇದ್ದರೆ, ಅವನು ಮತ್ತು ಕರ್ನಾಟಕ ಅಗ್ನಿಶಾಮಕ ದಳದ ಅಧೀನ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಅಗ್ನಿಶಾಮಕ ದಳದ ಅಧಿಕಾರಿ, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಎಕ್ಸಿಕ್ಯೂಟಿವ್ ಇಂಜಿನಿಯರು, ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಅವರ ಪ್ರತಿನಿಧಿ, ಲೈಸೆನ್ಸ್ ಕೊಡುವ ಪ್ರಾಧಿಕಾರಿ ಅಥವಾ ಅವನ ಪ್ರತಿನಿಧಿ, ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿ, ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಲೈಸೆನ್ಸ್‌ದಾರನು ಪಾಲಿಸುತ್ತಿದ್ದಾನೆಯೇ ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಈ ಅಧ್ಯಾಯದ ಉದ್ದೇಶದ ಮೇರೆಗೆ ಲೈಸೆನ್ಸ್ ಕೊಟ್ಟ ಅಥವಾ ಕೊಡಲು ಉದ್ದೇಶಿಸಿದ ಸ್ಥಳವನ್ನು ಯಾವುದೇ ಕಾಲದಲ್ಲಿ ಪ್ರವೇಶಿಸಬಹುದು.

(2) ಹಾಗೆ ಸಲಹೆ ಬಂದರೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರೊಡನೆ ಸಮಾಲೋಚಿಸಿ ಲೈಸೆನ್ಸ್ ಕೊಡುವ ಪ್ರಾಧಿಕಾರಿ, ವಿಶೇಷ ನೋಟೀಸಿನ ಮೂಲಕ;–

(ಕ) 49ನೇ ನಿಯಮದಲ್ಲಿ ನಿಯಮಿಸಿದ ಸ್ಥಳಾವಕಾಶದ ಪ್ರಮಾಣದಲ್ಲಿ ಕಡಿತವನ್ನು :–

(ಖ) ಸಿಂಪರಣೆ ಮತ್ತು ಹೊಗೆ ಹಾಕುವಿಕೆಗಳನ್ನೊಳಗೊಂಡಂಥ ಆವರಣದ ನಿಯತಕಾಲಿಕ ಸೋಂಕು ನಿವಾರಣೆಯನ್ನು ; ಮತ್ತು

(ಗ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉತ್ತಮ ವಾಯು ಸಂಚಾರಕ್ಕಾಗಿ ಅಂಥ ಇತರ ಕ್ರಮಗಳನ್ನು ಅಳವಡಿಸುವಂತೆ–ನಿರ್ದೇಶಿಸಬಹುದು.

– ಮತ್ತು ಲೈಸೆನ್ಸ್‌ದಾರ ಅಥವಾ ಅವನ ಏಜೆಂಟನು, ಅಂಥ ಯಾವುದೇ ನಿರ್ದೇಶನವನ್ನು ತಕ್ಷಣ ಪಾಲಿಸಬೇಕು ಮತ್ತು ಹಾಗೆ ಮಾಡಲು ತಪ್ಪಿದ ಸಂದರ್ಭದಲ್ಲಿ ಅವನಿಗೆ ಕೊಟ್ಟ ಲೈಸೆನ್ಸ್ ಅಮಾನತ್ತಿಗೆ ಅಥವಾ ರದ್ದಿಯಾತಿಗೆ ಗುರಿಯಾಗತಕ್ಕದ್ದು.

(3) ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಅವರಲ್ಲಿ ಯಾರೇ ಅಗಲಿ ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಯಾವುದೇ ಕಾಲದಲ್ಲಿ ವಿದ್ಯುತ್ ಸ್ಥಾಪನೆಗಳು ಈ ನಿಯಮಗಳ ಅವಶ್ಯಕತೆಗಳನ್ನು ಪೂರೈಸುತ್ತವೆಯೋ ಹೇಗೆ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು. ಅದರಲ್ಲಿ ಅವನು ಯಾವುದೇ ನ್ಯೂನತೆಯನ್ನು ಕಂಡು ಹಿಡಿದರೆ ಸದರಿ ವಿಷಯದ ಬಗ್ಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ವರದಿ ಮಾಡತಕ್ಕದ್ದು. ಅವನು ಆ ತರುವಾಯ ಆ ಕೂಡಲೇ ಲೈಸೆನ್ಸ್‌ದಾರನಿಗೆ ಅವುಗಳನ್ನು ಸರಿಪಡಿಸುವುದಕ್ಕಾಗಿ ಬರಹದಲ್ಲಿನ ನೋಟೀಸನ್ನು ಕೂಡಲೇ ಕೊಡತಕ್ಕದ್ದು ಮತ್ತು ಅಂಥ ಸರಿಪಡಿಸುವಿಕೆಯನ್ನು ಮಾಡತಕ್ಕಂಥ ಯುಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ಲೈಸೆನ್ಸ್‌ದಾರನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ನೋಟೀಸಿನ ನಿಬಂಧನೆಗಳನ್ನು ತಪ್ಪಿದರೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ರದ್ದುಪಡಿಸತಕ್ಕದ್ದು ಅಥವಾ ಅಂಥ ಸರಿಪಡಿಸುವಿಕೆಗಳನ್ನು ಮಾಡುವವರೆಗೆ ಸಂದರ್ಭಾನುಸಾರ ಅಸ್ತಿತ್ವದಲ್ಲಿರುವ ಲೈಸೆನ್ಸ್‌ನ್ನು ರದ್ದುಪಡಿಸತಕ್ಕದ್ದು ಅಥವಾ ಅದರ ಮರು ಮಂಜೂರಾತಿಯನ್ನು ಮಾಡತಕ್ಕದ್ದಲ್ಲ.

(4) ಎಕ್ಸಿಕ್ಯೂಟಿವ್ ಇಂಜಿನಿಯರನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ, ಸಿನಿಮಾ ಕಟ್ಟಡವು ಈ ನಿಯಮಗಳ ಅಗತ್ಯತೆಗಳನ್ನು ಪೂರೈಸುವುದೋ ಹೇಗೆ ಎಂಬ ಬಗ್ಗೆ ಯಾವುದೇ ಕಾಲದಲ್ಲಿ ವರದಿ ಮಾಡಬಹುದು. ಅದರಲ್ಲಿ ಅವನು ಯಾವುವೇ ನ್ಯೂನತೆಗಳನ್ನು ಕಂಡುಹಿಡಿದರೆ, ಅವನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ವರದಿಯನ್ನು ಮಾಡತಕ್ಕದ್ದು. ಆ ಪ್ರಾಧಿಕಾರಿಯು, ಆ ತರುವಾಯ ಅವುಗಳನ್ನು ಸರಿಪಡಿಸುವುದಕ್ಕಾಗಿ ಲೈಸೆನ್ಸ್‌ದಾರನಿಗೆ ಬರಹದಲ್ಲಿ ನೋಟೀಸನ್ನು ಕೂಡಲೇ ಕೊಡತಕ್ಕದ್ದು ಮತ್ತು ಅಂಥ ಸರಿಪಡಿಸುವಿಕೆಯನ್ನು ಮಾಡತಕ್ಕಂಥ ಯುಕ್ತ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು. ನಿರ್ದಿಷ್ಟಪಡಿಸಿದ ಅವಧಿಯೊಳಗೆ ಲೈಸೆನ್ಸ್‌ದಾರನು ಅದನ್ನು ಪಾಲಿಸಲು ತಪ್ಪಿದಾಗ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸಂದರ್ಭಾನುಸಾರ ಲೈಸೆನ್ಸ್‌ನ್ನು ಅಮಾನತ್ತು ಅಥವಾ ರದ್ದುಗೊಳಿಸಬಹುದು ಅಥವಾ ನ್ಯೂನತೆಗಳನ್ನು ಸರಿಪಡಿಸುವವರೆಗೆ ಅದನ್ನು ಮರುಮಂಜೂರು ಮಾಡತಕ್ಕದ್ದಲ್ಲ.

**111ಝ. ಅರೆ ಕಾಯಂ ಸಿನಿಮಾ ಕಟ್ಟಡ ನಿರ್ಮಾಣಕ್ಕೆ ಅರ್ಜಿ.–** ಆರೆ ಕಾಯಂ ಸಿನಿಮಾ ಕಟ್ಟಡವನ್ನು ನಿರ್ಮಿಸಲು ಬಯಸುವ ವ್ಯಕ್ತಿಯು ಮೊದಲು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ನಮೂನೆ **'ಕ'**ದಲ್ಲಿ ಆರು ಪ್ರತಿಗಳಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅವನು **'ಖ'** ನಮೂನೆಯಲ್ಲಿ ಈ ಬಗ್ಗೆ ಉದ್ದೇಶಿತ ನಿವೇಶನದ ಮೇಲೆ ಸಾರ್ವಜನಿಕ ಮುಖ್ಯ ರಸ್ತೆಯಿಂದ ಅದನ್ನು ಸ್ಪಷ್ಟವಾಗಿ ನೋಡಬಹುದಾದಂಥ ಸ್ಥಾನದಲ್ಲಿ ಫಲಕದ ಮೇಲೆ ನೋಟೀಸನ್ನು ಕೂಡ ಹಾಕತಕ್ಕದ್ದು. ನೋಟೀಸು ಪ್ರಾದೇಶಿಕ ಭಾಷೆ ಇಂಗ್ಲೀಷಿನಲ್ಲಿರತಕ್ಕದ್ದು. ಆ ನೋಟೀಸು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಲೈಸೆನ್ಸ್‌ದಾರನ ಅರ್ಜಿಯ ಬಗ್ಗೆ ತೀರ್ಮಾನಿಸುವವರೆಗೆ ಫಲಕದ ಮೇಲೆ ಪ್ರದರ್ಶಿತವಾಗತಕ್ಕದ್ದು. ಆ ಫಲಕವು ಕನಿಷ್ಠ 1.25 ಮೀ X 1.00 ಮೀಟರು ಗಾತ್ರವುಳ್ಳದ್ದಾಗಿರತಕ್ಕದ್ದು ಮತ್ತು ಆ ನೋಟೀಸು ದಪ್ಪ ಹಾಗೂ ಸ್ಪಷ್ಟವಾಗಿ ಓದಬಹುದಾದ ಅಕ್ಷರಗಳಲ್ಲಿ ಇರತಕ್ಕದ್ದು.

**111ಞ. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆಕ್ಷೇಪಣೆಗಳನ್ನು ಆಹ್ವಾನಿಸತಕ್ಕದ್ದು.–** (1) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, 111ಝ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರ್ಜಿದಾರನ ಖರ್ಚಿನಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಹೆಚ್ಚು ಪ್ರಸಾರವುಳ್ಳ ಸ್ಥಳೀಯ ವೃತ್ತಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಅಂಥ

ಉದ್ದೇಶವನ್ನು ಸಾರ್ವಜನಿಕರಿಗೆ ತಿಳಿಸತಕ್ಕದ್ದು, ಅಂಥ ನೋಟೀಸು ನಮೂನೆ 'ಗ' ದಲ್ಲಿರತಕ್ಕದ್ದು ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಆಕ್ಷೇಪಣೆಗಳನ್ನು ಕಳುಹಿಸತಕ್ಕಂಥ ಅವಧಿಯು ಅಂಥ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಾಗಿರತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಏಕಕಾಲದಲ್ಲಿ ಅರ್ಜಿಯ ಪ್ರತಿಗಳನ್ನು ಅರ್ಜಿದಾರನು ಒದಗಿಸಿದ ಲಗತ್ತುಗಳೊಂದಿಗೆ, ಅರೆ ಕಾಯಂ ಸಿನಿಮಾದ ಸ್ಥಾಪನೆಗಾಗಿ ಉದ್ದೇಶಿತ ನಿವೇಶನದ ಸೂಕ್ತತೆ ಅಥವಾ ಅನ್ಯಥಾ ಅವರ ಅಭಿಪ್ರಾಯಗಳನ್ನು ತಿಳಿದುಕೊಳ್ಳುವ ಉದ್ದೇಶಕ್ಕಾಗಿ ಸಂದರ್ಭಾನುಸಾರ ಪಟ್ಟಣ ಯೋಜನಾ ನಿರ್ದೇಶಕ, ಎಕ್ಸಿಕ್ಯೂಟಿವ್ ಇಂಜಿನಿಯರ್, ಸ್ಥಳೀಯ ಪ್ರಾಧಿಕಾರ ಮತ್ತು ಪೊಲೀಸ್ ಸೂಪರಿಂಟೆಂಡೆಂಟ್ / ಪೊಲೀಸು ಕಮಿಷನರಿಗೆ ಕಳುಹಿಸಿ ಕೊಡತಕ್ಕದ್ದು.

(2) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸಾಧ್ಯವಾದಷ್ಟು ಬೇಗನೆ ಮತ್ತು ಯಾವುದೇ ಸಂದರ್ಭದಲ್ಲಿ (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಅವಧಿ ಮುಗಿದ ತರುವಾಯ ಮೂವತ್ತು ದಿವಸಗಳು ಮೀರದ ಅವಧಿಯೊಳಗೆ ಅರೆ ಕಾಯಂ ಸಿನಿಮಾದ ಸ್ಥಾಪನೆಗಾಗಿ ಉದ್ದೇಶದ ನಿವೇಶನದ ಸೂಕ್ತತೆ ಅಥವಾ ಅನ್ಯಥಾ ಅದರ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕದ್ದು. (1)ನೇ ಉಪ–ನಿಯಮದಲ್ಲಿ ಬೇರೆ ಬೇರೆ ಪ್ರಾಧಿಕಾರಿಗಳು ಹಾಗೂ (1)ನೇ ಉಪ–ನಿಯಮದಲ್ಲಿ ತಿಳಿಸಿದ ಅವಧಿ ಮುಕ್ತಾಯವಾದ ತರುವಾಯ ಯಾವುದೇ ಸಂದರ್ಭದಲ್ಲಿ ಮೂವತ್ತು ದಿವಸಗಳೊಳಗಾಗಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಒದಗಿಸತಕ್ಕದ್ದು.

(3) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸಿನಿಮಾದ ಸ್ಥಾಪನೆಗಾಗಿ ನಿವೇಶನದ ಅಥವಾ ಅನ್ಯಥಾ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಮುಂಚೆ (1)ನೇ ಉಪ–ನಿಯಮದಲ್ಲಿ ತಿಳಿಸಿದ ಬೇರೆ ಬೇರೆ ಪ್ರಾಧಿಕಾರಿಗಳ ಅಭಿಪ್ರಾಯಗಳು ಮತ್ತು (1)ನೇ ಉಪ–ನಿಯಮದ ಮೇರೆಗೆ ಪ್ರಕಟಣೆಗೆ ಉತ್ತರವಾಗಿ ಸ್ವೀಕರಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ನಿಯಮಿಸಿದ ಎಲ್ಲಾ ಷರತ್ತುಗಳನ್ನು ಆ ನಿವೇಶನ ಪೂರೈಸುತ್ತದೆ ಎಂದು ಮನದಟ್ಟಾದರೆ, ಅರ್ಜಿದಾರನಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು 'ಘ' ನಮೂನೆಯಲ್ಲಿ ಕೊಡತಕ್ಕದ್ದು.

**111ಚ. ನಿರಾಕ್ಷೇಪಣಾ ಪ್ರಮಾಣಪತ್ರಗಳನ್ನು ಕೊಡುವುದಕ್ಕಾಗಿ ಆ ನಿವೇಶನದ ಬಗ್ಗೆ ಷರತ್ತುಗಳು.–** ಈ ಅಧ್ಯಾಯದ ಮೇರೆಗೆ,–

(ಕ) ಸಿನಿಮಾ ನಿವೇಶನವು,–

(i) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿನ ಆಸನಗಳ ಒಟ್ಟು ಸಂಖ್ಯೆ 600ಕ್ಕಿಂತ ಹೆಚ್ಚಾಗಿದ್ದರೆ, ರಸ್ತೆಗೆ ಹೊಂದಿಕೊಂಡು 20 ಮೀಟರುಗಳಿಗಿಂತ ಕಡಿಮೆಯಿಲ್ಲದ ಒಂದು ಪಕ್ಕದೊಂದಿಗೆ 1350 ಚದರ ಮೀಟರುಗಳು ;

(ii) ಉದ್ದೇಶಿತ ಸಿನಿಮಾ ಕಟ್ಟಡದಲ್ಲಿನ ಆಸನಗಳ ಒಟ್ಟು ಸಂಖ್ಯೆಯು 450 ಮತ್ತು 600ರ ಮಧ್ಯ ಇದ್ದರೆ, ರಸ್ತೆಗೆ ಹೊಂದಿಕೊಂಡಂತೆ 18 ಮೀಟರುಗಳಿಗೆ ಕಡಿಮೆಯಲ್ಲದ ಒಂದು ಪಕ್ಕದೊಂದಿಗೆ 1000 ಚದರ ಮೀಟರುಗಳು; ಮತ್ತು

(iii) ಆಸನಗಳ ಒಟ್ಟು ಸಂಖ್ಯೆಯು 450ಕ್ಕಿಂತ ಕಡಿಮೆಯಿದ್ದರೆ ರಸ್ತೆಗೆ ಹೊಂದಿಕೊಂಡಂತೆ 15 ಮೀಟರುಗಳಿಗಿಂತ ಕಡಿಮೆಯಲ್ಲದ ಒಂದು ಪಕ್ಕದೊಂದಿಗೆ 800 ಚದರ ಮೀಟರುಗಳಿಗೆ ಕಡಿಮೆಯಾಗಿರದ ;

–ಕನಿಷ್ಠ ಪ್ರದೇಶವನ್ನು ಹೊಂದಿದ್ದ ಹೊರತು ;

(ಖ) ಸಿನಿಮಾ ಕಟ್ಟಡ ಮತ್ತು ಕಾಂಪೌಂಡ್ ಗೋಡೆಯ ಒಳಗಿನ ಎಲ್ಲೆಗಳ ನಡುವಿನ ಸ್ಪಷ್ಟ ಅಂತರವು ಪ್ರವೇಶ ದ್ವಾರದ ಕಡೆ 10 ಮೀಟರುಗಳಿಗಿಂತ ಮತ್ತು ಬೇರೆ ಕಡೆಗಳಲ್ಲಿ 5 ಮೀಟರುಗಳಿಗಿಂತ ಕಡಿಮೆಯಿಲ್ಲದಂತೆ ಇದ್ದ ಹೊರತು ;

(ಗ) ಸಿನಿಮಾ ನಿವೇಶನವು ವಾಣಿಜ್ಯ ಪ್ರದೇಶದಲ್ಲಿ ಅಥವಾ ಪಟ್ಟಣ ಅಥವಾ ಗ್ರಾಮದ ಹೊರವಲಯದಲ್ಲಿ ಇದ್ದ ಹೊರತು,

–ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದಲ್ಲ.

**111ಠ. ಮಂಜೂರ್ಮಾಡಿದ ನಿರಾಕ್ಷೇಪಣಾ ಪತ್ರದ ಪರಿವರ್ತನೆ.–** 50,000 ಮತ್ತು ಅದಕ್ಕೂ ಕಡಿಮೆ ಜನಸಂಖ್ಯೆಯಿರುವ ನಗರ ಅಥವಾ ಪಟ್ಟಣಗಳಲ್ಲಿ ಕಾಯಂ ಸಿನಿಮಾ ಸ್ಥಾಪನೆಗಾಗಿ ಕರ್ನಾಟಕ ಸಿನಿಮಾಗಳ ರೆಗ್ಯುಲೇಷನ್ (ತಿದ್ದುಪಡಿ) ನಿಯಮಗಳು, 1975ರ ಪ್ರಕಟಣೆಗೆ ಮುಂಚೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗಳು ಈಗಾಗಲೇ ಕೊಟ್ಟ ಮತ್ತು ಕೊನೆಗೊಂಡಿರದ ಅಥವಾ ಸಿಂಧುತ್ವವು ಮುಕ್ತಾಯವಾಗದಿರುವ ಯಾವುವೇ ನಿರಾಕ್ಷೇಪಣಾ ಪ್ರಮಾಣಪತ್ರಗಳು ಅಂಥ ಪ್ರಮಾಣವ ಧಾರಕನ ಅರ್ಜಿಯ ಮೇಲೆ ಅರೆ ಕಾಯಂ ಸಿನಿಮಾದ ನಿರ್ಮಾಣಕ್ಕಾಗಿ ಪರಿವರ್ತಿಸಲು ಅನುಮತಿಸಬಹುದು : ಪರಂತು, ಈ ಅಧ್ಯಾಯದಲ್ಲಿನ ನಿಯಮಗಳನ್ನು ಪೂರೈಸಿರಬೇಕು. ಈ ನಿಯಮಗಳು ಜಾರಿಗೆ ಬರುವ ಮುಂಚೆ ಐವತ್ತು ಸಾವಿರ ಮತ್ತು ಅದಕ್ಕೂ ಕಡಿಮೆ ಜನಸಂಖ್ಯೆಯಿರುವ ಸ್ಥಳಗಳಲ್ಲಿ ಕಾಯಂ ಥಿಯೇಟರುಗಳಿಗಾಗಿ ನಿರಾಕ್ಷೇಪಣಾ ಪ್ರಮಾಣಪತ್ರಗಳ ಮಂಜೂರಾತಿಗಾಗಿ ಅರ್ಜಿಗಳು ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಗಳು ಮಂಜೂರ್ಮಾಡುವುದು ಇತ್ಯರ್ಥದಲ್ಲಿರುವ ಅರ್ಜಿಗಳು, ಅರ್ಜಿದಾರನ ಅರ್ಜಿಯ ಮೇಲೆ ಅರೆ ಕಾಯಂ ಥಿಯೇಟರನ್ನು ಸ್ಥಾಪಿಸುವುದಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ಪರಿವರ್ತಿಸಲು ಅನುಮತಿಸಬಹುದು : ಪರಂತು, ಈ ಅಧ್ಯಾಯದಲ್ಲಿನ ನಿಯಮಗಳನ್ನು ಪೂರೈಸಿರಬೇಕು.

**111ಡ. ಕಟ್ಟಡದ ನಕ್ಷೆಯ ಅನುಮೋದನೆಗಾಗಿ ಅನುಸರಿಸಬೇಕಾದ ಪ್ರಕ್ರಿಯೆ.–** (1) ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸ್ವೀಕರಿಸಿದ ತರುವಾಯ ಯಾವುದಕ್ಕೆ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಕೊಡಲಾಗಿದೆಯೋ ಆ ನಿವೇಶನದ ಮೇಲೆ ನಿರ್ಮಿಸಬೇಕಾದ ಕಟ್ಟಡದ ನಕ್ಷೆಯ ಅನುಮೋದನೆಗಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು ಮತ್ತು ಅಂಥ ಅರ್ಜಿಯೊಂದಿಗೆ,–

(ಕ) ಕಟ್ಟಡದ ನಿರ್ಮಾಣಕ್ಕಾಗಿ ಹಾಗೂ ಯಂತ್ರ ಸಾಮಗ್ರಿಯ ಸ್ಥಾಪನೆಗಾಗಿ ಸ್ಥಳೀಯ ಪ್ರಾಧಿಕಾರವು ನಿರ್ದಿಷ್ಟಪಡಿಸಿದಂಥ ದರಗಳಲ್ಲಿ ಫೀಜು ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ್ದಕ್ಕಾಗಿ ರಸೀತಿ ;

(ಖ) ಸಂಪೂರ್ಣ ನಕ್ಷೆ, ಉನ್ನತಿ ರೇಖಾಂಶದ ಮತ್ತು ಅಡ್ಡ ವಿಭಾಗಗಳು ;

(ಗ) ಅನುಮೋದಿತ ನಿವೇಶನದ ನಕ್ಷೆಯ ಪ್ರತಿ ;

(ಘ) ಆವರಣದ ಸಂಪೂರ್ಣ ನಕ್ಷೆ, ಉನ್ನತಿ–ರೇಖಾಂಶದ ಮತ್ತು ಅಡ್ಡ ವಿಭಾಗಗಳ ಪ್ರತಿಗಳು ನಾಲ್ಕು ಪ್ರತಿಗಳಲ್ಲಿ (ಒಂದು ಪ್ರತಿಯನ್ನು ಬಟ್ಟೆಯ ಮೇಲೆ ಹಚ್ಚಿರಬೇಕು) ಮತ್ತು ಯಾವುದೇ ಮಾನಕ ಗಾತ್ರ ರೇಖೆಗಳಿಂದ ತೆಗೆದುಕೊಂಡ ಪ್ರಿಂಟುಗಳ ಮೇಲೆ 1/10ಕ್ಕಿಂತ ಕಡಿಮೆಯಿಲ್ಲದ ಪ್ರಮಾಣಕ್ಕೆ ಸರಿಯಾಗಿ ಎಳೆದು ಮತ್ತು,–

(i) ವಿಭಿನ್ನ ಬಣ್ಣಗಳಲ್ಲಿ ವಿವಿಧ ಸಾಮಗ್ರಿಗಳನ್ನು ಸೂಚಿಸುವ ಮತ್ತು ಗೋಡೆಗಳು, ತೊಲೆಗಳ, ದೂಲಗಳ ಮತ್ತು ಟ್ರಸ್ಸುಗಳ ಉದ್ದಗಲಗಳು, ಅಗಲ ಮತ್ತು ಆಳವನ್ನು ಅಂಕಿಗಳಲ್ಲಿ ಕೊಡುವ ಎಲ್ಲ ನಿರ್ಮಿತಿಗಳ ಎಲ್ಲ ಉದ್ದಗಲಗಳನ್ನು ಮಿಲಿಮೀಟರುಗಳಲ್ಲಿ ;

(ii) ಅವುಗಳ ನಿರ್ಮಾಣವನ್ನು ತೋರಿಸುವ ಎಲ್ಲಾ ಬಾಗಿಲುಗಳು, ಕಿಟಕಿಗಳು ಮತ್ತು ವಾಯು ಸಂಚಾರಕಗಳ ಗಾತ್ರಗಳು ಮತ್ತು ಅವುಗಳು ತೆರೆದುಕೊಳ್ಳುವಂಥ ವಿಧಾನ ಮತ್ತು ವಾಯು ಸಂಚಾರದ ಉದ್ದೇಶಿತ ವ್ಯವಸ್ಥೆ ;

(iii) ಉದ್ದೇಶಿತ ಆಸನ ವ್ಯವಸ್ಥೆ ಮತ್ತು ಉದ್ದೇಶಿತ ಕಟ್ಟಡದ ಮೇಲುಪಾಯ ಪ್ರದೇಶ, ಪ್ರೊಜೆಕ್ಷನ್ ಕೊಠಡಿಗೆ ಅವಶ್ಯವಿದ್ದಂತೆ ಪಾವಟಿಗೆ ;

(iv) ನಕ್ಷೆಗಳು ಮತ್ತು ವಿಭಾಗಗಳಲ್ಲಿ ಕಟ್ಟಡದ ಬೇರೆ ಬೇರೆ ಭಾಗಗಳಲ್ಲಿನ ಮಟ್ಟಗಳು ; ಮತ್ತು

(v) ಪ್ರೊಜೆಕ್ಟರುಗಳು, ಪರದೆಗಳು, ಧ್ವನಿಪೆಟ್ಟಿಗೆ ಮತ್ತು ಇತರ ಸ್ಥಿರಯಂತ್ರಗಳು ಮತ್ತು ಸಜ್ಜು ಸಲಕರಣೆಗಳ ವಿವರಗಳು ಮತ್ತು ಸ್ಥಾನಗಳು ಇವುಗಳನ್ನು ಸ್ಪಷ್ಟವಾಗಿ ತೋರಿಸುವ ಎಲ್ಲ ನಿರ್ಮಿತಿಗಳು ಮತ್ತು ಕಟ್ಟಡಗಳ ಪೂರ್ಣ ನಕ್ಷೆ, ಉನ್ನತಿ ರೇಖಾಂಶ ಮತ್ತು ಅಡ್ಡ ವಿಭಾಗಗಳು;

(ಜ) ಚಲನಚಿತ್ರ ಗ್ರಾಹಕ ಯಂತ್ರ ಸಲಕರಣೆಗಳ ಮತ್ತು ವೈರಿಂಗ್, ದೀಪದ ಪಾಯಿಂಟುಗಳೊಂದಿಗೆ ಪೂರ್ಣ ವಿದ್ಯುಚ್ಛಕ್ತಿ ಸ್ಥಾಪನೆ, ಸ್ವಿಚ್ಚುಗಳು, ಪ್ಲಗ್ಗುಗಳು ವಿತರಣ ಮೀಟರು ಫಲಕಗಳು ಮತ್ತು ಬೇರೆ ಬೇರೆ ಬಣ್ಣಗಳಲ್ಲಿ ಬೇರೆ ಬೇರೆ ಪರಿಪಥಗಳನ್ನು ಸೂಚಿಸುವ ಇತರ ವಿದ್ಯುತ್ ಯಂತ್ರ ಸಾಮಗ್ರಿ ಇವುಗಳ ಸ್ಥಾನವನ್ನು ತೋರಿಸುವ ನಕ್ಷೆಗಳು ನಾಲ್ಕು ಪ್ರತಿಗಳಲ್ಲಿ ;

(ಚ) ಬಳಸಬೇಕಾದ ಸಾಮಗ್ರಿಯನ್ನು ಸಾಕಷ್ಟು ವಿವರಿಸಿ ನಿರ್ವಹಿಸಬೇಕಾದ ಕಾಮಗಾರಿಗಳ ವಿವರವಾದ ತಪಶೀಲುಗಳು ಮತ್ತು ಪದವೀಧರ ಇಂಜಿನಿಯರ್, ವಿನ್ಯಾಸ ಇಂಜಿನಿಯರ್, ವಿನ್ಯಾಸ ವೃತ್ತಿಗೆ ಅಥವಾ ಅರ್ಹತೆ ಪಡೆದ ವಾಸ್ತು ಶಿಲ್ಪಿಯು ಸರಿಯಾಗಿರುವುದೆಂದು ಪ್ರಮಾಣೀಕರಿಸಿದ ವಿವರವಾದ ಲೆಕ್ಕ ಹಾಕುವಿಕೆಗಳೊಂದಿಗೆ ಅಳವಡಿಸಿಕೊಳ್ಳಬೇಕಾದ ನಿರ್ಮಾಣದ ವಿಧಾನ–ಇವುಗಳು ತ್ರಿಪ್ರತಿಗಳಲ್ಲಿ.

–ಇರತಕ್ಕದ್ದು.

(2) ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮತ್ತು ಮೇಲೆ ಹೇಳಿದ ವಿವರಗಳನ್ನು ಪೂರೈಸಿದಾಗ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಏಕಕಾಲದಲ್ಲಿ ನಗರ ಯೋಜನಾ ನಿರ್ದೇಶಕ, ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರರು ಮತ್ತು ಸಂಬಂಧಿತ ಸ್ಥಳೀಯ ಪ್ರಾಧಿಕಾರಿಯವರೊಂದಿಗೆ ಈ ಅಧ್ಯಾಯದಲ್ಲಿಯ ನಿಯಮಗಳ ಅಗತ್ಯತೆಗಳನ್ನು ಕಟ್ಟಡದ ನಕ್ಷೆಗಳು ಪೂರೈಸುತ್ತವೆಯೋ ಹೇಗೆ ಮತ್ತು ಕಟ್ಟಲು ಉದ್ದೇಶಿಸಿದ ಕಟ್ಟಡವು ಅರೆ ಕಾಯಂ ಥಿಯೇಟರಿಗೆ ಸೂಕ್ತವಾಗಿರುವುದೋ ಹೇಗೆ ಎಂಬುದರ ಬಗ್ಗೆ ಸಮಾಲೋಚಿಸತಕ್ಕದ್ದು ಏಕಕಾಲದಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅಥವಾ ಉಪವಿದ್ಯುಚ್ಛಕ್ತಿ ಪರಿಶೀಲಕನಿಗೆ ದಾಖಲೆಗಳನ್ನು ಕಳುಹಿಸತಕ್ಕದ್ದು. ಅವನು ಉದ್ದೇಶಿತ ವಿದ್ಯುಚ್ಛಕ್ತಿ ಸ್ಥಾಪನೆಗಳು, ನಮೂನೆ–1ರಲ್ಲಿ ಅರೆ ಕಾಯಂ ಥಿಯೇಟರಿಗಾಗಿನ ಮಾದರಿ ವೈರಿಂಗ್ ರೇಖಾ ನಕ್ಷೆಯ ಅಗತ್ಯತೆಗಳನ್ನು ಪೂರೈಸುತ್ತದೆಯೋ ಹೇಗೆ ಎಂಬುದನ್ನು ಪರೀಕ್ಷಿಸತಕ್ಕದ್ದು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಅವನು ಷರಾಗಳನ್ನು ಒದಗಿಸತಕ್ಕದ್ದು.

(3) (2)ನೇ ಉಪ–ನಿಯಮದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಒಂದು ತಿಂಗಳು ಮೀರದ ಅವಧಿ ಮುಗಿಯುವುದರೊಳಗಾಗಿ ಅವರ ಅಭಿಪ್ರಾಯಗಳನ್ನು ಲೈಸೆನ್ಸ್ ನೀಡುವ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು ಮತ್ತು ಅಂಥ ಅಭಿಪ್ರಾಯಗಳನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಸ್ವೀಕರಿಸಿದ ತರುವಾಯ, ಈ ಅಧ್ಯಾಯದಲ್ಲಿಯ ನಿಯಮಗಳು ಎಲ್ಲಾ ಅಗತ್ಯತೆಗಳನ್ನು ಪೂರೈಸಲಾಗಿದೆಯೆಂದು ಮನದಟ್ಟು ಮಾಡಿಕೊಂಡ ಮೇಲೆ ಕಟ್ಟಡದ ನಕ್ಷೆಯನ್ನು ಅನುಮತಿಸತಕ್ಕದ್ದು ಮತ್ತು ತಿಂಗಳ ಅವಧಿಯೊಳಗಾಗಿ ಲೈಸೆನ್ಸನ್ನು ಕೊಡತಕ್ಕದ್ದು. ಈ ಅಧ್ಯಾಯದಲ್ಲಿನ ನಿಯಮಗಳ ಅಗತ್ಯತೆಗಳನ್ನು ಪೂರೈಸಿಲ್ಲವೆಂದು ಲೈಸೆನ್ಸ್ ಕೊಡುವ ಪ್ರಾಧಿಕಾರಿ ಅಭಿಪ್ರಾಯಪಟ್ಟರೆ, ಅವನು ಅಂಥ ನಿರಾಕರಣೆಗೆ ಸಂಕ್ಷಿಪ್ತದಲ್ಲಿ ಕಾರಣಗಳನ್ನು ಕೊಟ್ಟು ಬರಹದಲ್ಲಿ ಆದೇಶದ ಮೂಲಕ ಅವನು ಲೈಸೆನ್ಸ್ ಕೊಡುವುದನ್ನು ನಿರಾಕರಿಸತಕ್ಕದ್ದು ಮತ್ತು ಅದನ್ನು ಅರ್ಜಿದಾರನಿಗೆ ತಿಳಿಸತಕ್ಕದ್ದು.

**111ಢ. ನಿರ್ಮಿಸಿದ ಕಟ್ಟಡದ ಮಾನ್ಯತೆ.–** ಲೈಸೆನ್ಸ್‌ದಾರನು ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರನಿಗೆ ಕಟ್ಟಡದ ನಿರ್ಮಾಣದ ಪ್ರಾರಂಭಕ್ಕೆ ಹದಿನೈದು ದಿವಸಗಳು ಮುಂಚೆ ಕಟ್ಟಡವು ಪೂರ್ಣಗೊಂಡ ತರುವಾಯ ಭದ್ರತೆಯ ಪ್ರಮಾಣಪತ್ರವನ್ನು ಕೊಡುವ ಉದ್ದೇಶಗಳಿಗಾಗಿ ನಿರ್ಮಾಣದ ಕಾಲದಲ್ಲಿ ಆ ಕಟ್ಟಡವನ್ನು ಸಾಧ್ಯವಾದಷ್ಟು ಮೇಲಿಂದ ಮೇಲೆ ಪರಿಶೀಲಿಸಲು ಅಥವಾ ಅವನ ಅಧೀನ ಅಧಿಕಾರಿಗಳನ್ನು ಹಾಗೆ ಮಾಡಲು ಅಧಿಕೃತಗೊಳಿಸಲು ತಿಳಿಸತಕ್ಕದ್ದು. ಲೈಸೆನ್ಸ್‌ದಾರನು ಅದೇ ರೀತಿ ವೈರಿಂಗ್‌ನ್ನು ಪ್ರಾರಂಭಿಸುವುದಕ್ಕೆ ಹದಿನೈದು ದಿವಸಗಳ ಮುಂಚೆ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನನ್ನು ವಿದ್ಯುಚ್ಛಕ್ತಿ ಸ್ಥಾಪನೆಗಳನ್ನು ಪರಿಶೀಲಿಸಲು ಅವನಿಗೆ ಸಾಧ್ಯವಾಗುವಂತೆ ಮಾಡಲು ತಿಳಿಸತಕ್ಕದ್ದು.

**111ಣ. ವಿದ್ಯುಚ್ಛಕ್ತಿ ಸ್ಥಾಪನೆಗಳು.–** (ಕ) ಅರೆ ಕಾಯಂ ಸಿನಿಮಾದಲ್ಲಿ ವಿದ್ಯುದೀಕರಣ ಮತ್ತು ವಿದ್ಯುಚ್ಛಕ್ತಿಯನ್ನು ನಮೂನೆ 1ರಲ್ಲಿನ ಮಾದರಿ ವೈರಿಂಗ್ ರೇಖಾ ನಕ್ಷೆಯಂತೆ ವಿನಿಯಮಿಸತಕ್ಕದ್ದು. ಆವರಣದ ಇಡೀ ವೈರಿಂಗ್‌ನ್ನು ನಳಿಕೆ ಕೊಳವೆಯಲ್ಲಿ ಮಾಡತಕ್ಕದ್ದು ಅಥವಾ ಪಿವಿಸಿ ನಳಿಕೆಯಲ್ಲಿ ಆವೃತಗೊಳಿಸತಕ್ಕದ್ದು. ಪ್ರಾಂಗಣದ ವಿದ್ಯುದೀಕರಣವನ್ನು ನೆಲಮಟ್ಟದ ಮೇಲೆ 12' ಎತ್ತರದಲ್ಲಿ ಸ್ಪಷ್ಟ ವೈರಿಂಗ್‌ನ ಮೇಲೆ ಹಾಯಿಸಬಹುದು.

(ಖ) ಎಲ್ಲ ಪರಿಪಥಗಳನ್ನು ಸಿಬ್ಬಂದಿಗೆ ಸುಲಭವಾಗಿ ಸಿಗುವ ಸ್ಥಾನಗಳಲ್ಲಿ ಮತ್ತು ಯಾವುದೇ ದಾರಿ ಅಥವಾ ಹೊರದಾರಿಗೆ ಅಡ್ಡಿಪಡಿಸುವ ಸಂಭವವಿಲ್ಲದಿರುವ ಸ್ಥಳಗಳಲ್ಲಿ ಇಟ್ಟು ಕಟ್‌ಔಟ್‌ಗಳ ಮೂಲಕ ಸಮರ್ಥವಾಗಿ ಪರಿರಕ್ಷಿಸತಕ್ಕದ್ದು. ಸ್ವಿಚ್ ಮತ್ತು ಫ್ಯೂಸ್ ಫಲಕಗಳನ್ನು ಅವು ಸಾರ್ವಜನಿಕರಿಗೆ ಎಟುಕುವಂತಿದ್ದರೆ ಸರಿಯಾಗಿ ಪರಿರಕ್ಷಿಸತಕ್ಕದ್ದು.

(ಗ) ಎರಡು ಸ್ವಯಂಚಾಲಿತ ದೀಪಗಳನ್ನು, ಒಂದನ್ನು ಕ್ಯಾಬಿನ್ನಿನಲ್ಲಿ ಮತ್ತು ಇನ್ನೊಂದನ್ನು ಸಭಾಂಗಣದಲ್ಲಿ ತುರ್ತು ಪರಿಸ್ಥಿತಿಯಲ್ಲಿ ಉಪಯೋಗಿಸುವುದಕ್ಕಾಗಿ ಒದಗಿಸತಕ್ಕದ್ದು.

(ಘ) ಸಾರ್ವಜನಿಕರು ಆವರಣದಲ್ಲಿರುವಾಗ, ಆದ್ಯಂತವಾಗಿ ಆವರಣದಲ್ಲಿ ಸುಸ್ಥಿತಿಯಲ್ಲಿರುವ ಕನಿಷ್ಠಪಕ್ಷ ಆರು ಟಾರ್ಚುಗಳನ್ನು ಇಟ್ಟಿರತಕ್ಕದ್ದು ಮತ್ತು ಅದು ದ್ವಾರಪಾಲಕರಿಗೆ ಸುಲಭವಾಗಿ ಸಿಗುವಂತೆ ಹಾಗೆ ಇಡೀ ಕಟ್ಟಡದಲ್ಲೆಲ್ಲಾ ಹಂಚಿರತಕ್ಕದ್ದು.

**111ತ. ಪ್ರದರ್ಶನದ ಲೈಸೆನ್ಸ್.–** (1) ಅನುಮೋದಿತ ನಕ್ಷೆಗನುಸಾರವಾಗಿ ಕಟ್ಟಡ ನಿರ್ಮಾಣ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆ ಮುಗಿದ ಮೇಲೆ ಅರ್ಜಿದಾರನು, 4ನೇ, 43ನೇ, 46(1), (2), (3)ನೇ, 111ಧ, 111ನ, 49 (1 ರಿಂದ 5), (7 ರಿಂದ 12), (15) ಮತ್ತು (17), 50, 51, (8) (9), (10) 111ಫ, 111ಬ, 111ಭ, 62, 63, 64, 65, 66, 67, 70, 71, 76, (1–8), 77, 79, 83, 111ಡ, 111ಫ, 111ದ ನಿಯಮಗಳ ಉಪಬಂಧಗಳ ಮೂಲಕ ಒಳಗೊಂಡ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಮಾಣಪತ್ರಗಳ ಮಂಜೂರಾತಿಗಾಗಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು. ಅವರು ಅವಶ್ಯವೆಂದು ಪರ್ಯಾಲೋಚಿಸುವಂಥ ಪರಿಶೀಲನೆಯನ್ನು ಮಾಡಿದ ತರುವಾಯ ಸಂಬಂಧಪಟ್ಟ ಅರ್ಜಿಗಳ ದಿನಾಂಕಗಳಿಂದ ಒಂದು ತಿಂಗಳೊಳಗಾಗಿ ಅಂಥ ಪ್ರಮಾಣಪತ್ರಗಳನ್ನು ಕೊಡತಕ್ಕದ್ದು. ಮೇಲ್ಕಂಡ ಪ್ರಮಾಣಪತ್ರಗಳನ್ನು ಕೊಡುವುದಕ್ಕಾಗಿ ಫೀಜು ಪ್ರತಿಯೊಂದಕ್ಕೆ ಒಂದು ನೂರು ರೂಪಾಯಿಗಳಾಗಿರತಕ್ಕದ್ದು. ಅರ್ಜಿದಾರನು ಅಗ್ನಿಶಾಮಕ ದಳದ ನಿರ್ದೇಶಕ ಅಥವಾ ಅಗ್ನಿ ಶಾಮಕ ದಳದ ಸಂಬಂಧಪಟ್ಟಂಥ ವಿಷಯಗಳ ಸಂಬಂಧದಲ್ಲಿ ಅಗ್ನಿಶಾಮಕ ದಳದ ನಿರ್ದೇಶಕನು ನಾಮನಿರ್ದೇಶನ ಮಾಡಬಹುದಾದ ಉಪ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಅಗ್ನಿಶಾಮಕ ದಳದ ಅಧಿಕಾರಿಯಿಂದ ಸಹ ಪ್ರಮಾಣಪತ್ರವನ್ನು ಪಡೆಯತಕ್ಕದ್ದು. ಈ ಪ್ರಮಾಣಪತ್ರಗಳ ದ್ವಿಪ್ರತಿಗಳನ್ನು ಪ್ರತಿ ಪ್ರಮಾಣಪತ್ರಕ್ಕೆ ಹತ್ತು ರೂಪಾಯಿಗಳನ್ನು ಸಂದಾಯ ಮಾಡಿದ ಮೇಲೆ ಸಂಬಂಧಪಟ್ಟ ಪ್ರಾಧಿಕಾರಿಯು ಕೊಡಬಹುದು.

(2) (1)ನೇ ಉಪ–ನಿಯಮದಲ್ಲಿ ಉಲ್ಲೇಖಿಸಿದ ಪ್ರಮಾಣಪತ್ರಗಳನ್ನು ಪಡೆದುಕೊಂಡ ತರುವಾಯ ಅರ್ಜಿದಾರನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಪ್ರದರ್ಶನ ಲೈಸೆನ್ಸ್‌ಗಾಗಿ ಅವನ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಆ ಅರ್ಜಿಯ ಜೊತೆಗೆ ಎಕ್ಸಿಕ್ಯೂಟಿವ್ ಇಂಜಿನಿಯರನು ಕೊಟ್ಟ ಪ್ರಮಾಣಪತ್ರ, ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ ವಿದ್ಯುಚ್ಛಕ್ತಿ ಪರಿಶೀಲಕನು ಕೊಟ್ಟ ಪ್ರಮಾಣಪತ್ರ, ಅಗ್ನಿ ಶಾಮಕ ಅಧಿಕಾರಿಯು ಕೊಟ್ಟ ಪ್ರಮಾಣ ಪತ್ರ ಮತ್ತು ಅಂಥ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಸ್ಥಿರೀಕರಿಸುವ ಸರಬರಾಜುದಾರರ ವಿವರ ಪತ್ರ ಸಹಿತವಾಗಿ ಪ್ರತಿಯೊಂದು ಆಟದಲ್ಲಿ ಪ್ರದರ್ಶನಕ್ಕಾಗಿ ಚಲನಚಿತ್ರ ವಿಭಾಗದ ಅನುಮೋದನೆಯೊಂದಿಗೆ ಕೇಂದ್ರ ಸರ್ಕಾರವು ಅನುಮೋದಿಸಿದ ಫಿಲ್ಮುಗಳನ್ನು ಪಡೆದುಕೊಳ್ಳುವುದಕ್ಕಾಗಿ ಎಲ್ಲಾ ವ್ಯವಸ್ಥೆಗಳನ್ನು ಪೂರ್ತಿ ಗೊಳಿಸಲಾಗಿದೆಯೆಂದು ಅರ್ಜಿದಾರನ ಘೋಷಣೆ ಮತ್ತು 38ನೇ ನಿಯಮದಲ್ಲಿ ನಿಯಮಿಸಿದ ದರಗಳಲ್ಲಿ "ಲೈಸೆನ್ಸ್ ಫೀ"ಯನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನ್‌ನೊಂದಿಗೆ ಇರತಕ್ಕದ್ದು.

**111ಥ. ಲೈಸೆನ್ಸ್‌ನ ಮಂಜೂರಾತಿ ಅಥವಾ ನಿರಾಕರಣೆ.–** ಲೈಸೆನ್ಸ್‌ಗಾಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅನಮೋದಿತ ಯೋಜನೆಗೆ ಅನುಸಾರವಾಗಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ ಮತ್ತು ಚಲನಚಿತ್ರ

ಪ್ರದರ್ಶನಕ್ಕಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮನದಟ್ಟಾದರೆ, ಅರ್ಜಿದಾರನಿಗೆ ಅವನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ವಾರಗಳೊಳಗಾಗಿ, ಅರ್ಜಿದಾರನಿಗೆ ನಮೂನೆ "ಚ"ನಲ್ಲಿ ಲೈಸೆನ್ಸ್‌ನ್ನು ಕೊಡತಕ್ಕದ್ದು ಅಥವಾ ಬರಹದಲ್ಲಿ ದಾಖಲ್ಮಾಡಬಹುದಾದ ಕಾರಣಗಳಿಗಾಗಿ ಅಂಥ ಲೈಸೆನ್ಸ್‌ನ್ನು ಕೊಡುವುದನ್ನು ನಿರಾಕರಿಸಬಹುದು. ಈ ಉದ್ದೇಶಕ್ಕಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸ್ಥಳೀಯ ಪರಿಶೀಲನೆಯನ್ನು ಮಾಡಬಹುದು. ಅನುಮೋದಿತ ನಕ್ಷೆ ಮತ್ತು ರೇಖಾಚಿತ್ರದ ಪ್ರತಿಯನ್ನು ಲೈಸೆನ್ಸ್‌ಗೆ ಲಗತ್ತಿಸತಕ್ಕದ್ದು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರಾಕ್ಷೇಪಣಾ ಪ್ರಮಾಣಪತ್ರದ ಸಿಂಧುತ್ವದ ಅವಧಿಯ ಮುಕ್ತಾಯಕ್ಕೆ ಮುಂಚೆ ಲೈಸೆನ್ಸ್‌ಗಾಗಿನ ಅರ್ಜಿಯನ್ನು ಮಾಡಿಕೊಳ್ಳದಿದ್ದರೆ, ಲೈಸೆನ್ಸ್ ಕೊಡುವುದನ್ನು ನಿರಾಕರಿಸಬಹುದು ಮತ್ತು ಲೈಸೆನ್ಸಿನ ದ್ವಿಪ್ರತಿಯನ್ನು ಹತ್ತು ರೂಪಾಯಿಗಳ ಸಂದಾಯದ ಮೇಲೆ ಕೊಡಬಹುದು.

**111ದ. ಲೈಸೆನ್ಸಿನ ಅವಧಿ ಮತ್ತು ಮರುಮಂಜೂರಾತಿ.–** ಅರೆ ಕಾಯಂ ಸಿನಿಮಾ ಥಿಯೇಟರುಗಳಿಗೆ ಒಂದು ಸಲಕ್ಕೆ ಎರಡು ವರ್ಷಗಳವರೆಗೆ ಪ್ರದರ್ಶನ ಲೈಸೆನ್ಸ್‌ನ್ನು ಮಂಜೂರ್ಮಾಡಬಹುದು ಮತ್ತು ಅಂಥ ಲೈಸೆನ್ಸಿನ ಮಂಜೂರಾತಿ ಮತ್ತು ಅದರ ಮರುಮಂಜೂರಾತಿಯ ಒಟ್ಟು ಅವಧಿಯು ಆರು ವರ್ಷಗಳಿಗೆ ಪರಿಮಿತವಾಗಿರತಕ್ಕದ್ದು. ಅದರ ಮುಕ್ತಾಯದಲ್ಲಿ ಆ ಕಟ್ಟಡವನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಸರ್ಕಾರದ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ–ವಿದ್ಯುಚ್ಛಕ್ತಿ ಪರಿಶೀಲಕನು ಸವಿವರವಾಗಿ ಪರಿಶೀಲಿಸತಕ್ಕದ್ದು, ಅವನು ಆರು ವರ್ಷಗಳಿಗೂ ಮೀರಿದ ಅವಧಿಗಾಗಿ ಲೈಸೆನ್ಸ್‌ನ್ನು ಕೊಡುವುದಕ್ಕಾಗಿ ಆ ಕಟ್ಟಡದ 'ಭದ್ರತೆಯ' ಬಗ್ಗೆ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು. 111ಥ ನಿಯಮದ ಮೇರೆಗೆ ಮಂಜೂರ್ಮಾಡಿದ ಲೈಸೆನ್ಸ್‌ನ್ನು ಅಂಥ ಲೈಸೆನ್ಸ್‌ನ್ನು ಮೊದಲ ಬಾರಿಗೆ ಮಂಜೂರ್ಮಾಡಿದ ದಿನಾಂಕದಿಂದ ಹತ್ತು ವರ್ಷಗಳ ಅವಧಿಗೆ ಮೀರಿ ಮರು ಮಂಜೂರ್ಮಾಡತಕ್ಕದ್ದಲ್ಲ, ಸದರಿ ಹತ್ತು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅರ್ಜಿದಾರನು ಕಾಯಂ ಥಿಯೇಟರನ್ನಾಗಿ ಆ ಕಟ್ಟಡವನ್ನು ಪರಿವರ್ತಿಸಿದರೆ, 36ನೇ ನಿಯಮದ ಮೇರೆಗಿನ ಅವಶ್ಯ ಲೈಸೆನ್ಸ್‌ನ್ನು ಅಗತ್ಯವಾದ ಷರತ್ತುಗಳನ್ನು ಪೂರೈಸಿದ್ದರೆ ಮಂಜೂರ್ಮಾಡತಕ್ಕದ್ದು.

**111ಧ. ಅರೆ ಕಾಯಂ ಸಿನಿಮಾ ಆವರಣಕ್ಕೆ ಬೇಲಿ.–** ಆವರಣದ ಮುಂಭಾಗವು ಸಾಕಷ್ಟು ಎತ್ತರದ ಕಲ್ಲುಗಳಿಂದ ನಿರ್ಮಿಸಿದುದಾಗಿರತಕ್ಕದ್ದು ಮತ್ತು ಉಳಿದ ಭಾಗವನ್ನು ಆವರಣಗಳೊಳಗಿನ ವ್ಯಕ್ತಿಗಳಿಗೆ ಹೊರಗಿನ ಸಾರ್ವಜನಿಕರು ಯಾವುದೇ ಅನಾನುಕೂಲತೆಯನ್ನು ಉಂಟುಮಾಡುವುದನ್ನು ತಡೆಗಟ್ಟುವ ಹಾಗೆ ಮುಳ್ಳು ತಂತಿ ಬೇಲಿ ಅಥವಾ ಸ್ಥಳೀಯವಾಗಿ ಲಭ್ಯವಿರುವ ಯಾವುದೇ ಸೂಕ್ತ ಸಾಮಗ್ರಿಯದಾಗಿರಬಹುದು.

**111ನ. ಕಟ್ಟಡ ಕಟ್ಟುವ ಸಾಮಗ್ರಿಗಳು.–** ಅರೆ ಕಾಯಂ ಸಿನಿಮಾ ಕಟ್ಟಡಗಳ ನಿರ್ಮಾಣಕ್ಕಾಗಿ ಸಾಧ್ಯವಾದಮಟ್ಟಿಗೆ ಸ್ಥಳೀಯವಾಗಿ ಲಭ್ಯವಿರುವ ಬಿಟುಮಿನ್ (ಅಸ್ಫಾಲ್ಟಿಕ್ ಶೀಟುಗಳು) ಇತ್ಯಾದಿಗಳಲ್ಲಿ ಹುದುಗಿಸಿದ ಕಲ್ಲು, ಇಟ್ಟಿಗೆ, ಸುಣ್ಣದ ಕಲ್ಲು, ಮಣ್ಣು, (ಎ.ಸಿ. ಶೀಟುಗಳು), ಕಾಡುಮರ, ತಟ್ಟು, ಬಿದಿರು, ಚಾಪೆಗಳು, ಕಾರ್ಡ್‌ಬೋರ್ಡ್‌ನ್ನು ಉಪಯೋಗಿಸಬಹುದು. ಬಾಗಿಲುಗಳು ಮತ್ತು ಕಿಟಕಿಗಳು ಎ.ಸಿ. ಶೀಟು, ಮುಟೀಪುಗಳು ಅಥವಾ ಮರದ್ದು ಆಗಿರಬಹುದು. ಹೊರ ಗೋಡೆಗಳು ಸುಣ್ಣದಲ್ಲಿ ಇಟ್ಟಿಗೆ ಅಥವಾ ಮಣ್ಣು ಇವುಗಳದ್ದಾಗಿರಬಹುದು ಮತ್ತು ಸೂರುಗಳ ಎತ್ತರ 2.6 ಮೀಟರುಗಳಿಗಿಂತ ಕಡಿಮೆಯಿರತಕ್ಕದ್ದಲ್ಲ ಅಥವಾ ಅವು ಕೆಳಗಡೆ ಮೋಟು ಗೋಡೆಗಳು ಮತ್ತು ಚಾವಣಿಯ ಕೆಳಗೆ ತಟ್ಟು ಅಥವಾ ತಟ್ಟೆಯಿಂದ ಕಟ್ಟಿರುವುದಾಗಿರತಕ್ಕದ್ದು.

**111ಪ. ಪ್ರೊಜೆಕ್ಷನ್ ಕೊಠಡಿ.–** (1) ಚಲನಚಿತ್ರ ಗ್ರಾಹಕ ಯಂತ್ರದ ಸಲಕರಣೆಯನ್ನು ಅಗ್ನಿಪ್ರತಿರೋಧಕ ಸಾಮಗ್ರಿಯಿಂದ ದೃಢವಾಗಿ ನಿರ್ಮಿಸಲಾದ ಕೊಠಡಿಯಲ್ಲಿ ಇಡತಕ್ಕದ್ದು. ಅದರ ನೆಲವು 67ನೇ ನಿಯಮದ ಮೇರೆಗೆ ಕೇಬಲ್ಲುಗಳನ್ನು ಹೂಳಲು ಕನಿಷ್ಠ ಐವತ್ತು ಮಿಲಿ ಮೀಟರುಗಳ ಪೂರ್ಣಗೊಳಿಸಿದ ನೆಲವನ್ನು ಹೊಂದಿರತಕ್ಕದ್ದು.

(2) ಪ್ರೊಜೆಕ್ಷನ್ ಮತ್ತು ಪ್ರೇಕ್ಷಕ ಕಿಂಡಿಗಳನ್ನು ಹೊರತುಪಡಿಸಿ, ಪ್ರೊಜೆಕ್ಷನ್ ಕೊಠಡಿಯು ಸಭಾಭವನದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರತಕ್ಕದ್ದಲ್ಲ.

(3) ಒಂದು ಪ್ರೊಜೆಕ್ಟರನ್ನು ಹೊಂದಿರುವ ಪ್ರೊಜೆಕ್ಷನ್ ಕೊಠಡಿಯು ಅತಿ ಚಿಕ್ಕ ಉದ್ದಗಲವಾದ 2.5 ಮೀಟರುಗಳು ಮತ್ತು 3 ಮೀಟರುಗಳಿಗೆ ಕಡಿಮೆಯಲ್ಲದ ಪೂರ್ತಿ ಎತ್ತರದ ಕನಿಷ್ಠಪಕ್ಷ ಏಳೂವರೆ ಚದರ ಮೀಟರುಗಳ ನೆಲ ಪ್ರದೇಶವನ್ನು ಹೊಂದಿರಬೇಕು. ಪ್ರತಿಯೊಂದು ಹೆಚ್ಚುವರಿ ಪ್ರೊಜೆಕ್ಟರಿಗಾಗಿ 2.3 ಚದರ ಮೀಟರುಗಳ ನೆಲದ ಭಾಗವು ಇರತಕ್ಕದ್ದು.

(4) ಪ್ರೊಜೆಕ್ಷನ್ ಕೊಠಡಿಗೆ ತುರ್ತು ಪರಿಸ್ಥಿತಿಯಲ್ಲಿ ಹೊರಕ್ಕೆ ಹೋಗುವ ದಾರಿಯಿರತಕ್ಕದ್ದು.

(5) ನೆಲ ಅಂತಸ್ತು ಅಥವಾ ಅದರ ಕೆಳಗಿನ ಅಂತಸ್ತಿಗೆ ಹೋಗಲು ಕ್ರಮವಾದ ಪಾವಟಿಗೆಗಳು ಇರತಕ್ಕದ್ದು.

(6) ಪ್ರೊಜೆಕ್ಷನ್ ಕೊಠಡಿಯ ಬಾಗಿಲು ಅಗ್ನಿನಿರೋಧಕದ್ದಾಗಿರತಕ್ಕದ್ದು ಮತ್ತು ಎಲ್ಲಾ ಕಿಂಡಿಗಳು, ಉಳಿಬಳೆಗಳು ಮತ್ತು ಜೋಡಣೆಗಳು, ಸಭಾಂಗಣಕ್ಕೆ ಯಾವುದೇ ಹೊಗೆಯು ಹೋಗುವುದನ್ನು ಸಾಧ್ಯವಾದ ಮಟ್ಟಿಗೆ ತಡೆಗಟ್ಟುವ ಹಾಗೆ ನಿರ್ಮಿಸಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಪ್ರೊಜೆಕ್ಷನ್ ಕೊಠಡಿಗಾಗಿ ವಾಯು ಸಂಚಾರವನ್ನು ಒದಗಿಸತಕ್ಕದ್ದು. ಆದರೆ ವಾಯು ಸಂಚಾರ ನಾಳಗಳು ಸಭಾಂಗಣದೊಂದಿಗೆ ನೇರ ಸಂಪರ್ಕ ಹೊಂದಿರತಕ್ಕದ್ದು. ವಾಯು ಸಂಚಾರ ನಾಳಗಳ ಪ್ರದೇಶವು ಪ್ರೊಜೆಕ್ಷನ್ ಕೊಠಡಿಯ ನೆಲ ಪ್ರದೇಶದ ಶೇಕಡಾ ಒಂದಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

(7) ಪ್ರೊಜೆಕ್ಟರ್ ಕಿಂಡಿಗಳು 3 ಮಿ.ಮಿ. 70 ಮಿ.ಮಿ.ನ ಸಿನಿಮಾಸ್ಕೋಪ್ ಮತ್ತು ಸಿನೇರಮಾ, ವೈಡ್ ಆ್ಯಂಗಲ್ ವಿಸ್ತಾವಿಷನ್‌ಗಳಂಥ ಪ್ರೊಜೆಕ್ಷನ್ ಮಾದರಿಗಳಿಗೆ ಅನುಸಾರವಾಗಿರತಕ್ಕದ್ದು.

(8) ಪ್ರತಿಯೊಂದು ಕಿಂಡಿಗೆ ದಪ್ಪದಲ್ಲಿ 5 ಮಿಲಿಮೀಟರ್‌ಗಿಂತ ಕಡಿಮೆಯಲ್ಲದ ದಪ್ಪಗಾಜು ಹಲಗೆ ಪರದೆಯನ್ನು ಹೊಗೆ ಬರದಂತೆ ಜೋಡಣೆಯೊಂದಿಗೆ ಸ್ಥಾನದಲ್ಲಿ ಕೂಡಿಸಿ ಒದಗಿಸತಕ್ಕದ್ದು:

ಪರಂತು, 250 ಚದರ ಮಿಲಿ ಮೀಟರಿಗಿಂತ ಹೆಚ್ಚಿಗೆ ಆದ ಕಿಂಡಿಗಳಿಗಾಗಿ,–

(i) ಉಪಯೋಗಿಸಿದ ಗಾಜಿನ ಪರದೆಗಳು ದಪ್ಪ ಅಥವಾ ತಂತಿಯಿಂದ ಕೂಡಿದ ಗಾಜಿನವು ಆಗಿರತಕ್ಕದ್ದಲ್ಲ;

(ii) ಗಾಜಿನ ಪರದೆಯ ಜೊತೆಗೆ ಲೋಹದ ಪರದೆಗಳನ್ನು ಒದಗಿಸತಕ್ಕದ್ದು ಮತ್ತು ಪ್ರೊಜೆಕ್ಷನ್‌ಗಾಗಿ ಉಪಯೋಗಿಸದೆ ಇರುವಾಗ ಕಂಡಿಗಳನ್ನು ಲೋಹ ಪರದೆಯಿಂದ ಮುಚ್ಚತಕ್ಕದ್ದು;

(iii) ಕಂಡಿಗಳು ಉಪಯೋಗದಲ್ಲಿ ಇಲ್ಲದೆ ಆ ಕಂಡಿಗಳನ್ನು ಲೋಹ ಪರದೆಗಳಿಂದ ಮುಚ್ಚತಕ್ಕದ್ದೆಂದೆ ಕ್ಯಾಬಿನ್‌ನಲ್ಲಿ ನೋಟೀಸು ಹಾಕತಕ್ಕದ್ದು.

(9) (i) ಪ್ರೊಜೆಕ್ಷನ್ ಕೊಠಡಿಯು 18 ವರ್ಷ ವಯಸ್ಸು ತುಂಬಿದ ಮತ್ತು ಸರ್ಕಾರದ ವಿದ್ಯುಚ್ಛಕ್ತಿ ಇನ್ಸ್‌ಪೆಕ್ಟರ್ ಕೊಟ್ಟ ಸಿನಿಮಾ ಚಾಲಕರ ಲೈಸೆನ್ಸ್‌ನ್ನು ಹೊಂದಿರುವ ವ್ಯಕ್ತಿಯ ಪ್ರಭಾರದಲ್ಲಿರತಕ್ಕದ್ದು. ಅಂಥ ಚಾಲಕನನ್ನು ನೇಮಿಸಿಕೊಳ್ಳಲು ತಪ್ಪಿದಲ್ಲಿ ವಿದ್ಯುಚ್ಛಕ್ತಿ ಪ್ರಮಾಣಪತ್ರವು ಅಮಾನತ್ತು ಅಥವಾ ರದ್ದಿಯಾತಿಗೆ ಗುರಿಯಾಗತಕ್ಕದ್ದು.

(ii) ಪ್ರೋಜೆಕ್ಷನ್ ಕೊಠಡಿಯಲ್ಲಿರುವ ಎಲ್ಲ ಕೇಬಲ್ಲುಗಳು, ಲೆಡ್‌ಗಳು, ಜೋಡಣೆಗಳು ಮತ್ತು ಪ್ರತಿರೋಧಗಳು ಹಾಗೂ ಅಗ್ನಿಶಾಮಕ ಸಲಕರಣೆಗಳು ಸರಿಯಾಗಿ ಕೆಲಸ ನಿರ್ವಹಿಸುವ ಸ್ಥಿತಿಯಲ್ಲಿವೆಯೇ ಹೇಗೆ ಎಂಬುದನ್ನು ಪ್ರತಿ ಚಲನಚಿತ್ರ ಪ್ರದರ್ಶನವು ಪ್ರಾರಂಭವಾಗುವ ಮೊದಲು ಆಪರೇಟರನು ಮನವರಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಆತನು ಯಂತ್ರವು ಚಾಲನೆಯಲ್ಲಿರುವ ಸಮಯದಲ್ಲಿ ಪ್ರೊಜೆಕ್ಷನ್ ಕೊಠಡಿಯಲ್ಲಿ ಇರತಕ್ಕದ್ದು.

**111ಫ. ವಾಯು ಸಂಚಾರಕಗಳು.–** ಕಿಟಕಿ, ಬಾಗಿಲು ಮತ್ತು ವಾಯು ಸಂಚಾರಕದ ಕಂಡಿಗಳ ಪ್ರದೇಶವು ಒಟ್ಟು ನೆಲ ಪ್ರದೇಶದ ಎಂಟನೇ ಒಂದು ಭಾಗಕ್ಕಿಂತ ಕಡಿಮೆಯಿರತಕ್ಕದ್ದಲ್ಲ ಮತ್ತು ಕಿಟಕಿಗಳು ಮತ್ತು ವಾಯು

ಸಂಚಾರಕಗಳಿಗೆ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರನ್ನು ನಿರ್ದಿಷ್ಟಪಡಿಸತಕ್ಕಂಥ ಉದ್ದಗಲದ ಅಂಥ ಸಂಖ್ಯೆಯಲ್ಲಿ ಮತ್ತು ಅಂಥ ಸ್ಥಳದಲ್ಲಿ ಇರತಕ್ಕದ್ದು.

**111ಬ. ಟಿಕೆಟು ಬೂತು.–** ಎಲ್ಲಾ ಸಾರ್ವಜನಿಕ ಅನುಕೂಲತೆಗಳು ಮತ್ತು ಟಿಕೇಟು ಕೌಂಟರುಗಳಿಗೆ ಟಿಕೇಟುಗಳನ್ನು ಖರೀದಿಸುವವರು ಸಾಲಾಗಿ ನಿಂತುಕೊಳ್ಳಲು ಸಾಧ್ಯವಾಗುವಂತೆ ಟಿಕೇಟ್ ಮಾರುವ ಕಿಂಡಿಗಳ ಮುಂದೆ ಸೂಕ್ತ ಕೈಕಂಬಿಗಳನ್ನು ಜೋಡಿಸಿರತಕ್ಕದ್ದು.

**111ಭ. ಶೌಚಗೃಹಗಳು, ಮೂತ್ರಿಗಳು ಮತ್ತು ನೀರಿನ ಸೌಲಭ್ಯಗಳು.–** ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಉಪಯೋಗಕ್ಕಾಗಿ ಅರೆ ಕಾಯಂ ಸಿನಿಮಾದಲ್ಲಿ ಒದಗಿಸಬೇಕಾದ ಶೌಚಗೃಹಗಳು ಮತ್ತು ಮೂತ್ರಿಗಳ ಸಂಖ್ಯೆ ಮತ್ತು ಮಾದರಿ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ಸ್ವರೂಪವು ಕಟ್ಟಡದ ಆಸನ ಸಾಮರ್ಥ್ಯದ ಆಧಾರದ ಮೇಲೆ ಆರೋಗ್ಯ ಮತ್ತು ನೈರ್ಮಲ್ಯ ಪರಿಸ್ಥಿತಿಗಳ ಅಗತ್ಯತೆಗಳನ್ನು ಮತ್ತು ಪಟ್ಟಣ ಅಥವಾ ನಗರದಲ್ಲಿ ಸ್ಥಳೀಯ ಪರಿಸ್ಥಿತಿಗಳು ಹಾಗೂ ಲಭ್ಯವಿರುವ ನೀರು ನೈರ್ಮಲ್ಯ ಸೌಲಭ್ಯಗಳನ್ನು ಅವಲಂಬಿಸಿ ಸಂಬಂಧಪಟ್ಟ ಸ್ಥಳೀಯ ನಿಕಾಯದ ಆರೋಗ್ಯ ಮತ್ತು ನೈರ್ಮಲ್ಯ ಪ್ರಾಧಿಕಾರಿಗಳು ನಿರ್ಧರಿಸಬಹುದಾದಂತೆ ಇರತಕ್ಕದ್ದು. ಒದಗಿಸಬೇಕಾದ ಮೂತ್ರಿಗಳು ಸಭಾಂಗಣದಲ್ಲಿ ಸ್ಥಳಾವಕಾಶ ಮಾಡಿಕೊಡಬೇಕಾದ ವ್ಯಕ್ತಿಗಳ ಶೇಕಡಾ ಒಂದರಷ್ಟಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ. ಅದೇ ರೀತಿ ಕಕ್ಕಸುಗಳ ಸಂಖ್ಯೆಯು ಸಭಾಂಗಣದಲ್ಲಿ ಸ್ಥಳಾವಕಾಶ ಮಾಡಿಕೊಡಬೇಕಾದ ವ್ಯಕ್ತಿಗಳ ಶೇಕಡಾ ಒಂದರಷ್ಟಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

**111ಮ. ಔಟ್‌ಹೌಸ್, ಇತ್ಯಾದಿ.–** ಸಿನಿಮಾದ ಆವರಣದಲ್ಲಿ ಯಾವುದೇ ಔಟ್‌ಹೌಸ್, ಕಾರ್ಯಾಗಾರಗಳು, ಷೋ ರೂಮುಗಳು, ಅಂಗಡಿಗಳು ಮತ್ತು ಕ್ಯಾಂಟೀನುಗಳಿಗೆ ಅವಕಾಶ ಕೊಡತಕ್ಕದ್ದಲ್ಲ. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮೋದನೆಗೆ ಒಳಪಟ್ಟು ಸಿನಿಮಾ ಥಿಯೇಟರಿನ ಕಾಂಪೌಂಡಿನ ಒಳಗಡೆ ಪ್ರೇಕ್ಷಕರ ಉಪಯೋಗಕ್ಕಾಗಿ ಎಕ್ಸಿಕ್ಯುಟಿವ್ ಇಂಜಿನಿಯರನು ಅನುಮೋದಿಸಬಹುದಾದ ಮಾದರಿಯ ಉಪಹಾರ ಮಂದಿರದ ಕಟಕಟೆಗಳಿಗೆ ಅವಕಾಶ ಮಾಡಿಕೊಡಬಹುದು. ಯಾವುವೇ ಅಂಗಡಿಗಳು ಅಥವಾ ಇತರ ವಾಣಿಜ್ಯ ಅಥವಾ ವೃತ್ತಿಪರ ವ್ಯವಹಾರದ ಸ್ಥಾಪನೆಗಳು ಸಿನಿಮಾ ಕಟ್ಟಡಕ್ಕೆ ಲಗತ್ತಾಗಿರತಕ್ಕದ್ದಲ್ಲ ಅಥವಾ ಸಿನಿಮಾ ಥಿಯೇಟರ್ ಕಡೆ ತೆಗೆದಿರತಕ್ಕದ್ದಲ್ಲ.

**111ಯ. ಅಗ್ನಿಶಾಮಕ ಸಲಕರಣೆಗಳು.–** ಈ ಕೆಳಕಂಡ ಅಗ್ನಿ ಶಾಮಕ ಉಪಕರಣಗಳನ್ನು ಪ್ರತಿಯೊಂದು ಅರೆ ಕಾಯಂ ಸಿನಿಮಾ ಕಟ್ಟಡದಲ್ಲಿ ಒದಗಿಸತಕ್ಕದ್ದು, ಎಂದರೆ:–

(ಕ) ಪ್ರೊಜೆಕ್ಷನ್ ಕೊಠಡಿಯಲ್ಲಿ ಒಂದು ಅಸ್ಬೆಸ್ಟಾಸ್ ಅಥವಾ ಒಂದು ದಪ್ಪ ಉಣ್ಣೆ ಕಂಬಳಿ, ನೀರಿನ ಎರಡು ಟಬ್‌ಗಳು, ಎರಡು ಕಿಲೋ ಗ್ರಾಂಗಳ ಸಾಮರ್ಥ್ಯದ ಒಂದು ಇಂಗಾಲಾಮ್ಲ ನಂದಿಗೆ ಅಥವಾ ಒಂದು ಲೀಟರು ಸಾಮರ್ಥ್ಯಕ್ಕಿಂತ ಕಡಿಮೆಯಿರದ ಒಂದು ಇಂಗಾಲ ಟೆಟ್ರಾಕ್ಲೋರೈಡ್ ನಂದಿಗೆ ;

(ಖ) ಸಭಾಂಗಣದಲ್ಲಿ ಪ್ರತಿಯೊಂದು ಒಂಬತ್ತು ಲೀಟರ್‌ಗಳ ಸಾಮರ್ಥ್ಯವುಳ್ಳ ಎರಡು ಸೋಡಾ ಆಮ್ಲ ನಂದಿಗೆಗಳನ್ನು ಒದಗಿಸತಕ್ಕದ್ದು. ಉದ್ದದಲ್ಲಿ ಆರು ಮೀಟರುಗಳಿಗಿಂತ ಕಡಿಮೆಯಿಲ್ಲದ ಬಗ್ಗಿಸಬಹುದಾದ ನಳಿಕೆಗಳನ್ನು ಲಗತ್ತಿಸಿದ ಒಂದು ರಿಕಾಪು ಪಂಪನ್ನು ಒದಗಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ರಿಕಾಪು ಪಂಪಿಗೆ ಸಭಾಂಗಣದಲ್ಲಿ ಕನಿಷ್ಠಪಕ್ಷ ಆರು ಬಕೆಟುಗಳೊಂದಿಗೆ ನೆಲ ಪ್ರದೇಶದ ಪ್ರತಿ ಒಂದು ನೂರು ಚದರ ಮೀಟರುಗಳಿಗಾಗಿ ನೀರಿನಿಂದ ತುಂಬಿದ ಪ್ರತಿಯೊಂದು ಹತ್ತು ಲೀಟರುಗಳ ಸಾಮರ್ಥ್ಯದ ಎರಡು ಚಪ್ಪಟೆ ತಳದ ಬಕೇಟುಗಳನ್ನು ಒದಗಿಸತಕ್ಕದ್ದು.

(2) ಎಲ್ಲಾ ಅಗ್ನಿಶಾಮಕ ಉಪಕರಣಗಳನ್ನು ಉಪಯೋಗಕ್ಕಾಗಿ ಸಿದ್ಧವಾಗಿರಬೇಕಾದಂಥ ರೀತಿಯಲ್ಲಿ ಇಡತಕ್ಕದ್ದು. ಸಭಾಂಗಣದಲ್ಲಿ ಅಗ್ನಿಶಾಮಕ ಉಪಕರಣಗಳ ಬಹುಭಾಗವನ್ನು ಪರದೆಯ ಪಕ್ಕದಲ್ಲಿ ಜೋಡಿಸತಕ್ಕದ್ದು, ಹತ್ತು ಲೀಟರುಗಳ ನೀರನ್ನು ಹಿಡಿಯುವವುಗಳೊಂದಿಗೆ ಉಪಯೋಗಿಸಬೇಕಾದವುಗಳನ್ನು ಹೊರತುಪಡಿಸಿ ಬಕೇಟುಗಳು ದಂಡನೆಗಳನ್ನು ಮತ್ತು ಹಿಡಿಕೆಗಳನ್ನು ಹೊಂದಿರತಕ್ಕದ್ದು. ಅವುಗಳಿಗೆ ಇಂಗ್ಲೀಷ್ ಮತ್ತು ಕನ್ನಡದ ದೊಡ್ಡ ಬಿಳಿ ಅಕ್ಷರಗಳಲ್ಲಿ **'ಫೈರ್'** ಎಂಬ ಪದದೊಂದಿಗೆ ಕೆಂಪು ಬಣ್ಣವನ್ನು ಬಳಿದಿರತಕ್ಕದ್ದು.

ಸಾಗಿಸಲು ಸಾಧ್ಯವಾದ ಸೋಡಾ ಆಮ್ಲ ಅಗ್ನಿ ನಂದಿಗೆಯು ಮೂರು ವರ್ಷಗಳಿಗಿಂತ ಹಳೆಯದಾಗಿರುವಲ್ಲಿ ಅಥವಾ ಈ ಹಿಂದೆ ಅದನ್ನು ಪರೀಕ್ಷಿಸಿಲ್ಲದಿರುವಲ್ಲಿ, ಅದನ್ನು ಪ್ರತಿ ಚದರ ಸೆಂಟಿ ಮೀಟರಿಗೆ ಇಪ್ಪತ್ತು ಕಿಲೋಗ್ರಾಂ ಒತ್ತಡವನ್ನು ಒಂದು ನಿಮಿಷಕ್ಕೆ ಅದು ತಡೆದುಕೊಳ್ಳುತ್ತದೆ ಎಂಬುದನ್ನು ತೋರಿಸಲು ಈ ಬಗ್ಗೆ ಅಧಿಕೃತಗೊಳಿಸಿದ ಇಂಜಿನಿಯರಿಂಗ್ ಫರ್ಮು ನೀರೊತ್ತಡದ ಮೂಲಕ ಪರೀಕ್ಷಿಸತಕ್ಕದ್ದು ಮತ್ತು ಅಂಥ ಪರೀಕ್ಷೆಯ ಪ್ರಮಾಣ ಪತ್ರವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು. ಅಂಥವೇ ಪರೀಕ್ಷೆಗಳನ್ನು ಆ ತರುವಾಯ ವಾರ್ಷಿಕವಾಗಿ ಪುನರಾವರ್ತಿಸತಕ್ಕದ್ದು. ಸಿನಿಮಾ ಆವರಣದ ಸೇವಕರು ಮತ್ತು ಸಿಬ್ಬಂದಿಗೆ ಆ ಆವರಣದಲ್ಲಿ ಇಟ್ಟುಕೊಂಡು ಬಂದಿರುವ ಅಗ್ನಿಶಾಮಕ ಸಾಧನ ಸಾಮಗ್ರಿಯ ಉಪಯೋಗದಲ್ಲಿ ತರಬೇತಿ ಕೊಡತಕ್ಕದ್ದು.

(3) ಲೈಸೆನ್ಸ್‌ದಾರನು,–

(i) ಲೈಸೆನ್ಸ್ ಪಡೆದ ಆವರಣದಲ್ಲಿ ಒದಗಿಸಿದ ಒಯ್ಯಬಹುದಾದ ಪ್ರತಿಯೊಂದು ಅಗ್ನಿ ನಂದಿಗೆಯ ಸಂಪುಟವನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಬರಿದು ಮಾಡತಕ್ಕದ್ದು, ಅದರ ಮೂತ್ರಿಗಳು ಮತ್ತು ಕೆಲಸ ಮಾಡುವ ಭಾಗಗಳನ್ನು ಸ್ವಚ್ಛಗೊಳಿಸತಕ್ಕದ್ದು. ಅದರಲ್ಲಿರುವ ದ್ರವಗಳನ್ನು ಕದಡತಕ್ಕದ್ದು ಮತ್ತು ಅದನ್ನು ಮುಚ್ಚತಕ್ಕದ್ದು ಮತ್ತು ಕೂಡಲೇ ಕಾಗದದ ಚೀಟಿಯ ಮೇಲೆ ಹಾಗೆ ಮಾಡಿದ್ದಕ್ಕಾಗಿ ದಿನಾಂಕವನ್ನು ದಾಖಲ್ಮಾಡತಕ್ಕದ್ದು ಮತ್ತು ಅದನ್ನು ಅಂಥ ಸಂಪುಟದ ಹೊರಭಾಗದ ಮೇಲೆ ಅಂಟಿಸತಕ್ಕದ್ದು ;

(ii) ಪ್ರತಿ ವರ್ಷದಲ್ಲಿ ಒಂದು ಸಲ ಲೈಸೆನ್ಸ್ ಪಡೆದ ಕಟ್ಟಡದಲ್ಲಿ ಒದಗಿಸಿದ ಒಯ್ಯಬಹುದಾದ ಪ್ರತಿಯೊಂದು ಅಗ್ನಿಶಾಮಕ ನಂದಿಗೆಯನ್ನು ಖಾಲಿ ಮಾಡತಕ್ಕದ್ದು ಮತ್ತು ಅದನ್ನು ಪುನಃ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ಪುನಃ ಭರ್ತಿ ಮಾಡಿದ ದಿನಾಂಕವನ್ನು ಆ ಒಯ್ಯಬಹುದಾದ ಅಗ್ನಿಶಾಮಕ ನಂದಿಗೆಯ ಸಂಪುಟದ ಹೊರ ಮೈಮೇಲೆ ಸೂಕ್ತವಾದ ಜಾಗದಲ್ಲಿ ದಾಖಲ್ಮಾಡತಕ್ಕದ್ದು ; ಮತ್ತು

(iii) ಅಗ್ನಿ ಶಾಮಕ ನಂದಿಗೆಗಳ ಉಪಯೋಗಕ್ಕಾಗಿ ಕನಿಷ್ಠ ಪಕ್ಷ ಐದು ಬಿಡಿ ರೀಫಿಲ್ಲುಗಳನ್ನು ದಾಸ್ತಾನು ಮಾಡತಕ್ಕದ್ದು.

**111ಯಕ. ಪ್ರದರ್ಶನ ಲೈಸೆನ್ಸಿನ ಮರುಮಂಜೂರಾತಿಗಾಗಿ ಅರ್ಜಿ.–** (1) ಲೈಸೆನ್ಸ್‌ನ ಮರು ಮಂಜೂರಾತಿಗಾಗಿನ ಪ್ರತಿಯೊಂದು ಅರ್ಜಿಯನ್ನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಆ ಲೈಸೆನ್ಸ್ ಮುಕ್ತಾಯವಾಗುವುದಕ್ಕೆ ಒಂದು ತಿಂಗಳು ಮುಂಚೆ ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ಅರ್ಜಿಯೊಂದಿಗೆ,–

(i) 111ತ ನಿಯಮದಲ್ಲಿ ಉಲ್ಲೇಖಿಸಿದ ಘೋಷಣೆ; ಮತ್ತು

(ii) 87ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಫೀಜಿನ ಸಂದಾಯವನ್ನು ಸಾಕ್ಷೀಕರಿಸುವ ಖಜಾನೆ ಚಲನು

–ಇರತಕ್ಕದ್ದು.

(2) ಅಂಥ ಪ್ರತಿಯೊಂದು ಅರ್ಜಿಯ ಒಂದು ಪ್ರತಿಯನ್ನು ಏಕಕಾಲದಲ್ಲಿ ವಿದ್ಯುಚ್ಛಕ್ತಿ ಪರಿಶೀಲಕನಿಗೆ ನೇರವಾಗಿ ವಿದ್ಯುಚ್ಛಕ್ತಿ ಸ್ಥಾಪನೆಗಳಿಗೆ ಸಂಬಂಧಿಸಿದಂತೆ ಎರಡು ವರ್ಷಗಳ ಅವಧಿಗಾಗಿ, ಅರ್ಹತಾ ಪ್ರಮಾಣ ಪತ್ರವನ್ನು ಕೊಡುವುದಕ್ಕಾಗಿ ಒಂದು ನೂರಾ ಇಪ್ಪತ್ತು ರೂಪಾಯಿಗಳ ಖಜಾನೆ ಚಲನ್‌ನೊಂದಿಗೆ ಕಳುಹಿಸತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕನು ಆ ಪ್ರಮಾಣಪತ್ರವನ್ನು ನೇರವಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು.

(3) (1)ನೇ ಉಪ–ನಿಯಮದ ಮೇರೆಗಿನ ಪ್ರತಿಯೊಂದು ಅರ್ಜಿಯ ಪ್ರತಿಯನ್ನು ಎರಡು ವರ್ಷಗಳ ಅವಧಿಗಾಗಿ ಕಟ್ಟಡದ ಸೂಕ್ತತಾ ಪ್ರಮಾಣಪತ್ರವನ್ನು ಕೊಡುವುದಕ್ಕಾಗಿ ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರನಿಗೆ ಒಂದು ನೂರ ಇಪ್ಪತ್ತು ರೂಪಾಯಿಗಳನ್ನು ಸಂದಾಯ ಮಾಡಿದ್ದಕ್ಕಾಗಿನ ಖಜಾನೆ ಚಲನಿನೊಂದಿಗೆ ಏಕಕಾಲದಲ್ಲಿ ಕಳುಹಿಸತಕ್ಕದ್ದು. ಎಕ್ಸಿಕ್ಯೂಟಿವ್ ಇಂಜಿನಿಯರನು ಪ್ರಮಾಣಪತ್ರವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ನೇರವಾಗಿ ಕಳುಹಿಸತಕ್ಕದ್ದು.

(4) ಲೈಸೆನ್ಸ್‌ನ ಮರುಮಂಜೂರಾತಿಗಾಗಿನ ಅರ್ಜಿಯನ್ನು (2)ನೇ ಉಪ–ನಿಯಮದ ಮೇರೆಗಿನ ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರ ಮತ್ತು (3)ನೇ ಉಪ–ನಿಯಮದ ಮೇರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರನ ಪ್ರಮಾಣಪತ್ರವನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಎಲ್ಲಾ ನಿಯಮಗಳನ್ನು ಪಾಲಿಸಲಾಗಿದೆ ಎಂದು ಮನದಟ್ಟು ಮಾಡಿಕೊಂಡರೆ ಲೈಸೆನ್ಸ್‌ನ್ನು ಮರುಮಂಜೂರ್ಮಾಡಬಹುದು.

**111ಯಖ. ಕಟ್ಟಡದ ವಿದ್ಯುಚ್ಛಕ್ತಿ ಸ್ಥಾಪನೆಗೆ ತರುವಾಯದ ಸೇರ್ಪಡೆಗಳ ಮತ್ತು ಮಾರ್ಪಾಟುಗಳ ಅನುಮೋದನೆಗಾಗಿ ಪ್ರಕ್ರಿಯೆ.–** ಲೈಸೆನ್ಸ್‌ದಾರನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ, ಲೈಸೆನ್ಸ್ ಪಡೆದ ಸ್ಥಳ ಅಥವಾ ಅದರ ಭಾಗ ಅಥವಾ ಅಸ್ತಿತ್ವದಲ್ಲಿ ಇರುವ ವಿದ್ಯುಚ್ಛಕ್ತಿ ಸ್ಥಾಪನೆ ಅಥವಾ ಸಲಕರಣೆಗಳಿಗೆ ಸೇರ್ಪಡೆ ಮಾಡಲು ಅಥವಾ ಮಾರ್ಪಾಟು ಮಾಡುವ ಅವನ ಉದ್ದೇಶದ ಬಗ್ಗೆ ಬರಹದಲ್ಲಿ ಸ್ಪಷ್ಟ ಉದ್ದೇಶಿತ ಸೇರ್ಪಡೆ ಅಥವಾ ಮಾರ್ಪಾಟುಗಳ ಸ್ಪಷ್ಟ ನೋಟೀಸನ್ನು ಕೊಡತಕ್ಕದ್ದು. ಅದರೊಂದಿಗೆ ಕಟ್ಟಡದ ನಕ್ಷೆಗಳು (ತ್ರಿಪ್ರತಿಗಳಲ್ಲಿ) ಮತ್ತು ನಿರ್ವಹಿಸಬೇಕಾದ ಕಾಮಗಾರಿಯ ತಪಶೀಲುಗಳು ಮತ್ತು ಮೂಲ ಪ್ರಮಾಣಪತ್ರಗಳು ಇರತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಏಕಕಾಲದಲ್ಲಿ ಆ ಅರ್ಜಿ ಮತ್ತು ಅದರ ಲಗತ್ತುಗಳನ್ನು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಸರ್ಕಾರದ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಅವರ ಅಭಿಪ್ರಾಯ ಮತ್ತು ಷರಾಗಳಿಗಾಗಿ ಮತ್ತು ಹದಿನೈದು ದಿವಸಗಳ ಅವಧಿಯೊಳಗೆ ಅವುಗಳನ್ನು ಹಿಂತಿರುಗಿಸಿ ಕಳುಹಿಸಿ ಕೊಡತಕ್ಕದ್ದು. ವಿದ್ಯುಚ್ಛಕ್ತಿ ಪರಿಶೀಲಕ ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಿಂದ ದಾಖಲೆಗಳು ವಾಪಸಾದ ತರುವಾಯ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಉದ್ದೇಶಿತ ಸೇರ್ಪಡೆಗಳು ಮತ್ತು ಮಾರ್ಪಾಟುಗಳನ್ನು ಅನುಮೋದಿಸಿ ಅಥವಾ ಅನ್ಯಥಾ ಆದೇಶಗಳನ್ನು ಮಾಡಬಹುದು ಮತ್ತು ಅದನ್ನು ಅರ್ಜಿದಾರನಿಗೆ ಹದಿನೈದು ದಿವಸಗಳೊಳಗೆ ತಿಳಿಸತಕ್ಕದ್ದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಉದ್ದೇಶಿತ ಸೇರ್ಪಡೆಗಳು ಮತ್ತು ಮಾರ್ಪಾಟುಗಳನ್ನು ಅನುಮೋದಿಸದೆ ಇದ್ದ ಸಂದರ್ಭದಲ್ಲಿ ಅವನು ಅಂಥ ಆದೇಶಗಳನ್ನು ಅಂಥ ತೀರ್ಮಾನಕ್ಕಾಗಿನ ಕಾರಣಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ ಅರ್ಜಿದಾರನಿಗೆ ತಿಳಿಸತಕ್ಕದ್ದು.

## ಭಾಗ – V

## ಅಧ್ಯಾಯ – XIII

## ಕೆಲವು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ವಿಶೇಷ ಉಪಬಂಧಗಳು

**112. ಶಾಲೆಗಳಲ್ಲಿ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಉಪಬಂಧಗಳು ಇತ್ಯಾದಿ.–** (1) ಶಾಲೆಗಳಲ್ಲಿ ಅಥವಾ ಹಾಲುಗಳಲ್ಲಿ ಸಾಂದರ್ಭಿಕವಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ಕೊಟ್ಟ ಚಲನಚಿತ್ರ ಪ್ರದರ್ಶನದ ಸಂದರ್ಭಗಳಲ್ಲಿ ಈ ಕೆಳಕಂಡ ಉಪಬಂಧಗಳು ಅನ್ವಯವಾಗತಕ್ಕದ್ದು, ಎಂದರೆ:–

(ಕ) ಅಗ್ನಿನಿರೋಧಕ ಆವರಣಗಳನ್ನು ಹೊಂದಲು ಕಾರ್ಯಸಾಧ್ಯವಾಗದಿರುವಲ್ಲಿ ಒಂದೂವರೆ ಮೀಟರುಗಳ ಪೂರ್ಣ ಜಾಗವನ್ನು ಚಲನಚಿತ್ರ ಯಂತ್ರದ ಒಂದೂವರೆ ಮೀಟರುಗಳಷ್ಟು ಸಲಕರಣೆಯ ಸುತ್ತಲಿನ ಆಚೆ ಎತ್ತರಿಸತಕ್ಕದ್ದು ;

(ಖ) ನೆಲವು ಒಳಗೊಳ್ಳುವುದನ್ನು ಹೊರತುಪಡಿಸಿ ಯಾವುದೇ ತೆರೆ ಅಥವಾ ಅಸಂರಕ್ಷಿತ ದಹ್ಯ ಸಾಮಗ್ರಿಗಳು ಆ ಸಲಕರಣೆಗಳ ಎರಡು ಮೀಟರುಗಳೊಳಗೆ ಇರತಕ್ಕದ್ದಲ್ಲ ;

(ಗ) ಆವರಣದ ಹತ್ತಿರ ಈ ಕೆಳಕಂಡ ಅಗ್ನಿ ಉಪಕರಣಗಳನ್ನು ಒದಗಿಸತಕ್ಕದ್ದು,–

(i) 75ನೇ ನಿಯಮಗಳಿಗನುಸಾರವಾಗಿ ಎರಡು ಒಯ್ಯಬಹುದಾದ ಅಗ್ನಿಶಾಮಕಗಳು ;

(ii) ಒಂದು ಕಂಬಳಿ ; ಮತ್ತು

(iii) ಒಂದು ಬಕೆಟ್‌ನಲ್ಲಿ ಒಂದು ದೊಡ್ಡದಾದ ಸ್ಪಂಜು ಇರುವ ನೀರು ತುಂಬಿದ ಮೂರು ಬಕೆಟ್ ;

(ಘ) ಆವರಣದ ಹತ್ತಿರ ಮಂದವಾಗಿ ಉರಿಯುತ್ತಿರುವ ಎರಡು ಹರಿಕೇನ್ ಲಾಟೀನುಗಳನ್ನು ಇಡತಕ್ಕದ್ದು.

(2) ಪಕ್ಕಗಳನ್ನು ಆವೃತಗೊಳಿಸಲಾಗದ ಪೆಂಡಾಲುಗಳಲ್ಲಿ ಬಹಿರಂಗವಾಗಿ ಕೆಟ್ಟ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ 109ನೇ ನಿಯಮದ (i)ನೇ ಉಪ–ನಿಯಮದಲ್ಲಿ ಒಳಗೊಂಡ ಉಪ–ಬಂಧಗಳು ಯಥೋಚಿತ ವ್ಯತ್ಯಾಸದೊಂದಿಗೆ ಅನ್ವಯವಾಗತಕ್ಕದ್ದು.

**113. ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ವಿವೇಚನೆ.–** 99ನೇ ನಿಯಮದಲ್ಲಿ ಉಪಬಂಧಿಸಿರುವಂತೆ ಹೊರತು (II)ನೇ, (III)ನೇ ಮತ್ತು (IV)ನೇ ಭಾಗಗಳಲ್ಲಿ ಒಳಗೊಂಡಿರುವ ನಿಯಮಗಳು ಈ ಅಧ್ಯಾಯವು ಅನ್ವಯವಾಗುವಂಥ ಯಾವುದೇ ಚಲನಚಿತ್ರ ಪ್ರದರ್ಶನಕ್ಕೆ ಅನ್ವಯವಾಗತಕ್ಕದ್ದಲ್ಲ.

## ಭಾಗ – VI

## ಅಧ್ಯಾಯ – XIV

## ಸಂಕೀರ್ಣ

**114. ಅಪೀಲು ಪ್ರಾಧಿಕಾರಿ.–** (1) 10ನೇ ಪ್ರಕರಣದ ಉದ್ದೇಶಗಳಿಗಾಗಿ, ವಿಭಾಗೀಯ ಕಮೀಷನರನು ಆ ಅಪೀಲು ಪ್ರಾಧಿಕಾರಿಯಾಗಿರತಕ್ಕದ್ದು.

**115. 5ನೇ ಮತ್ತು 9ನೇ ಪ್ರಕರಣಗಳ ಮೇರೆಗಿನ ಅಪೀಲುಗಳಲ್ಲಿ ಪ್ರಕ್ರಿಯೆ.–** (1) ಅಪೀಲಿನ ವಿಷಯವಾಗಿರುವಂಥ ಆದೇಶದ ಬಗ್ಗೆ ಆಕ್ಷೇಪಣೆಗಳ ಕಾರಣಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ವಿವರಣಾಪತ್ರದ ರೂಪದಲ್ಲಿ ಅಪೀಲನ್ನು ದ್ವಿಪ್ರತಿಯಲ್ಲಿ ಒಪ್ಪಿಸತಕ್ಕದ್ದು ಮತ್ತು ಅದರೊಂದಿಗೆ ಯಾವ ಆದೇಶದ ವಿರುದ್ಧವಾಗಿ ಅಪೀಲು ಹೂಡಲಾಗಿದೆಯೋ ಆ ಆದೇಶದ ಮೂಲಪ್ರತಿ ಅಥವಾ ಪ್ರಮಾಣೀಕೃತ ಪ್ರತಿ ಇರತಕ್ಕದ್ದು.

2) ಅಪೀಲು ವಿವರಣಾಪತ್ರಕ್ಕೆ ಅಪೀಲುದಾರ ಅಥವಾ ಅವನು ಅಧಿಕೃತಗೊಳಿಸಿದ ಏಜೆಂಟನು ರುಜು ಮಾಡತಕ್ಕದ್ದು ಮತ್ತು ಅದರೊಂದಿಗೆ ಯಾವ ಆದೇಶದ ವಿರುದ್ಧ ಅಪೀಲನ್ನು ಹೂಡಲಾಗಿದೆಯೋ ಆ ಆದೇಶದ ಮೂಲಪ್ರತಿ ಅಥವಾ ಪ್ರಮಾಣೀಕೃತ ಪ್ರತಿ ಇರತಕ್ಕದ್ದು ಮತ್ತು ಅದನ್ನು ಅಪೀಲು ಪ್ರಾಧಿಕಾರಿಗೆ ಯಾವುದೇ ಕೆಲಸದ ದಿವಸದಂದು ಕಛೇರಿ ವೇಳೆಯಲ್ಲಿ ಯಾವುದೇ ಕಾಲದಲ್ಲಿ ಖುದ್ದಾಗಿ ಅಥವಾ ಏಜೆಂಟಿನ ಮೂಲಕ ಅಪೀಲು ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು ಅಥವಾ ನೋಂದಾಯಿತ ಅಂಚೆಯ ಮೂಲಕ ಅವನಿಗೆ ಕಳುಹಿಸತಕ್ಕದ್ದು. ಅಪೀಲುಗಳನ್ನು ಸಲ್ಲಿಸಲು ಏಜೆಂಟಿನ ಅಧಿಕಾರವು ಬರಹದಲ್ಲಿರತಕ್ಕದ್ದು ಮತ್ತು ಏಜೆಂಟನು ಮೊಖ್ತ್ಯಾರನಾಮೆಯನ್ನು ಹೊಂದಿದ್ದ ಹೊರತು ಅದು ಅಪೀಲು ವಿವರಣಾಪತ್ರದೊಂದಿಗೆ ಇರತಕ್ಕದ್ದು.

3) ಅಪೀಲು ಪ್ರಾಧಿಕಾರಿಯು, ಅಪೀಲಿನ ಸುನಾವಣೆಗಾಗಿ ಒಂದು ದಿವಸವನ್ನು ನಿಗದಿಪಡಿಸತಕ್ಕದ್ದು. ಸುನಾವಣೆಗಾಗಿ ನಿಗದಿಪಡಿಸಿದ ದಿನಾಂಕದಂದು ಅಥವಾ ಅಪೀಲನ್ನು ಮುಂದೂಡಬಹುದಾದಂಥ ಮುಂದಿನ ದಿನಾಂಕದಂದು ಅಪೀಲು ಪ್ರಾಧಿಕಾರಿಯು, ಪಕ್ಷಕಾರರು ಅಥವಾ ಅವರ ಎಜೆಂಟರನ್ನು ಸುನಾವಣೆ ಮಾಡಿದ ತರುವಾಯ ಅಪೀಲಿನ ಬಗ್ಗೆ ಅವನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

**116. ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜು.–** ಅಪೀಲು ಪ್ರಾಧಿಕಾರಿಗೆ ಸಲ್ಲಿಸುವ ಪ್ರತಿಯೊಂದು ಅಪೀಲು ವಿವರಣಾಪತ್ರದ ಬಗ್ಗೆ ಐವತ್ತು ರೂಪಾಯಿಗಳ ಫೀಜನ್ನು ಸಂದಾಯ ಮಾಡತಕ್ಕದ್ದು.

**117. ನಿರಸನ ಮತ್ತು ಉಳಿಸುವಿಕೆಗಳು.–** (i) ಮೈಸೂರು ಜಾರಿಯಲ್ಲಿದ್ದಂತೆ, ಮೈಸೂರು ಚಲನಚಿತ್ರ ನಿಯಮಗಳು, 1946;

(ii) ಬೆಳಗಾವಿ ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಮುಂಬೈ ಸಿನಿಮಾ ನಿಯಮಗಳು, 1954 ;

(iii) ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಮದ್ರಾಸ್ ಚಲನಚಿತ್ರ ನಿಯಮಗಳು, 1938 ;

(iv) ಗುಲ್ಬರ್ಗಾ ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಹೈದ್ರಾಬಾದ್ ಚಲನಚಿತ್ರ ನಿಯಮಗಳು, 1953 ;

(v) ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿದ್ದಂತೆ ಕೊಡಗು ಚಲನಚಿತ್ರ ನಿಯಮಗಳು, 1953

–ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ :

ಪರಂತು, ಸದರಿ ನಿರಸನವು ಸದರಿ ನಿಯಮಗಳ ಹಿಂದಿನ ಪ್ರವರ್ತನೆಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಮೈಸೂರು ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣದ ತತ್ವಗಳು ಅಂಥ ನಿರಸನದ ಸಂಬಂಧದಲ್ಲಿ ಸದರಿ ನಿಯಮಗಳು ಅಧಿನಿಯಮಿತಿಗಳಾಗಿದ್ದಿದ್ದರೆ ಮತ್ತು ಕರ್ನಾಟಕ ಅಧಿನಿಯಮದ ಮೂಲಕ ನಿರಸನಗೊಳಿಸಲಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ಅನುಸೂಚಿ – ಕ**

**(3(8)ನೇ ನಿಯಮವನ್ನು ನೋಡಿ)**

**ಅಗ್ನಿನಿರೋಧಕ ಸಾಮಗ್ರಿಗಳು**

1. (ಕ) ಮಣ್ಣು, ಗಾರೆ ಅಥವಾ ಸಿಮೆಂಟ್‌ನಲ್ಲಿನ ಸುಟ್ಟ ಇಟ್ಟಿಗೆ ಅಥವಾ ಸೈಜುಗಲ್ಲುಗಳ ಅಥವಾ ಅವುಗಳಿಗೆ ಸಮಾನವಾದ ಸಾಮಗ್ರಿಗಳ ಅಥವಾ ಕನಿಷ್ಠಪಕ್ಷ ಮೂರು ನೂರ ಐವತ್ತು ಮಿಲಿ ಮೀಟರಿನ ಅಥವಾ ನಾಲ್ಕು ನೂರು ಮಿಲಿ ಮೀಟರುಗಳಷ್ಟು ದಪ್ಪವಿರುವ ಕ್ರಮವಾಗಿ ಆರ್‌ಸಿಸಿ ಅಲ್ಲದ ಕನಿಷ್ಠ ಮೂರು ನೂರು ಮಿಲಿ ಮೀಟರುಗಳಷ್ಟು ದಪ್ಪದ ಮತ್ತು ಕನಿಷ್ಠ ಒಂದು ನೂರಾ ಐವತ್ತು ಮಿಲಿ ಮೀಟರುಗಳಷ್ಟು ದಪ್ಪ ಆರ್‌ಸಿಸಿಯ ಗೋಡೆಗಳು.

(ಖ) ರೀ–ಇನ್‌ಫೋರ್ಸ್ಡ್ ಕಾಂಕ್ರೀಟಿನ ಛತ್ತು ಅಥವಾ ಇಟ್ಟಿಗೆ ಗೋಡೆ ಮತ್ತು ಜಾಕ್ ಕಮಾನು ಛತ್ತುಗಳ ಸಹಿತವಾದ ಪ್ರಿಕಾಸ್ಟ್ ತೊಲೆಗಳ ರೀ ಇನ್‌ಫೋರ್ಸ್ಡ್ ಇಟ್ಟಿಗೆ ಕಾಂಕ್ರೀಟ್ ಛತ್ತುಗಳು, ಸುಟ್ಟ ಸ್ಲ್ಯಾಬ್ ಛತ್ತುಗಳು ಅಗ್ನಿನಿರೋಧಕಗಳಲ್ಲ ;

(ಗ) ರೀ–ಇನ್‌ಪೋರ್ಸ್ಡ್ ಸಿಮೆಂಟ್ ಕಾಂಕ್ರಿಟ್ ಕಬ್ಬಿನ ಗರ್ಡರ್‌ಗಳು, ತೊಲೆಗಳು ಮತ್ತು ಸಂಯೋಜಕಗಳು, ಅವುಗಳನ್ನು (ಕ) ಉಪ–ಪ್ಯಾರಾದಲ್ಲಿ ವಿವರಿಸಿದಂತೆ ಆವರಣಗೊಳಿಸಿದ್ದರೆ ಮಾತ್ರ ಅವುಗಳು ಅಗ್ನಿ ನಿರೋಧಕಗಳಾಗಿರುತ್ತವೆ;

(ಘ) ಮಣ್ಣು, ಸುಣ್ಣ ಅಥವಾ ಗಾರೆಯಲ್ಲಿ ಕಂಬಗಳನ್ನು ಇಟ್ಟಿಗೆ ಅಥವಾ ಸೈಜ್ ಕಲ್ಲಿನಿಂದ ಅಥವಾ ಇತರ ಕಲ್ಲಿನಿಂದ ಕಟ್ಟಿದ ಊರುಗಂಬಗಳು ಮತ್ತು ಸ್ತಂಭಗಳು. ಆರ್‌ಸಿಸಿ ಅಥವಾ ಆರ್‌ಸಿಸಿ ಅಲ್ಲದ ಊರುಗಂಬಗಳು ಮತ್ತು ಸ್ತಂಭಗಳು, ಆದರೆ ಗ್ರಾನೈಟ್ ಅಮೃತಶಿಲೆ, ಸುಣ್ಣದ ಕಲ್ಲು ಸ್ತಂಭಗಳು ಅಗ್ನಿನಿರೋಧಕವಲ್ಲ;

(ಙ) ಆರ್‌ಸಿಸಿ ಛಾವಣಿಯ ನಿರ್ಮಿತಿಗಳು ಅಥವಾ ರೀ–ಇನ್‌ಪೋರ್ಸ್ಡ್ ಮಾಡಿದ ಇಟ್ಟಿಗೆ ಕಾಂಕ್ರೀಟ್ ಛಾವಣಿಗಳು ಮತ್ತು ಉಕ್ಕಿನ ಟ್ರಸ್ಸುಗಳು ಛಾವಣಿ ನಿರ್ಮಿತಿ ಅಥವಾ ಟ್ರಸ್ಸುಗಳನ್ನು ಒಳಗೊಂಡಿರುವ ಮೇಲ್ಪಟ್ಟವು ಅಗ್ನಿ ನಿರೋಧಕ ಗೋಡೆಗಳು, ಛತ್ತುಗಳು ಮತ್ತು ನೆಲದಿಂದ ಆವೃತ್ತವಾಗಿದ್ದರೆ ಮತ್ತು ಅದನ್ನು ದಹ್ಯ ಸಾಮಗ್ರಿ ದಾಸ್ತಾನಿಗಾಗಿ ಉಪಯೋಗಿಸದಿದ್ದರೆ, ಉಕ್ಕಿನ ಸಾಮಗ್ರಿಗಳನ್ನು ಆವೃತಗೊಳಿಸಿದ್ದರೆ ಮಾತ್ರ ಆಗಿ ನಿರೋಧಕವಾಗಿರುತ್ತವೆ;

(ಚ) ಬಾಗಿಲುಗಳು, ಅವು ತನ್ನಿಂದ ತಾನೇ ಮುಚ್ಚಿಕೊಳ್ಳುವ ಹಾಗಿದ್ದರೆ ಪರೀಕ್ಷಿಸಿದಾಗ ಅವು ಕನಿಷ್ಠ ಅರ್ಧ ಗಂಟೆಯವರೆಗೆ ಒಂದು ಸಾವಿರ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯನ್ನು ತಡೆದುಕೊಳ್ಳಲು ಸಮರ್ಥವಾಗಿದ್ದರೆ ಮತ್ತು ಇಪ್ಪತ್ತು ಮಿಲಿ ಮೀಟರುಗಳ ಆಳಕ್ಕಿಂತ ಕಡಿಮೆಯಿರದ ಶಟರ್‌ನ್ನು ಹಿಡಿಯುವುದಕ್ಕಾಗಿನ ಕೂರುಗಾಲುವೆ ಸಹಿತವಾದ ಅಗ್ನಿ ನಿರೋಧಕ ಸಾಮಗ್ರಿಯಿಂದ ಬಾಗಿಲಿನ ಚೌಕಟ್ಟು ಇರುವುದಾದರೆ, ಆ ಬಾಗಿಲುಗಳು;

(ಛ) ಕಾಯಂ ಆಗಿ ಕೂಡಿಸಿದ ಶಟರ್‌ಗಳಿರುವ ಗಾಜು ಹವಣಿಸಿದ ಕಿಟಕಿಗಳನ್ನು ಪರೀಕ್ಷಿಸಿದಾಗ ಅವು ಅರ್ಧ ಗಂಟೆಯವರೆಗೆ ಒಡೆಯದೆ ಒಂದು ಸಾವಿರ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯನ್ನು ತಡೆದುಕೊಳ್ಳುವಂತಿದ್ದರೆ, ಅಗ್ನಿ ನಿರೋಧಕವೆಂದು ಪರಿಗಣಿಸಬಹುದು;

(ಜ) ಕನಿಷ್ಠ ಮೂವತ್ತೈದು ಮಿಲಿ ಮೀಟರುಗಳಷ್ಟು ದಪ್ಪವುಳ್ಳ ಕಾಂಕ್ರೀಟಿನಿಂದ ಅಥವಾ ಸುಟ್ಟ ಇಟ್ಟಿಗೆಗಳಿಂದ ಉಕ್ಕಿನ ವಿಭಾಗದ ಪ್ರತಿಯೊಂದು ಭಾಗವು ಆವೃತಗೊಳ್ಳುವಂಥ ರೀತಿಯಲ್ಲಿ ಸಿಮೆಂಟ್ ಕಾಂಕ್ರೀಟ್‌ನಿಂದ ಗಾರೆಯಲ್ಲಿ ಇಟ್ಟಿಗೆಯೊಂದಿಗೆ ಉಕ್ಕು ವಿಭಾಗಗಳಲ್ಲಿ ಮತ್ತು ಅದರ ಸುತ್ತಮುತ್ತ ತುಂಬಿರುವುದನ್ನು ಒಳಗೊಂಡಿರುವ ಉಕ್ಕು ರಚನೆಯ ಅಗ್ನಿನಿರೋಧಕ ಆವರಣ;

(ಝ) ಉಕ್ಕಿನ ಚೌಕಟ್ಟಿನಲ್ಲಿ ಜಾಕ್ ಕಮಾನು ಛತ್ತುಗಳಲ್ಲಿನ ವಿಭಾಗಗಳ ಚಾಚಂಚುಗಳು, ಇಟ್ಟಿಗೆ ಅಥವಾ ಕಾಂಕ್ರೀಟಿನ ಪುಟೀಪು ಸಹಿತ ರಚನೆಗಳು ಅಗ್ನಿ ನಿರೋಧಕವಾಗುವುದಕ್ಕೆ ಯಾವುದೇ ಆವರಣ ಹಾಕುವುದು ಅಗತ್ಯವಿರುವುದಿಲ್ಲ.

**ಅನುಸೂಚಿ 'ಖ'**

**(3(9)ನೇ ನಿಯಮ ನೋಡಿ)**

**ಅಗ್ನಿನಿರೋಧಕ ಸಾಮಗ್ರಿಗಳು**

1. ಕಟ್ಟಡದ ಯಾವುದೇ ಸಾಮಗ್ರಿ ಮತ್ತು ಯಾವುದೇ ಭಾಗಗಳನ್ನು ಅವು ತಮ್ಮಷ್ಟಕ್ಕೆ ತಾವೇ ಉರಿಯದೆ ಬೆಂಕಿಯನ್ನು ಕಾಲು ಗಂಟೆಯವರೆಗೆ ನಿರೋಧಿಸಲು ಮತ್ತು ಈ ಅವಧಿಯಲ್ಲಿ ಬೆಂಕಿಯು ಹೋಗುವುದನ್ನು ಮತ್ತು ಹರಡುವುದನ್ನು ಸಮರ್ಥವಾಗಿದ್ದರೆ, ಅಗ್ನಿನಿರೋಧಕಗಳೆಂದು ಪರಿಗಣಿಸಬಹುದು.

2. ಬೇರೆಯವುಗಳ ಜೊತೆಗೆ ಈ ಕೆಳಕಂಡವುಗಳನ್ನು ಅಗ್ನಿ ಪ್ರತಿರೋಧಕಗಳೆಂದು ಪರಿಗಣಿಸಲಾಗಿದೆ. ಅವು ಯಾವುವೆಂದರೆ:–

(ಕ) ಗೋಡೆಗಳು, ಛತ್ತುಗಳು, ತೊಲೆಗಳು, ಊರುಗಂಬಗಳು, ಸ್ತಂಭಗಳ ಮತ್ತು ಮರದ ಟ್ರಸ್ಸುಗಳು, ಅವು ಇಪ್ಪತ್ತೈದು ಮಿಲಿ ಮೀಟರುಗಳಷ್ಟು ದಪ್ಪದ ಸುಣ್ಣದ ಪ್ಲಾಸ್ಟರ ಅಥವಾ ಐದು ಮಿಲಿಮೀಟರಿನ ಸಿಮೆಂಟ್ ಆಸ್ಬೆಸ್ಟಾಸ್ ಶೀಟುಗಳಿಂದ ಆವೃತವಾಗಿದ್ದರೆ,

(ಖ) ಗ್ರಾನೈಟ್, ಇತರ ಕಲ್ಲು, ಕಬ್ಬಿಣ ಅಥವಾ ಮರದ ಪಾವಟಿಗೆಗಳು, ಅವುಗಳ ತಳದ ಮೇಲ್ಮೈ ಕೆಳಗಿನಿಂದ ಇಪ್ಪತ್ತೈದು ಮಿಲಿ ಮೀಟರು ದಪ್ಪದ ಸುಣ್ಣದ ಪ್ಲಾಸ್ಟರಿನಿಂದ ಅಥವಾ ಮೆಟ್ಟಲುಗಳಿಂದ ಸ್ವಲ್ಪ ದೂರದಲ್ಲಿ ತಂತಿ ಜಾಲ ಅಥವಾ ಮರದ ರೀಪರುಗಳ ಮೇಲೆ ಆಶ್ರಯಿತವಾದ ಆಸ್ಬೆಸ್ಟಾಸ್ ಶೀಟುಗಳಿಂದ ಆವೃತವಾಗಿದ್ದರೆ,

(ಗ) ಇಪ್ಪತ್ತೈದು ಮಿಲಿ ಮೀಟರ್ ದಪ್ಪಕ್ಕೆ ಕಡಿಮೆಯಲ್ಲದ ಪಟ್ಟಿ ಹಾಕಿದ ಮರದ ಬಾಗಿಲುಗಳು, ಮರಕ್ಕೆ ತಿರುಗಣಿಯಿಂದ ಜೋಡಿಸಲಾದ ತೆಳು ಕಬ್ಬಿಣದ ಹಾಳೆ ಅಥವಾ ಸಾದಾ ಸಿಮೆಂಟ್ ಆಸ್ಬೆಸ್ಟಾಸ್ ಶೀಟುಗಳಿಂದ ಷಟರುಗಳು ಮತ್ತು ಚೌಕಟ್ಟುಗಳು ಎರಡೂ ಕಡೆಗಳಲ್ಲಿ, ಆವೃತವಾಗಿದ್ದರೆ, ಅವುಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದರೆ ಮತ್ತು ಚೌಕಟ್ಟಿನಲ್ಲಿನ ತಳೆದ ಆಳವು ಕನಿಷ್ಠಪಕ್ಷ ಇಪ್ಪತ್ತು ಮಿಲಿ ಮೀಟರ್ ಇದ್ದರೆ.

3. ಮೇಲೆ ಹೇಳಿದ ಸಾಮಗ್ರಿಯನ್ನುಳಿದು ಬೇರೆ ಸಾಮಗ್ರಿಗಳನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಗ್ನಿ ಪ್ರತಿರೋಧಕಗಳೆಂದು ಅಂಗೀಕರಿಸಬಹುದು. ಪರಂತು, ಅವುಗಳು ಮೇಲೆ ಕೊಟ್ಟಿರುವ ವಿವರಣೆಗೆ ಅನುರೂಪವಾಗಿರಬೇಕು.

**ಅನುಸೂಚಿ 'ಗ'**

**(54(2)ನೇ ನಿಯಮವನ್ನು ನೋಡಿ)**

**ನೈರ್ಮಲ್ಯ ಸ್ಥಳಾವಕಾಶದ ಪ್ರಮಾಣ**

| ಜೋಡಣೆಗಳು | ಪುರುಷರಿಗಾಗಿ | ಸ್ತ್ರೀಯರಿಗಾಗಿ | ಸಿಬ್ಬಂದಿಗಾಗಿ |
|---|---|---|---|
| 1 | 2 | 3 | 4 |
| ಶೌಚಗೃಹಗಳು ಒಂದು | ಪ್ರತಿ 250 ವ್ಯಕ್ತಿಗಳಿಗಾಗಿ ಅಥವಾ 250 ವ್ಯಕ್ತಿಗಳಿಗೆ ಮೀರುವ 50ರ ಒಂದು ಭಾಗಕ್ಕಾಗಿ ಕನಿಷ್ಠಪಕ್ಷ ನಾಲ್ಕು–ಅವುಗಳಲ್ಲಿ ಮೂರನೇ ಎರಡರಷ್ಟು ಪುರುಷರಿಗಾಗಿ ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗಾಗಿ | | ಒಂದು |
| ಮೂತ್ರಿಗಳು | ಪ್ರತಿ 50 ಜನರಿಗೆ ಅಥವಾ ಅದರ ಭಾಗಕ್ಕಾಗಿ ಇವುಗಳಲ್ಲಿ ಮೂರನೇ ಎರಡರಷ್ಟು ಪುರುಷರಿಗೆ ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗಾಗಿ | | |
| ಸ್ನಾನದ ನಲ್ಲಿಗಳು ಒಂದು | ಪ್ರತಿಯೊಂದು ಶೌಚಗೃಹದಲ್ಲಿ | ಪ್ರತಿಯೊಂದು ಶೌಚಗೃಹದಲ್ಲಿ ಒಂದು | ಪ್ರತಿಯೊಂದು ಶೌಚಗೃಹವನ್ನು ಒಂದು |
| ವಾಷ್‌ಬೇಸಿನ್ ಒಂದು | ಪ್ರತಿ 250 ವ್ಯಕ್ತಿಗಳಿಗಾಗಿ ಅಥವಾ ಅದರ ಒಂದು ಭಾಗಕ್ಕೆ ಕನಿಷ್ಠ ಪಕ್ಷ ನಾಲ್ಕು. ಅವುಗಳಲ್ಲಿ ಅರ್ಧ ಪುರುಷರಿಗಾಗಿ ಮತ್ತು ಅರ್ಧ ಸ್ತ್ರೀಯರಿಗಾಗಿ | | ಒಂದು |

ಶೌಚಗೃಹಗಳು ಮತ್ತು ಮೂತ್ರಿಗಳ ಹತ್ತಿರದಲ್ಲಿ ಪ್ರತಿ 250 ವ್ಯಕ್ತಿಗಳು ಅಥವಾ ಅದರ ಭಾಗಕ್ಕಾಗಿ ಹರಿದು ಹೋಗುವ ಮೂತ್ರಾಲಯಗಳ ವ್ಯವಸ್ಥೆಯಿರುವ ಒಂದು ನೀರಿನ ನಲ್ಲಿ.

**ಟಿಪ್ಪಣಿ.–** ಈ ಪ್ರಮಾಣಗಳನ್ನು ನಿಗದಿಪಡಿಸುವುದಕ್ಕಾಗಿ ಸ್ಥಳಾವಕಾಶ ಪಡೆಯುವ ವ್ಯಕ್ತಿಗಳ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಪುರುಷರಿಗೆಂದು ಮತ್ತು ಮೂರನೇ ಒಂದರಷ್ಟು ಸ್ತ್ರೀಯರಿಗೆಂದು ಭಾವಿಸಬಹುದು. ಯಾವುದೇ ಥೇಟರಿನಲ್ಲಿ ಸಿಬ್ಬಂದಿಯ ಅನನ್ಯ ಉಪಯೋಗಕ್ಕಾಗಿ ಈಗಾಗಲೇ ಒದಗಿಸಿದ ಶೌಚಗೃಹಗಳು, ಮೂತ್ರಿಗಳು, ಸ್ನಾನದ ನಲ್ಲಿಗಳು, ವಾಷ್‌ಬೇಸಿನ್‌ಗಳು ಇರುವಲ್ಲಿ ಅಂಥ ಶೌಚಗೃಹಗಳು, ಮೂತ್ರಿಗಳು, ಇತ್ಯಾದಿಗಳ ಸಂಖ್ಯೆಯನ್ನು ಪ್ರೇಕ್ಷಕರಿಗೆ ಅಂಥ ಸೌಲಭ್ಯಗಳನ್ನು ಒದಗಿಸುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**ನಮೂನೆ 4ಕ**

**[25(1), 90 ಮತ್ತು 111ಖ ನಿಯಮಗಳನ್ನು ನೋಡಿ]**

**ಸಿನಿಮಾ ಕಟ್ಟಡದ ನಿರ್ಮಾಣಕ್ಕೆ ಅರ್ಜಿ**

ಜಿಲ್ಲಾ ಮ್ಯಾಜಿಸ್ಟ್ರೇಟ್

--------- ಜಿಲ್ಲೆ, ಇವರಿಗೆ;

ಮಾನ್ಯರೆ,

ನನ್ನ ಹೆಸರಿನಲ್ಲಿ ಕಾಯಂ ಡ್ರೈವ್ ಇನ್/ಸಂಚಾರಿ ಸಿನಿಮಾದ ಸ್ಥಾಪನೆಗಾಗಿ "ನಿರಾಕ್ಷೇಪಣಾ ಪ್ರಮಾಣಪತ್ರದ" ಮಂಜೂರಾತಿಗಾಗಿ ನಾನು ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ ಮತ್ತು ಈ ಕೆಳಕಂಡಂತೆ ವಿವರಗಳನ್ನು ಕೊಟ್ಟಿದ್ದೇನೆ.

ಅರ್ಜಿದಾರನ ರುಜು

---

1. ಅರ್ಜಿದಾರನ ಪೂರ್ಣ ಹೆಸರು
2. ತಂದೆಯ/ಗಂಡನ ಹೆಸರು ಮತ್ತು ಉದ್ಯೋಗ
3. ಅರ್ಜಿದಾರನ ಕಾಯಂ ವಿಳಾಸ
   (i) ಗ್ರಾಮ/ಡೋರ್ ನಂ.
   (ii) ತಾಲ್ಲೂಕು/ವಾರ್ಡ್/ವಿಭಾಗ
   (iii) ಜಿಲ್ಲೆ
4. ಅರ್ಜಿದಾರನ ಈಗಿನ ಉದ್ಯೋಗ
5. ಅರ್ಜಿಯು,–
   (i) ಕಾಯಂ ಸಿನಿಮಾ
   (ii) ಸಂಚಾರಿ ಸಿನಿಮಾ
   (iii) ಕಾಯಂ ಹವಾನಿಯಂತ್ರಿತ ಸಿನಿಮಾ
   (iv) ಕಾಯಂ ಹವೆಯಿಂದ ತಂಪುಗೊಲಿಸಿದ ಸಿನಿಮಾ
   (v) ವಿಶೇಷ ಸ್ವರೂಪದ ಸಿನಿಮಾ–ಇವುಗಳಿಗಾಗಿಯೋ ಹೇಗೆ ?
6. ಸಿನಿಮಾವನ್ನು ಸ್ಥಾಪಿಸಲು ಉದ್ದೇಶಿಸಿದ ಸ್ಥಳ,–
   (i) ಆರ್.ಎಸ್. ಸಂಖ್ಯೆ/ನಿವೇಶನ ಸಂಖ್ಯೆ/ಸಿಟಿಎಸ್ ಸಂಖ್ಯೆ
   (ii) ಗ್ರಾಮ/ಬಡಾವಣೆ/ವಾರ್ಡು/ವಿಭಾಗ

(iii) ತಾಲ್ಲೂಕು/ಪಟ್ಟಣ

(iv) ಜಿಲ್ಲೆ

7. ಭೂಮಿ ನಿವೇಶನವು ಅರ್ಜಿದಾರನ ಒಡೆತನದಲ್ಲಿದೆಯೆ

8. ಭೂಮಿ ನಿವೇಶನವು ಅರ್ಜಿದಾರನ ಒಡೆತನದಲ್ಲಿಲ್ಲದಿದ್ದರೆ–

(i) ಒಡೆಯನ ಹೆಸರು ಮತ್ತು ವಿಳಾಸ

(ii) ಅರ್ಜಿದಾರನ ಕಾನೂನುಸಮ್ಮತ ಅಧಿಭೋಗವನ್ನು ರುಜುವಾತುಪಡಿಸುವ ದಸ್ತಾವೇಜನ್ನು ಲಗತ್ತಿಸಲಾಗಿದೆಯೇ?

9. ಅಧಿನಿಯಮದ ಮೇರೆಗೆ ಲೈಸೆನ್ಸ್ ಪಡೆದಂಥ ಇತರ ಸ್ಥಳಗಳು ಯಾವುವಾದರೂ ಇದ್ದರೆ ಆ ಸ್ಥಳಗಳ ಸ್ವಾಧೀನತೆಯನ್ನು ಅರ್ಜಿದಾರನು ಹೊಂದಿದ್ದಾನೆಯೇ :–

(ಕ) ಅದೇ ಸ್ಥಳದಲ್ಲಿ ಅಥವಾ ಬೇರೆ ಎಲ್ಲಾದರೂ ?

(ಖ) ಲೈಸೆನ್ಸ್‌ಗಾಗಿ ಅರ್ಜಿ ಮಾಡಿಕೊಳ್ಳುವ ಕಾಲದಲ್ಲಿಯೇ ? ಅಥವಾ ಯಾವುದೇ ಹಿಂದಿನ ಕಾಲದಲ್ಲಿಯೇ ಹೇಗೆ?

10. ಅರ್ಜಿಗೆ ಈ ಕೆಳಕಂಡವುಗಳನ್ನು ಲಗತ್ತಿಸಲಾಗಿದೆಯೇ ?

(1) ಖಾತಾ ಉದ್ಧೃತ

(2) ಭೂಕಂದಾಯ/ಪೌರಸಭಾ ತೆರಿಗೆಯನ್ನು ತೀರಿಸಿದ ಬಗ್ಗೆ ಪ್ರಮಾಣಪತ್ರ

(3) ಅದು ರೆವಿನ್ಯೂ ಭೂಮಿಯಾಗಿದ್ದರೆ ಕೃಷಿಯೇತರ ಉದ್ದೇಶಗಳಿಗಾಗಿ ಆ ಭೂಮಿಯನ್ನು ಪರಿವರ್ತಿಸಿದ ಬಗ್ಗೆ ಪ್ರಮಾಣಪತ್ರ

(4) 'ಖ' ನಮೂನೆಯ ಪ್ರತಿ

(5) 29ನೇ ನಿಯಮದ ಮೇರೆಗೆ "ನಿರಾಕ್ಷೇಪಣಾ ಪ್ರಮಾಣಪತ್ರ"ಕ್ಕಾಗಿನ ಫೀಜು ಮತ್ತು 100ನೇ ನಿಯಮದ ಮೇರೆಗೆ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ಚಲನು

(6) 25(3)ನೇ ನಿಯಮದ (ಕ) ಮತ್ತು (ಖ) ಖಂಡಗಳು ಅಥವಾ 90ನೇ ನಿಯಮದ ಮೇರೆಗೆ ಅಗತ್ಯಪಡಿಸಿದ ರೇಖಾ ಚಿತ್ರಗಳು.

11. ಉದ್ದೇಶಿತ ನಿವೇಶನವು ಸಾರ್ವಜನಿಕ ರಸ್ತೆಯಿಂದ–

(1) ಅತಿ ಹತ್ತಿರದ ಕಾಯಂ ಸಿನಿಮಾ

(2) ಅತಿ ಹತ್ತಿರದ ಸಂಚಾರಿ ಸಿನಿಮಾ

(3) ಅತಿ ಹತ್ತಿರದ ಶೈಕ್ಷಣಿಕ ಸಂಸ್ಥೆ

(4) ಅತಿ ಹತ್ತಿರದ ಆಸ್ಪತ್ರೆ

(5) ಅತಿ ಹತ್ತಿರದ ದೇವಸ್ಥಾನ ಅಥವಾ ಇತರ ಧಾರ್ಮಿಕ ಸಂಸ್ಥೆಗೆ ಇರುವ ದೂರು

12. ಇತ್ತೀಚಿನ ಗಣತಿಯ ಅಂಕಿಗಳಿಗನುಸಾರವಾಗಿ ಆ ಸ್ಥಳದ ಜನಸಂಖ್ಯೆ

13. ಸಿನಿಮಾ ಪ್ರದರ್ಶನಕ್ಕಾಗಿ ಹೊಸ ಸ್ಥಳದ ಸ್ಥಾಪನೆಯಿಂದ ಯಾವುದೇ ನಿರ್ದಿಷ್ಟ ಸ್ಥಳ ಅಥವಾ ಸ್ಥಳಗಳಿಗಾಗಿ ಒದಗಿಸಬಹುದಾದ ಪ್ರಯೋಜನ.

ಸ್ಥಳ :

ದಿನಾಂಕ : ಅರ್ಜಿದಾರನ ರುಜು

ಟಿಪ್ಪಣಿ: (1) ಅರ್ಜಿಯನ್ನು 90ನೇ ನಿಯಮದ ಮೇರೆಗೆ ಮಾಡಿಕೊಂಡಾಗ ಬಾಬು 10(3) ಅನ್ವಯವಾಗುವುದಿಲ್ಲ.

**ನಮೂನೆ "ಖ"**

**[25(1), 90(1) ಮತ್ತು 111ಖ ನಿಯಮಗಳನ್ನು ನೋಡಿ]**

**ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು 1971ರ ಮೇರೆಗೆ ಅರ್ಜಿದಾರನಿಂದ ನೋಟೀಸು**

---------------- ಜಿಲ್ಲೆ ------------- ಪಟ್ಟಣ ---------- ಗ್ರಾಮದ/ಮನೆ ನಂಬರಿನಲ್ಲಿ ವಾಸವಾಗಿರುವ -----------ವಯಸ್ಸಿನ ಮಗ/ಮಗಳು/ಹೆಂಡತಿಯಾದ ------------ ನಾನು ನನಗೆ ಶ್ರೀ/ಶ್ರೀಮತಿಗೆ ಸೇರಿದ ಮತ್ತು -------------ಜಿಲ್ಲೆ --------- ತಾಲ್ಲೂಕು ----------- ಪಟ್ಟಣದ ------------- ಗ್ರಾಮದ ----------- ವಾರ್ಡು ---------- ವಿಭಾಗದ ----------- ಇಎಸ್/ನಿವೇಶನ/ಸಿಟಿಎಸ್ ಸಂಖ್ಯೆಯನ್ನು ಹೊಂದಿರುವ ಮತ್ತು ಸುಮಾರು ----------- ಚದರ ಮೀಟರುಗಳ ಅಳತೆಯ ಮತ್ತು ಈ ಕೆಳಕಂಡಂತೆ ಚೆಕ್ಕುಬಂದಿಯುಳ್ಳ (ಇಲ್ಲಿ ನಿವೇಶನದ ಸರಹದ್ದನ್ನು ಕೊಡಿ) ಭೂಮಿಯ ಮೇಲೆ ಕಾಯಂ/ಡ್ರೈವ್ ಇನ್ / ಸಂಚಾರಿ ಸಿನಿಮಾವನ್ನು ಸ್ಥಾಪಿಸಲು ನಾನು ಉದ್ದೇಶಿಸಿರುವೆನೆಂಬ ನೋಟೀಸನ್ನು ದಯವಿಟ್ಟು ಸ್ವೀಕರಿಸಿ.

ಸದರಿ ಸಿನಿಮಾದ ಸ್ಥಾಪನೆ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು -------------------- ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅವನು ಅಧಿಸೂಚಿಸಬಹುದಾದಂಥ ಕಾಲದಲ್ಲಿ ದಾಖಲ್ಮಾಡತಕ್ಕದ್ದೆಂದು ಈ ಮೂಲಕ ನೋಟೀಸನ್ನು ಕೊಡಲಾಗಿದೆ.

**ಒಡೆಯ/ಗೇಣಿದಾರ**

**ನಮೂನೆ "ಗ"**

**[26(1), 96(1) ಮತ್ತು 111ಖ ನಿಯಮಗಳನ್ನು ನೋಡಿ]**

ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 1971ರ ಮೇರೆಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯವರಿಂದ ನೋಟೀಸು.

-------------- ಜಿಲ್ಲೆಯ ------------ ಪಟ್ಟಣದ ----------------- ತಾಲ್ಲೂಕು/ವಾರ್ಡು/ಸಂಖ್ಯೆ/ವಿಭಾಗ-------------------ದ ----------------- ಗ್ರಾಮ -- ------------- ನಂಬರಿನ ಮನೆಯ ನಿವಾಸಿಯಾದ ನಾನು -------------------ವರ್ಷದ ವಯಸ್ಸಿನ ಶ್ರೀ ------------ ರವರ ಮಗ/ಮಗಳು/ಹೆಂಡತಿಯಾದ ಶ್ರೀ/ಶ್ರೀಮತಿ ------------ಯು ಅವನು/ಅವಳು ಶ್ರೀ/ಶ್ರೀಮತಿ---------------ಗೆ ಸೇರಿದ ಮತ್ತು ------------------ ಜಿಲ್ಲೆಯ --------------- ತಾಲ್ಲೂಕು/ಪಟ್ಟಣದ ----------------- ಗ್ರಾಮ/ವಾರ್ಡು/ವಿಭಾಗದ ರೆವಿನ್ಯೂ ಸರ್ವೆ ನಂಬರುಗಳು/ನಿವೇಶನ/ಸಿಟಿಎಸ್ ಸಂಖ್ಯೆ----------------- ಗಳ ಮತ್ತು ------- ------- ಸುಮಾರು --------------- ಚದರ ಮೀ/ಮತ್ತು ಕೆಳಕಂಡ ಚಕ್ಕುಬಂದಿಯುಳ್ಳ (ಇಲ್ಲಿ ನಿವೇಶನದ ಸರಹದ್ದನ್ನು ಕೊಡಿ) ಭೂಮಿಯ ಮೇಲೆ ಕಾಯಂ/ಡ್ರೈವ್ ಇನ್/ಸಂಚಾರಿ ಸಿನಿಮಾವನ್ನು ಸ್ಥಾಪಿಸುವುದಕ್ಕಾಗಿ ನಿರಾಕ್ಷೇಪಣಾ ಪ್ರಮಾಣಪತ್ರದ ಮಂಜೂರಾತಿಗಾಗಿ ನನಗೆ ಅರ್ಜಿಯನ್ನು ಸಲ್ಲಿಸಿರುವುದರಿಂದ:

ಹಿಂದೆ ಹೇಳಿದಂತೆ "ನಿರಾಕ್ಷೇಪಣಾ ಪ್ರಮಾಣಪತ್ರದ" ಮಂಜೂರಾತಿಗಾಗಿ ಯಾವುದೇ ಆಕ್ಷೇಪಣೆ ಹೊಂದಿರುವ ಯಾರೇ ವ್ಯಕ್ತಿಯು 19------------ ದಿವಸದೊಳಗೆ ಕೆಳಗೆ ರುಜು ಮಾಡಿರುವವರಿಗೆ ಬರಹದಲ್ಲಿ ಅವನ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದೆಂದು ಈ ಮೂಲಕ ನೋಟೀಸು ಕೊಡಲಾಗಿದೆ. ಆ ದಿನಾಂಕದ ನಂತರ ಸ್ವೀಕರಿಸಿದ ಯಾವುದೇ ಆಕ್ಷೇಪಣೆಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಿಲ್ಲ.

ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಲೈಸೆನ್ಸ್ ಕೊಡುವ
ಪ್ರಾಧಿಕಾರಿಗಳು

ನನ್ನ ರುಜುವಿನೊಂದಿಗೆ 19----
ರ ದಿವಸದಂದು ಕೊಡಲಾಗಿದೆ

**ನಮೂನೆ "ಘ"**

**[28, 96(4) ಮತ್ತು 111ಖ ನಿಯಮಗಳನ್ನು ನೋಡಿ]**

ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಗಳು, 1971ರ ಮೇರೆಗಿನ ನಿರಾಕ್ಷೇಪಣಾ ಪ್ರಮಾಣಪತ್ರ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971ರ 28ನೇ/ನಿಯಮದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ----------- ಜಿಲ್ಲೆ ------------- ಜಿಲ್ಲಾ/ಅಡಿಷನಲ್

ಜಿಲ್ಲಾ ಮ್ಯಾಜಿಸ್ಟ್ರೇಟನಾದ ---------------------------- ನಾನು, ಅವನು/ಅವಳು/ ಶ್ರೀ/ ಶ್ರೀಮತಿಗೆ ಸೇರಿದ ಮತ್ತು -------------------- ಜಿಲ್ಲೆಯ --------------- ತಾಲ್ಲೂಕು/ ಪಟ್ಟಣ ------------------------ ಗ್ರಾಮ/ವಾರ್ಡು/ವಿಭಾಗದ ರೆವಿನ್ಯೂ ಸರ್ವೆ/ನಿವೇಶನ/ಒಟಿಎಸ್ ಸಂಖ್ಯೆ ಹೊಂದಿರುವ ಮತ್ತು ಸುಮಾರು ----------------- ಚದರ ಮೀಟರುಗಳ/ಹೆಚ್‌ಎ ಅಳತೆಯ ಮತ್ತು ಈ ಕೆಳಕಂಡ ಚಕ್ಕುಬಂದಿಯುಳ್ಳ (ನಮೂನೆ 'ಖ'ನಲ್ಲಿ ಇದ್ದಂತೆ ನಿವೇಶನದ ವಿವರಣೆಯನ್ನು ಇಲ್ಲಿ ಕೊಡಿ) ಭೂಮಿಯಲ್ಲಿ ಕಾಯಂ/ಡ್ರೈವ್-ಇನ್/ಸಂಚಾರಿ ಸಿನಿಮಾದ ಸ್ಥಾಪನೆಗಾಗಿ ---------------- ಜಿಲ್ಲೆ --------------- ಪಟ್ಟಣದ ---------------- ತಾಲ್ಲೂಕು ----------------- ವಾರ್ಡು/ವಿಭಾಗದ ಗ್ರಾಮ/ಮನೆಯಲ್ಲಿ ವಾಸವಾಗಿರುವ ------------------ ವರ್ಷಗಳ ವಯಸ್ಸಿನ ------------- ಮಗ/ಮಗಳು/ಹೆಂಡತಿಯಾದ ಶ್ರೀ/ಶ್ರೀಮತಿಗೆ ಯಾವುದೇ 'ಆಕ್ಷೇಪಣೆ ಇಲ್ಲ'ವೆಂದು ಪ್ರಮಾಣಪತ್ರವನ್ನು ಈ ಮೂಲಕ ಮಂಜೂರು ಮಾಡಿರುತ್ತೇನೆ.

ನಮೂನೆ 'ಖ'ದಲ್ಲಿಯಂತೆ ನಿವೇಶನದ ವಿವರವನ್ನು ದಯವಿಟ್ಟು ಇಲ್ಲಿ ಕೊಡಿ.

ಈ "ನಿರಾಕ್ಷೇಪಣಾ ಪ್ರಮಾಣಪತ್ರವು" 28ನೇ ನಿಯಮ ಅಥವಾ ಸಂದರ್ಭಾನುಸಾರ 96(6)ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಅವಧಿಯವರೆಗೆ ಸಿಂಧುವಾಗಿರುತ್ತದೆ.

ಜಿಲ್ಲಾ ಮ್ಯಾಜಿಸ್ಟ್ರೇಟ್<br>ಲೈಸೆನ್ಸ್ ಕೊಡುವ ಪ್ರಾಧಿಕಾರಿ

**ನಮೂನೆ "ಜ"**

**[34ನೇ ನಿಯಮ ನೋಡಿ]**

**ಕರ್ನಾಟಕ ಸರ್ಕಾರ**

**ವಿದ್ಯುಚ್ಛಕ್ತಿ ಇಲಾಖೆ**

ಕರ್ನಾಟಕ ಸರ್ಕಾರದ ವಿದ್ಯುಚ್ಛಕ್ತಿ ಪರಿಶೀಲಕನ ಕಛೇರಿ, ಬೆಂಗಳೂರು

ಚಲನಚಿತ್ರ ಸಲಕರಣೆ ಮತ್ತು ಸ್ಥಿರಯಂತ್ರ, ವಿದ್ಯುಚ್ಛಕ್ತಿ ಸ್ಥಾಪನೆಗಳು ಅಗ್ನಿಶಾಮಕ ಉಪಕರಣಗಳು ಮತ್ತು ಆಗ್ನಿ ಮುನ್ನೆಚ್ಚರಿಕೆ ಕ್ರಮಗಳ ಪ್ರಮಾಣಪತ್ರ.

ಪ್ರಮಾಣ ಪತ್ರದ ಸಂಖ್ಯೆ                                ದಿನಾಂಕ :

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971ರ 34ನೇ ನಿಯಮದ ಮೇರೆಗೆ ನಾನು --------------------- ಎಂದು ಕರೆಯಲಾದ ಮತ್ತು ----------------ರಂದು ------- ----------ನಲ್ಲಿ ಶ್ರೀ ------------------ ಅವರು ಮಾಲೀಕ/ವ್ಯವಸ್ಥಾಪನ ನಿರ್ದೇಶಕನಾದ ಮತ್ತು ಶ್ರೀ ---------------- ಅವರು ವ್ಯವಸ್ಥಾಪಕ/ನಿರ್ದೇಶಕ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಯಾಗಿರುವಂಥ ಹಿಂದೆ ವಿಶೇಷವಾಗಿ ವಿವರಿಸಿದ ಸಿನಿಮಾದ ಸಭಾಂಗಣ, ಸಿನಿಮಾ ಸಲಕರಣೆ ಮತ್ತು ಸ್ಥಾವರ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಯು ಮೂಕಿ (ಟಾಕಿ ಅಲ್ಲದ) ಫಿಲ್ಮುಗಳಿಗೆ ಮಾತ್ರ/ಮೂಕಿ ಮತ್ತು ಟಾಕಿ ಫಿಲ್ಮುಗಳೆರಡಕ್ಕೂ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ.

2. ಲೈಸೆನ್ಸ್ ಪಡೆದ ಆವರಣದಲ್ಲಿ ಅಗ್ನಿಶಾಮಕ ಸಲಕರಣೆಗಳು ಮತ್ತು ಅಗ್ನಿ ಮುನ್ನೆಚ್ಚರಿಕೆ ಕ್ರಮಗಳಿಗೆ ಸಂಬಂಧಿಸಿದಂಥ ನಿಯಮಗಳು ಮತ್ತು 74 ಮತ್ತು 76ನೇ ನಿಯಮಗಳನ್ನು ಪಾಲಿಸಲಾಗಿದೆಯೆಂದು ಸಹ ನಾನು ಪ್ರಮಾಣೀಕರಿಸುತ್ತೇನೆ.

3. ಈ ಪ್ರಮಾಣ ಪತ್ರವು --------------- ದಿಂದ ---------------ವರೆಗಿನ ---------------- ಅವಧಿಗೆ ಸಿಂಧುವಾಗಿದೆ. ಆದರೆ ಅ ಅವಧಿಯೊಳಗೆ ರದ್ದಿಯಾತಿಗೆ ಗುರಿಯಾಗುತ್ತದೆ.

ಅಧಿಕಾರಿಯ ರುಜು.

**ಸಾಧನ ಸಾಮಗ್ರಿಯ ವಿವರಗಳು**

| ಉಪಕರಣ | ತಯಾರಕನ ಹೆಸರು | ಸಂಖ್ಯೆ | ಸಾಮರ್ಥ್ಯ |
|---|---|---|---|
| ಇಂಜಿನ್ನು | | | |
| ಮೋಟಾರು | | | |
| ಜನರೇಟರು | | | |
| ರೆಕ್ಟಿಫಾಯರ್ | | | |
| ಪ್ರೊಜೆಕ್ಟರ್ | | | |
| ಕಾನ್ವರ್ಟರ್ | | | |
| ಟ್ರಾನ್ಸ್‌ಫಾರ್ಮರ್ | | | |
| ಧ್ವನಿವರ್ಧಕ | | | |
| ಅಗ್ನಿಶಾಮಕ | | | |
| ಯಾವುದೇ ಇತರ ಸ್ಥಾವರಗಳು | | | |

**ಟಿಪ್ಪಣಿ :** ಕಾಯಂ ಸಿನಿಮಾಗಳಿಗೆ ಸಂಬಂಧಿಸಿದಂತೆ, ಲೈಸೆನ್ಸಿನ ಮರುಮಂಜೂರಾತಿಗಾಗಿ ಒಂದು ನೂರ ಎಂಬತ್ತು ರೂಪಾಯಿಗಳ ಚಲನ್‌ನ್ನು ಮತ್ತು ಸಂಚಾರ ಸಿನಿಮಾಗಳಿಗೆ ಸಂಬಂಧಿಸಿದಂತೆ ಐವತ್ತು ರೂಪಾಯಿಗಳ ಚಲನನ್ನು 85(2) ಅಥವಾ 102ನೇ ನಿಯಮದ ಮೇರೆಗೆ ಸಂದರ್ಭಾನುಸಾರ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಉಪ-ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಸಹಾಯಕ ವಿದ್ಯುಚ್ಛಕ್ತಿ ಪರಿಶೀಲಕನಿಗೆ ಲೈಸೆನ್ಸ್‌ನ ಮುಕ್ತಾಯದ ದಿನಾಂಕಕ್ಕೆ ಒಂದು ತಿಂಗಳು ಮುಂಚೆ ಕಳುಹಿಸತಕ್ಕದ್ದು.

**ನಮೂನೆ "ಚ"**

**(36 ಮತ್ತು 111ಖ ನಿಯಮಗಳನ್ನು ನೋಡಿ)**

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971ರ ಮೇರೆಗೆ ಕಾಯಂ ಡ್ರೈವ್‌ಇನ್ ಸಿನಿಮಾದಲ್ಲಿ ಚಲನಚಿತ್ರ ಆಟಗಳ ಪ್ರದರ್ಶನಕ್ಕಾಗಿ ಲೈಸೆನ್ಸ್.

1. ಲೈಸೆನ್ಸ್‌ದಾರನ ಹೆಸರು ಮತ್ತು ವಿಳಾಸ
2. ಲೈಸೆನ್ಸ್‌ದಾರನು ಸಿನಿಮಾ ಥಿಯೇಟರಿನ ಒಡೆಯನಾಗಿಲ್ಲದಿದ್ದರೆ, ಅದರ ಒಡೆಯನ ಹೆಸರು ಮತ್ತು ವಿಳಾಸ

3. ಸಿನಿಮಾ ಥಿಯೇಟರಿನ ಜಾಗ

4. ಚದರ ಮೀಟರುಗಳಲ್ಲಿ ಥಿಯೇಟರಿನ ಪ್ರದೇಶ

5. ಯಾವ ಸಾಮಗ್ರಿಗಳಿಂದ ಛಾವಣಿ, ಪಕ್ಕದ ಗೋಡೆಗಳು, ಗ್ಯಾಲರಿಗಳು ಮತ್ತು ಪಾವಟಿಗೆಗಳನ್ನು ಮಾಡಲಾಗಿದೆಯೋ ಆ ಸಾಮಗ್ರಿಗಳು

6. ಎಕ್ಸಿಕ್ಯೂಟಿವ್ ಇಂಜಿನಿಯರನಿಂದ ಕೊನೆಯ ಪರಿಶೀಲನೆಯ ದಿನಾಂಕ

7. ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆಯ ದಿನಾಂಕ

8. ಆರೋಗ್ಯಾಧಿಕಾರಿಯಿಂದ ಕೊನೆಯ ಪರಿಶೀಲನೆ ದಿನಾಂಕ

9. ಲೈಸೆನ್ಸ್ ಕೊಡುವ ಪ್ರಾಧಿಕಾರಿಯಿಂದ ಕೊನೆಯ ಪರಿಶೀಲನೆಯ ದಿನಾಂಕ

10. ಯಾವ ವಿಶೇಷ ಷರತ್ತುಗಳ ಮೇಲೆ ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆಯೋ ಆ ವಿಶೇಷ ಷರತ್ತುಗಳು ಯಾವುವಾದರೂ ಇದ್ದರೆ ಅವು

11. ಲೈಸೆನ್ ಜಾರಿಯಲ್ಲಿರಬೇಕಾದಂಥ ಅವಧಿ

12. ಸಂದಾಯ ಮಾಡಿದ ಫೀಜು

13. ಸಭಾಂಗಣದ ಪ್ರತಿಯೊಂದು ಭಾಗದಲ್ಲಿ ಹೋಗಲು ಅನುಮತಿಸಿದ ವ್ಯಕ್ತಿಗಳ ಗರಿಷ್ಠ ಸಂಖ್ಯೆ

| | |
|---|---|
| | ವ್ಯಕ್ತಿಗಳು |
| ಮೊದಲ ದರ್ಜೆಯಲ್ಲಿ | |
| -----------ಯಲ್ಲಿ | |
| -----------ಯಲ್ಲಿ | |
| -----------ಯಲ್ಲಿ | ಒಟ್ಟು |

**ಲೈಸೆನ್ಸಿನ ಷರತ್ತುಗಳು**

ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆ. ಅದು ಈ ಕೆಳಕಂಡ ಷರತ್ತುಗಳಿಗೂ ಸಹ ಒಳಪಟ್ಟಿರುತ್ತದೆ:-

1. ಲೈಸೆನ್ಸ್‌ದಾರನನ್ನು ಅಥವಾ ಅವನ ನೌಕರರನ್ನು ಅಥವಾ ಏಜೆಂಟನನ್ನು ಯಾವುದೇ ಇತರ ಕಾನೂನು ಅಥವಾ ಅದರ ಮೇರೆಗೆ ರಚಿಸಲಾದ ನಿಯಮ, ಉಪವಿಧಿಯ ಮೂಲಕ ಅಗತ್ಯಪಡಿಸಿದ ಯಾವುದೇ ಇತರ ಲೈಸೆನ್ಸನ್ನು ತೆಗೆದುಕೊಳ್ಳುವುದರಿಂದ ಅಥವಾ ಅವುಗಳನ್ನು ಪಾಲಿಸುವುದರಿಂದ ಈ ಲೈಸೆನ್ಸ್ ವಿನಾಯಿತಿಗೊಳಿಸುವುದಿಲ್ಲ.

2(ಕ) ಚಲನಚಿತ್ರ ಅಧಿನಿಯಮ, 1952ರ 4ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರಿಯು, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಮತ್ತು ಅದನ್ನು ಪ್ರದರ್ಶಿಸಿದಾಗ ಆ ಪ್ರಾಧಿಕಾರಿಯು ನಿಯಮಿಸಿದ ಗುರುತನ್ನು ಪ್ರದರ್ಶಿಸುವಂಥ ಮತ್ತು ಅದಕ್ಕೆ ಅಂಥ ಗುರುತನ್ನು ಹಾಕಿದಾಗಿನಿಂದ

ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಿರದ ಅಥವಾ ಅಕ್ರಮವಾಗಿ ತಿದ್ದಿಲ್ಲದಂಥ ಚಲನಚಿತ್ರವನ್ನು ಹೊರತುಪಡಿಸಿ ಯಾವುದೇ ಇತರ ಚಲನಚಿತ್ರವನ್ನು : ಪರಂತು, ಈ ಷರತ್ತು ಮುಂಬೈ ಫಿಲ್ಮ್ ವಿಭಾಗವು ತಯಾರಿಸಿದ ನ್ಯೂಸ್ ರೀಲುಗಳ ಪ್ರದರ್ಶನಕ್ಕೆ ಅನ್ವಯಿಸತಕ್ಕದ್ದಲ್ಲ;

(ಖ) ಫಿಲ್ಮು ಸೆನ್ಸಾರ್ ಮಂಡಲಿಯು ವಯಸ್ಕರಿಗೆ ಪರಿಮಿತಿಗೊಳಿಸಿದ, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಯಾವುದೇ ಫಿಲ್ಮನ್ನು ವಯಸ್ಕನಲ್ಲದ ಯಾರೇ ವ್ಯಕ್ತಿಗೆ ;

(ಗ) ಯಾವ ಫಿಲ್ಮಿನ ಪ್ರದರ್ಶನವನ್ನು ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಅಮಾನತು ಗೊಳಿಸಲಾಗಿದೆಯೋ ಆ ಯಾವುದೇ ಫಿಲ್ಮನ್ನು–ಲೈಸೆನ್ಸ್‌ದಾರನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

ಈ ಷರತ್ತಿನ (ಖ) ಖಂಡದ ಉದ್ದೇಶಕ್ಕಾಗಿ, ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ಯಾವುದೇ ಸಂದೇಹವಿದ್ದರೆ ಆ ಪ್ರಶ್ನೆಗೆ ಸಂಬಂಧಿಸಿದಂತೆ ಸದ್ಭಾವನೆಯಿಂದ ಕೊಟ್ಟ ತೀರ್ಮಾನವನ್ನು ಪ್ರಶ್ನಿಸತಕ್ಕದ್ದಲ್ಲ ಮತ್ತು ವಯಸ್ಕನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕನಿಗೆ ಯುಕ್ತ ಸಂದೇಹವಿರುವಲ್ಲಿ ವ್ಯವಸ್ಥಾಪಕನು ಫಿಲ್ಮಿನ ಪ್ರದರ್ಶನಕ್ಕೆ ಅವನಿಗೆ ಪ್ರವೇಶ ಕೊಡುವುದಕ್ಕೆ ಮುಂಚೆ ಈ ಕೆಳಕಂಡ ನಮೂನೆಯಲ್ಲಿ ಅವನ ಟಿಕೆಟ್‌ನ ಪಕ್ಕ ಪ್ರತಿಯ ಹಿಂಬದಿಯಲ್ಲಿ ಘೋಷಣೆಯನ್ನು ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು ಮತ್ತು ತನಿಖೆಯನ್ನು ನಡೆಸಿದ ಮೇಲೆ ಆ ಘೋಷಣೆಯು ಸುಳ್ಳಾಗಿರುವುದಾಗಿ ಕಂಡುಬಂದರೆ ಭಾರತ ದಂಡ ಸಂಹಿತೆಯ 199ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್ನಿಗೆ ಗುರಿಯಾಗಲು ಅವನು ಹೊಣೆಗಾರನಾಗಿರುವನೆಂದು ಅವನಿಗೆ ವಿವರಿಸತಕ್ಕದ್ದು.

**ಘೋಷಣೆ**

––––––––––––– ಇಲ್ಲಿ (ಪೂರ್ಣ ವಿಳಾಸ ತಿಳಿಸಿ) ವಾಸಿಸುವ ನಾನು ––––––––––––––– ಹದಿನೆಂಟು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಿದ್ದೇನೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸಹಿ

3. ಲೈಸೆನ್ಸ್‌ದಾರನು ಸಿನಿಮಾ ಥಿಯೇಟರಿನ ಒಳಗಡೆಯಾಗಲಿ ಅಥವಾ ಹೊರಗೆ ಆಗಲಿ ಸಭ್ಯತೆ ಅಥವಾ ನೈತಿಕತೆಯ ದೃಷ್ಟಿಕೋನದಿಂದ ಆಕ್ಷೇಪಣಾರ್ಹವಾದಂಥ ಯಾವುದೇ ಜಾಹೀರಾತು ಮಾಡುವ ವಿಷಯ ಅಥವಾ ಸಚಿತ್ರ ನಿರೂಪಣೆಯನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

4. ಲೈಸೆನ್ಸ್‌ದಾರನು ಕೇಂದ್ರ ಚಲನಚಿತ್ರ ಮಂಡಲಿ ಅಥವಾ ಕೇಂದ್ರ ಸರ್ಕಾರದ ಆದೇಶಗಳ ಮೇರೆಗೆ ಯಾವುದೇ ಚಲನಚಿತ್ರದಿಂದ ಕತ್ತರಿಸಲಾಗಿರುವಂಥ ದೃಶ್ಯ ಅಥವಾ ಛಾಯಾಚಿತ್ರವನ್ನು ನಿರೂಪಿಸುವ ಅಥವಾ ತೋರಿಸುವ ಅಥವಾ ತೋರಿಸುವುದೆಂದು ತಾತ್ಪರ್ಯವಾಗುವಂಥ ಯಾವುದೇ ಛಾಯಾಚಿತ್ರ ಅಥವಾ ಭಿತ್ತಿ ಪತ್ರಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ.

5. ಲೈಸೆನ್ಸ್‌ದಾರನು ಸಾರ್ವಜನಿಕರಿಗೆ ಆವರಣವನ್ನು ತೆಗೆದಿರಿಸಿರುವಾಗಲೆಲ್ಲಾ ಪ್ರತಿಯೊಂದು ಸಾರ್ವಜನಿಕ ಪ್ರವೇಶದ್ವಾರದಲ್ಲಿ ಕೋಷ್ಠಕದ ನಮೂನೆಯಲ್ಲಿ ಮತ್ತು ಸ್ಪಷ್ಟವಾದ, ದೊಡ್ಡದಾದ ಅಕ್ಷರಗಳಲ್ಲಿ ಮತ್ತು ಅಂಕಿಗಳಲ್ಲಿ,–

(ಕ) ಟ್ರೇಲರುಗಳು ಮತ್ತು ಜಾಹೀರಾತು ಫಿಲ್ಮ್‌ಗಳನ್ನು ಹೊರತುಪಡಿಸಿ ಆ ದಿವಸ ತೋರಿಸಬೇಕಾದ ಪ್ರತಿಯೊಂದು ಫಿಲ್ಮಿನ ಶೀರ್ಷಿಕೆ ;

(ಖ) ಅಂಥ ಪ್ರತಿಯೊಂದು ಫಿಲ್ಮ್ ಪ್ರಾರಂಭವಾಗುವ ಸರಿಸುಮಾರು ಕಾಲ;

(ಗ) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಅಂಥ ಪ್ರತಿಯೊಂದು ಫಿಲ್ಮು 'ಎ' ಅಥವಾ 'ಯು' ಪ್ರಮಾಣಪತ್ರವನ್ನು ಸ್ವೀಕರಿಸಿದೆಯೋ ಹೇಗೆ ; ಮತ್ತು

(ಘ) ಮೂರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊರತುಪಡಿಸಿ ಹದಿನೆಂಟು ವರ್ಷಗಳಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳನ್ನು ಒಳಗೆ ಬಿಡಲಾಗುವುದೋ ಅಥವಾ ಇಲ್ಲವೋ ಎಂಬುದನ್ನು ತೋರಿಸುವ ನೋಟೀಸನ್ನು ಎದ್ದು ಕಾಣುವ ಹಾಗೆ ಪ್ರದರ್ಶಿಸತಕ್ಕದ್ದು.

6. ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಫಿಲ್ಮಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಯಾವುದೇ ಪ್ರಮಾಣಪತ್ರದ ಸ್ವರೂಪವನ್ನು ಆವರಣಗಳಲ್ಲಿ ಪ್ರದರ್ಶಿಸಿದ ಫಿಲ್ಮಿನ ಯಾವುದೇ ಜಾಹೀರಾತಿನಲ್ಲಿ 'ಯು' ಅಥವಾ 'ಎ' ಎಂಬ ಅಕ್ಷರದ ಮೂಲಕ ಸ್ಪಷ್ಟವಾಗಿ ಸೂಚಿಸತಕ್ಕದ್ದು.

7. ಲೈಸೆನ್ಸ್ ಕೊಡುವ ಪ್ರಾಧಿಕಾರಿ ಮತ್ತು ಆ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಅಧೀನ ಅಧಿಕಾರಿ ಮತ್ತು ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಮನೋರಂಜನೆಯ ಕಾಲದಲ್ಲಿ ವ್ಯವಸ್ಥೆಯನ್ನು ಕಾಪಾಡಲು ಪ್ರತಿನಿಯೋಜನೆಗೊಂಡ ಯಾರೇ ಪೊಲೀಸ್ ಅಧಿಕಾರಿಯು ಲೈಸೆನ್ಸಿನ ಷರತ್ತುಗಳನ್ನು ಪಾಲಿಸಲಾಗಿದೆಯೋ ಹೇಗೆ ಎಂಬುದನ್ನು ನೋಡುವುದಕ್ಕಾಗಿ ಸದರಿ ಆವರಣಗಳಿಗೆ ಎಲ್ಲ ಕಾಲಗಳಲ್ಲಿ ಮುಕ್ತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

8. ಚಲನಚಿತ್ರ ಪ್ರದರ್ಶನಕ್ಕೆ ಲಗತ್ತಾದ ಜಾಗದಲ್ಲಿ ಯಾವುದೇ ಬಿರುಸು ಬಾಣಗಳನ್ನು ಉಪಯೋಗಿಸತಕ್ಕದ್ದಲ್ಲ.

9. ಲೈಸೆನ್ಸ್‌ದಾರನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಲೈಸೆನ್ಸ್‌ನ್ನು ಅಥವಾ ಲೈಸೆನ್ಸ್ ಪಡೆದ ಆವರಣವನ್ನು ಹಸ್ತಾಂತರಿಸತಕ್ಕದ್ದಲ್ಲ, ಒಳ ಬಾಡಿಗೆಗೆ ಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ಲೈಸೆನ್ಸ್‌ದಾರನು ಹಿಂದೆ ಹೇಳಿದಂತೆ ಅನುಮತಿಯಿಲ್ಲದೆ ಲೈಸೆನ್ಸ್ ಚಾಲ್ತಿಯಲ್ಲಿರುವ ಅವಧಿಯಲ್ಲಿ ಲೈಸೆನ್ಸ್ ಪಡೆದ ಆವರಣದಲ್ಲಿ ಚಲನಚಿತ್ರವನ್ನು ಪ್ರದರ್ಶಿಸಲು ಯಾರೇ ಇತರ ವ್ಯಕ್ತಿಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

10. ಲೈಸೆನ್ಸ್‌ದಾರನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾರೇ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಸಹಾಯರ್ಥವಾಗಿ ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಫಿಲ್ಮನ್ನು ಪ್ರದರ್ಶಿಸತಕ್ಕದ್ದಲ್ಲ.

11. ಯಾವುದೇ ಚಲನಚಿತ್ರ ಪ್ರದರ್ಶನವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿಗದಿಪಡಿಸ ಬಹುದಾದಂಥ ರಾತ್ರಿ ಒಂದು ಗಂಟೆಗೆ ಮೀರದಂಥ ಕಾಲದ ತರುವಾಯ ಮುಂದುವರಿಸತಕ್ಕದ್ದಲ್ಲ.

12. ಲೈಸೆನ್ಸ್‌ದಾರನು ಅನುಮೋದಿತ ರಾಷ್ಟ್ರಗೀತೆಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಗತ್ಯಪಡಿಸ ಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರದರ್ಶಿಸತಕ್ಕದ್ದು.

12ಕ. ಲೈಸೆನ್ಸ್‌ದಾರನು, ಒಂದು ವರ್ಷದಲ್ಲಿ ಹನ್ನೆರಡು ವಾರಗಳಿಗಿಂತ ಕಡಿಮೆಯಿಲ್ಲದ ಅವಧಿಗಾಗಿ ಕನ್ನಡ ಫಿಲ್ಮನ್ನು ಪ್ರದರ್ಶಿಸತಕ್ಕದ್ದು.

13. ಲೈಸೆನ್ಸ್, ಈ ಯಾವುದೇ ಷರತ್ತುಗಳ ಅಥವಾ ಹಿಂಬದಿಯಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಥವಾ ಮನೋರಂಜನೆಯನ್ನು ಪ್ರಸ್ತಾಪಿಸುವ ಅಥವಾ ನಿಯಂತ್ರಿಸುವ ಮತ್ತು ತೆರಿಗೆಗಳ ಸಂದಾಯವನ್ನು ನಿಯಮಿಸುವ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಲ್ಲಂಘನೆಗಾಗಿ ರದ್ದಿಯಾತಿ ಮತ್ತು ಅಮಾನತ್ತಿಗೆ ಒಳಪಟ್ಟಿರತಕ್ಕದ್ದು.

ದಿನಾಂಕ 19------------ರ ------------- ದಿವಸದಂದು.

ಮೊಹರು ಜಿಲ್ಲಾ ಮ್ಯಾಜಿಸ್ಟ್ರೇಟ್

**ನಮೂನೆ 'ಛ'**

**(18ನೇ ನಿಯಮ ನೋಡಿ)**

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971 ಇದರ ಮೇರೆಗೆ ಸಂಚಾರಿ ಸಿನಿಮಾಗಳಲ್ಲಿ ಪ್ರದರ್ಶನಕ್ಕಾಗಿನ ಲೈಸೆನ್ಸ್:

1. ಲೈಸೆನ್ಸ್‌ದಾರನ ಹೆಸರು ಮತ್ತು ವಿಳಾಸ

2. ಲೈಸೆನ್ಸ್‌ದಾರನು ಆ ಕಟ್ಟಡದ ಒಡೆಯನಾಗಿರದಿದ್ದರೆ, ಅದರ ಒಡೆಯನ ಹೆಸರು ಮತ್ತು ವಿಳಾಸ

3. ಕಟ್ಟಡದ ಸ್ಥಳ

4. ಚದರ ಮೀ.ಗಳಲ್ಲಿ ಆ ಕಟ್ಟಡದ ಪ್ರದೇಶ

5. ಯಾವ ಸಾಮಗ್ರಿಗಳಿಂದ ಛಾವಣಿ, ಪಕ್ಕದ ಗೋಡೆಗಳು, ಗ್ಯಾಲರಿಗಳು ಮತ್ತು ಪಾವಟಿಗೆಗಳನ್ನು ಮಾಡಲಾಗಿದೆಯೋ ಆ ಸಾಮಗ್ರಿಗಳು

6. ಅಗ್ನಿಶಾಮಕ ಅಧಿಕಾರಿ ಅಥವಾ ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆಯ ದಿನಾಂಕ

7. ಆರೋಗ್ಯಾಧಿಕಾರಿ ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯಿಂದ ಕೊನೆಯ ಪರಿಶೀಲನೆ ದಿನಾಂಕ

8. ಪೊಲೀಸ್ ಇನ್ಸ್‌ಪೆಕ್ಟರ್‌ನಿಂದ ಕೊನೆಯ ಪರಿಶೀಲನೆಯ ದಿನಾಂಕ

9. ಲೈಸೆನ್ಸ್ ನೀಡಿದುದರ ಬಗ್ಗೆ ವಿಶೇಷ ಷರತ್ತುಗಳು ಯಾವುದಾದರೂ ಇದ್ದರೆ ಅವುಗಳನ್ನು ತಿಳಿಸಿ

10. ಲೈಸೆನ್ಸ್ ಜಾರಿಯಲ್ಲಿರಬೇಕಾದಂಥ ಅವಧಿ

11. ಸಂದಾಯ ಮಾಡಿದ ಫೀಜು

12. ಸಭಾಂಗಣದ ಪ್ರತಿಯೊಂದು ಭಾಗದಲ್ಲಿ ಹೋಗಲು ಅನುಮತಿಸಿದ ವ್ಯಕ್ತಿಗಳ ಗರಿಷ್ಠ ಸಂಖ್ಯೆ

ವ್ಯಕ್ತಿಗಳು

ಮೊದಲ ದರ್ಜೆಯಲ್ಲಿ

-----------ಯಲ್ಲಿ

-----------ಯಲ್ಲಿ

(ಷರತ್ತುಗಳಿಗಾಗಿ ಹಿಂಬದಿ ನೋಡಿ)

## ಲೈಸೆನ್ಸಿನ ಷರತ್ತುಗಳು

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೊಳಪಟ್ಟು ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆ. ಅದು ಈ ಕೆಳಕಂಡ ಷರತ್ತುಗಳಿಗೂ ಸಹ ಒಳಪಟ್ಟಿರುತ್ತದೆ:–

1. ಲೈಸೆನ್ಸ್‌ದಾರನನ್ನು ಅಥವಾ ಅವನ ನೌಕರರನ್ನು ಅಥವಾ ಏಜೆಂಟರನ್ನು ಯಾವುದೇ ಇತರ ಕಾನೂನು ಅಥವಾ ಅದರ ಮೇರೆಗೆ ರಚಿಸಿದ ನಿಯಮ, ಉಪವಿಧಿಯ ಮೂಲಕ ಅಗತ್ಯಪಡಿಸಿದ ಯಾವುದೇ ಇತರ ಲೈಸೆನ್ಸನ್ನು ತೆಗೆದುಕೊಳ್ಳುವುದರಿಂದ ಅಥವಾ ಅವುಗಳನ್ನು ಪಾಲಿಸುವುದರಿಂದ ಈ ಲೈಸೆನ್ಸ್ ವಿನಾಯಿತಿಗೊಳಿಸುವುದಿಲ್ಲ.

2(ಕ). ಚಲನಚಿತ್ರ ಅಧಿನಿಯಮ, 1952ರ (ಕೇಂದ್ರಾಧಿನಿಯಮ 1952ರ 37) 3ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರಿಯು, ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಮತ್ತು ಅದನ್ನು ಪ್ರದರ್ಶಿಸಿದಾಗ ಆ ಪ್ರಾಧಿಕಾರಿಯು ನಿಯಮಿಸಿದ ಗುರುತನ್ನು ಹಾಕಿದಾಗಿನಿಂದ ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಿರದ ಅಥವಾ ಅಕ್ರಮವಾಗಿ ತಿದ್ದಿಲ್ಲದಂಥ ಚಲನಚಿತ್ರವನ್ನು ಹೊರತುಪಡಿಸಿ ಯಾವುದೇ ಇತರ ಚಲನಚಿತ್ರವನ್ನು ;

ಪರಂತು, ಈ ಷರತ್ತು ಮುಂಬೈ ಫಿಲ್ಮ್ ವಿಭಾಗವು ತಯಾರಿಸಿದ ನ್ಯೂಸ್ ರೀಲುಗಳ ಪ್ರದರ್ಶನಕ್ಕೆ ಅನ್ವಯಿಸತಕ್ಕದ್ದಲ್ಲ :

(ಖ) ಫಿಲ್ಮ್ ಸೆನ್ಸಾರ್ ಮಂಡಲಿಯು ವಯಸ್ಕರಿಗೆ ಪರಿಮಿತಿಗೊಳಿಸಿದ ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಿದಂಥ ಯಾವುದೇ ಫಿಲ್ಮನ್ನು ವಯಸ್ಕ ಅಲ್ಲದ ಯಾರೇ ವ್ಯಕ್ತಿಗೆ ;

(ಗ) ಯಾವ ಫಿಲ್ಮಿನ ಪ್ರದರ್ಶನವನ್ನು ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಅಮಾನತ್ತುಗೊಳಿಸಲಾಗಿದೆಯೋ ಆ ಯಾವುದೇ ಫಿಲ್ಮನ್ನು–ಲೈಸೆನ್ಸ್‌ದಾರನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

**ವಿವರಣೆ.–** ಈ ಷರತ್ತಿನ (ಖ) ಖಂಡದ ಉದ್ದೇಶಕ್ಕಾಗಿ ಯಾರೇ ವ್ಯಕ್ತಿಯು ವಯಸ್ಸಿಗೆ ಸಂಬಂಧಿಸಿದಂತೆ ಯಾವುದೇ ಸಂದೇಹವಿದ್ದರೆ, ಅ ಪ್ರಶ್ನೆಗೆ ಸಂಬಂಧಿಸಿದಂತೆ ಸದ್ಭಾವನೆಯಿಂದ ವ್ಯವಸ್ಥಾಪಕನು ಕೊಟ್ಟ ತೀರ್ಮಾನವನ್ನು ಪ್ರಶ್ನಿಸತಕ್ಕದ್ದಲ್ಲ ಮತ್ತು ವಯಸ್ಕನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದಂತೆ ವ್ಯವಸ್ಥಾಪಕನಿಗೆ ಯುಕ್ತ ಸಂದೇಹವಿರುವಲ್ಲಿ, ವ್ಯವಸ್ಥಾಪಕನು ಫಿಲ್ಮಿನ ಪ್ರದರ್ಶನಕ್ಕೆ ಅವನಿಗೆ ಪ್ರವೇಶವನ್ನು ಕೊಡುವುದಕ್ಕೆ ಮುಂಚೆ ಈ ಕೆಳಕಂಡ ನಮೂನೆಯಲ್ಲಿ ಅವನ ಟಿಕೇಟಿನ ಪಕ್ಕ ಪ್ರತಿಯ ಹಿಂಬದಿಯಲ್ಲಿ ಘೋಷಣೆಯನ್ನು ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸತಕ್ಕದ್ದು ಮತ್ತು ತನಿಖೆಯನ್ನು ನಡೆಸಿದ ಮೇಲೆ ಆ ಘೋಷಣೆಯು ಸುಳ್ಳಾಗಿರುವುದಾಗಿ ಕಂಡಬಂದರೆ, ಭಾರತ ದಂಡ ಸಂಹಿತೆಯ 199ನೇ ಪ್ರಕರಣದ ಮೇರೆಗಿನ ಅಪರಾಧಕ್ಕಾಗಿ ಪ್ರಾಸಿಕ್ಯೂಷನ್‌ಗೆ ಗುರಿಯಾಗಲು ಅವನು ಹೊಣೆಗಾರನಾಗಿರುವನೆಂದು ಅವನಿಗೆ ವಿವರಿಸತಕ್ಕದ್ದು.

### ಘೋಷಣೆ

–––––––––––––– ಇಲ್ಲಿ (ಪೂರ್ಣ ವಿಳಾಸ ತಿಳಿಸಿ) ವಾಸಿಸುವ ನಾನು –––––––––––––––––– ಹದಿನೆಂಟು ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಿದ್ದೇನೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಘೋಷಿಸುತ್ತೇನೆ.

ಸಹಿ

3. ಲೈಸೆನ್ಸ್‌ದಾರನು ಲೈಸೆನ್ಸ್ ಪಡೆದಿರುವ ಆವರಣಗಳ ಒಳಗಡೆಯಾಗಲಿ ಅಥವಾ ಹೊರಗೆ ಆಗಲಿ ಆಶ್ಲೀಲ ಅಥವಾ ಅಸಭ್ಯ ಜಾಹೀರಾತು ಮಾಡುವ ವಿಷಯ ಅಥವಾ ಸಚಿತ್ರ ನಿರೂಪಣೆಯನ್ನು ಅಥವಾ ಸಾರ್ವಜನಿಕ ನೀತಿಗಳ ದೃಷ್ಟಿಕೋನದಿಂದ ಆಕ್ಷೇಪಣೀಯವಾದಂಥ ಯಾವುದೇ ವಿಷಯ ಅಥವಾ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

4. ಲೈಸೆನ್ಸ್‌ದಾರನ್ನು, ಲೈಂಗಿಕ ವಿಕಾರಗಳನ್ನು ಸರಿಪಡಿಸಲು ಅಥವಾ ಮಕ್ಕಳನ್ನು ಪಡೆಯುವುದರಲ್ಲಿ ಮಕ್ಕಳಿಲ್ಲದವರಿಗೆ ಸಹಾಯ ಮಾಡುವಂತೆ ತಾತ್ಪರ್ಯವಾಗುವ ಲೈಂಗಿಕ ರೋಗಗಳು ಮತ್ತು ಔಷಧಿಗಳಿಗೆ ಸಂಬಂಧಪಟ್ಟ ಜಾಹೀರಾತು ಸ್ಲೈಡುಗಳನ್ನು ಪ್ರದರ್ಶಿಸತಕ್ಕದ್ದಲ್ಲ.

5. ಲೈಸೆನ್ಸ್‌ದಾರನು ಕೇಂದ್ರ ಚಲನಚಿತ್ರ ಮಂಡಲಿ ಅಥವಾ ಕೇಂದ್ರ ಸರ್ಕಾರದ ಆದೇಶಗಳ ಮೇರೆಗೆ ಯಾವುದೇ ಚಲನಚಿತ್ರದಿಂದ ಕತ್ತರಿಸಲಾಗಿರುವಂಥ ದೃಶ್ಯ ಅಥವಾ ಛಾಯಾಚಿತ್ರಗಳನ್ನು ನಿರೂಪಿಸುವ ಅಥವಾ ತೋರಿಸುವ ಅಥವಾ ತೋರಿಸುವುದೆಂದು ತಾತ್ಪರ್ಯವಾಗುವಂಥ ಯಾವುದೇ ಛಾಯಾಚಿತ್ರ ಅಥವಾ ಭಿತ್ತಿಪತ್ರಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ.

(6) ಲೈಸೆನ್ಸ್‌ದಾರನು, ಸಾರ್ವಜನಿಕರಿಗೆ ಆವರಣವನ್ನು ತೆಗೆದಿರಿಸಿರುವಾಗಲೆಲ್ಲಾ ಪ್ರತಿಯೊಂದು ಸಾರ್ವಜನಿಕ ಪ್ರವೇಶ ದ್ವಾರದಲ್ಲಿ ಕೋಷ್ಟಕದ ನಮೂನೆಯಲ್ಲಿ ಮತ್ತು ಸ್ಪಷ್ಟವಾದ, ದೊಡ್ಡದಾದ ಅಕ್ಷರಗಳಲ್ಲಿ ಮತ್ತು ಅಂಕಿಗಳಲ್ಲಿ:–

(i) ಟ್ರೇಲರುಗಳು ಮತ್ತು ಜಾಹೀರಾತು ಫಿಲ್ಮ್‌ಗಳನ್ನು ಹೊರತುಪಡಿಸಿ ಆ ದಿವಸ ತೋರಿಸಬೇಕಾದ ಪ್ರತಿಯೊಂದು ಫಿಲ್ಮಿನ ಶೀರ್ಷಿಕೆ ;

(ii) ಅಂಥ ಪ್ರತಿಯೊಂದು ಫಿಲ್ಮು ಪ್ರಾರಂಭವಾಗುವ ಸರಿ ಸುಮಾರು ಕಾಲ ;

(iii) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಅಂಥ ಪ್ರತಿಯೊಂದು ಫಿಲ್ಮ್ 'ಎ' ಅಥವಾ 'ಯು' ಪ್ರಮಾಣ ಪತ್ರವನ್ನು ಸ್ವೀಕರಿಸಿದೆಯೇ ಹೇಗೆ ; ಮತ್ತು

(iv) 3 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊರತುಪಡಿಸಿ, 18 ವರ್ಷಗಳಿಗಿಂತ ಕಡಿಮೆ ವಯಸ್ಸಿನ ವ್ಯಕ್ತಿಗಳನ್ನು ಒಳಗೆ ಬಿಡಲಾಗುವುದೋ ಅಥವಾ ಇಲ್ಲವೋ ಎಂಬುದನ್ನು ತೋರಿಸುವ ನೋಟಿಸನ್ನು ಎದ್ದು ಕಾಣುವ ಹಾಗೆ ಪ್ರದರ್ಶಿಸತಕ್ಕದ್ದು.

(7) ಕೇಂದ್ರ ಚಲನಚಿತ್ರ ಪರಿಶೀಲನಾ ಮಂಡಲಿಯಿಂದ ಫಿಲ್ಮಿಗೆ ಸಂಬಂಧಿಸಿದಂತೆ ಸ್ವೀಕರಿಸಿದ ಯಾವುದೇ ಪ್ರಮಾಣ ಪತ್ರದ ಸ್ವರೂಪವನ್ನು ಆವರಣಗಳಲ್ಲಿ ಪ್ರದರ್ಶಿಸಿದ ಯಾವುದೇ ಜಾಹೀರಾತಿನಲ್ಲಿ 'ಯು' ಅಥವಾ 'ಎ' ಎಂಬ ಅಕ್ಷರದ ಮೂಲಕ ಸ್ಪಷ್ಟವಾಗಿ ಸೂಚಿಸತಕ್ಕದ್ದು.

(8) ಲೈಸೆನ್ಸ್ ಕೊಡುವ ಪ್ರಾಧಿಕಾರಿ ಮತ್ತು ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಅಧೀನ ಅಧಿಕಾರಿ ಮತ್ತು ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಮನೋರಂಜನೆಯ ಕಾಲದಲ್ಲಿ ವ್ಯವಸ್ಥೆಯನ್ನು ಕಾಪಾಡಲು ಪ್ರತಿನಿಯೋಜನೆಗೊಂಡ ಯಾರೇ ಪೊಲೀಸ್ ಅಧಿಕಾರಿಯು ಲೈಸೆನ್ಸಿನ ಷರತ್ತುಗಳನ್ನು ಪಾಲಿಸಲಾಗಿದೆಯೋ ಹೇಗೆ ಎಂಬುದನ್ನು ನೋಡುವುದಕ್ಕಾಗಿ ಸದರಿ ಆವರಣಗಳಿಗೆ ಎಲ್ಲ ಕಾಲಗಳಲ್ಲಿ ಮುಕ್ತ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

(9) ಚಲನಚಿತ್ರ ಪ್ರದರ್ಶನಕ್ಕೆ ಲಗತ್ತಾದ ಜಾಗದಲ್ಲಿ ಯಾವುದೇ ಬಿರುಸು ಬಾಣಗಳನ್ನು ಅಥವಾ ಯಾವುದೇ ಹೊರಗಿನ ಧ್ವನಿವರ್ಧಕಗಳನ್ನು ಉಪಯೋಗಿಸತಕ್ಕದ್ದಲ್ಲ.

(10) ಲೈಸೆನ್ಸ್ ದಾರನು, ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ, ಲೈಸೆನ್ಸ್‌ನ್ನು ಅಥವಾ ಲೈಸೆನ್ಸ್ ಪಡೆದ ಆವರಣವನ್ನು ಹಸ್ತಾಂತರಿಸತಕ್ಕದ್ದಲ್ಲ, ಒಳಬಾಡಿಗೆಗೆ ಕೊಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗಾವಣೆ ಮಾಡತಕ್ಕದ್ದಲ್ಲ ಅಥವಾ ಲೈಸೆನ್ಸ್‌ದಾರನು ಹಿಂದೆ ಹೇಳಿದಂತೆ ಅನುಮತಿಯಿಲ್ಲದೆ, ಲೈಸೆನ್ಸ್

ಚಾಲ್ತಿಯಲ್ಲಿರುವ ಅವಧಿಯಲ್ಲಿ ಲೈಸೆನ್ಸ್ ಪಡೆದ ಆವರಣದಲ್ಲಿ ಚಲನಚಿತ್ರವನ್ನು ಪ್ರದರ್ಶಿಸಲು ಯಾರೇ ತರ ವ್ಯಕ್ತಿಗಳಿಗೆ ಅವಕಾಶ ಕೊಡತಕ್ಕದ್ದಲ್ಲ.

(11) ಲೈಸೆನ್ಸ್‌ದಾರನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ಅನುಮತಿಯಿಲ್ಲದೆ ಯಾರೇ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಸಹಾಯಾರ್ಥವಾಗಿ ಲೈಸೆನ್ಸ್ ಪಡೆದ ಆವರಣದಲ್ಲಿ ಯಾವುದೇ ಫಿಲ್ಮ್‌ನ್ನು ಪ್ರದರ್ಶಿಸತಕ್ಕದ್ದಲ್ಲ.

(12) ಯಾವುದೇ ಚಲನಚಿತ್ರ ಪ್ರದರ್ಶನವನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿಗದಿಪಡಿಸಬಹುದಾದಂಥ, ರಾತ್ರಿ ಒಂದು ಗಂಟೆಗೆ ಮೀರದಂಥ ಕಾಲದ ತರುವಾಯ ಮುಂದುವರೆಸತಕ್ಕದ್ದಲ್ಲ.

(13) ಲೈಸೆನ್ಸ್‌ದಾರನು ಅನುಮೋದಿತ ರಾಷ್ಟ್ರಗೀತೆಯನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಅಗತ್ಯಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರದರ್ಶಿಸತಕ್ಕದ್ದು.

(13ಕ) ಲೈಸೆನ್ಸ್‌ದಾರನು ಯಾವ ಅವಧಿಗಾಗಿ ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆಯೋ ಆ ಅವಧಿಯ ನಾಲ್ಕರಲ್ಲಿ ಒಂದು ಭಾಗಕ್ಕಿಂತ ಕಡಿಮೆಯಿಲ್ಲದ ಅವಧಿಗಾಗಿ ಕನ್ನಡ ಫಿಲ್ಮ್‌ಗಳನ್ನು ಪ್ರದರ್ಶಿಸತಕ್ಕದ್ದು.

(14) ಪ್ರತಿಯೊಂದು ತಿಂಗಳಿನ ಮೊದಲನೇ ದಿವಸದಂದಿನ ಮತ್ತು ಶಿಬಿರದ ತರುವಾಯ ಮೊದಲು ಪ್ರತಿ ಬದಲಾವಣೆಯಲ್ಲಿನ ವಿಳಾಸವನ್ನು ವಿದ್ಯುಚ್ಛಕ್ತಿ ಪರಿಶೀಲಕ ಅಥವಾ ಆ ಬಗ್ಗೆ ಅವನು ಅಧಿಕೃತಗೊಳಿಸಿದ ಇತರ ವ್ಯಕ್ತಿಗೆ ಮತ್ತು ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ತಿಳಿಸತಕ್ಕದ್ದು.

(15) ಲೈಸೆನ್ಸ್ ಈ ಯಾವುದೇ ಷರತ್ತುಗಳ ಅಥವಾ ಹಿಂಬದಿಯಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಥವಾ ಮನೋರಂಜನೆಯನ್ನು ಪ್ರಶಾಸಿಸುವ ಅಥವಾ ನಿಯಂತ್ರಿಸುವ ಮತ್ತು ತೆರಿಗೆಗಳ ಸಂದಾಯವನ್ನು ನಿಯಮಿಸುವ, ಜಾರಿಯಲ್ಲಿರುವ ಯಾವುದೇ ಕಾನೂನಿನ ಉಲ್ಲಂಘನೆಗಾಗಿ ರದ್ದಿಯಾತಿ ಮತ್ತು ಅಮಾನತ್ತಿಗೆ ಒಳಪಟ್ಟಿರತಕ್ಕದ್ದು.

ದಿನಾಂಕ --------------ರ ------------ ದಿವಸದಂದು.

------ ಜಿಲ್ಲಾ ಮ್ಯಾಜಿಸ್ಟ್ರೇಟರು
ಲೈಸೆನ್ಸ್ ಕೊಡುವ ಪ್ರಾಧಿಕಾರಿ

**ನಮೂನೆ 'ಜ'**

**[86 (1)ನೇ ನಿಯಮವನ್ನು ನೋಡಿ]**

**ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971ರ ಮೇರೆಗೆ ಪ್ರದರ್ಶನಕ್ಕಾಗಿ ತಾತ್ಕಾಲಿಕ ಪರ್ಮಿಟ್ಟು**

(ಪೂರ್ಣ ಹೆಸರು ಮತ್ತು ವಿಳಾಸ) ---------- ಅವರು, ಅವನ ಲೈಸೆನ್ಸ್ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು ಸದರಿ ಲೈಸೆನ್ಸ್‌ನ್ನು ಅವನ ಅರ್ಜಿಯು ವಿಲೆಯಾಗುವವರೆಗೆ ನನ್ನ ಕಛೇರಿಯಲ್ಲಿ ಇಟ್ಟುಕೊಳ್ಳಲಾಗಿರುವುದರಿಂದ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ನಿಯಮಗಳು, 1971ರ 86ನೇ ನಿಯಮದ ಉಪಬಂಧಗಳಿಗೊಳಪಟ್ಟು ಲೈಸೆನ್ಸ್‌ಗಾಗಿನ ಅವನ ಅರ್ಜಿಯು ವಿಲೆಯಾಗುವವರೆಗೆ ಕರ್ನಾಟಕ ಸಿನಿಮಾ ನಿಯಂತ್ರಣ ಅಧಿನಿಯಮ, 1964ರ ಮೇರೆಗೆ -----------ನಲ್ಲಿ (ಇಲ್ಲಿ ಆವರಣದ ವಿವರಣೆಯನ್ನು ನಮೂದಿಸಿ) ಫಿಲ್ಮ್‌ಗಳನ್ನು ಪ್ರದರ್ಶಿಸಲು ತಾತ್ಕಾಲಿಕವಾಗಿ ಅನುಮತಿಯನ್ನು ಈ ಮೂಲಕ ಕೊಡಲಾಗಿದೆ.

19------------ರ ----------- ದಿನಾಂಕದಂದು.

------ ಜಿಲ್ಲಾ ಮ್ಯಾಜಿಸ್ಟ್ರೇಟರು
ಲೈಸೆನ್ಸ್ ಕೊಡುವ ಪ್ರಾಧಿಕಾರಿ

**ತಾತ್ಕಾಲಿಕ ಪರ್ಮಿಟ್ಟು**

(1) 85ನೇ ನಿಯಮದ ಮೇರೆಗೆ ಲೈಸೆನ್ಸ್‌ನ ಮರುಮಂಜೂರಾತಿಗಾಗಿ ಮಾಡಿಕೊಂಡ ಅರ್ಜಿಯ ಮೇಲೆ, ಲೈಸೆನ್ಸ್ ಕೊಡುವ ಪ್ರಾಧಿಕಾರಿಯು, ಲೈಸೆನ್ಸ್ ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ಯಾವುದೇ ಕಾರಣಕ್ಕಾಗಿ ಆ ಲೈಸೆನ್ಸ್‌ನ್ನು ಮರು ಮಂಜೂರ್ಮಾಡದಿದ್ದರೆ ಅಥವಾ ಅದನ್ನು ಮರು ಮಂಜೂರ್ಮಾಡಲು ನಿರಾಕರಿಸಿದರೆ ಅವನು 'ಜ' ನಮೂನೆಯಲ್ಲಿ ತಾತ್ಕಾಲಿಕ ಪರ್ಮಿಟ್ಟನ್ನು ಮಂಜೂರ್ಮಾಡತಕ್ಕದ್ದು :

ಪರಂತು, ವಿದ್ಯುಚ್ಛಕ್ತಿ ಪರಿಶೀಲಕನ ಪ್ರಮಾಣಪತ್ರವು ಸಿಂಧುವಾಗಿರುವುದು ಮುಂದುವರಿದಿರಬೇಕು.

(2) ಅಂಥ ತಾತ್ಕಾಲಿಕ ಪರ್ಮಿಟ್ಟು ನವೀಕರಣ ಮಾಡಬೇಕೆಂದು ಕೋರಿರುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅದು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಆ ಅರ್ಜಿಯನ್ನು ವಿಲೇ ಮಾಡುವವರೆಗೆ ಸಿಂಧುವಾಗಿರತಕ್ಕದ್ದು:

ಪರಂತು, ಆ ತಾತ್ಕಾಲಿಕ ಪರ್ಮಿಟ್ಟು ಅರ್ಜಿದಾರನು ಆ ಲೈಸೆನ್ಸಿನ ಕ್ರಮಬದ್ಧ ಮರು ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ ಅಥವಾ ಲೈಸೆನ್ಸಿನ ಮರು ಮಂಜೂರಾತಿಯನ್ನು ನಿರಾಕರಿಸಿದ ಆದೇಶವನ್ನು ಸ್ವೀಕರಿಸಿದ ಮೇಲೆ ಸಿಂಧುವಾಗಿರುವುದು ನಿಂತು ಹೋಗತಕ್ಕದ್ದು. ಮತ್ತು ಅದನ್ನು ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು:

ಮತ್ತು, ಪರಂತು, ತಾತ್ಕಾಲಿಕ ಪರ್ಮಿಟ್ಟನ್ನು ಆ ಬಗ್ಗೆ ಯಾವುದೇ ಕಾಲದಲ್ಲಿ ತಗಾದೆ ಮಾಡಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(3) ತಾತ್ಕಾಲಿಕ ಪರ್ಮಿಟ್ಟಿನ ಮಂಜೂರಾತಿಗಾಗಿ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(4) ಈ ತಾತ್ಕಾಲಿಕ ಪರ್ಮಿಟ್ಟನ್ನು, ಅದು ಸಿಂಧುತ್ವದಲ್ಲಿರುವ ಅವಧಿಯಲ್ಲಿ ಈ ನಿಯಮಗಳ ಉದ್ದೇಶಕ್ಕಾಗಿ ಲೈಸೆನ್ಸ್ ಆಗಿರುವುದಾಗಿ ಭಾವಿಸತಕ್ಕದ್ದು.

**ಗೃಹ ಸಚಿವಾಲಯ**

**ಅಧಿಸೂಚನೆ ಸಂಖ್ಯೆ ಎಚ್‌ಡಿ 324 ಸಿಎನ್‌ಎ 83**

**ಬೆಂಗಳೂರು, ದಿನಾಂಕ 21ನೇ ಜೂನ್, 1984**

ಕರ್ನಾಟಕ ವಿಡಿಯೋ ಕ್ಯಾಸೆಟ್ ರಿಕಾರ್ಡ್‌ರ ಮೂಲಕ ದೂರದರ್ಶನ ಪರದೆಯ ಮೇಲೆ ಫಿಲ್ಮುಗಳ ಪ್ರದರ್ಶನ ನಿಯಮಗಳು, 1984 ಇದರ ಕರಡನ್ನು ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ, 1964 (ಕರ್ನಾಟಕ ಅಧಿನಿಯಮ 1964ರ 23)ದ 19ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ 1984ರ ಏಪ್ರಿಲ್ 5ರಂದು ಅಥವಾ ಆ ತರುವಾಯ ಅವುಗಳಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಅಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ, 1984ನೇ ಮಾರ್ಚ್, 1ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದಲ್ಲಿ ಭಾಗ–IV2ಸಿ (i)ರಲ್ಲಿ 1984ರ ಫೆಬ್ರವರಿ 21ನೇ ದಿನಾಂಕದ ಅಧಿಸೂಚನೆ ಸಂಖ್ಯೆ ಹೆಚ್‌ಡಿ 324 ಸಿಎಸ್‌ಎ 83ರಲ್ಲಿ ಪ್ರಕಟಿಸಲಾಗುವುದರಿಂದ;

ಮತ್ತು ಸದರಿ ರಾಜಪತ್ರವನ್ನು ಸಾರ್ವಜನಿಕರಿಗೆ 1984ರ ಮಾರ್ಚ್ 1 ರಂದು ಲಭ್ಯಗೊಳಿಸಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರವು ಪರ್ಯಾಲೋಚಿಸಿರುವುದರಿಂದ ;

ಆದ್ದರಿಂದ ಈಗ, ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964ರ (ಕರ್ನಾಟಕ ಅಧಿನಿಯಮ 1964ರ 23) 19ನೇ ಪ್ರಕರಣದ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

**1. ಹೆಸರು ಮತ್ತು ಪ್ರಾರಂಭ.–** (1) ಈ ನಿಯಮಗಳನ್ನು ಕರ್ನಾಟಕ ವಿಡಿಯೋ ಕ್ಯಾಸೆಟ್ ರಿಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನ (ನಿಯಂತ್ರಣ) ನಿಯಮಗಳು, 1984 ಎಂದು ಕರೆಯತಕ್ಕದ್ದು.

(2) ಅವುಗಳು ಸರ್ಕಾರಿ ರಾಜಪತ್ರದಲ್ಲಿ ಅವು ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) 'ಅಧಿನಿಯಮ' ಎಂದರೆ, 1964ರ ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1964 ;

(ಖ) 'ಫಿಲ್ಮ್' ಎಂದರೆ, ವೀಡಿಯೋ ಕ್ಯಾಸೆಟ್ ಟೇಪ್ ಮೇಲೆ ಧ್ವನಿ ಮುದ್ರಣ ಮಾಡಿದ ಚಲನಚಿತ್ರ ;

(ಗ) 'ನಮೂನೆ' ಎಂದರೆ, ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ;

(ಘ) 'ಸ್ಥಳ' ಎಂಬುದು ಮನೆ, ಕಟ್ಟಡ, ಡೇರೆ ಮತ್ತು ನೀರಿನ ಮೂಲಕವಾಗಿಯಾಗಲಿ, ಭೂಮಿಯ ಮೂಲಕವೇ ಆಗಲಿ ಅಥವಾ ಆಕಾಶದ ಮೂಲಕವಾಗಿ ಆಗಲಿ ಯಾವುದೇ ವಿವರಣೆ ;

(ಙ) 'ವಿಡಿಯೋ ಕ್ಯಾಸೆಟ್ ರಿಕಾರ್ಡ್' ಎಂದರೆ, ವಿಡಿಯೋ ಕ್ಯಾಸೆಟ್ ಟೇಪ್ ಮೇಲೆ ಧ್ವನಿ ಮುದ್ರಣ ಮಾಡಿದ ಫಿಲ್ಮ್‌ಗಳ ಚಲನಚಿತ್ರ ಪ್ರದರ್ಶನವನ್ನು ಕೊಡುವ ಉದ್ದೇಶಕ್ಕಾಗಿ ಚಲನಚಿತ್ರ.

**3. ಲೈಸೆನ್ಸ್‌ನ ಮಂಜೂರಾತಿಗಾಗಿ ಅರ್ಜಿ.–** (1) ವಿಡಿಯೋ ಕ್ಯಾಸೆಟ್ ರಿಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್‌ನ ಮರು ಮಂಜೂರಾತಿಗಾಗಿನ ಪ್ರತಿಯೊಂದು ಅರ್ಜಿಯನ್ನು ನಮೂನೆ 1ರಲ್ಲಿ ಎಂಟು ಸೆಟ್ಟುಗಳಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮಾಡಿಕೊಳ್ಳತಕ್ಕದ್ದು :

ಪರಂತು, ಅಂಥ ಯಾವುದೇ ಲೈಸೆನ್ಸಿನ, ಮನೆಯ ಕುಟುಂಬದ ಸದಸ್ಯರಿಗೆ ಗೃಹೋಪಯೋಗಿ ಉದ್ದೇಶಗಳಿಗಾಗಿ ವೀಡಿಯೋ ಕ್ಯಾಸೆಟ್ ರಿಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮಿನ ಪ್ರದರ್ಶನಕ್ಕಾಗಿ ಅವಶ್ಯತೆ ಇರತಕ್ಕದ್ದಲ್ಲ :

ಮತ್ತೂ ಪರಂತು, ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ವೀಡಿಯೋ ಕ್ಯಾಸೆಟ್ ರಿಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್‌ನ್ನು ಹೊಂದಿರುವ ವ್ಯಕ್ತಿಯು ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ ಅಥವಾ ಅಂಥ ಲೈಸೆನ್ಸ್ ಮುಕ್ತಯವಾಗುವುದಕ್ಕೆ ಮುಂಚೆ–ಇವುಗಳಲ್ಲಿ ಯಾವುದು ಮೊದಲೋ ಆ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ನಿಯಮಗಳ ಮೇರೆಗೆ ಲೈಸೆನ್ಸಿನ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದಲ್ಲ.

(2) ಸಾರಿಗೆ ವಾಹನದಲ್ಲಿ ವೀಡಿಯೋ ಕ್ಯಾಸೆಟ್ ರಿಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಅರ್ಜಿಯನ್ನು ನಮೂನೆ IIರಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ನಾಲ್ಕು ಪ್ರತಿಗಳಲ್ಲಿ ಮಾಡಿಕೊಳ್ಳತಕ್ಕದ್ದು.

(3) (1)ನೇ ಅಥವಾ (2)ನೇ ಉಪ–ನಿಯಮದ ಮೇರೆಗಿನ ಅರ್ಜಿಯೊಂದಿಗೆ ನಿಯಮಿಸಿದ ಫೀಜನ್ನು ಸಂದಾಯ ಮಾಡಿದ್ದಕ್ಕಾಗಿ ಖಜಾನೆ ರಸೀತಿಯು ಇರತಕ್ಕದ್ದು.

(4) ಐವತ್ತು ಆಸನಗಳವರೆಗೆ ಲೈಸೆನ್ಸಿನ ಮಂಜೂರಾತಿಗಾಗಿ ಫೀಜು ಪ್ರತಿ ವರ್ಷಕ್ಕೆ ಎರಡು ನೂರು ರೂಪಾಯಿಗಳಾಗುತ್ತವೆ ಮತ್ತು ಐವತ್ತಕ್ಕಿಂತ ಹೆಚ್ಚು ಆಸನಗಳಿಗೆ ಪ್ರತಿ ವರ್ಷಕ್ಕೆ ನಾಲ್ಕು ನೂರು ರೂಪಾಯಿಗಳಾಗಿರತಕ್ಕದ್ದು.

**4. ಲೈಸೆನ್ಸ್‌ನ ಮಂಜೂರಾತಿ ಅಥವಾ ನಿರಾಕರಣೆ.–** (1) (3)ನೇ ನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು,–

(i) ಅರ್ಜಿಯು ಕ್ರಮವಾಗಿಲ್ಲದಿದ್ದರೆ ಅದನ್ನು ಮೂವತ್ತು ದಿವಸದ ಅವಧಿಯೊಳಗೆ ಪುನಃ ಹಾಜರುಪಡಿಸುವುದಕ್ಕಾಗಿ ವಾಪಸ್ಸು ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅಂಥ ಅರ್ಜಿಯನ್ನು ತಿರಸ್ಕರಿಸಿರುವುದಾಗಿ ಭಾವಿಸತಕ್ಕದ್ದು.

(ii) ಅರ್ಜಿಯು ಕ್ರಮವಾಗಿದ್ದರೆ, ಅಂಥ ಅರ್ಜಿಯ ಪ್ರತಿಗಳನ್ನು ಆ ಸ್ಥಳವು ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಕೆಳಕಂಡ ಪ್ರಾಧಿಕಾರಿಗಳಿಗೆ ಅವರ ವರದಿಗಳು ಅಥವಾ ಪ್ರಮಾಣ ಪತ್ರಗಳಿಗಾಗಿ ಕಳುಹಿಸತಕ್ಕದ್ದು, ಎಂದರೆ:–

(ಕ) ಪೊಲೀಸು ಸೂಪರಿಂಟೆಂಡೆಂಟ್ ಅಥವಾ ಪೊಲೀಸ್ ಕಮೀಷನರ್ ;

(ಖ) ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ;

(ಗ) ಆರೋಗ್ಯಾಧಿಕಾರಿಗಳು ;

(ಘ) ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರೇಟ್‌ನ ಅಧಿಕಾರಿ;

(ಙ) ಅಗ್ನಿಶಾಮಕ ಅಧಿಕಾರಿ.

(2) ಮೇಲೆ ನಿರ್ದಿಷ್ಟಪಡಿಸಿದ ಅಧಿಕಾರಿಗಳು (1)ನೇ ಉಪನಿಯಮದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿವಸಗಳೊಳಗೆ ವೀಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನದ ಬಗ್ಗೆ ಸಂದರ್ಭಾನುಸಾರ ವರದಿ ಅಥವಾ ಪ್ರಮಾಣಪತ್ರವನ್ನು ಕಳುಹಿಸುವುದಕ್ಕೆ ಮುಂಚೆ ಈ ಕೆಳಕಂಡವುಗಳ ಬಗ್ಗೆ ಅವರು ಮನದಟ್ಟು ಮಾಡಿಕೊಳ್ಳತಕ್ಕದ್ದು,–

(i) ಲೈಸೆನ್ಸ್‌ನ್ನು ಕೋರಿರುವ ಸ್ಥಳದಲ್ಲಿ ಅವಶ್ಯಕತೆ ಇದೆ ;

(ii) ಫಿಲ್ಮ್‌ಗಳ ಪ್ರದರ್ಶನವು ಸಾರ್ವಜನಿಕ ಸುರಕ್ಷತೆಗೆ ಅಪಾಯಕಾರಿಯಾಗಿರುವುದಿಲ್ಲ ;

(iii) ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಕಟ್ಟಡ ಮತ್ತು ವಿದ್ಯುಚ್ಛಕ್ತಿ ಸ್ಥಾಪನೆಗಳು ಸಾಕಷ್ಟು ಮತ್ತು ದೃಢವಾಗಿದೆ ;

(iv) ನೈರ್ಮಲ್ಯ, ವಾಯುಸಂಚಾರ ಮತ್ತು ದೀಪದ ಬಗ್ಗೆ ಸಾಕಷ್ಟು ವ್ಯವಸ್ಥೆಯನ್ನು ಮಾಡಲಾಗಿದೆ ;

(v) ಅಗ್ನಿ ಶಾಮಕ ಸಾಧನ ಸಾಮಗ್ರಿಗಳನ್ನು ಸ್ಥಾಪಿಸಲು ಅವಶ್ಯ ಮುನ್ನೆಚ್ಚರಿಕೆಗಳನ್ನು ಅನುಸರಿಸಲಾಗಿದೆ ಮತ್ತು ಅವುಗಳಿಗೆ ವ್ಯವಸ್ಥೆ ಮಾಡಲಾಗಿದೆ ;

(vi) ಚಲನಚಿತ್ರ ಫಿಲ್ಮ್‌ಗಳ ಪ್ರದರ್ಶನದ ಬಗ್ಗೆ ಜಾರಿಯಲ್ಲಿರುವ ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಪಾಲಿಸಲಾಗಿದೆ ; ಮತ್ತು

(vii) ಲೈಸೆನ್ಸಿನ ಮಂಜೂರಾತಿಗಾಗಿ ಯಾವುದೇ ಆಕ್ಷೇಪಣೆ ಇರುವುದಿಲ್ಲ.

(3) ಸಾರಿಗೆ ವಾಹನದಲ್ಲಿ ದೂರದರ್ಶನದ ಪರದೆಯ ಮೇಲೆ ಅಥವಾ ವೀಡಿಯೋ ಕ್ಯಾಸೆಟ್ ರಿಕಾರ್ಡರ್ ಮೂಲಕ ಫಿಲ್ಮ್‌ಗಳ ಪ್ರದರ್ಶನದ ಸಂದಭದಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಕರ್ನಾಟಕ ಮೋಟಾರು ವಾಹನ (ತೆರಿಗೆ ವಿಧಿಸುವ) ನಿಯಮಗಳು, 1957 ಇದರ ಮೇರೆಗೆ ಕೊಟ್ಟ ತೆರಿಗೆ ತೀರಿಕೆ ಪ್ರಮಾಣಪತ್ರ ಮತ್ತು ಮೋಟಾರು ವಾಹನಗಳ ಅಧಿನಿಯಮ, 1939ರ ಮೇರೆಗೆ ಕೊಟ್ಟ ಅರ್ಹತಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(4) (2)ನೇ ಮತ್ತು (3)ನೇ ಉಪನಿಯಮಗಳ ಮೇರೆಗೆ ಕೊಟ್ಟ ಪ್ರಮಾಣಪತ್ರವು ಅದನ್ನು ಕೊಡಲಾದ ದಿನಾಂಕದಿಂದ ಒಂದು ವರ್ಷದ ಅವಧಿಗಾಗಿ ಸಿಂಧುವಾಗಿರತಕ್ಕದ್ದು.

(5) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್‌ನ್ನು ಮಂಜೂರು ಮಾಡಬಹುದೋ ಅಥವಾ ನಿರಾಕರಿಸುವುದೋ ಹೇಗೆ ಎಂಬುದನ್ನು ತೀರ್ಮಾನಿಸುವಲ್ಲಿ ಈ ಕೆಳಕಂಡ ವಿಷಯಗಳನ್ನು ಗಮನಿಸತಕ್ಕದ್ದು, ಎಂದರೆ:–

(i) ಸಾಮಾನ್ಯವಾಗಿ ಸಾರ್ವಜನಿಕರ ಹಿತಾಸಕ್ತಿ ;

(ii) ಅರ್ಜಿದಾರನ ಸ್ಥಾನಮಾನ ಪೂರ್ವ ವೃತ್ತಾಂತ ಮತ್ತು ಹಿಂದಿನ ಅನುಭವ.

**ವಿವರಣೆ**.– ಈ ಖಂಡದ ಉದ್ದೇಶಕ್ಕಾಗಿ **"ಪೂರ್ವ ವೃತ್ತಾಂತ"** ಎಂದರೆ ಸರ್ಕಾರಕ್ಕೆ ಅರ್ಜಿದಾರನು ಸಂದಾಯ ಮಾಡಬೇಕಾದ ಯಾವುದೇ ತೆರಿಗೆ ಅಥವಾ ಬಾಕಿಗಳ ಸಂದಾಯಕ್ಕೆ ಸಂಬಂಧಪಟ್ಟ ಅವನ ವರ್ತನೆ.

(6) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಈ ನಿಯಮಗಳ ಮೇರೆಗೆ ಲೈಸೆನ್ಸ್‌ನ್ನು,–

(i) ನಿಯಮಗಳನ್ನು ಬಹುಮಟ್ಟಿಗೆ ಪಾಲಿಸಲಾಗಿದೆ ; ಮತ್ತು

(ii) ಫಿಲ್ಮಿನ ಪ್ರದರ್ಶನಕ್ಕಾಗಿ ಲೈಸೆನ್ಸಿನ ಮಂಜೂರಾತಿಗಾಗಿನ ಅರ್ಜಿಯ ಸಂದರ್ಭದಲ್ಲಿ ಲೈಸೆನ್ಸ್‌ನ್ನು ಮಂಜೂರು ಮಾಡಬೇಕಾದಂಥ ಸ್ಥಳಕ್ಕೆ ಸಂಬಂಧಿಸಿದಂತೆ ಆ ಸ್ಥಳದಲ್ಲಿ ಅಲ್ಲಿನ ಪ್ರದರ್ಶನಗಳಿಗೆ ಹಾಜರಾಗುವ ವ್ಯಕ್ತಿಗಳ ಸಂರಕ್ಷತೆ, ಅನುಕೂಲತೆ ಮತ್ತು ನೆಮ್ಮದಿಯನ್ನು ಒದಗಿಸುವ ಬಗ್ಗೆ ಸಾಕಷ್ಟು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ ಎಂದು ಅವನು ಮನದಟ್ಟು ಮಾಡಿಕೊಂಡ ಹೊರತು,

– ಮಂಜೂರು ಮಾಡತಕ್ಕದ್ದಲ್ಲ.

(7) ಅಧಿನಿಯಮದ ಉಪಬಂಧಗಳು ಮತ್ತು ಈ ನಿಯಮಗಳಿಗೆ ಒಳಪಟ್ಟು (2) ಮತ್ತು (3)ನೇ ಉಪನಿಯಮಗಳ ಮೇರೆಗೆ ಪ್ರಮಾಣಪತ್ರವನ್ನು ಸ್ವೀಕರಿಸಿದ ಹದಿನೈದು ದಿವಸಗಳ ಒಳಗೆ ಲೈಸೆನ್ಸ್ ಕೊಟ್ಟ ಪ್ರಾಧಿಕಾರಿಯು ಅರ್ಜಿದಾರನಿಗೆ ನಮೂನೆ IIರಲ್ಲಿ ಅವನು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಪರಿಬಂಧಗಳಿಗೆ ಒಳಪಟ್ಟು ಲೈಸೆನ್ಸ್‌ನ್ನು ಮಂಜೂರು ಮಾಡಬಹುದು. ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಯಾವುದೇ ಲೈಸೆನ್ಸ್‌ನ್ನು ಮಂಜೂರ್ಮಾಡಲು ನಿರಾಕರಿಸಿದಾಗ ಅಂಥ ನಿರಾಕರಣೆಗಾಗಿನ ಕಾರಣಗಳನ್ನು ಬರಹದಲ್ಲಿ ಕೊಟ್ಟು ಅರ್ಜಿದಾರನಿಗೆ ತಿಳಿಸಿದ ಆದೇಶದ ಮೂಲಕ ಹಾಗೆ ಮಾಡತಕ್ಕದ್ದು.

(8) ಈ ನಿಯಮಗಳ ಮೇರೆಗೆ ಮಂಜೂರು ಮಾಡಿದ ಪ್ರತಿಯೊಂದು ಲೈಸೆನ್ಸ್, ಅದನ್ನು ಯಾರಿಗೆ ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಗೆ ವೈಯಕ್ತಿಕವಾಗಿರತಕ್ಕದ್ದು ಮತ್ತು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಬರಹದಲ್ಲಿ ಅನುಮೋದಿಸಿದ ಹೊರತು ಅದರ ಯಾವುದೇ ವರ್ಗಾವಣೆ ಅಥವಾ ಹಸ್ತಾಂತರವು ಅದು ನಿರುಪಾಧಿಕವಾದ ರೂಪದಲ್ಲಿಯಾಗಲಿ ಅಥವಾ ಭದ್ರತೆಯ ರೂಪದಲ್ಲಿಯಾಗಿರಲಿ ಅಥವಾ ಅನ್ಯಥಾವಾಗಿಯೇ ಇರಲಿ ಸಿಂಧುವಾಗಿರತಕ್ಕದ್ದಲ್ಲ.

(9) ಈ ನಿಯಮಗಳ ಮೇರೆಗೆ ಮಂಜೂರು ಮಾಡಿದ ಲೈಸೆನ್ಸ್, ಲೈಸೆನ್ಸ್‌ನ್ನು ಕೊಟ್ಟ ದಿನಾಂಕದಿಂದ ಒಂದು ವರ್ಷದ ಅವಧಿಗಾಗಿ ಸಿಂಧುವಾಗಿರತಕ್ಕದ್ದು.

5. ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಕಟ್ಟಡಗಳ ನಿರ್ಮಾಣ ಮತ್ತು ಪುನರ್ ನಿರ್ಮಾಣ, ಯಂತ್ರ ಸಾಮಗ್ರಿಯ ಸ್ಥಾಪನೆಗಳು ಇತ್ಯಾದಿಗಳಿಗೆ ಅನುಮತಿಸತಕ್ಕದ್ದು:–

(1) (i) ವಿಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಯಾವುದೇ ಸ್ಥಳವನ್ನು ಉಪಯೋಗಿಸಲು ; ಅಥವಾ

(ii) ವೀಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಅದರ ಮೇಲೆ ಕಟ್ಟಡವನ್ನು ಕಟ್ಟುವುದಕ್ಕಾಗಿ ಯಾವುದೇ ನಿವೇಶನವನ್ನು ಉಪಯೋಗಿಸಲು ; ಅಥವಾ

(iii) ಕೊಡಲು ಉದ್ದೇಶಿಸಿದಂಥ ಫಿಲ್ಮ್‌ಗಳ ಅಂಥ ಪ್ರದರ್ಶನಕ್ಕಾಗಿ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು,

–ಉದ್ದೇಶಿಸಿರುವ ಯಾರೇ ವ್ಯಕ್ತಿಯು ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ವಿವರಗಳೊಂದಿಗೆ ಅದರ ಅನುಮತಿಗಾಗಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಳ್ಳತಕ್ಕದ್ದು.

(2) ಲೈಸೆನ್ಸ್ ಕೊಟ್ಟ ಪ್ರಾಧಿಕಾರಿಯು ಆ ತರುವಾಯ 4ನೇ ನಿಯಮದ (1)ನೇ ಉಪ ನಿಯಮದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಗಳೊಂದಿಗೆ ಸಮಾಲೋಚಿಸಿದ ತರುವಾಯ ಅನುಮತಿಯನ್ನು ಕೊಡಬಹುದು ಅಥವಾ ನಿರಾಕರಿಸಬಹುದು. ವೀಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನಕ್ಕಾಗಿನ ಲೈಸೆನ್ಸ್‌ಗಳಿಗೆ ಸಂಬಂಧಪಟ್ಟ ಉಪಬಂಧಗಳು ಆದಷ್ಟುಮಟ್ಟಿಗೆ ಈ ನಿಯಮದ ಮೇರೆಗಿನ ಅನುಮತಿಗೆ ಅನ್ವಯವಾಗತಕ್ಕದ್ದು.

**6. ಲೈಸೆನ್ಸಿನ ಮರುಮಂಜೂರಾತಿಗಾಗಿ ಅರ್ಜಿಗಳು.–** (1) ಲೈಸೆನ್ಸ್‌ನ ಮರು ಮಂಜೂರಾತಿಗಾಗಿ ಅರ್ಜಿಯನ್ನು ನಮೂನೆ 1ರಲ್ಲಿ ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮೊದಲು ಮಂಜೂರು ಮಾಡಿದ ಲೈಸೆನ್ಸಿನ ಮುಕ್ತಾಯಕ್ಕೆ ಮೂವತ್ತು ದಿವಸಗಳ ಮುಂಚೆ ಮಾಡಿಕೊಳ್ಳತಕ್ಕದ್ದು:

ಪರಂತು, ಲೈಸೆನ್ಸ್ ಕೊಡುವ ಪ್ರಾಧಿಕಾರಿಗೆ ಮೇಲೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂಬಂಧಪಟ್ಟ ಕಾರಣಗಳಿಗಾಗಿ ಮಾಡಿಕೊಳ್ಳಲಾಗಲಿಲ್ಲವೆಂದು ಮನದಟ್ಟಾದರೆ, ಅವನು ಅಂಥ ಅರ್ಜಿಯನ್ನು ಆ ದಿನಾಂಕದ ತರುವಾಯ ಅದರ ಹದಿನೈದು ದಿವಸಗಳಿಗೆ ಮೀರದಂತೆ ಸ್ವೀಕರಿಸಬಹುದು.

(2) ಲೈಸೆನ್ಸ್‌ನ ಮರುಮಂಜೂರಾತಿಗಾಗಿನ ಅರ್ಜಿಯೊಂದಿಗೆ 3ನೇ ನಿಯಮದ (4)ನೇ ಉಪನಿಯಮದ ಮೇರೆಗೆ ನಿಯಮಿಸಿದ ಫೀಜನ್ನು ಸಂದಾಯ ಮಾಡಿರುವುದಕ್ಕಾಗಿ ಖಜಾನೆ ಚಲನ್ ಮತ್ತು ಮೊದಲು ಮಂಜೂರು ಮಾಡಿದ ಲೈಸೆನ್ಸ್ ಇರತಕ್ಕದ್ದು.

(3) ಲೈಸೆನ್ಸ್‌ನ ಮರುಮಂಜೂರಾತಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ಈ ಅಧಿನಿಯಮದ ಉಪಬಂಧಗಳು ಮತ್ತು ಈ ನಿಯಮಗಳಿಗೆ ಒಳಪಟ್ಟು, ಲೈಸೆನ್ಸ್‌ನ್ನು ಮರುಮಂಜೂರು ಮಾಡಬಹುದು.

**7. ಲೈಸೆನ್ಸಿನ ದ್ವಿಪ್ರತಿಗಾಗಿ ಫೀಜು.–** ಲೈಸೆನ್ಸಿನ ದ್ವಿಪ್ರತಿಯ ಮಂಜೂರಾತಿಗಾಗಿ ಫೀಜು ಇಪ್ಪತ್ತೈದು ರೂಪಾಯಿಗಳಾಗಿರತಕ್ಕದ್ದು.

**8. ಮರುಪಾವತಿ.–** ಲೈಸೆನ್ಸ್‌ನ್ನು ಮಂಜೂರು ಮಾಡಲು ನಿರಾಕರಿಸಿದ ಸಂದರ್ಭದಲ್ಲಿ, ಅರ್ಜಿದಾರನು ಲೈಸೆನ್ಸ್‌ನ್ನು ಮಂಜೂರು ಮಾಡುವುದಕ್ಕಾಗಿನ ಅವನ ಅರ್ಜಿಯನ್ನು ತಿರಸ್ಕರಿಸುವ ಆದೇಶಗಳನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಅಂಥ ಮರುಪಾವತಿಗಾಗಿ ಅರ್ಜಿಯನ್ನು ಮಾಡಿಕೊಂಡರೆ ಸಂದಾಯ ಮಾಡಿದ ಲೈಸೆನ್ಸ್ ಫೀಜಿನ ಒಟ್ಟು ಮೊಬಲಗಿನ ಅರ್ಧದ ದರದಲ್ಲಿ ಅರ್ಜಿದಾರನಿಗೆ ಮರುಪಾವತಿ ಮಾಡತಕ್ಕದ್ದು. ಅಪೀಲನ್ನು ಮಾಡಲಾರೆ ಆ ಅಪೀಲಿನ ವಿಲೆಯ ತರುವಾಯ ಮರುಪಾವತಿಯನ್ನು ಮಾಡತಕ್ಕದ್ದು.

**9. ಲೈಸೆನ್ಸ್‌ದಾರನು ಪ್ರಮಾಣೀಕೃತ ಫಿಲ್ಮ್‌ಗಳನ್ನು ಮಾತ್ರ ಪ್ರದರ್ಶಿಸತಕ್ಕದ್ದು.–** ವಿಡಿಯೋ ಕ್ಯಾಸೆಟ್ ರೆಕಾರ್ಡ್‌ರ್ ಮೂಲಕ ದೂರದರ್ಶನದ ಪರದೆಯ ಮೇಲೆ ಫಿಲ್ಮ್‌ಗಳ ಪ್ರದರ್ಶನವನ್ನು ಕೊಡಲು ಈ ನಿಯಮಗಳ ಮೇರೆಗೆ ಲೈಸೆನ್ಸ್ ಪಡೆದ ಯಾರೇ ವ್ಯಕ್ತಿಯು ಚಲನಚಿತ್ರ ಅಧಿನಿಯಮ, 1952 (ಕೇಂದ್ರ ಅಧಿನಿಯಮ 1952ರ, xxxvii)ರ 3ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರಿಯು ಸಾರ್ವಜನಿಕ ಪ್ರದರ್ಶನಕ್ಕಾಗಿ ಯೋಗ್ಯವಾಗಿದೆಯೆಂದು ಪ್ರಮಾಣೀಕರಿಸಲಾದಂಥ ಮತ್ತು ಪ್ರದರ್ಶನ ಮಾಡಿದಾಗ ಆ ಪ್ರಾಧಿಕಾರಿಯು ನಿಯಮಿಸಿದ ಗುರುತನ್ನು ಪ್ರದರ್ಶಿಸುವಂಥ ಮತ್ತು ಅಂಥ ಗುರುತನ್ನು ಅದಕ್ಕೆ ಹಾಕಿದ ಮೇಲೆ

ಯಾವುದೇ ರೀತಿಯಲ್ಲಿ ಅದನ್ನು ಬದಲಾಯಿಸಿಲ್ಲದ ಅಥವಾ ಅಕ್ರಮವಾಗಿ ತಿದ್ದಲಾಗಿಲ್ಲದಂಥ ಫಿಲ್ಮನ್ನು ಹೊರತುಪಡಿಸಿ ಯಾವುದೇ ಇತರ ಫಿಲ್ಮನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

**10. ಕುಳಿತುಕೊಳ್ಳುವ ಸ್ಥಳಾವಕಾಶದ ಬಗ್ಗೆ ಷರತ್ತುಗಳು.–** (1) ಫಿಲ್ಮ್‌ಗಳನ್ನು ಪ್ರದರ್ಶಿಸುವುದಕ್ಕಾಗಿ ಯಾವುದೇ ಆವರಣವನ್ನು ಸಭಾಂಗಣದಲ್ಲಿ ಪ್ರತಿ ಒಂಬತ್ತು ಚದರ ಮೀಟರ್‌ಗಳಿಗೆ ಇಪ್ಪತ್ತು ಜನರಿಗಿಂತ ಹೆಚ್ಚಿಗೆ ಸ್ಥಳಾವಕಾಶ ಕೊಡಲು ಲೈಸೆನ್ಸ್ ಕೊಡತಕ್ಕದ್ದಲ್ಲ ಮತ್ತು ಸಭಾಂಗಣದ ಪ್ರತಿಯೊಂದು ಭಾಗಕ್ಕಾಗಿ ಹಾಗೆ ನಿಗದಿಪಡಿಸಿದ ಸಂಖ್ಯೆಯನ್ನು ಲೈಸೆನ್ಸ್‌ನಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಕುಳಿತುಕೊಳ್ಳುವ ಸ್ಥಳಾವಕಾಶಕ್ಕಾಗಿ ಲಭ್ಯವಿರುವ ಪ್ರದೇಶವನ್ನು ಲೆಕ್ಕ ಹಾಕುವುದಕ್ಕೆ ಮುಂಚೆ ಪ್ರವೇಶ ದ್ವಾರ, ದಾರಿ, ನಡವೆ, ನಡುದಾರಿ ಮತ್ತು ರಂಗಸ್ಥಳ ಇವುಗಳನ್ನು ಕಳೆಯತಕ್ಕದ್ದು.

(3) ದೂರದರ್ಶನದ ಪರದೆ ಮತ್ತು ಆಸನಗಳ ಮೊದಲ ಸಾಲುಗಳ ನಡುವಣ ದೂರ ಹತ್ತು ಅಡಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(4) ಕುಳಿತುಕೊಳ್ಳುವ ಸ್ಥಳಾವಕಾಶದ ಪ್ರತಿ ಹತ್ತು ಸಾಲುಗಳಿಗಾಗಿ ಆಗಲದಲ್ಲಿ 0.90 ಮೀಟರುಗಳ ದಾರಿ ಇರತಕ್ಕದ್ದು.

(5) ನಡುದಾರಿಗಳು ಅಗಲದಲ್ಲಿ 0.90 ಮೀಟರ್‌ಗಿಂತ ಕಡಿಮೆಯಿಲ್ಲದವುಗಳು ಆಗಿರತಕ್ಕದ್ದು ಮತ್ತು ಅವುಗಳನ್ನು ನಡುದಾರಿಯಿಂದ ಯಾವುವೇ ಆಸನಗಳು ಹತ್ತು ಆಚೆ ಇರದ ಹಾಗೆ ವ್ಯವಸ್ಥೆ ಮಾಡತಕ್ಕದ್ದು.

(6) ಕುರ್ಚಿಗಳನ್ನು ಸಂಪೂರ್ಣ ಉದ್ದಕ್ಕೂ ಒಟ್ಟಿಗೆ ಪಟ್ಟಿ ಹೊಡೆದಿರತಕ್ಕದ್ದು.

(7) ಒಂದು ಆಸನದ ಹಿಂಭಾಗ ಮತ್ತು ನಿಕಟ ಹಿಂಬದಿಯಲ್ಲಿನ ಆಸನದ ಮುಂಭಾಗ ಇವುಗಳ ನಡುವಣ ಮಧ್ಯೆ ಬರುವ ಜಾಗವು ಲಂಬದ ನಡುವೆ ಅಳತೆ ಮಾಡಿದಾಗ ಕನಿಷ್ಠ ಪಕ್ಷ 0.35 ಮೀಟರು ಇರತಕ್ಕದ್ದು.

(8) ಹೊರಗಡೆ ತೆರೆಯುವ ಬಾಗಿಲುಗಳನ್ನು ಜೋಡಿಸಿದ ಎರಡು ಬಾಗಿಲುಗಳು ಇರತಕ್ಕದ್ದು.

(9) ಒಳ್ಳೆಯ ವಾಯುಸಂಚಾರಕವನ್ನು ಸುನಿಶ್ಚಿತಗೊಳಿಸಲು ಪ್ರತಿ ಹತ್ತು ವ್ಯಕ್ತಿಗಳಿಗಾಗಿ ಒಂದೂವರೆ ಚದರ ಮೀಟರುಗಳ ಕಂಡಿ ಇರತಕ್ಕದ್ದು.

(10) ಕಟ್ಟಡದ ಯಾವುದೇ ಎರಡು ಪಕ್ಕಗಳಲ್ಲಿ ಅಗಲದಲ್ಲಿ ಹತ್ತು ಅಡಿಗಳಿಗಿಂತ ಕಡಿಮೆ ಇಲ್ಲದ ಖುಲ್ಲಾ ಜಾಗ ಮತ್ತು ವಾಹನಗಳನ್ನು ನಿಲ್ಲಿಸುವುದಕ್ಕಾಗಿ ಮೂರನೇ ಕಡೆಯಲ್ಲಿ ಇಪ್ಪತ್ತು ಅಡಿಗಳ ಖುಲ್ಲಾ ಜಾಗ ಇರತಕ್ಕದ್ದು.

(11) ಸಾಗಿಸಲು ಸಾಧ್ಯವಾದ ಸಿಓ2 ಅಥವಾ ಸಿಟಿಓದ ಅಗ್ನಿನಂದಿಕೆ ಅಥವಾ ಒಂದು ಕಿ.ಗ್ರಾಂ ಸಾಮರ್ಥ್ಯವುಳ್ಳ ಡಿಪಿಸಿ ಮಾದರಿಯ ಅಗ್ನಿನಂದಿಕೆ ಮತ್ತು ಒಂಭತ್ತು ಲೀಟರುಗಳ ಸಾಮರ್ಥ್ಯವುಳ್ಳ ಮರಳಿನಿಂದ ಭರ್ತಿ ಮಾಡಿದ ಒಂದು ಬಕೆಟನ್ನು ಒದಗಿಸತಕ್ಕದ್ದು.

(12) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಮಾಣಗಳಲ್ಲಿ ಕುಡಿಯುವ ನೀರನ್ನು ಒದಗಿಸತಕ್ಕದ್ದು.

(13) ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಉಪಯೋಗಕ್ಕಾಗಿ ಪ್ರತಿ ಐವತ್ತು ವ್ಯಕ್ತಿಗಳಿಗಾಗಿ ಮತ್ತು ಅದಕ್ಕಿಂತ ಕಡಿಮೆವರೆಗೆ ಒಂದು ಶೌಚಗೃಹ ಮತ್ತು ಒಂದು ಮೂತ್ರಿಯನ್ನು ಒದಗಿಸತಕ್ಕದ್ದು.

**11. ವಿದ್ಯುಚ್ಛಕ್ತಿ ಸ್ಥಾಪನೆಗಳು.–** (1) ಉಪಯೋಗಿಸಿದ ಕೇಬಲ್ಲುಗಳು ಮತ್ತು ತಂತಿಗಳು ಐಎಸ್‌ಐ ದರ್ಜೆಯದಾಗಿರತಕ್ಕದ್ದು ಮತ್ತು ತಂತಿ ಜೋಡಣೆಯು ನಳಿಕೆ ಪೈಪುಗಳ ಮೂಲಕ ಮಾತ್ರ ಹಾದು ಹೋಗಿರತಕ್ಕದ್ದು.

(2) ಸಭಾಂಗಣಕ್ಕೆ ತೆಗೆದುಕೊಂಡ ವಿದ್ಯುಚ್ಛಕ್ತಿ ಸರಬರಾಜಿಗಾಗಿ ಸೂಕ್ತವಾಗಿ ಸಂಪರ್ಕ ಹೊಂದಿದ ಸ್ವಿಚ್ಚಿನ ಮೂಲಕ ನಿಯಂತ್ರಿಸಿದ ಪ್ರತ್ಯೇಕ ಪರಿಪಥ ಇರತಕ್ಕದ್ದು.

(3) ಭೂಮಿಗೆ ಪರಿಣಾಮಕಾರಿಯಾಗಿ ಸಂಪರ್ಕಿಸಿದ ಮೂರನೇ ಪಿನ್ನಿನೊಂದಿಗೆ ಮೂರು ಪಿನ್ ಪ್ಲಗ್‌ಗಳನ್ನು ಉಪಯೋಗಿಸತಕ್ಕದ್ದು.

(4) ದೀಪಗಳು, ಫ್ಯಾನುಗಳು ಮತ್ತು ಇತರ ಸಾಧನ ಸಾಮಗ್ರಿಗಳಿಗಾಗಿ ಪ್ರತ್ಯೇಕ ಪರಿಪಥಗಳನ್ನು ಒದಗಿಸತಕ್ಕದ್ದು.

(5) 230+6% ವೋಲ್ಟೇಜನ್ನು ಉತ್ಪಾದಿಸುವಂಥ ಒಂದು ಸ್ವಚಾಲಿತ ವೋಲ್ಟೇಜ್ ನಿಯಂತ್ರಕ ಅಥವಾ ಸ್ಥಿರಕಾರಿಯನ್ನು ಸ್ಥಾಪಿಸತಕ್ಕದ್ದು.

(6) ಫಿಲ್ಮುಗಳ ಪ್ರದರ್ಶನಾದ್ಯಂತ ಸುಮಾರು 25 ವ್ಯಾಟ್‌ಗಳಿಂದ 40 ವ್ಯಾಟ್‌ಗಳವರೆಗಿನ ಬಲ್ಬಿನ ಮಂದ ದೀಪವನ್ನು ಉರಿಸುತ್ತಿರಬೇಕು. ಬಲ್ಬನ್ನು ಸಾರ್ವಜನಿಕರ ವೀಕ್ಷಣದ ರೇಖೆಗೆ ಸಮಕೋನದಲ್ಲಿ ಹಾಕಿರತಕ್ಕದ್ದು.

(7) ಲೈಸೆನ್ಸ್ ಕೊಡುವ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಸಂಖ್ಯೆಯಲ್ಲಿ ಎಕ್ಸ್ಟ್ರಾಕ್ಟರ್‌ಗಳು, ಎಗ್ಸಾಸ್ಟ್ ಫ್ಯಾನ್‌ಗಳು ಅಥವಾ ಸೀಲಿಂಗ್ ಫ್ಯಾನ್‌ಗಳನ್ನು ಒದಗಿಸಬಹುದು.

**12. ಅಪೀಲು.–** (1) ಈ ನಿಯಮಗಳ ಮೇರೆಗೆ ಲೈಸೆನ್ಸ್ ಕೊಡುವ ಪ್ರಾಧಿಕಾರಿಯ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು ಆ ವಿಭಾಗದ ವಿಭಾಗೀಯ ಕಮೀಷನರನಿಗೆ ಅಪೀಲು ಮಾಡಿಕೊಳ್ಳಬಹುದು.

(2) ಅಪೀಲಿನ ವಿಷಯವಾಗಿರುವಂಥ ಆದೇಶಕ್ಕೆ ಆಕ್ಷೇಪಣೆಗಳ ಆಧಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ವಿವರಣಾಪತ್ರದ ರೂಪದಲ್ಲಿ ದ್ವಿಪ್ರತಿಯಲ್ಲಿ ಅಪೀಲನ್ನು ಸಲ್ಲಿಸತಕ್ಕದ್ದು ಮತ್ತು ಅದರೊಂದಿಗೆ ಯಾವುದರ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶದ ಮೂಲ ಅಥವಾ ಪ್ರಮಾಣೀಕೃತ ಪ್ರತಿಯು ಇರತಕ್ಕದ್ದು.

(3) ಅಪೀಲಿನ ವಿವರಣಾಪತ್ರಕ್ಕೆ ಅಪೀಲುದಾರನ ಅಥವಾ ಅವನ ಅಧಿಕೃತ ಏಜೆಂಟನು ರುಜು ಮಾಡತಕ್ಕದ್ದು ಮತ್ತು ಅದನ್ನು ಅಪೀಲು ಪ್ರಾಧಿಕಾರಿಗೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಯಾವುದೇ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಯಾವುದೇ ಕಾಲದಲ್ಲಿ ಸಲ್ಲಿಸಬಹುದು ಅಥವಾ ರಿಜಿಸ್ಟರ್ ಅಂಚೆ ಮೂಲಕ ಕಳುಹಿಸತಕ್ಕದ್ದು. ಅಪೀಲುಗಳನ್ನು ಸಲ್ಲಿಸಲು ಏಜೆಂಟನ ಅಧಿಕಾರ ಪತ್ರವು ಬರಹದಲ್ಲಿ ಇರತಕ್ಕದ್ದು ಮತ್ತು ಅದು ಏಜೆಂಟನ್ನು ಮುಖ್ತ್ಯಾರನಾಮೆಯನ್ನು ಧಾರಣ ಮಾಡಿದ್ದ ಹೊರತು, ಅಪೀಲಿನ ವಿವರಣಾ ಪತ್ರದೊಂದಿಗೆ ಇರತಕ್ಕದ್ದು.

(4) ಅಪೀಲು ಪ್ರಾಧಿಕಾರಿಯು ಅಪೀಲು ಸುನಾವಣೆಗಾಗಿ ಒಂದು ದಿವಸವನ್ನು ನಿಗದಿಪಡಿಸತಕ್ಕದ್ದು. ಅಪೀಲು ಸುನಾವಣೆಗಾಗಿ ನಿದಗಿಪಡಿಸಿದ ದಿನಾಂಕದಂದು ಅಥವಾ ಅಪೀಲನ್ನು ಮುಂದೂಡಬಹುದಾದಂಥ ಮುಂದಿನ ದಿನಾಂಕದಂದು ಅಪೀಲು ಪ್ರಾಧಿಕಾರಿಯು ಪಕ್ಷಕಾರನು ಅಥವಾ ಅವರ ಏಜೆಂಟರನ್ನು ಚುನಾವಣೆ ಮಾಡಿದ ತರುವಾಯ ಅದು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಆ ಅಪೀಲಿನಲ್ಲಿ ಮಾಡತಕ್ಕದ್ದು.

(5) ಅಪೀಲು ಪ್ರಾಧಿಕಾರಿಗೆ ಸಲ್ಲಿಸಿದ ಪ್ರತಿಯೊಂದು ಅಪೀಲು ವಿವರಣಾಪತ್ರದ ಮೇಲೆ 50 ರೂಪಾಯಿಗಳ ಫೀಜನ್ನು ಸಂದಾಯ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಚನ್ನೇಗೌಡ,**
(ಪ್ರಭಾರಿ) ಸರ್ಕಾರದ ಅಧೀನ ಕಾರ್ಯದರ್ಶಿ,
ಗೃಹ ಇಲಾಖೆ.

## ನಮೂನೆ – I

### (3ನೇ ನಿಯಮದ (1)ನೇ ಉಪನಿಯಮವನ್ನು ನೋಡಿ)

ವೀಡಿಯೋ ಕ್ಯಾಸೆಟ್ ರೆಕಾರ್ಡಿನ ಮೂಲಕ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್‌ನ ಮಂಜೂರಾತಿ ಅಥವಾ ಮರುಮಂಜೂರಾತಿಗಾಗಿ ಅರ್ಜಿ.

1. ಅರ್ಜಿದಾರನ ಪೂರ್ಣ ಹೆಸರು :

2. ಅರ್ಜಿದಾರನ ವಿಳಾಸ :
   ಗ್ರಾಮ :
   ತಾಲ್ಲೂಕು :
   ಜಿಲ್ಲೆ :

3. ಅರ್ಜಿಯು ಲೈಸೆನ್ಸಿನ ಮಂಜೂರಾತಿ / ಮರುಮಂಜೂರಾತಿಗಾಗಿಯೋ ?

4. ಅಂಚೆ ಮತ್ತು ತಂತಿ ಇಲಾಖೆಯು ಮಂಜೂರ್ಮಾಡಿದ ದೂರದರ್ಶನದ ಪ್ರದರ್ಶನದ ಲೈಸೆನ್ಸ್ ಸಂಖ್ಯೆ

5. ವೀಡಿಯೋ ಸಲಕರಣೆ (ವಿ.ಸಿ.ಆರ್)ಯನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿದ ಸ್ಥಳದ ವಿವರಗಳು

   (ಕ) ಆವರಣ/ಮನೆ ಸಂಖ್ಯೆ ಮತ್ತು
   ವಿಳಾಸ :
   ಸ್ಥಳ :
   ಗ್ರಾಮ :
   ತಾಲ್ಲೂಕು :
   ಪಟ್ಟಣ :
   ಜಿಲ್ಲೆ :

   (ಖ) ವೀಡಿಯೋ ಪ್ರದರ್ಶನಗಳನ್ನು ತೋರಿಸಬೇಕಾಗಿರುವ ಅದೇ ಆವರಣದಲ್ಲಿ ಇತರ ಯಾವುದೇ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸಲಾಗುತ್ತಿದೆಯೇ ?

(i) ಅಂಥ ವ್ಯಾಪಾರ ಅಥವಾ ವ್ಯವಹಾರಕ್ಕಾಗಿ ಸಕ್ಷಮ ಪ್ರಾಧಿಕಾರಿಯಿಂದ ಲೈಸೆನ್ಸ್ ಪಡೆಯಲಾಗಿದೆಯೇ ?

(ii) ವೀಡಿಯೋ ಪ್ರದರ್ಶನವನ್ನು ನಡೆಸುವುದರಿಂದ ಲೈಸೆನ್ಸ್‌ನು ಪಡೆದಂಥ ವ್ಯಾಪಾರ ಅಥವಾ ವ್ಯವಹಾರಕ್ಕೆ ಬಾಧಕವಾಗುವ ಸಂಭವವಿದೆಯೇ ?

6. (ಕ) ಕಟ್ಟಡ

   (ಖ) ಸಭಾಂಗಣ

   (ಗ) ದಾರಿ ಮತ್ತು ನಡುದಾರಿಗಳು

   (ಘ) ಮೂತ್ರಿಗಳು ಮತ್ತು ಶೌಚಗೃಹಗಳ ವಿಸ್ತೀರ್ಣ ಚದರ ಮೀಟರುಗಳಲ್ಲಿ

7. ಅಗತ್ಯವಾದ ಫೀಜನ್ನು ಸಂದಾಯ ಮಾಡಲಾಗಿದೆಯೇ ಮತ್ತು ಖಜಾನೆ ಚಲನ್‌ಗಳನ್ನು ಲಗತ್ತಿಸಲಾಗಿದೆಯೇ

   (ಕ) ಚಲನ್ ನಂಬರು

   (ಖ) ಸಂದಾಯದ ದಿನಾಂಕ

   (ಗ) ಖಜಾನೆ ಹೆಸರು

8. ಮನೋರಂಜನಾ ತೆರಿಗೆಯನ್ನು ತೀರಿಸಿದ್ದಕ್ಕಾಗಿ ಪ್ರಮಾಣ ಪತ್ರದ ಪ್ರತಿ

---------------

ಅರ್ಜಿದಾರನ ರುಜು

**ನಮೂನೆ – II**

**(3ನೇ ನಿಯಮದ (2)ನೇ ಉಪನಿಯಮ ನೋಡಿ)**

ಜಿಲ್ಲಾ ಮ್ಯಾಜಿಸ್ಟ್ರೇಟ್,

------------ ಜಿಲ್ಲೆ, ಇವರಿಗೆ

ಮಾನ್ಯರೆ,

ವೀಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನ ಸೆಟ್ಟುಗಳಲ್ಲಿ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್ ಮಂಜೂರಾತಿಗಾಗಿ ನಾನು ಈ ಮೂಲಕ ಅರ್ಜಿ ಸಲ್ಲಿಸುತ್ತಿದ್ದೇನೆ.

1. ಅರ್ಜಿದಾರನ ಹೆಸರು ಮತ್ತು ಅವನ ಪೂರ್ಣ ವಿಳಾಸ

2. ಅಂಚೆ ಮತ್ತು ತಂತಿ ಇಲಾಖೆಯು ಮಂಜೂರ್ಮಾಡಿದ ದೂರದರ್ಶನ ಪ್ರದರ್ಶನದ ಲೈಸೆನ್ಸ್ ಸಂಖ್ಯೆ

3. ಮೋಟಾರು ವಾಹನಗಳ ನೋಂದಣಿ ಸಂಖ್ಯೆ, ಮಾದರಿ, ಆಸನ ಸಾಮರ್ಥ್ಯದ ವಿವರಗಳು ಮತ್ತು ಯಾವುದಾದರೂ ವಾಹನದ ಹೆಸರು, ಯಾವುದಾದರೂ ಇದ್ದರೆ, ಅದು

4. ಮೋಟಾರು ವಾಹನ ಪ್ರಾಧಿಕಾರಿಗಳು ಕೊಟ್ಟ ತೆರಿಗೆ ತೀರಿಸಿದ ಪ್ರಮಾಣ ಪತ್ರದ ಪ್ರತಿ

5. ಮನೋರಂಜನಾ ತೆರಿಗೆ ತೀರುವಳಿ ಪ್ರಮಾಣ ಪತ್ರದ ಪ್ರತಿ

6. ನಿಯಮಿಸಿದ ಫೀಜನ್ನು ಸಂದಾಯ ಮಾಡಿದ ಚಲನ್ ಸಂಖ್ಯೆ ಮತ್ತು ದಿನಾಂಕ

---------------

ಅರ್ಜಿದಾರನ ರುಜು

**ನಮೂನೆ – III**

**(4ನೇ ನಿಯಮದ 7ನೇ ಉಪನಿಯಮ ನೋಡಿ)**

1984ರ ವಿ.ಸಿ.ಆರ್. ನಿಯಮಗಳ ಮೂಲಕ ದೂರದರ್ಶನ ಸೆಟ್ಟುಗಳಲ್ಲಿ ಫಿಲ್ಮ್‌ಗಳ ಪ್ರದರ್ಶನಕ್ಕಾಗಿ ಲೈಸೆನ್ಸ್.

1. ಲೈಸೆನ್ಸ್‌ದಾರನ ಹೆಸರು ಮತ್ತು ವಿಳಾಸ

2. ಸ್ಥಳವು ಇರುವ ಜಾಗ

3. (ಕ) ಕಟ್ಟಡ

   (ಖ) ಸಭಾಂಗಣ

   (ಗ) ದಾರಿ ಮತ್ತು ನಡುದಾರಿಗಳು

   (ಘ) ಮೂತ್ರಿಗಳು ಮತ್ತು ಶೌಚಗೃಹಗಳು

–ಇವುಗಳ ವಿಸ್ತೀರ್ಣ ಚದರ ಮೀಟರುಗಳಲ್ಲಿ

4. ಯಾವ ವಿಶೇಷ ಷರತ್ತುಗಳ ಮೇಲೆ
ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆಯೋ
ಆ ವಿಶೇಷ ಷರತ್ತುಗಳು
ಯಾವುದಾದರೂ ಇದ್ದರೆ ;

5. ಲೈಸನ್ಸ್ ಜಾರಿಯಲ್ಲಿರಬೇಕಾದಂಥ
ಅವಧಿ

6. ಸಂದಾಯ ಮಾಡಿದ ಫೀಜು

7. ಅನುಮತಿಸಿದ ವ್ಯಕ್ತಿಗಳ ಗರಿಷ್ಠ
ಸಂಖ್ಯೆ ಮತ್ತು ಅನುಮತಿ ನೀಡುವ
ಗರಿಷ್ಠ ಪ್ರವೇಶ ದರಗಳು

## ಲೈಸೆನ್ಸಿನ ಷರತ್ತುಗಳು

ಕರ್ನಾಟಕ ಸಿನಿಮಾಗಳ (ನಿಯಂತ್ರಣ) ಅಧಿನಿಯಮ, 1961 ಮತ್ತು ಕರ್ನಾಟಕ ಸಿನಿಮಾಗಳ (ವೀಡಿಯೋ ಕ್ಯಾಸೆಟ್ ರೆಕಾರ್ಡರ್ ಮೂಲಕ ದೂರದರ್ಶನದ ಸೆಟ್ಟುಗಳಲ್ಲಿ ಫಿಲ್ಮ್‌ಗಳ ಪ್ರದರ್ಶನ ಲೈಸೆನ್ಸ್ ವಿನಿಯಮನ) ನಿಯಮಗಳು, 1984ರ ಉಪಬಂಧಗಳು ಮತ್ತು ಈ ಕೆಳಗೆ ನಿರ್ದಿಷ್ಟಪಡಿಸಿದ ಷರತ್ತುಗಳಿಗೊಳಪಟ್ಟು ಈ ಲೈಸೆನ್ಸ್‌ನ್ನು ಮಂಜೂರ್ಮಾಡಲಾಗಿದೆ.

(1) ಯಾವ ಚಲನಚಿತ್ರವನ್ನು ಚಲನಚಿತ್ರ ಅಧಿನಿಯಮ, 1952ರ 4ನೇ ಪ್ರಕರಣದ ಮೇರೆಗೆ ರಚಿತವಾದ ಪ್ರಾಧಿಕಾರವು ಸಾರ್ವಜನಿಕ ಪ್ರದರ್ಶನಕ್ಕೆ ಸೂಕ್ತವಾದುದೆಂದು ಪ್ರಮಾಣೀಕರಿಸಲಾಗಿದೆಯೋ ಮತ್ತು ಆ ಯಾವ ಚಲನಚಿತ್ರವನ್ನು ಪ್ರದರ್ಶಿಸಿದಾಗ, ಚಲನಚಿತ್ರ ಸೆನ್ಸಾರ್ ಮಂಡಲಿಯು ನಿಯಮಿಸಿದ ಗುರುತನ್ನು ಪ್ರದರ್ಶಿಸುವುದೇ ಮತ್ತು ಆ ಯಾವ ಚಲನಚಿತ್ರಕ್ಕೆ ಅಂಥ ಗುರುತನ್ನು ಹಾಕಿದ ತರುವಾಯ ಅದನ್ನು ಯಾವುದೇ ರೀತಿಯಲ್ಲಿ ಬದಲಾಯಿಸಿಲ್ಲವೋ ಅಥವಾ ಅಕ್ರಮವಾಗಿ ತಿದ್ದಿಲ್ಲವೋ ಅಂಥ ಯಾವುದೇ ಚಲನಚಿತ್ರವನ್ನು ಹೊರತುಪಡಿಸಿ, ಯಾವುದೇ ಇತರ ಚಲನಚಿತ್ರವನ್ನು ಲೈಸೆನ್ಸ್‌ದಾರನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.

(2) ಚಲನಚಿತ್ರ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಅಮಾನತುಗೊಳಿಸಿದ ಯಾವುದೇ ಫಿಲ್ಮ್‌ನ್ನು ಪ್ರದರ್ಶಿಸತಕ್ಕದ್ದಲ್ಲ.

(3) ಸಾರಿಗೆ ವಾಹನಗಳನ್ನು ಹೊರತುಪಡಿಸಿ ಲೈಸೆನ್ಸ್‌ದಾರನ್ನು ಮಧ್ಯಾಹ್ನ 12 ಗಂಟೆಗೆ ಮುಂಚೆ ಅಥವಾ ರಾತ್ರಿ 12 ಗಂಟೆಯ ತರುವಾಯ ಚಲನಚಿತ್ರ ಗ್ರಾಹಕ ಯಂತ್ರ ಸಾಧನಗಳ ಮೂಲಕ ಯಾವುದೇ ಫಿಲ್ಮನ್ನು ಪ್ರದರ್ಶಿಸಲು ಅವಕಾಶ ಕೊಡತಕ್ಕದ್ದಲ್ಲ.

(4) ಲೈಸೆನ್ಸುದಾರನು, ಲೈಂಗಿಕ ರೋಗಗಳಿಗೆ, ಲೈಂಗಿಕ ವಿಚಾರಗಳನ್ನು ಮತ್ತು ಲೈಂಗಿಕ ವಿಚಾರಗಳನ್ನು ಸರಿಪಡಿಸಲು ಅಥವಾ ಮಕ್ಕಳನ್ನು ಪಟೆಯುವುದರಲ್ಲಿ ಮಕ್ಕಳಿಲ್ಲದವರಿಗೆ ಸಹಾಯಕವಾಗುವುದೆಂದು ತಾತ್ಪರ್ಯವಾಗುವಂಥ ಲೈಂಗಿಕ ರೋಗಗಳು ಮತ್ತು ಔಷಧಗಳಿಗೆ ಸಂಬಂಧಪಟ್ಟ ಜಾಹೀರಾತು ಸ್ಲೈಡುಗಳನ್ನು ಪ್ರದರ್ಶಿಸತಕ್ಕದ್ದಲ್ಲ.

(5) ಲೈಸೆನ್ಸುದಾರನು, ಕೇಂದ್ರ ಚಲನಚಿತ್ರ ಮಂಡಲಿಯ ಅಥವಾ ಕೇಂದ್ರ ಸರ್ಕಾರವು ಆದೇಶಗಳ ಮೇರೆಗೆ ಯಾವುದೇ ಚಲನಚಿತ್ರದಿಂದ ಕತ್ತರಿಸಲಾಗಿರುವಂಥ ದೃಶ್ಯ ಅಥವಾ ಛಾಯಾಚಿತ್ರವನ್ನು ನಿರೂಪಿಸುವ ಅಥವಾ ತೋರಿಸುವ ಅಥವಾ ತೋರಿಸುವುದೆಂದು ತಾತ್ಪರ್ಯವಾಗುವಂಥ ಯಾವುದೇ ಛಾಯಾಚಿತ್ರವನ್ನು ಅಥವಾ ಭಿತ್ತಿಚಿತ್ರಗಳನ್ನು ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದಲ್ಲ.

(6) ಪ್ರದರ್ಶನದ ಅವಧಿಯಲ್ಲಿ ಧೂಮಪಾನ ಮತ್ತು ಆಲ್ಕೋಹಾಲಿನ ಮದ್ಯವನ್ನು ಉಪಯೋಗಿಸುವುದನ್ನು ಅನುಮತಿಸತಕ್ಕುದ್ದಲ್ಲ ಮತ್ತು ಯಾರೇ ವ್ಯಕ್ತಿಯು ಆ ಷರತ್ತನ್ನು ಉಲ್ಲಂಘಿಸಿದರೆ ಆ ಘಟನೆ ಸಂಭವಿಸಿದ ತರುವಾಯ ವ್ಯವಸ್ಥಾಪಕ ವರ್ಗವು ಅದನ್ನು ಪೊಲೀಸರ ಗಮನಕ್ಕೆ ತರತಕ್ಕದ್ದು.

(7) ಸಭಾಂಗಣದ ಯಾವುದೇ ಭಾಗದೊಳಕ್ಕೆ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆ ಅಥವಾ ಕೊಟ್ಟ ಟಿಕೇಟುಗಳ ಸಂಖ್ಯೆ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಸಂಖ್ಯೆಯನ್ನು ಮೀರತಕ್ಕದ್ದಲ್ಲ.

(8) ಲೈಸೆನ್ಸ್‌ದಾರನು, ಲೈಸೆನ್ಸ್ ಆವರಣಗಳಲ್ಲಿ ಅಶ್ಲೀಲವಾದ ಅಥವಾ ಆಕ್ಷೇಪಣಾರ್ಹವಾದಂಥ ಭಿತ್ತಿ ಪತ್ರಗಳು ಅಥವಾ ಚಿತ್ರಮಯವಾದ ಪ್ರಚಾರ ಸಾಮಗ್ರಿಯನ್ನು ಪ್ರದರ್ಶಿಸಲು ಅನುಮತಿ ನೀಡತಕ್ಕದ್ದಲ್ಲ.

(9) ಲೈಸೆನ್ಸ್‌ದಾರನು, ವಯಸ್ಕರಿಗೆ ಸೀಮಿತಗೊಳಿಸಿದ ಸಾರ್ವಜನಿಕ ಪ್ರದರ್ಶನಕ್ಕಾಗಿ ಸೂಕ್ತವೆಂದು ಹಿಂದೆ ಹೇಳಿದ ಮಂಡಳಿಯು ಪ್ರಮಾಣೀಕರಿಸಲಾದಂಥ ಯಾವುದೇ ಫಿಲ್ಮನ್ನು ವಯಸ್ಕನಲ್ಲದ ಯಾವುದೇ ವ್ಯಕ್ತಿಗೆ ಪ್ರದರ್ಶಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸಲು ಅನುಮತಿಸತಕ್ಕದ್ದಲ್ಲ.


19---------ದ ದಿನಾಂಕದಂದು ------------

ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟರವರು,

---------------- ಜಿಲ್ಲೆ.

## ನಮೂನೆ – 1 ರೇಖಾಚಿತ್ರ

## ಅರೆ ಕಾಯಂ ಥಿಯೇಟರಿನ ಮಾದರಿ ವೈರಿಂಗ್ ರೇಖಾಚಿತ್ರ




1) ಥಿಯೇಟರಿನ ಮೆಯಿನ್ ಸ್ವಿಚ್
2) ಅಂಗಳ ದೀಪ ವ್ಯವಸ್ಥೆ ಮೆಯಿನ್ ಸ್ವಿಚ್
3) ಸಾಮಾನ್ಯ ದ್ವೀಪ ವ್ಯವಸ್ಥೆ ಸ್ವಿಚ್
4) ಕ್ಯಾಬಿನ್ ಪವರ್ ಮೆಯಿನ್ ಸ್ವಿಚ್
5) ಟ್ರಾನ್ಸ್‌ಫಾರ್ಮರ್ ಮೆಯಿನ್ ಸ್ವಿಚ್ 230 ವೋಲ್ಟೇಜ್
6) ಟ್ರಾನ್ಸ್‌ಫಾರ್ಮರ್ ಮೇನ್ ಸ್ವಿಚ್ 110 ವೋ.
7) ರೆಕ್ಟಿಫೈಯರ್ ಮೆಯಿನ್ ಸ್ವಿಚ್ ಎ ಸಿ ಸೈಡ್
8) ರೆಕ್ಟಿಫೈಯರ್ ಮೇನ್ ಸ್ವಿಚ್ ಡಿಸಿ ಸೈಡ್

9) ಫ್ಯಾನ್ ಮೇನ್ ಸ್ವಿಚ್

10) 11 ಮತ್ತು 12 ಫ್ಯಾನಿನ ಉಪ ಮೇನ್ ಸ್ವಿಚ್

ಟಿ – ಟ್ರಾನ್ಸ್‌ಫಾರ್ಮರ್

ಆರ್ – ರೆಕ್ಟಿಫೈಯರ್

**ಸೂಚನೆ:** ಮೂರು ಹಂತದ ಸರಬರಾಜಿನ ಸಂದರ್ಭದಲ್ಲಿ ಎಲ್ಲಾ ಮೂರು ಹಂತಗಳ ಮೇಲಿನ ಲೋಡುಗಳನ್ನು ಸಮದೂಗಿಸತಕ್ಕದ್ದು.